
ಶೀ:- ಕೆಲುಂಡ್ರು - ರೆಲುಂಡ್ರು

ಲೇ:- ಠಾಕೂರ್

ಶಶಿ ಪ್ರಕಾಶನ
ಬೆಂಗಳೂರು



ಕವೀಂದ್ರ - ರವೀಂದ್ರ

ಕವೀಂದ್ರ – ರವೀಂದ್ರ

ರಮಾ–ರಸಿಕ ಸಂವಾದರೂಪದಲ್ಲಿ

ಬಿ. ಎಚ್. ಶ್ರೀಧರ

ಶಶಿ ಪ್ರಕಾಶನ
ಲಾವೆಲಿ ರೋಡ್, ಬೆಂಗಳೂರು – ೧

ಮುದ್ರಕರು :
ಶ್ರೀ ಆರ್. ಕೆ. ಜೋಶಿ
ಸಂಯುಕ್ತ ಕರ್ನಾಟಕ ಪ್ರೆಸ್
ಬೆಂಗಳೂರು – ೧

ಪ್ರಕಾಶಕರು :
ಶ್ರೀ ಬಿ. ಕೆ. ಪಿ. ಕುಮಾರ್
ಶಶಿ ಪ್ರಕಾಶನ
ಬೆಂಗಳೂರು – ೧

ಅ ರಿ ಕೆ

'ನಾನೃಷಿಃ ಕುರುತೇ ಕಾವ್ಯಂ' ಎಂಬ ಭಾರತೀಯ ನಂಬಿಗೆಯನ್ನು ಸ್ಥಿರಪಡಿಸಲು ನಮ್ಮ ದೇಶದಲ್ಲಿ ಗುರುದೇವ ಠಾಕೂರರು ಇಂದಿನ ಕಾಲದಲ್ಲಿ ಹುಟ್ಟಿದರು, ಎಂದು ನಂಬಬಹುದಾಗಿದೆ. ಠಾಕೂರರ ಮನೆತನದ ಆವರಣವನ್ನು ಗಮನಿಸಿದರೆ ಗೀತೆ ಹೇಳಿದ

'ಶುಚೀನಾಂ ಶ್ರೀಮತಾಂ ಗೇಹೇ ಯೋಗಭ್ರಷ್ಟೋಽಭಿಜಾಯತೇ ।
ಅಥವಾ ಯೋಗಿನಾಮೇವ ಕುಲೇ ಭವತಿ ಧೀಮತಾಂ ॥'

ಎಂಬ ಮಾತು ನೆನಪಿಗೆ ಬರುತ್ತದೆ. ಹಿಂದಿನ ಜನ್ಮದಲ್ಲಿ ಉತ್ತಮ ಸಾಧಕರಾಗಿದ್ದ ರವೀಂದ್ರರು ತಮ್ಮ ಆತ್ಮಸಾಧನೆಯ ಮಾರ್ಗದಲ್ಲಿ ಮುಂದುವರಿಯಲಿ ಎಂದು ಅದಕ್ಕೆ ತಕ್ಕ ಮನೆಯಲ್ಲಿ ಅವರು ಉದಯಿಸುವಂತೆ ಜಗನ್ನಿಯಾಮಕನು ವ್ಯವಸ್ಥೆಮಾಡಿದ್ದನೆನ್ನಬೇಕು! ಹೀಗೆ ಆಧ್ಯಾತ್ಮಿಕ ಸಂಸ್ಕಾರದ ಹಿನ್ನೆಲೆಯಲ್ಲಿ ಹುಟ್ಟಿ, ಚಿಕ್ಕಂದಿನಿಂದಲೂ ತಮ್ಮ ಪ್ರತಿಭೆಯ ಮಿಂಚನ್ನು ಹೊಳೆಯಿಸುತ್ತ ಬೆಳೆದು, ವಿಶ್ವಕುಟುಂಬಿತ್ವದ ತುಂಬುಭಾವನೆಯಿಂದ ಜೀವನ ನಡೆಸಿ, ತಮ್ಮ ಸಾಹಿತ್ಯಕೃತಿಗಳ ಗುಣ ಮತ್ತು ವೈವಿಧ್ಯಗಳಿಂದ ಪಂಡಿತ–ಪಾಮರರೆಲ್ಲರನ್ನೂ ರಂಜಿಸಿ, ಪಕ್ವವಯಸ್ಸಿನಲ್ಲಿ ಇಹಲೋಕವನ್ನು ತ್ಯಜಿಸಿದ ರವೀಂದ್ರರು ಸಾರ್ಥಕ ಕವೀಂದ್ರರು! ಇವರ ಕೃತಿಗಳನ್ನೋದಿ, ಇವರ ಜೀವನದ ಬಗ್ಗೆ ಪ್ರಕಟವಾದ ವಿವಿಧ ಲೇಖನಗಳನ್ನವಲೋಕಿಸಿ ಸಂತುಷ್ಟನಾಗಿದ್ದ ಈ ಲೇಖಕನಿಗೆ ಪ್ರಸ್ತುತ ಕಿರು ಹೊತ್ತಗೆಯನ್ನು ಸತಿ–ಪತಿಯರ ಸಂವಾದದ ರೂಪದಲ್ಲಿ ಬರೆಯಲು ಪ್ರೇರಿಸಿ, ಪ್ರಕಟಪಡಿಸಲು ನಿಂತ ಬೆಂಗಳೂರಿನ ಶಶಿ ಪ್ರಕಾಶನಕ್ಕೆ ಧನ್ಯವಾದಗಳನ್ನರ್ಪಿಸದಿರಲಾರೆ. ಠಾಕೂರರ ಬಗ್ಗೆ ಹೊರಟ ಕೃತಿಗಳಲ್ಲಿ ಥಾಂಪ್ಸನ್ನರ ಮತ್ತು ಮೈತ್ರೇಯೀದೇವಿಯವರ ಬರಹಗಳಿಗೆ ಈ ಲೇಖಕ ಹೆಚ್ಚು ಋಣಿ. ಇತರ ದೇಶೀಯ–ವಿದೇಶೀಯ ವಿಮರ್ಶಕರ ವರದಿಗಳಿಗೂ ಋಣಿತ್ವವನ್ನಿಲ್ಲಿ ಒಪ್ಪಿಕೊಳ್ಳುವುದು ಅಗತ್ಯ.

ಬಂಕಿಂಚಂದ್ರರ ಕಾದಂಬರಿಗಳು ಕರ್ನಾಟಕದ ರಸಿಕರನ್ನಾಕರ್ಷಿಸಿದಂತೆ ರವೀಂದ್ರರ ಕೃತಿಗಳೂ ಇಲ್ಲಿಯ ಜನತೆಗೆ ಅಚ್ಚುಮೆಚ್ಚಿನವಾಗಿವೆ. ಇಂಥ

ಜನಪ್ರಿಯ ಮಹಾಕವಿಯ ಜೀವನದ ಮತ್ತು ಸಾಹಿತ್ಯದ ಕೆಲ ಅಂಶಗಳ ಬಗ್ಗೆ ಸಂವಾದರೂಪದಲ್ಲಿ ಸಂಕ್ಷಿಪ್ತ ವಿವರಣೆಗಳನ್ನಿಲ್ಲಿ ಕೊಡುತ್ತ ಹೋಗಲಾಗಿದೆ. ಈ ವಿವರಣೆಗಳಲ್ಲೇನಾದರೂ ದೋಷ ಕಂಡರೆ ಬಲ್ಲವರು ಕ್ಷಮಿಸಿ, ಈ ನನ್ನ ಅಲ್ಪ ಪ್ರಯತ್ನದಲ್ಲಿಯ ಗುಣಾಂಶವನ್ನು ಗ್ರಹಿಸಿ ಹರಸಬೇಕೆಂದು ನಮ್ರತೆಯಿಂದ ಪ್ರಾರ್ಥಿಸುತ್ತೇನೆ.

ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಬೆಂಗಳೂರು ಸಂಯುಕ್ತ ಕರ್ನಾಟಕ ಮುದ್ರಣಾಲಯವು ಅಭಿನಂದನಾರ್ಹ.

ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು
ಶಿರಸಿ, ಉತ್ತರ ಕನ್ನಡ ಜಿಲ್ಲೆ

ಬಿ. ಎಚ್. ಶ್ರೀಧರ

ಅರ್ಪಣ

ಪ್ರಿಯ ಪತ್ನಿ ರಮೆಗೆ

ಮುನ್ನುಡಿ

ರವೀಂದ್ರ ಶತಮಾನೋತ್ಸವದ ವರ್ಷದಲ್ಲಿ ಕವಿಯ ಜೀವನಕೃತಿಗಳ ಬಗೆಗೆ ಅನೇಕ ಪುಸ್ತಕಗಳು ಕನ್ನಡದಲ್ಲಿ ಪ್ರಕಟವಾದವು. ಅವುಗಳಲ್ಲಿ ಜೀವನಚರಿತ್ರೆ, ಕವಿಕೃತಿಗಳ ಅನುವಾದ, ಇಲ್ಲವೇ ವಿಮರ್ಶೆಗಳೇ ಮುಖ್ಯ ವಾಗಿವೆ. ಪ್ರಸ್ತುತ ಪುಸ್ತಕದ ಗುರಿ ರವೀಂದ್ರದರ್ಶನ; ಸಮಗ್ರ ರವೀಂದ್ರ ಸಾಹಿತ್ಯದ ಸ್ಥೂಲವಾದ ನಿರೂಪಣೆ. ಸರಸವಾದ ಸಂಭಾಷಣೆಯ ಮೂಲಕ ಈ ವಸ್ತುವನ್ನು ವಿವರಿಸಿ ಲೇಖಕರು ಕನ್ನಡದಲ್ಲಿ ಹೊಸ ಹಾದಿ ತುಳಿದಿದ್ದಾರೆ.

ಲೇಖಕರು ಕವಿಗಳು, ಸಹೃದಯರು. ಸಂಭಾಷಣೆಯಲ್ಲಿ ಎತ್ತಿದ ಕೈ. ಅವರೊಡನೆ ಕೆಲವು ಹೊತ್ತಾದರೂ ಮಾತುಕತೆಯಾಡಿದ ಎಲ್ಲರದೂ ಅದೇ ಅನುಭವ. ವಿಚಾರವೈವಿಧ್ಯ, ವಿಸ್ತಾರವಾದ ವಿಷಯಸಂಗ್ರಹ ಮತ್ತು ತರ್ಕ ಬದ್ಧವಾದ ವಿಚಾರಸರಣಿಗಳಲ್ಲಿ ಅವರನ್ನು ಮೆಚ್ಚಲೇಬೇಕು. ಆ ಮಾತಿನ ಶೈಲಿಯನ್ನೇ ಬರಹಕ್ಕೆ ರೂಢಿಸಿಕೊಂಡು ಹೊಸ ಬಗೆಯ ರಸದೂಟವನ್ನು ಓದುಗರಿಗೆ ಅವರು ಉಣಿಸಿದ್ದಾರೆ.

ರವೀಂದ್ರಸಾಹಿತ್ಯದ ಸಮಗ್ರವಾದ ವಿವರಣೆಯಾಗಲೀ, ಅದರ ರಸಶೈಲಿ ಗಳ ವಿವೇಚನೆಯಾಗಲೀ ಇಲ್ಲಿಲ್ಲ. ಬದಲು ರವೀಂದ್ರರ ಸಾಹಿತ್ಯಸೃಷ್ಟಿಯ ವಿವಿಧ ರೂಪಗಳ ಬಗೆಗೆ, ಅವುಗಳಲ್ಲಿ ಅಡಕವಾದ ಮುಖ್ಯ ತತ್ವಗಳ ಕಡೆಗೆ ಸಂವಾದಶೈಲಿಯಲ್ಲಿ ಎಲ್ಲರ ಮನಸ್ಸನ್ನೂ ಆಕರ್ಷಿಸಿದ್ದಾರೆ.

ಮುದ್ದಣ–ಮನೋರಮೆಯರ ಸರಸ–ಸಲ್ಲಾಪ ರಾಮಾಶ್ವಮೇಧಕ್ಕೆ ನಾಂದಿಯಾದಂತೆ ರವೀಂದ್ರಕಾವ್ಯಸೃಷ್ಟಿಯ ಅಭ್ಯಾಸುವಿಗೆ ಈ ಕೃತಿ ಮಾರ್ಗ ದರ್ಶಿಕೆಯಾಗಿದೆ. ಜೊತೆಗೆ ಸಾಹಿತ್ಯದ ನಾನಾ ಪ್ರಕಾರಗಳ, ಮುಖ್ಯವಾದ ಸಾಹಿತ್ಯಕೃತಿ, ಪಾತ್ರಗಳ ತುಲನಾತ್ಮಕ ವಿವೇಚನೆಯೂ ಅಲ್ಲಲ್ಲಿ ಬಂದಿರುವದು ವಿಷಯಸಂಗ್ರಹಣೆಗೆ, ಸ್ಪಷ್ಟ ಚಿತ್ರಕ್ಕೆ ಅನುವು ಮಾಡಿಕೊಡುತ್ತದೆ.

ಕನ್ನಡದಲ್ಲಿ ಈ ಶೈಲಿಯನ್ನು ಈವರೆಗೆ ಇಷ್ಟು ಸುಲಭವಾಗಿ ಬಳಸಿ ಕೊಂಡು ಸಾಹಿತ್ಯಪರಿಚಯ ಮಾಡಿದ ಉದಾಹರಣೆ ಇದೇ ಮೊದಲನೆಯದು. ಲೇಖಕರಿಗೆ ಸ್ವಭಾವಸಹಜವಾದ ಈ ಶೈಲಿಯಲ್ಲಿ ಇಂಥ ಅನೇಕ ಕೃತಿಗಳು ಹೊರಬರಲೆಂದು ಹಾರೈಸುತ್ತೇನೆ.

ಶಿರಸಿ
ಆರ್ಟ್ಸ್ ಮತ್ತು ಸೈನ್ಸ್ ಕಾಲೇಜು

ಲಿಂಗೇಶ ಶರ್ಮ
ಪ್ರಿನ್ಸಿಪಾಲ್

ಅನುಕ್ರಮಣಿಕೆ

೧. ರವೀಂದ್ರನ ಬಾಲ್ಯ

"ಮೈಸೂರಿನಲ್ಲಿ ನನಗೊಬ್ಬರು ಸ್ನೇಹಿತರಿದ್ದಾರೆ. ಅವರು ತಮ್ಮ ಮಕ್ಕಳಿಗೆ ಎಂಥೆಂಥ ಹೆಸರುಗಳನ್ನಿಟ್ಟಿದ್ದಾರೆ, ಗೊತ್ತೇ?"

"ಎಂಥೆಂಥ ಹೆಸರುಗಳನ್ನಿಟ್ಟಿದ್ದಾರೆ?"

"ಮೊದಲನೆಯವನ ಹೆಸರು ವಿವೇಕಾನಂದ, ಎರಡನೆಯವನು ಬಂಕಿಂಚಂದ್ರ, ಮೂರನೆಯವಳು ವಿಜಯಲಕ್ಷ್ಮಿ, ನಾಲ್ಕನೆಯವನ ಹೆಸರು ರವೀಂದ್ರನಾಥ, ಐದನೆಯವಳು ದುರ್ಗಾಬಾಯಿ ಮತ್ತು ಆರನೆಯವನು ಸುಭಾಷಚಂದ್ರ! ಹೇಗಿವೆ ಹೆಸರುಗಳು? ಚೆನ್ನಾಗಿಲ್ಲವೆ?"

"ಚೆನ್ನಾಗಿವೆ, ಚೆನ್ನಾಗಿವೆ; ಒಬ್ಬನು ಸಂನ್ಯಾಸಿ, ಒಬ್ಬ ಕಾದಂಬರಿಕಾರ, ಒಬ್ಬಳು ರಾಜಕೀಯ ಅಧಿಕಾರಿಣಿ, ಇನ್ನೊಬ್ಬ ಕವಿ, ಮತ್ತೊಬ್ಬಳು ಸಮಾಜಸುಧಾರಕಳು, ಮಗುದೊಬ್ಬ ಮಹಾವೀರ! ನಿಮ್ಮ ಸ್ನೇಹಿತರಿಗೆ ತಮ್ಮ ಮಕ್ಕಳೆಲ್ಲಾ ಹೀಗೇ ಹೆಸರುಪಡೆಯುವರೆಂದು ಯಾವ ಜೋಯಿಸ ಹೇಳಿದ?"

"ಜೋಯಿಸ ಏಕೆ ಹೇಳಬೇಕು? ಹೃದಯದ ಆಸೆ ಹೇಳಿದರೆ ಸಾಲದೆ?"

"ಆಸೆ ಹೋಗಿ ಮೋಸವಾದರೆ?"

"ಏನು ಕೆಟ್ಟುಹೋಯ್ತು? ಹೆಸರುಗಳಾದರೂ ಉಳಿಯುತ್ತವೆ. ಅಷ್ಟು ಸಂಪತ್ತನ್ನೂ ತಂದೆಯಾದವನು ಮಕ್ಕಳಿಗೆ ಬಿಟ್ಟುಹೋಗಬೇಡವೆ? ಚೆನ್ನಾಗಿ ಹೇಳುತ್ತೀಯೆ!"

"ಅಲ್ಲಾ—ರವೀಂದ್ರನಾಥನು ಕವಿಯಾಗುವುದನ್ನು ಬಿಟ್ಟು 'ಇನ್ನೇನಾದರೂ' ಆದರೆ? ದುರ್ಗಾಬಾಯಿಯು ಸಮಾಜಸುಧಾರಕಳಾಗದೆ ಮೋಜು ಮಾಡುವವಳಾದರೆ?"

"ಅಲ್ಲವೇ, ಜಗತ್ತೆಲ್ಲಾ ನಾಮರೂಪಮಯವಂತೆ. ಹಾಗಿರುವಾಗ ರೂಪಕ್ಕೊಂದು ಒಳ್ಳೆಯ ನಾಮವಿರಬೇಕಾದದ್ದು ಸಹಜವಲ್ಲವೆ? ರವೀಂದ್ರ

ನಂತೂ ಜವಾಹರಲಾಲರಂತೆಯೇ ರೂಪಕ್ಕೆ ಹೆಸರಾದವನು. ಬೇಕಾದರೆ ಅಮೇರಿಕದ ಮಹಿಳೆಯರನ್ನು ಹೋಗಿ ಕೇಳು."

"ಒಳ್ಳೆ ಚೆನ್ನಾಗಿದೆ ನೀವು ಹೇಳುವುದು! ರವೀಂದ್ರನು ಮಹಾಕವಿ ಯೆಂದು ಹೆಸರಾಗಿರುವುದು ನನಗೆ ಗೊತ್ತು. ಅವನು ಚಿತ್ರದಲ್ಲಿ ತಪಸ್ವಿಗಳಂತೆ ಕಾಣುತ್ತಾನಲ್ಲದೆ, ಮನ್ಮಥನಂತೆ ಕಾಣುವುದಿಲ್ಲ."

"ಮುದುಕರಾಗಿ ಗಡ್ಡ ಇಟ್ಟುಕೊಂಡವರೆಲ್ಲ ನಿನಗೆ ತಪಸ್ವಿಗಳು! ಅವರು ಹುಡುಗರಾಗಿಯೇ ಇರಲಿಲ್ಲ ಅಂತ ತಿಳಕೊಂಡೆಯಾ? ರವೀಂದ್ರನು ಪ್ರಾಯದಲ್ಲಿ ಮನ್ಮಥನೇ ಆಗಿದ್ದನು. ಮುದುಕನಾದಮೇಲೂ ಅವನ ತೇಜಸ್ಸು ಕುಂದಲಿಲ್ಲ. ಕವಿಗಳೆಲ್ಲಾ ಸುಂದರರೇ ಆಗಿರುವರೆಂಬುದಂತೂ ವಿದೇಶೀಯರ ನಂಬಿಗೆ. ಕವಿತೆ, ಕವಿತಾವಾಚಕನಾದ ಕವಿಯ ಸ್ವರ ಮತ್ತು ಸ್ವತಃ ಕವಿ— ಈ ಮೂವರೂ ಸುಂದರರಾದರೆ ಕಾಳಿದಾಸ ಹೇಳಿದಂತೆ ಒಂದೇ ಕಡೆ ವಿವಿಧ ಸೌಂದರ್ಯಗಳನ್ನು ಕೂಡಿಸಿ ಕಂಡಂತಾಗುವುದಿಲ್ಲವೇ?"

"ನಿಮ್ಮದೊಂದು ಕವಿಕಲ್ಪನೆಯಾಗಿಯೇ ಕಾಣುತ್ತದೆ. ಕವಿಗಳ ಕನಸೆಲ್ಲಾ ನನಸಾಗಿದ್ದರೆ ಕತ್ತಲು–ಬೆಳಕುಗಳ ನಿತ್ಯಸಾಮರಸ್ಯದಿಂದ ಲೋಕ ವೆಲ್ಲಾ ದುಃಖವಿಲ್ಲದ, ಅಳಿವಿಲ್ಲದ, ನಿತ್ಯನೂತನವಾದ, ಸ್ವರ್ಗ–ಮೋಕ್ಷ ಸಮನ್ವಿತವಾದ ಮತ್ತು ಯೋಗಭೋಗ ಗುಣಗಳು ಏಕಕಾಲದಲ್ಲಿ, ಏಕ ಸ್ಥಳದಲ್ಲಿ ಅನುಭವಕ್ಕೆ ಬರುವ ವಿಚಿತ್ರ ಜೀವನದ ವಿಲಾಸವು ಎಲ್ಲರ ಕೈಗೂ ಎಟಕುವಂತಾಗುತ್ತಿತ್ತು. ಇಂಥ ಕಾವ್ಯಸತ್ಯ – ಲೋಕಸತ್ಯಗಳೆಂದಾದರೂ ಒಂದಾದಾವೇನು?"

"ಭಾರೀ 'ಛಾಲೇಂಜ್' ಕೊಟ್ಟುಬಿಟ್ಟೆಯಲ್ಲಾ ನನಗೆ! ನನ್ನ ಮಂತ್ರ ವನ್ನು ನನ್ನ ಮೇಲೆಯೇ ತಿರುಗಿಸಿಬಿಟ್ಟೆಯಲ್ಲಾ—ನಿಜವಾಗಿಯೂ ನೀನು ಜಾಣೆ. ಆದರೆ ಅಂಥ ವಿಚಿತ್ರ ವಿಲಾಸಕ್ಕೂ ಒಂದು ಉದಾಹರಣೆಯಿದೆ: ರವೀಂದ್ರನೂ ಅವನ ಗೀತಶಕ್ತಿಯೂ ಸಾಹಿತ್ಯಪ್ರತಿಭೆಯೂ ಸೇರಿ ಹಡೆದ 'ವಿಶ್ವಭಾರತಿ' ಎಂಬ ಅಂತಾರಾಷ್ಟ್ರೀಯ ಸಂಸ್ಥೆಯೊಂದಿದೆ. ಅದೂ ಸುಂದರ! ಅವನ ಸುಂದರವಾದ ಕನಸಿನ ಸುಂದರವಾದ ನನಸು! ರವೀಂದ್ರನ ಪ್ರಕಾರ ಆ ವಿಶ್ವವಿದ್ಯಾನಿಲಯವು ಅವನ 'Chief and most enduring poem. ಅತಿ ಪ್ರಮುಖವೂ ಚಿರಸ್ಥಾಯಿಯೂ ಆದ ಪದ್ಯಕಾವ್ಯ.' ಅಲ್ಲಿಗೊಮ್ಮೆ

ಹೋಗೋಣ; ಆಗ ನಿನಗೆ 'ಕಲ್ಪನೆಯಿಲ್ಲದೆ ಯಾವ ಕಾರ್ಯವೂ ಆಗದು; ಕಲ್ಪಿಸಿದಂತೆಯೇ ಮಾಡಿ ತೋರಿಸಲು ಕೆಲವರಿಗಾದರೂ ಸಾಧ್ಯ' ಎಂಬುದು ಗೊತ್ತಾದೀತು."

"ಹೀಗೇನು? ನಿಜವೇ? ಅಂಥ ಮಹಾಪುರುಷ ಹುಟ್ಟಿದ್ದು ಯಾವಾಗ? ಎಲ್ಲಿ?"

"ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿ, ಬಂಗಾಳದಲ್ಲಿ ಈ ಕವಿರವಿ ಮೂಡಿದ. ಕ್ರಿ.ಶ. ೧೮೬೧ನೆಯ ಮೇ ೬ ಆತನ ಜನ್ಮದಿನ."

"ಆತ ಜನಿಸಿದ್ದು ಶ್ರೀಮಂತರ ಮನೆಯಲ್ಲೋ ಬಡವರ ಮನೆಯಲ್ಲೋ?"

"ಸ್ವಲ್ಪ ಶ್ರೀಮಂತರ ಮನೆಯಲ್ಲೇ ಎಂದು ಹೇಳಬಹುದು."

"ಅಂದಮೇಲೆ ಏನೂ ಆಶ್ಚರ್ಯವಿಲ್ಲ ಬಿಡಿ, ಆತ ಪ್ರಸಿದ್ಧಿಗೆ ಬಂದದ್ದು."

"ಅರೆ, ಇಷ್ಟಕ್ಕೇ ನಿನ್ನ ಕುತೂಹಲವೆಲ್ಲಾ ತಣ್ಣಗಾಗಿ ಹೋಗಬೇಕೇ? ಲಕ್ಷ್ಮಿಗೂ ಸರಸ್ವತಿಗೂ ಯಾವಾಗಲೂ ಹುಯ್ದು ಅಕ್ಕಿ ಬೇಯೋದಿಲ್ಲ ಅಂದು ಕೊಂಡೆಯಾ? ಉತ್ಸರ್ಗವಿದ್ದಲ್ಲಿ ಅಪವಾದವಿರಲೇಬೇಕಲ್ಲವೇ? ದ್ರವ್ಯಶ್ರೀಗಿಂತ ಅವರ ಮನೆಯಲ್ಲಿ ಧರ್ಮಶ್ರೀಯೇ ಹೆಚ್ಚು ಅಧಿಕಾರ ನಡೆಸುತ್ತ ಬಂದಿದ್ದಳು— ಅನ್ನೋದನ್ನ ನೆನಪಿಟ್ಟುಕೋ."

"ಯಾವ ಧರ್ಮ ಅವರದು ಹಾಗಾದರೆ?"

"ಬ್ರಾಹ್ಮಸಮಾಜಧರ್ಮ, ಜಾತಿಭೇದಕ್ಕೆ ಮುಟ್ಟುಗೋಲು ಹಾಕಿದ ಧರ್ಮ!"

"ಅದೆಂಥಾ ಧರ್ಮವೋ ದೇವರೇ ಬಲ್ಲ; ನಾನಂತೂ ಅಂಥ ಮತಧರ್ಮ ಒಂದಿದೆ ಅಂತ ಈವರೆಗೂ ಕೇಳಿಲ್ಲ. ಜಾತಿಭೇದವಿಲ್ಲದ ಹಿಂದು ಧರ್ಮವೂ ಒಂದಿದೆ ಅಂತ ಯಾರೋ ಹೇಳುತ್ತಿದ್ದರು; ಆದರೆ ಅದನ್ನು ಆರ್ಯಸಮಾಜ ಎಂದು ಕರೆಯೋದನ್ನ ನಾನು ಕೇಳಿ ಬಲ್ಲೆನಲ್ಲದೆ 'ಬ್ರಾಹ್ಮಸಮಾಜ' ಅನ್ನೋದನ್ನ ಕೇಳಿಲ್ಲ."

"ಹಾಗಾದರೆ ಈಗಲಾದರೂ ಗೊತ್ತಾಯ್ತಲ್ಲ. ಆರ್ಯಸಮಾಜ ದಂಥದೇ ಒಂದು ಧರ್ಮ ಅದು. ಹಾಗೇ ವಿಶ್ವ ಹಿಂದು ಸಮಾಜದ ಸಿದ್ಧಾಂತ ಅದರದು. ಕವಿ ಹುಟ್ಟಿ ಬೆಳೆದ ಈ ಧಾರ್ಮಿಕ ಆವರಣವು ಆತನ ಮೇಲೆ

ಪರಿಣಾಮ ಮಾಡದೆ ಉಳಿದೀತೇ ? ಆತನ ಸಾಹಿತ್ಯದಲ್ಲಿಯೂ ಜೀವನದಲ್ಲಿಯೂ ಹೆಜ್ಜೆಹೆಜ್ಜೆಗೆ ಹೊಳೆವ ವಿಶಾಲ ಮನೋಭಾವ, ಅನುಕಂಪಶೀಲ ಮತ್ತು ಪ್ರೇಮಸ್ಪಂದನಗಳು ಯಾರ ದೃಷ್ಟಿಯನ್ನಾದರೂ ಆತನು ಬೆಳೆದು ಬಾಳಿದ ಹಿನ್ನೆಲೆಯತ್ತ ಹರಿಯಿಸದಿರವು."

"ಆದರೆ ನೋಡಿ—ಬ್ರಾಹ್ಮಧರ್ಮದ ಅನುಯಾಯಿಗಳಲ್ಲಿ ಎಲ್ಲರೂ ಹಾಗೇ ವಿಶ್ವಕುಟುಂಬಿ ಭಾವನೆಯವರೇಕಾಗಲಿಲ್ಲ?"

"ಗದ್ದೆ-ಬೀಜಗಳೆರಡೂ ಚೆನ್ನಾಗಿದ್ದರೇನೇ ಒಳ್ಳೆಯ ಸಸಿ ಹುಟ್ಟಿ ಬೆಳೆಯೋದು. ಯಾವುದಾದರೂ ಒಂದು ಚೆನ್ನಾಗಿದ್ದು ಇನ್ನೊಂದು ಕೆಟ್ಟಿದ್ದರೆ ಬಯಸಿದಂಥ ಸಸಿಯನ್ನು ಕಾಣಲಾದೀತೇ? ಮಹರ್ಷಿ ದೇವೇಂದ್ರನಾಥ ಠಾಕೂರರ ಹೆಸರನ್ನು ಕೇಳದವರಾರು? ಅವರ ಲೋಕೋಪಕಾರ ಬುದ್ಧಿ ಯಾರಿಗರಿಯದು? ಅಂಥವರ ಮನೆಯಲ್ಲಿ ಇಂಥ ಪೂರ್ವಸಂಸ್ಕಾರವುಳ್ಳ ಆತ್ಮ ಹುಟ್ಟಿದ್ದರಿಂದ ಕವಿಗೆ ರವಿಸದೃಶವಾದ ಪ್ರಕಾಶ ದೊರಕಿತು. ರವಿಯೇ ಆದರೂ ಮೋಡ ಕವಿದಿದ್ದರೆ ಮರೆಯಾಗಿಯೇ ಇರಬೇಕಾಗುವುದಲ್ಲವೇ?"

"ಅದೇನೋ ನಿಜ ಅನ್ನಿ; ಆದರೆ ಇಂದಿನ ಕಾಲದಲ್ಲಿ ಗದ್ದೆ-ಬೀಜಗಳೆರಡೂ ಚೆನ್ನಾಗಿಲ್ಲದಿದ್ದರೂ, ಸಸಿ ಕೂಡ ಬಲರಾಮನ ಗೋವಾಗಿದ್ದರೂ, ಧನಪ್ರಕಾಶವೊಂದಿದ್ದುಬಿಟ್ಟರೆ ಅದರ ಸೌಂದರ್ಯ ಉತ್ತಮೋತ್ತಮವೆಂಬ ಪ್ರಸಿದ್ಧಿ ಸಿಗುವುದಲ್ಲ?"

"ಪ್ರಸಿದ್ಧಿಯು ಯಾವಾಗಲೂ ಅಲ್ಪಕಾಲಿಕ; ಕೀರ್ತಿಯು ಬಹುಕಾಲಿಕ. ಅವೆರಡು ಬೇಗಡೆ ಮತ್ತು ಬಂಗಾರಗಳಿಗೆ ಸಮಾನ. ಜೀವಿತ ಕಾಲದಲ್ಲಿ ದೊರಕುವುದು ಪ್ರಸಿದ್ಧಿ; ಸತ್ತ ಬಳಿಕ ಬರಬಹುದಾದದ್ದು ಕೀರ್ತಿ. ಪ್ರಸಿದ್ಧಿಕಾಮರಿಗೆ ಕೀರ್ತಿದಾಯಕ ಕೃತಿಗಳನ್ನು ಮಾಡುವ ಶಕ್ತಿಯಿರುವುದು ವಿರಳ; ಕೀರ್ತಿಕಾಮರಿಗೆ ಪ್ರಸಿದ್ಧಿ ದೊರಕುವಂತಾಗುವುದೂ ವಿರಳ. ನಮ್ಮ ಕವಿಗೆ ಪ್ರಯತ್ನವಿಲ್ಲದೆ ಪ್ರಸಿದ್ಧಿ ದೊರಕಿತು; ಪ್ರಯತ್ನದಿಂದ ಕೀರ್ತಿ ಸಿಕ್ಕಿತು. ಪ್ರಸಿದ್ಧಿ-ಕೀರ್ತಿಗಳೆರಡೂ ಬೇಕೆಂಬವರಿಗೆ ಎರಡೂ ಸಿಕ್ಕದಿರುವ ಸಂಭವ ಹೆಚ್ಚು!"

"ಆದರೆ ಈ ಕವಿ ಚಿಕ್ಕಂದಿನಲ್ಲಿ ಶಾಲೆಗೆ ಹೋಗೋದಕ್ಕೆ ಒಲ್ಲೆನೆನ್ನುತ್ತಿದ್ದನಂತಲ್ಲಾ? ಇದು ನನಗೆ ಬಹಳ ವಿಚಿತ್ರವಾಗಿ ತೋರುತ್ತದೆ. ಓದಿಗೆ ವಿಮುಖ

ನಾದವನು ಪ್ರತಿಭಾವಂತ ಕವಿಯಾಗುವುದು ಹೇಗೆ? ನನಗೆ ಅರ್ಥವೇ ಆಗೋದಿಲ್ಲ ನೋಡಿ."

"ನಿಜ ನೀನು ಹೇಳೋದು. ಆದರೆ 'ಓದಿದರೇನರಗಿಳಿ ಕಲ್ತೋದುವ ವೊಲ್?' ಎಂದು ಸವಾಲು ಹಾಕಿದ ಹಿಂದೊಬ್ಬ ಕವಿ. ಒಂದು ವರ್ಗದಲ್ಲಿ ೪೦ ಹುಡುಗರಿರುತ್ತಾರೆ ಎಂದಿಟ್ಟುಕೋ. ಅವರಲ್ಲಿ ನೂರಕ್ಕೆ ೩೫ ಗುಣಗಳನ್ನು ಪಡೆದು ಪಾಸಾದವರಿಂದ ಹಿಡಿದು ೮೦–೯೦ ಗುಣಗಳನ್ನು ಪಡೆದವರವರೆಗೂ ಇರುತ್ತಾರೆ. ಅವರೆಲ್ಲರಿಗೂ ಒಂದು ಪಾಠವನ್ನು ಒಬ್ಬನೇ ಉಪಾಧ್ಯಾಯನು ಒಂದೇ ಕ್ರಮದಿಂದ ಹೇಳಿಕೊಡುತ್ತಾನೆ. ಆತನ ಗುರಿ ೩೫ರ ಮಹಾವಟುಗಳಿಗೆ ತಿಳಿಸಿಹೇಳುವುದರತ್ತ ಹರಿದಿರುವುದು ಸಹಜ. ಹೀಗಿರುವಾಗ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸ್ವಾಭಾವಿಕವಾಗಿ ಕೆಲವೇ ದಿನಗಳಲ್ಲಿ ಬೇಸರ ಬರುತ್ತದೆ. ನಮ್ಮ ಕವಿಗೆನಿಸಿದ್ದೂ ಹೀಗೇ. ಪಾದರಸದಂಥ ಬುದ್ಧಿಯುಳ್ಳವರಿಗೆ ಕೂರ್ಮ ಗತಿಯ ಪಾಠಪ್ರವಚನವೆನ್ನಿಸುತ್ತದೆ—ಸಾಮಾನ್ಯ ಶಿಕ್ಷಕರ ಸಾಮಾನ್ಯವಾದ ಜಡಪಾಠಕ್ರಮ. ಅದರಲ್ಲೂ ಹಿಂದಿನ ಕಾಲದ ಬೆತ್ತದುಪಾಧ್ಯಾಯರು ಉರು ಹೊಡೆಯಿಸುವುದರತ್ತ ಹೆಚ್ಚು ಲಕ್ಷ್ಯಹಾಕುತ್ತಿದ್ದರು. ಅರ್ಥವನ್ನು ಚೆನ್ನಾಗಿ ಅರಗಿಸಿಕೊಳ್ಳದೆ ಉರು ಹೊಡೆಯುವುದು ಮೇಧಾವಿಗಳಿಗೆ ಪ್ರಾಣಸಂಕಟ."

"ಬೆತ್ತದ ಮೇಷ್ಟ್ರು ಅಂದ ಕೂಡಲೇ ನಾನು ಶಾಲೆಗೆ ಹೋಗುತ್ತಿದ್ದಾಗ ನನ್ನ ಜೊತೆಗಾರ್ತಿಯರು ಹೇಳುತ್ತಿದ್ದ ಪದ ನೆನಪಾಗುತ್ತದೆ:

ಏಟು ಇದಕೋ ಬೈಗುಳಿದಕೋ
ಬಿಸಿಬಿಸಿಯ ಒಣಶುಂಠಿ ಇದಕೋ
ಚಂಡಶಿಷ್ಯರೆ ನೀವಿದೆಲ್ಲವ
ಉಂಡು ಸಂತಸದಿಂದಿರಿ!"

"'ಒಣಶುಂಠಿ' ಅಂದರೇನೇ ಅದು?"

"ಅದೇ?—ಕಿವಿ ಹಿಂಡಿ ಖಾರವಾದ ಅನುಭವವನ್ನು ಶಿಷ್ಯರಿಗೆ ಮಾಡಿ ಕೊಡುವುದು! ಮೇಷ್ಟ್ರು ಮುಖದಷ್ಟೇ ಪ್ರಮಾಣದ ಕೆಂಪು ಶಿಷ್ಯರ ಕಿವಿಗಡರುವ ವರೆಗೆ ಒಣಶುಂಠಿ ಪ್ರಯೋಗ ನಡೆಯುತ್ತಿತ್ತು!"

" ರವೀಂದ್ರ ಕವಿಗೆ ಒಣಶುಂಠಿಯ ಅನುಭವವಾಗಿತ್ತೋ ಇಲ್ಲವೋ—ಆದರೆ ಶಾಲೆಯ ಯಾಂತ್ರಿಕವೂ ಅಸ್ಫೂರ್ತಿಕರವೂ ಆದ ಶಿಕ್ಷಣ ರುಚಿಸಲಿಲ್ಲ ಎಂಬುದೇನೋ ನಿಜ. ಆತ ಹುಟ್ಟಿದ್ದು ವಿದ್ವಾಂಸರ ಮನೆಯಲ್ಲಿ, ಬೆಳೆಯುತ್ತಿದ್ದುದು ವಿದ್ವಾಂಸರ ಸಂಪರ್ಕದಲ್ಲಿ. ಮನೆಯಲ್ಲೇನು ಆತನಿಗೆ ಕಡಿಮೆ ಶಿಕ್ಷಣ ಸಿಕ್ಕುತ್ತಿತ್ತೇ? ಜೀವನಶಿಕ್ಷಣವು ಮನೆಯಲ್ಲಿ ದೊರೆತಷ್ಟು ಶಾಲೆಯಲ್ಲೆಂತು ದೊರೆತೀತು? ಮನಸ್ಸಿಗೆ ಬಂಡವಾಳ ದೊರಕುವುದು ಮನೆಯೊಳಗೆ; ಬುದ್ಧಿಗೆ ಬಂಡವಾಳ ಸಿಗುವುದು ಮನೆಯ ಹೊರಗೆ. ಮಕ್ಕಳಿಗಿದು ಸಹಜವಲ್ಲವೇ? ಈ ಸಹಜಾವರಣಗಳಾದಮೇಲೆ ಬರುವುದು ಶಾಲೆಯ ಕೃತಕ ಆವರಣ. ಆದುದರಿಂದ ಅಹಿತವಾದ ಸಹಜಾವರಣಗಳಿದ್ದಲ್ಲಿ ಶಾಲೆ–ಕಾಲೇಜುಗಳಿಂದ ವ್ಯಕ್ತಿತ್ವ–ಚಾರಿತ್ರ–ಪ್ರತಿಭೆಗಳ ವಿಕಾಸ ಆಗಬೇಕಾದಂತೆ ಆಗದೆ ಹೋಗುವುದೇ ಹೆಚ್ಚು. ಹೀಗಿರುವಾಗ ಪ್ರತ್ಯುತ್ಪನ್ನಮತಿಯಾದ ಕವಿಗೆ ಶಾಲೆಗೆ ತಪ್ಪಿಸಿಕೊಂಡದ್ದರಿಂದ ಬಹಳ ನಷ್ಟವಾಗಲಿಲ್ಲ. ಕಾಳಿದಾಸನು ಪಾರ್ವತಿಯ ವಿದ್ಯಾಭ್ಯಾಸವನ್ನು ಹೇಳಹೊರಟು, ಅವಳು ವಿದ್ಯಾರ್ಥಿನಿಯ ವಯಸ್ಸನ್ನು ಮುಟ್ಟಿದೊಡನೆಯೇ ಪೂರ್ವಜನ್ಮದ ಸಂಸ್ಕಾರದ ರೂಪದಲ್ಲಿದ್ದ ಅವಳ ಸರ್ವವಿದ್ಯಾಜ್ಞಾನವೂ ಒಮ್ಮೆಲೇ ಪ್ರಕಟವಾಯಿತೆಂದಿದ್ದಾನೆ. ಮಹಾಪ್ರತಿಭರನೇಕರ ಜೀವನದಲ್ಲಿ ಶಿಕ್ಷಣದ ಯಾವುದಾದರೊಂದು ಹಂತದಲ್ಲಿ ಅವರ ಪೂರ್ವಸಂಸ್ಕಾರ ಅಥವಾ ವಾಸನಾಬಲವು ಎಚ್ಚತ್ತು ಕಾರ್ಯಪರವಾದದ್ದುಂಟು."

" ನಮ್ಮ ಕವಿಯ ಬಾಳಿನಲ್ಲೂ ಅಂಥ ಅದ್ಭುತ ಪವಾಡ ನಡೆಯಿತೇ?"

" ಇಲ್ಲ—ಪಾರ್ವತಿಗಾದ ಪವಾಡವೇನೂ ನಡೆಯಲಿಲ್ಲ. ಆದರೆ ಶಾಲೇತರ ವ್ಯಾಸಂಗ ಮತ್ತು ನಿರ್ಮಲ ನಿಸರ್ಗದ ಆವರಣದಲ್ಲಿಯ ಉದ್ಬೋಧಕತೆಗಳು ಆತನ ಹೃದಯವನ್ನು ವಿಶಾಲಗೊಳಿಸಿದವು ಮತ್ತು ಪ್ರತಿಭೆಯನ್ನು ಉಜ್ವಲಗೊಳಿಸಿದವು."

" ಅವನು ಮೊದಲು ಕಲಿತದ್ದು ಬಂಗಾಳಿ ಭಾಷೆಯನ್ನೇ ಅಲ್ಲವೇ?"

" ಹೌದು; ಅದು ಅವನ ತಾಯ್ನುಡಿ. ಭಾರತದ ೧೪ ಪ್ರಚಲಿತ ಭಾಷೆಗಳಲ್ಲಿ ಬಂಗಾಳಿ–ತಮಿಳು–ಕನ್ನಡಗಳಿಗೆ ಹಳೆಯ ಅಭಿಜಾತ ವಾಙ್ಮಯದ ದೊಡ್ಡ ಆಸ್ತಿಯಿದೆ. ಬಂಗಾಳಿಯು ಅಪಭ್ರಂಶ; ತಮಿಳು–ಕನ್ನಡಗಳು ಸಂಸ್ಕೃತೇತರ ಕುಟುಂಬಕ್ಕೆ ಸೇರಿದ ಭಾಷೆಗಳು. ಆದರೆ ಸಂಸ್ಕೃತ ಮೂಲದ

ಪದಗಳ ಬಳಕೆ ಹದಿನಾಲ್ಕೂ ಭಾಷೆಗಳಿಗೆ ಸಹಜವಾಗಿಬಿಟ್ಟದೆ. ಬಂಗಾಳಿಯಲ್ಲಿ ಸಂಸ್ಕೃತ ಮೂಲದ ಪದಗಳ ಸಂಖ್ಯಾಬಲ ಅತಿ ಹೆಚ್ಚು; ಸಂಸ್ಕೃತ ಭಾಷೆಯ ಪದ ಸಂಗೀತ (Word music) ಬಂಗಾಳಿಯಲ್ಲಿ ಅತಿಪ್ರಚುರವಾಗಿದೆ. ಆದುದರಿಂದ ಅದೊಂದು 'ಗೀತವಾಣಿ' ಎಂದರೆ ಅತಿಶಯೋಕ್ತಿಯಾಗಲಾರದು."

"ನಮ್ಮ ಕವಿಯ ಉದಯಕ್ಕಿಂತ ಮುಂಚೆ ಬಂಗಾಳದಲ್ಲಿ ಪ್ರಚುರವಾಗಿದ್ದ ಕಾವ್ಯಗಳನ್ನು ಅಭ್ಯಸಿಸುವ ಅವಕಾಶ ಆತನಿಗೆ ದೊರಕಿರಲೇಬೇಕು—ಅಲ್ಲವೇ?"

"ಖಂಡಿತವಾಗಿಯೂ; ೧೬ನೆಯ ಶತಮಾನದಿಂದ ಆರಂಭಿಸಿದರೆ ಮುಕುಂದರಾಮ, ವಿದ್ಯಾಪತಿ, ಚಂಡೀದಾಸ, ಜ್ಞಾನದಾಸ, ಗೋವಿಂದದಾಸ ಎಂಬ ಕವಿಗಳ ಕೃತಿಗಳು ಜನಪ್ರಿಯವಾಗಿದ್ದವು. ವಿದ್ಯಾಪತಿ ಮುಂತಾದವರು ರಾಧಾಕೃಷ್ಣರ ವಿಷಯವುಳ್ಳ ಅತ್ಯುತ್ತಮ ಪ್ರೇಮಗೀತ–ಭಕ್ತಿಗೀತಗಳನ್ನು ಬರೆದಿದ್ದರು. ಚೈತನ್ಯರೆಂಬ ಭಕ್ತೋತ್ತಮರ ಪ್ರಭಾವದಿಂದ ವಿಷ್ಣುಭಕ್ತಿಪರವಾದ ಕೃತಿಗಳು ತುಂಬ ರಚಿತವಾಗಿದ್ದವು. ರವೀಂದ್ರನ ಕೃತಿಯೆಂದು ಮೊಟ್ಟ ಮೊದಲು ಜಗತ್ಪ್ರಸಿದ್ಧಿಗೆ ಬಂದ 'ಗೀತಾಂಜಲಿ'ಯ ಭಕ್ತಿರಸಪ್ರವಾಹವು ಓದುಗನಿಗೆ ಆ ಭಕ್ತಿಸಾಹಿತ್ಯವನ್ನು ನೆನಪಿಗೆ ತಂದುಕೊಡದಿರಲಾರದು."

"ಹಿಂದಿನ ಕಾಲದಲ್ಲೇ ಸ್ತೋತ್ರಸಾಹಿತ್ಯಕ್ಕೆ ಪ್ರಥಮ ಪ್ರಾಶಸ್ತ್ಯವನ್ನು ಕೊಡಲು ಸಾಹಿತ್ಯವಿಮರ್ಶಕರು ಹಿಂಜರಿದರು. ಈಗಂತೂ ಭಕ್ತಿಯು ನಗರ–ಪಟ್ಟಣಗಳಲ್ಲಿ ಕೇವಲ ಸಾಮಾಜಿಕ ವಿಲಾಸ (Social Fashion) ಎನ್ನಿಸುತ್ತ ಹೋಗಿದೆ. ಹೀಗಿರುವಾಗ ಇಂದಿನ ವಿಜ್ಞಾನಯುಗದ ವಿಮರ್ಶಕರು ಭಕ್ತಿ ಕಾವ್ಯವನ್ನು ಹೇಗೆ ಮೆಚ್ಚಿಕೊಂಡರೋ ನನಗಂತೂ ಅರ್ಥವಾಗುವುದಿಲ್ಲ!"

"ನಿಜ; ಆದರೆ ವೈಜ್ಞಾನಿಕ ಮನೋವೃತ್ತಿಯು ಆಕಾರವುಳ್ಳ ದೇವತಾ ಕಲ್ಪನೆಗೆ ವಿರುದ್ಧವಾಗಿದೆಯಲ್ಲದೆ ನಿರಾಕಾರವುಳ್ಳ ತತ್ವದ ಅಥವಾ ಸತ್ಯಸತ್ವದ ಕಲ್ಪನೆಗೆ ವಿರುದ್ಧವಾಗಿಲ್ಲ. ನಿಜವಾದ ವಿಜ್ಞಾನಿಗೆ ತಿಳಿದುದಕ್ಕಿಂತ ತಿಳಿಯದುದು ಹೆಚ್ಚಾಗಿದೆ ಎಂಬುದು ಯಾವಾಗಲೂ ಇರುವ ಆಲೋಚನೆ. ಅಂಥ ಅಜ್ಞಾತ ಪದಾರ್ಥವನ್ನು ಭಕ್ತಿಯಿಂದ ನೋಡುವ ಭಾವನಾಪರ ದೃಷ್ಟಿಯು ಜೀವನದಲ್ಲಿ ಒಬ್ಬ ವಿಜ್ಞಾನಿಗೆ ಒಮ್ಮೆ ಅಪ್ರಿಯವೆನಿಸಿದರೂ ಕಲೆ–ಸಾಹಿತ್ಯಗಳ ಪ್ರಪಂಚದಲ್ಲಿ ಅಪ್ರಿಯವಲ್ಲ. ಭಕ್ತಿಯು ಒಂದು ಅಪೂರ್ವ ಆಕರ್ಷಣೆಯುಳ್ಳ ರಸ. ಜೀವಂತ

ಮನುಷ್ಯರಿಗೆ ಪ್ರೇಮ ತೋರಿಸುವುದಕ್ಕೂ ಗೌರವ ಕೊಡುವುದಕ್ಕೂ ಜೀವಂತವಾಗಿರುವುದೆನ್ನಿಸಿದ ಅಮೂರ್ತ ಪದಾರ್ಥಕ್ಕೆ ಪ್ರೇಮ–ಗೌರವಗಳನ್ನು ಸಲ್ಲಿಸುವುದಕ್ಕೂ ಮನಃಕ್ರಿಯೆಯ ದೃಷ್ಟಿಯಿಂದ ಬಹಳ ಭೇದವಿಲ್ಲ. ಆದುದರಿಂದ ವಿಜ್ಞಾನಯುಗವು ಪರಮಾತ್ಮಪರವಾದ ಗೀತಗಳುಳ್ಳ ಗೀತಾಂಜಲಿಯನ್ನು ಮೆಚ್ಚಿಕೊಳ್ಳಲು ಶಕ್ತವಾಯ್ತು. ವಿಲಾಸಿಗಳಿಗೆ ಅವರ ಪ್ರದರ್ಶನಶೀಲತೆಯ ದೆಸೆಯಿಂದ ಯಾವಾಗಲೂ ಹೃದಯವನ್ನು ತಣಿಸುವಂಥ ಅನುಭವವು ಯಾವುದರಿಂದಲೂ ಉಂಟಾಗದು; ತಮ್ಮ ಹೃದಯವು ತಣಿದಂತೆ ಅಥವಾ ಇನ್ನೇನಾದರೂ ಆದಂತೆ ತೋರಿಸಬಲ್ಲರಲ್ಲದೆ, ತೋರಿಸಿದಂತಹ ಭಾವನೆ ಅವರಲ್ಲಿ ಸಹಜವಾಗಿ ಉದಯವಾಗಲಾರದು. ಅಂಥವರ ತೃಪ್ತಿ, ಅತೃಪ್ತಿ, ಸ್ತುತಿ, ನಿಂದೆಗಳಾವುವೂ ಹಾರ್ದಿಕವಲ್ಲ; ಅವಕ್ಕೆ ಹೊರಗಿನ ಮುಖಕ್ಕೆ ವ್ಯತಿರಿಕ್ತವಾದ ಒಳಮುಖವೊಂದು ಇದ್ದೇ ಇರುತ್ತದೆ. ಅವರು ಯಾವಾಗಲೂ ನ್ಯಾಯವಾದ ವಿಚಾರ–ವಿಮರ್ಶೆಗಳ ಕ್ಷೇತ್ರದಿಂದ ಹೊರಗೇ! ಸಂಗೀತವನ್ನು ಆತ್ಮದ ಭಾಷೆ ಎನ್ನುತ್ತಾರೆ. ಸಾಹಿತ್ಯವು ಆ ಆತ್ಮಕ್ಕಿರುವ ಬುದ್ಧಿ–ಭಾವನೆಗಳ ಭಾಷೆ. ಈ ಎರಡೂ ಭಾಷೆಗಳ ಸಮುಸತ್ವವು ಗೀತಾಂಜಲಿಯಲ್ಲಿ ಒಡಮೂಡಿದೆ. ಅದರಿಂದಲೇ ಅದು ಸಹೃದಯರ ಮೆಚ್ಚುಗೆಗೆ ಪಾತ್ರವಾಯ್ತು. ಅದರ ಮೊದಲನೆಯ ಗೀತದಲ್ಲಿಯೇ ಕವಿಯು ತನ್ನನ್ನು ಭಗವಂತನು ತನ್ನ ಹಾಡಿನ ಕೊಳಲನ್ನಾಗಿ ಮಾಡಿಕೊಳ್ಳಲಿ ಎಂದು ಹಾರಯಿಸಿದ್ದಾನೆ, ಪ್ರಾರ್ಥಿಸಿದ್ದಾನೆ. ಆ ಪ್ರಾರ್ಥನೆ ಸಫಲವಾದುದನ್ನು ಜಗತ್ತು ನೋಡುವಂತಾಯ್ತು!"

"ರವೀಂದ್ರ ಕವಿಯು ಬಾಲ್ಯದಿಂದಲೇ ಭಕ್ತನಾಗಿದ್ದನೆ?"

"ಒಂದು ದೃಷ್ಟಿಯಿಂದ ಹೌದು; ಇನ್ನೊಂದು ದೃಷ್ಟಿಯಿಂದ ಅಲ್ಲ. ಮೊದಲಿನ ಹಂತದಲ್ಲಿ ನಿಸರ್ಗಭಕ್ತಿ, ಎರಡನೆಯ ಹಂತದಲ್ಲಿ ದೇಶಭಕ್ತಿ ಮತ್ತು ಮೂರನೆಯ ಹಂತದಲ್ಲಿ ದೈವಭಕ್ತಿ ಆತನ ವ್ಯಕ್ತಿತ್ವವಿಕಾಸದಲ್ಲಿ ತೋರುತ್ತದೆ. ಗಿಡ, ಮರ, ಬಳ್ಳಿ, ಗಾಳಿ, ನೀರು, ನೆಲ, ಗಿರಿ, ಗುಹೆ, ಕಣಿವೆ, ಆಕಾಶ, ಸೂರ್ಯ, ಚಂದ್ರ, ನಕ್ಷತ್ರ, ಮೋಡ, ಬಯಲು, ಕಡಲು, ಹೊಳೆ, ಹಳ್ಳ, ದಿಣ್ಣೆ, ತಗ್ಗು, ಪಶು, ಪಕ್ಷಿ, ಕೃಮಿ, ಕೀಟಗಳ ಆಕಾರ, ಬಣ್ಣ, ಧ್ವನಿ, ವರ್ತನೆ, ಅಣುತ್ವ, ಮಹತ್ವ, ಪ್ರಕಾಶಗಳ ಅನಂತವೈವಿಧ್ಯವುಳ್ಳ ನಿಸರ್ಗವು ಕಾಳಿದಾಸನನ್ನು ಹೇಗೋ ಹಾಗೇ ರವೀಂದ್ರನನ್ನೂ ಆಕರ್ಷಿಸಿತು. ಮಹಾಕವಿಗಳಿಗೆ ನಿಸರ್ಗ-

ಪ್ರೇಮವು ಹುಟ್ಟುಗುಣವಾಗಿರುವಂತೆ ತೋರುತ್ತದೆ. ವರ್ಡ್ಸ್‌ವರ್ತ್ ಕವಿಯು—

ಮುನಿಗಳೆಲ್ಲಾ ಸೇರಿ ಮಾನವನು ಹೀಗಿರುವ,
ಅವನೊಳಿತು ಕೆಡಕು ನೀತಿಗಳಿವಿಷ್ಟು
ಎಂದು ಬೋಧಿಸುವುದನು ಮೀರದೆ ವಸಂತವನ-
ದೊಂದು ಹೃದಯೋನ್ಮಾದನಪ್ರಣೋದ?

ಎಂದಿರುವುದು ಈ ಸಂದರ್ಭದಲ್ಲಿ ನೆನಪಾಗದಿರದು. ಬೆಳೆಯ ಗುಣ ಮೊಳಕೆಯಲ್ಲೇ ಕಾಣುವಂತೆ ರಸಪ್ರಪಂಚದಲ್ಲಿ ಮುಂದೆ ಅಪ್ರಾಕೃತ ವಿಕ್ರಮವನ್ನು ತೋರಲಿದ್ದ ಕವಿಗೆ ಪ್ರಕೃತಿಪ್ರೇಮವು ಪ್ರಕೃತಿಸಹಜವಾಗಿತ್ತು.

ರವೀಂದ್ರ ದೇವೇಂದ್ರನಾಥ ಠಾಕೂರರ ಏಳು ಮಕ್ಕಳಲ್ಲಿ ಕೊನೆಯವನು. ಬ್ರಹ್ಮಸಮಾಜದ ಸಂಸ್ಥಾಪಕರಾದ ರಾಜಾ ರಾಮಮೋಹನ ರಾಯರ ಗೆಳೆಯರೆನಿಸಿದ್ದ ದ್ವಾರಕಾನಾಥ ಠಾಕೂರರು ದೇವೇಂದ್ರನಾಥರ ತಂದೆ. ಮಹರ್ಷಿ ದೇವೇಂದ್ರನಾಥರು ವಿದೇಶಪ್ರವಾಸಗಳಲ್ಲಿರುತ್ತಿದ್ದರು. ಬಾಲ್ಯದಲ್ಲೇ ತಾಯಿಯನ್ನು ಕಳೆದುಕೊಂಡ ರವೀಂದ್ರನು ಮನೆಯ ಸೇವಕರ ಕೈಯಲ್ಲೇ ಬೆಳೆದು ದೊಡ್ಡವನಾದನು. ಶಾಲೆಗೂ ರವೀಂದ್ರನಿಗೂ ಕೂಡಿಬಾರದುದರಿಂದ ಆತನ ವಿದ್ಯಾಭ್ಯಾಸ ಸ್ವತಂತ್ರವಾಗಿಯೇ ನಡೆಯಿತು. ಆದರೆ ಒಮ್ಮೆ ಸಾಂಕ್ರಾಮಿಕ ಜ್ವರವು ಕಲಕತ್ತೆಯಲ್ಲಿ ಹಬ್ಬಿದಾಗ ನಗರದ ಹೊರಗಿನ ನದೀತೀರದಲ್ಲಿ ಕವಿಯು ವಾಸಮಾಡಬೇಕಾಯಿತು. ಆಗ ಆತನು ನಿಸರ್ಗದ ಮಡಿಲಿನ ಮರಿಯಾದನು. ಆ ನದೀತೀರದ ನಿವಾಸದಲ್ಲಿ—

ಪ್ರತಿದಿನವೂ ಗಂಗೆಯ ರಂಗತ್ತರಂಗಗಳ ಏರಿಳಿತ; ಬೇರೆ ಬೇರೆ ಬಗೆಯ ದೋಣಿಗಳ ಬೇರೆ ಬೇರೆ ನಮೂನೆಯ ನಡೆ; ಪಡುವಲಿಂದ ಮೂಡಲಿಗೆ ಚಾಚುವ ನೆರಳುಳ್ಳ ಮರಗಳು; ಆಚೆಯ ದಡದ ಕಾಡಿನ ನೆರಳುಗಳೆಂಬ ಚಿಂದಿಗಳ ಅಲಂಕೃತ ಅಂಚಿನ ಮೇಲೆ ಸಂಜೆಯ ಬಾನಿನ ಮೊಲೆಯ ಮೂಲಕ ಚಿಮ್ಮುತ್ತಿರುವ ಸುವರ್ಣವರ್ಣದ ಪ್ರಾಣರಸ! ಕೆಲದಿನ ಮುಂಜಾವದಿಂದ ಸಂಜೆಯತನಕ ಮೋಡ ಕವಿದಿರುತ್ತಿತ್ತು; ಆಚೆಯ ದಡದ ಕಾಡು ಕಪ್ಪಾಗಿ ಇರುತ್ತಿತ್ತು; ಹೊಳೆಯ ಮೇಲೆ ಕರಿನೆರಳು ಹರಿದಾಡುತ್ತಿದ್ದವು. ಆಗ ಮಾತಾಳಿ

ಮಳೆ ಒತ್ತರಿಸಿಬಂದು ಕ್ಷಿತಿಜವನ್ನು ಅಳಿಸಿಬಿಡುತ್ತಿತ್ತು; ಮರುದಡದ ಅಸ್ಪಷ್ಟ ರೇಖೆಯು ಕಣ್ಣೀರಿಟ್ಟು 'ನಾ ಬರ್‍ತೆನೀನ್ನು' ಎಂದು ಕಣ್ಮರೆಯಾಗುತ್ತಿತ್ತು; ನದಿಯ ಪ್ರವಾಹವು ಒತ್ತಿ ಹಿಡಿದ ಹೊಟ್ಟೆಯಂತೆ ಉಬ್ಬರಿಸುತ್ತಿತ್ತು; ತಲೆಯ ಮೇಲುಗಡೆ ತೀವವಾದ ಗಾಳಿಯು ಮರದೆಲೆಗಳೊಡನೆ ಸರಸವಾಡುತ್ತಿತ್ತು.

ಬಯಲು, ಬಾನು, ಕಾಡು, ಹೊನಲು ಎಂಬ ನಾಲ್ಕು ಸ್ತನಗಳಿಂದ ನಿಸರ್ಗ ಗೋಮಾತೆಯು ಸೌಂದರ್ಯದ ಕ್ಷೀರವನ್ನು ರವೀಂದ್ರನಿಗುಣಿಸಿದಳು. ಅದರಿಂದ ಪುಷ್ಟನಾದ ರವೀಂದ್ರನು ಕಲಕತ್ತೆಗೆ ಮರಳಿದನು. ಅಲ್ಲಿ ಈ ಬಾಲರವಿಯ ಕಿವಿಗೆ ಜಯದೇವ ಕವಿಯ ಪ್ರಖ್ಯಾತವಾದ ನಾದಮಾಧುರ್ಯವುಳ್ಳ ಗೀತಗೋವಿಂದ ಕಾವ್ಯದ ಮತ್ತು ಕಾಳಿದಾಸ ಕವಿಯ ಅದ್ವಿತೀಯ ಭಾವಗೀತ ಲಹರಿಯುಳ್ಳ ಮೇಘದೂತ ಎಂಬ ಕಾವ್ಯದ ಸಂಸ್ಕಾರ ದೊರೆಯಿತು. ಆಗಲೇ ಬಾಲರವಿಯು ಕವಿತಾರಚನೆಯನ್ನು ಶುರುಮಾಡಿದ್ದನು!"

"ಇದೇನ್ರೀ, ಅಷ್ಟು ಚಿಕ್ಕ ವಯಸ್ಸಿನಲ್ಲಿಯೇ ಆತನು ಮಹಾಕವಿಯ ಕೃತಿಗಳನ್ನು ಅರಿಯಬಲ್ಲವನಾಗಿದ್ದನೇ? ಇದನ್ನೇಕೋ ನಂಬುವುದು ಕಷ್ಟ ವಾಗುತ್ತದೆ."

"ಬೀಜದಲ್ಲಿ ವೃಕ್ಷದ ಸ್ವರೂಪ ಅಡಗಿರುತ್ತದೆ ಎಂಬುದು ಗೊತ್ತಿಲ್ಲವೇ? ಬಾಲ ಶಂಕರಾಚಾರ್ಯರ ಪ್ರೌಢಿ ಇತಿಹಾಸಪ್ರಸಿದ್ಧವಾಗಿಲ್ಲವೆ? ಮಂಗದ ಮರಿಗಳಿಗೂ ಸಿಂಗದ ಮರಿಗಳಿಗೂ ಇದೇ ವ್ಯತ್ಯಾಸ. ಇದು ರವೀಂದ್ರನ ತಂದೆಗೂ ಗೊತ್ತಾಯ್ತು. 'ನನ್ನ ಮಗನಿಗೆ ಕವಿತಾಶಕ್ತಿಯಿದೆ, ಅದಕ್ಕೆ ನಿಪುಣತೆಯ ಪೋಷಣೆ ಬೇಕು. ಆ ಬಗ್ಗೆ ಅವನಿಗೆ ಲೋಕಾನುಭವ ಸಿಗಲಿ' ಎಂದು ತಮ್ಮೊಳಗೇ ಭಾವಿಸಿ ಆತನ ತಂದೆಯವರು ಅವನನ್ನು ಕಲಕತ್ತೆಯಿಂದ ದೂರದಲ್ಲಿರುವ ವಿಶಾಲ ಪ್ರಪಂಚದತ್ತ ಕರೆದೊಯ್ದರು, ಸುಂದರವಾದ ಬಂಗಾಳ ಪ್ರಾಂತದ ಪರಿಚಯ ಮಾಡಿಕೊಡಲೆದ್ದರು."

"ನಮ್ಮ ಮಲೆನಾಡಿನಿಂದ ಅಲಂಕೃತವಾದ ಮೈಸೂರು – ಕರ್ನಾಟಕ ರಾಜ್ಯಕ್ಕಿಂತಲೂ ಬಂಗಾಳ ಸುಂದರವೇ? ನಾನರಿಯೆ!"

"ಹಾಗಲ್ಲವೇ, ಬಂಗಾಳವೂ ಒಂದು ಅತ್ಯಂತ ಸುಂದರವಾದ ಪ್ರಾಂತ. ಮೈಸೂರು–ಕರ್ನಾಟಕವೇನೂ ಅದಕ್ಕಿಂತ ಕಡಿಮೆಯೆಂದು ನನ್ನ ಅಭಿಪ್ರಾಯ ವಲ್ಲ. ಆದರೆ ಬಂಗಾಳದ ಚೆಲುವು ಒಂದು ಬಗೆಯದಲ್ಲ; ಅದಕ್ಕೆ ಎರಡು

ಮುಖಗಳಿವೆ. ಗಂಗಾಬಂಗಾಳವು ಅವುಗಳಲ್ಲೊಂದು. ನಿಧಾನವಾಗಿ ಹರಿಯುವ ಅತಿ ಅಗಲವಾದ ಹೊಳೆಗಳು ಅಲ್ಲಿ ಬಹಳ. ಅದು ವೇತಸ, ದರ್ಭೆ ಮುಂತಾದ ಹುಲ್ಲುಗಳಿಂದ ತುಂಬಿದ ನದೀತೀರಗಳುಳ್ಳ ಪ್ರದೇಶ. ಅಲ್ಲಿಯ ಜನರು ಜಲಚರರೂ ಹೌದು, ಸ್ಥಲಚರರೂ ಹೌದು! ಹಳೆಯ ಸೇನರಾಜ್ಯದ ಕೇಂದ್ರವಾದ ನಡಿಯವು ಅದರ ನಡುವೆ ಇದೆ. ಅದು ಬಂಗಾಳದ ಆತ್ಮ. ಅಲ್ಲಿಯದು ಶುದ್ಧ ಬಂಗಾಳಿ. ಐತಿಹ್ಯಗಳಿಗಲ್ಲಿ ಆವಾಸ; ಪುರಾಣಗಳಿಗದು ಪಾರಾವಾರ; ಪಾವಿತ್ರ್ಯಕ್ಕದು ಪರಮಸ್ಥಾನ. ಅಲ್ಲಿಯ ಶೈಲೀಡವೆಂಬ ಹಳ್ಳ-ಹುಲ್ಲುಗಳ ನಡುವಿನ ಸ್ಥಳದಲ್ಲಿ ರವೀಂದ್ರನು ವಾಸಿಸತೊಡಗಿದನು. ಈ ಶೈಲೀಡವು ಕವಿಯ ಕಾವ್ಯಶೈಲಿಯನ್ನು ರೂಪಿಸುವುದರಲ್ಲಿ ಹೆಚ್ಚಿನ ಪಾತ್ರ ವಹಿಸಿತು ಎಂದರೆ ಹೆಚ್ಚಾಗದು. ಆದರೆ ಇದಕ್ಕೂ ಮೊದಲು ಕವಿ ಹೊಕ್ಕದ್ದು ಈ ರಸಗಂಗೆಯ ಬಂಗಾಳವನ್ನಲ್ಲ; ಶುಷ್ಕ ಬಂಗಾಳವನ್ನು. ಅಲ್ಲಿ ಕೆಲಕಾಲ ಇದ್ದಾಗ ಬೋಲ್ಪುರದೊಡನೆ ಕವಿಯ ಸಂಪರ್ಕ ಬೆಳೆಯಿತು. ಅಲ್ಲೇ ಮುಂದೆ ಆತ ಶಾಲೆಯನ್ನು ಸ್ಥಾಪಿಸಿದ್ದು. ಒಣಬಂಗಾಳವು ಮಕ್ಕಿ ಅಥವಾ ಹಕ್ಕಲು (ಕುಮರಿ) ಪ್ರದೇಶವನ್ನು ಹೋಲುತ್ತದೆ. ಹಳ್ಳಿಗಳು ಅಲ್ಲಿ ದೂರ ದೂರ; ನಡುನಡುವೆ ದೊಡ್ಡ ದೊಡ್ಡ ಅಡವಿಗಳು. ಅಡವಿಗಳ ಸನಿಹದ ನೆಲವಾದರೋ ನೋಡಲು ಸುಂದರ! ಮೊದಲು ನೋಟಕ್ಕೆ ಬೇಸರ ಬರಿಸುವಂಥ ಹತ್ತಡಿ ಎತ್ತರದ ಗಿಡಗಳೇ ಹೆಚ್ಚಾಗಿದ್ದರೂ ದೀರ್ಘಕಾಲ ಉಳಿದರೆ ಆ ಜಾಗ ಯಾರ ಎದೆಯನ್ನಾದರೂ ಸೆರೆಹಿಡಿಯದಿರದು. ಅಲ್ಲಲ್ಲಿ ಬೂರುಗ, ಮಾವು, ಮುತ್ತುಗ, ಸಾಲ ಮುಂತಾದ ಮರಗಳಿವೆ. ಗಂಗಾಬಂಗಾಳವು ಶ್ರೀಮಂತ ಅಲಂಕಾರಗಳಿಂದ ಶೋಭಿಸಿದರೆ, ಬಯಲುಬಂಗಾಳವು ಸರಳ ಅಲಂಕಾರಗಳಿಂದ ಆಕರ್ಷಕವಾಗಿದೆ. 'ಬಂಗಲಕ್ಷ್ಮಿ' ಎಂಬ ಕೃತಿಯಲ್ಲಿ ರವೀಂದ್ರನು ಇದನ್ನು ಮೂರ್ತಿಮತ್ತಾಗಿ ಬಣ್ಣಿಸಿದ್ದಾನೆ.

ಎರಡು ಬಂಗಾಳಗಳನ್ನೂ ಬಿಟ್ಟು ಆಮೇಲೆ ತನ್ನ ತಂದೆಯ ಬಯಕೆಯಂತೆ ರವೀಂದ್ರನು ಹಿಮಾಲಯದ ತಪ್ಪಲಿಗೂ ಹೋದನು. ಅಲ್ಲಿಯ ಗಿರಿ ಸೌಂದರ್ಯವು ಆತನ ಮನದ ಮೇಲೆ ಮತ್ತೊಂದು ಬಗೆಯ ಪರಿಣಾಮವನ್ನು ಉಂಟುಮಾಡಿತು. ಅದೇ ಗಿರಿಜೆ—ಕಾಳಿದಾಸನು 'ಕುಮಾರಸಂಭವ'ದಲ್ಲಿ ಬಣ್ಣಿಸಿದ ಪಾರ್ವತಿ—ಪರ್ವತಪ್ರದೇಶ."

“ಅಯ್ಯೋ, ಹೀಗೇನು? ನಾನು ಪಾರ್ವತಿ ಎಂದರೆ ಒಬ್ಬ ದೇವತಾಸ್ತ್ರೀ ಅಂದುಕೊಂಡಿದ್ದೆನಲ್ಲಾ!”

“ಅರೆ, ಇಷ್ಟೇನೆ ನಿನಗೆ ಗೊತ್ತಾಗಿರೋದು? ಗಂಡುಕವಿಗಳು ಹೆಚ್ಚಾಗಿ ತಮಗೆ ಚೆನ್ನಾಗಿ ತೋರುವುದೆಲ್ಲಾ ಹೆಣ್ಣೆಂದು ಕಲ್ಪಿಸುತ್ತಾರೆ; ಆದರೆ ಹೆಣ್ಣುಗಳೆಲ್ಲಾ ಚೆನ್ನಾಗಿ ತೋರುವುವೆಂದು ಬಣ್ಣಿಸುವುದಿಲ್ಲ — ನಂಬುವುದಂತೂ ಇಲ್ಲವೇ ಇಲ್ಲ! ರವೀಂದ್ರನಿಗಂತೂ ಇದು ಮತ್ತಷ್ಟು ಚೆನ್ನಾಗಿ ಗೊತ್ತು!”

“ಹಾಗಾದರೆ ಸುಂದರಿಯರ ವರ್ಣನೆಯೆಲ್ಲಾ ಸುಳ್ಳೇ?”

“ವರ್ಣನೆ ಎಂದಾದರೂ ಸುಳ್ಳಾಗುವುದುಂಟೇ? ಅದು ಕವಿಯು ಕಲ್ಪಿಸಿದ ವ್ಯಕ್ತಿ-ವಸ್ತು-ಸನ್ನಿವೇಶಗಳ ವರ್ಣನೆಯಾಗಿರುತ್ತದೆಯಲ್ಲದೆ, ದೇವರು ನಿರ್ಮಿಸಿದ ವ್ಯಕ್ತಿ–ವಸ್ತು–ಸನ್ನಿವೇಶಗಳ ಪಡಿಯಚ್ಚಾಗಿರುವುದಿಲ್ಲ. ಕವಿ ಅದರಿಂದಲೇ ಅಘಟಿತ–ಘಟನಾನೂತನ ಬ್ರಹ್ಮ! ಬುವಿ, ಬಾನು, ಕ್ಷಿತಿಜ, ಸಂಜೆ, ಬೆಳುದಿಂಗಳು ಎಂಬ ನಿಸರ್ಗದೇವಿಯ ಪಂಚಾಂಗಗಳು ಕವಿಯ ಕೃತಿಗಳಲ್ಲಿ ಬೇಕಾದಷ್ಟು ಬಲವಾಗಿ ಮುದ್ರೆಯೊತ್ತಿವೆ; ಆದರೆ ಆಕೆಯ ಆರನೆಯ ಅಂಗವಾದ ಬೆಟ್ಟ ಅವನ ಎದೆಯಲ್ಲಿ ನೆಟ್ಟಿಲ್ಲ! ಬೆಟ್ಟವನ್ನು ನಮ್ಮ ಕವಿ ಬರಿದೆ ಮುಟ್ಟಿಬಿಟ್ಟ! ಅದೂ ಅವನನ್ನು ಮಾತಾಡಿಸಲಿಲ್ಲ, ಅವನೂ ಅದನ್ನು ಮಾತಾಡಿಸಲಿಲ್ಲ!”

“ಅದೇಕೆ?”

“ಅದೇಕೆ ಎಂದರೆ ನಮ್ಮ ಕವಿ ರಾಜಕವಿ; ತಾನು ನಿಸರ್ಗದೆಡೆ ಹೋಗನು; ಅದೇ ತಾನಾಗಿ ಮನೆಯೊಳಗೆ ಬಂದರೆ “ಬಾ, ಕುಳಿತುಕೋ, ಗಂಗಾವುದಕ ಬೇಕೇ?” ಎಂದು ಕೇಳಿಯಾನು — ಅಷ್ಟೆ. ಈ ರಾಜದೃಷ್ಟಿಯಿದ್ದುದರಿಂದಲೇ ಮನುಷ್ಯವಸತಿಯಿಲ್ಲದ, ಮನುಷ್ಯ ಬಳಸದ, ಮನುಷ್ಯನಿಗೆ ಹತ್ತಿರವಿರದ ಪ್ರಾಕೃತಿಕ ಆವರಣವೊಂದನ್ನೂ ನಮ್ಮ ಕವಿ ತನ್ನ ಕೃತಿಗಳಲ್ಲಿ ನಿರ್ಮಿಸಿಲ್ಲವೆಂದು ಹೇಳಬಹುದು. ರವೀಂದ್ರನ ಕಾವ್ಯಪ್ರಪಂಚದಲ್ಲಿ ನಾವೆಯಿಲ್ಲದ ನದಿಯಿಲ್ಲ; ಮೈದಾನದಲ್ಲಿ ಹರಿಯದ ಹೊಳೆ ಕಡಿಮೆ; ಹೂದೋಟ–ಹಣ್ಣುದೋಟಗಳಲ್ಲೇ ರವೀಂದ್ರನ ಹೂ–ದುಂಬಿಗಳಿರುವುದು! ಅವನ ಕಾಡೋ?—ಹಳ್ಳಿಯ ಅಗಸೆ ಬಾಗಿಲ ಬಳಿ! ಆತನ ಸಾಹಿತ್ಯದಲ್ಲಿ ಮಳೆಯಿದೆ,

ಹೊಳೆಯಿದೆ, ಮರವಿದೆ, ಮೋಡವಿದೆ, ಬೆಳುದಿಂಗಳಿದೆ, ನಸು ಬೆಳಗಿದೆ— ಆದರೆ ಗಟ್ಟವಿಲ್ಲ, ಬೆಟ್ಟವಿಲ್ಲ !

ಭಾರತದ ವಾಯವ್ಯಭಾಗವನ್ನೂ ನಮ್ಮ ಕವಿ ಕೌಮಾರದಲ್ಲೇ ಕಂಡ. ಅಮೃತಸರದಲ್ಲಿಯ ಸಿಕ್ಕರ ಸ್ವರ್ಣಮಂದಿರವು ತನ್ನ ತೇಜಸ್ಸನ್ನು ರವೀಂದ್ರನ ಎದೆಯಲ್ಲಿ ನೆಟ್ಟಿತು. ಮನೆಗೆ ಬಂದಮೇಲೆ ಆತನು ಬಂಗಾಳ ಅಕಾದಮಿ ಮತ್ತು ಸೇಂಟ್ ಸೇವಿಯರ್ ಅಕಾದಮಿಗಳಿಗೆ ಹೋದನು. ಹೇಗೆ? ಹಿರಿಯರ ಒತ್ತಾಯದಿಂದ. ಆದರೆ ಕೆಲವೇ ಕಾಲದಲ್ಲಿ ಯಾಂತ್ರಿಕಶಾಲಾಶತ್ರುವಾದ ನಮ್ಮ ಕವಿಯು ತನ್ನ ಪಂಥವನ್ನು ಗೆದ್ದುಕೊಂಡ; ಮನೆಯಲ್ಲೇ ಓದಿದ, ಮನೆಯಲ್ಲೇ ಕಲಿತ."

"ಅಂತೂ ಒಳ್ಳೇ ಚಮತ್ಕಾರ; ರವೀಂದ್ರನು ರಾಜಕವಿಯೆಂಬುದು ನಿಜ. ಬಾಲ್ಯದಲ್ಲೇ ಅವನು ತನ್ನ ರಾಜಠೀವಿಯಿಂದ ಮನೆಯನ್ನೇ ಶಾಲೆ ಮಾಡಿಕೊಂಡ. ಅಬ್ಬಬ್ಬಾ !"

"ನಮ್ಮ ರಾಜಕವಿಯು ಮನೆಯಲ್ಲಿ ಹಿಂದೆ ಹೇಳಿದ ವಿಷ್ಣುಪರವಾದ ಭಾವಗೀತಗಳನ್ನು (ಸ್ತೋತ್ರಗೀತಗಳನ್ನು) ಅತ್ಯಾಸಕ್ತಿಯಿಂದ ಓದುತ್ತ ಓದುತ್ತ ತಾನೇ ಒಬ್ಬ ಹಳೆಯ ವೈಷ್ಣವಭಕ್ತನೆಂದು ಭಾವಿಸಿಕೊಳ್ಳತೊಡಗಿದನು; ಅದರಲ್ಲೂ ಭಾನುಸಿಂಗನ ಪಾತ್ರವನ್ನು ಆತನು ಸಂತೋಷದಿಂದ ತನ್ನಲ್ಲಿ ಆರೋಪಿಸಿಕೊಂಡನು. ಭಾನುಸಿಂಗ ಗೀತಗಳನ್ನಾತ ಮೊದಲು 'ಭಾರತಿ' ಯಲ್ಲಿ ಪ್ರಕಟಿಸಿದ—೧೮೭೭ನೆಯ ಇಸವಿಯಲ್ಲಿ. ಅದೊಂದು ಪ್ರಾಚೀನ ಕವಿಯ ಗೀತಗಳೆಂದು ತಿಳಿದು ಒಬ್ಬ ಮಹಾರಾಯನು ಅದನ್ನು ವಿಷಯವನ್ನಾಗಿ ಮಾಡಿಕೊಂಡು ಪ್ರೌಢ ಪ್ರಬಂಧವೊಂದನ್ನು ಬರೆದು ಪಿಎಚ್.ಡಿ. ಪದವಿ ಯನ್ನೂ ಸಂಪಾದಿಸಿಬಿಟ್ಟ! ೧೮೭೫-೭೬ರಲ್ಲಿ ಆತನ 'ಲೋಕಾಕರ್ಷಕ ಬುದ್ಧಿಮತ್ತೆ' ಎಂಬ ಪ್ರಬಂಧವೂ 'ಕಾಡುಹೂಗಳು' ಮತ್ತು 'ಅಳುವು' ಎಂಬ ಪದ್ಯಗಳೂ 'ಜ್ಞಾನಾಂಕುರ'ದಲ್ಲಿ ಪ್ರಸಿದ್ಧವಾಗಿದ್ದವು. ೧೮೭೮ರಲ್ಲಿ 'ಕವಿಯ ಕತೆ' ಅಚ್ಚಾಯಿತು. ಇದು ಪುಸ್ತಕರೂಪದಲ್ಲಿ ಹೊರಬಿದ್ದ ಮೊದಲ ಕೃತಿ. ಇದರ ಪೂರ್ವಾರ್ಧದಲ್ಲಿ ತಾನು ನಿಸರ್ಗದೊಡನೆ ಜೊತೆಯ ಆಟಗಾರ ನಾಗಿದ್ದುದನ್ನೂ ಉತ್ತರಾರ್ಧದಲ್ಲಿ ತಾನು ಕಾವ್ಯವೆಂಬ ರಾತ್ರಿ ಮತ್ತು ವಿಜ್ಞಾನ ಎಂಬ ಹಗಲುಗಳಿಂದ ಬೆಳೆದು ಷೋಡಶ ವರ್ಷ ಪ್ರಾಯಕ್ಕೆ ಬಂದುದನ್ನೂ ರವೀಂದ್ರನು ವರ್ಣಿಸಿದ್ದಾನೆ."

"ಕಾವ್ಯವನ್ನು ರಾತ್ರಿಯೆಂದು ರೂಪಿಸಿದ್ದೇಕೆ?"

"ವಿಜ್ಞಾನವು ಪ್ರತ್ಯಕ್ಷ, ಅನುಮಾನ ಎಂಬ ಬಾಹ್ಯ ಪ್ರಮಾಣಗಳನ್ನು ಅವಲಂಬಿಸಿದ್ದು; ಆದುದರಿಂದ ಅದು ತಿಳಿಸುವ ಜ್ಞಾನವು ಹಗಲಿನಷ್ಟು ಸ್ಪಷ್ಟ. ಕಾವ್ಯವಾದರೆ ಹಾಗಲ್ಲ; ಪ್ರತ್ಯಕ್ಷ, ಅನುಮಾನಗಳಿಗೆ ಗೊತ್ತಾಗುವ ಅರ್ಥಗಳಿಗೆ ಅವೆರಡನ್ನೂ ಮೀರಿದ ಪ್ರತಿಭೆಯ ಅರ್ಥಚ್ಛಾಯೆಯ ಹಿನ್ನೆಲೆಯನ್ನು ಕೊಡುತ್ತದೆ. ಹಿನ್ನೆಲೆಯಲ್ಲಿರುವುದು ಎಂದಾದರೂ ಮುನ್ನೆಲೆಯಲ್ಲಿ ಇರುವುದರಷ್ಟು ಸ್ಪಷ್ಟವೇ? ಆದುದರಿಂದಲೇ ಪ್ರತಿಭಾಪ್ರಧಾನವಾದ ಕಾವ್ಯ ಅಥವಾ ಸಾಹಿತ್ಯವು ಇರುಳು, ಬೆಳುದಿಂಗಳಿನಿರುಳು.

'ಕವಿಯ ಕತೆ'ಯಾದಮೇಲೆ 'ಭಾರತಿ'ಯಲ್ಲಿ ಒಂದಾದ ಮೇಲೆ ಒಂದರಂತೆ ರವೀಂದ್ರನ ಪದ್ಯಗಳು ಪ್ರಕಟವಾಗತೊಡಗಿದವು. ೧೮೮೧ರಲ್ಲಿ 'ರುದ್ರಚ್ಛಂದ' ಎಂಬ ಮೊದಲ ನಾಟಕ ಅಚ್ಚಾಯಿತು. ಅದೊಂದು ಸಾಮಾನ್ಯ ಕೃತಿ. ಅದೇ ಮಟ್ಟದ 'ಕರುಣೆ' ಎಂಬ ಕಾದಂಬರಿಯೂ ಕವಿಯ ಕೈಯಿಂದ ಹೊರಬಿತ್ತು. ಸ್ಕಾಟ್ ಎಂಬ ಆಂಗ್ಲ ಸಾಹಿತಿಯ ಛಂದೋಬದ್ಧವಾದ ಶೃಂಗಾರಸಾಹಸ ಕಥೆಗಳ ಪ್ರಭಾವವನ್ನು ಬಿಂಬಿಸುವ 'ಗಾಥೆ'ಗಳು (ಕಥನ ಕವನಗಳು) ಆಮೇಲೆ ರಚಿತವಾದವು. ಉದಯಗೀತ, ಸಂಧ್ಯಾಗೀತ, ಹೆಂಗಸು, ಮೊದಲ ನೋಟ, ಅಪ್ಸರೆಯ ಒಲವು, ಲೀಲೆ ಎಂಬ ಹೆಸರಿನ ಭಾವಗೀತಗಳೂ ಕವಿಯ ತಾರುಣ್ಯದ ಫಲಗಳು. ಆಗಮನಿ, ಭಾರತಕ್ಕೆ ನಮನ, ಶಿವನೆದೆಯಲ್ಲಿ ಕಾಳಿ ಎಂಬ ಹೆಸರಿನ ಕವಿತೆಗಳಲ್ಲಿ ಭಾರತೀಯತೆಯು ಎದ್ದು ಕಾಣುತ್ತದೆ (೧೮೭೭–೧೮೮೦)."

"ನಮ್ಮ ಕವಿ ಪದ್ಯ, ನಾಟಕಗಳಿಗೇ ಹೆಚ್ಚು ಬೆಲೆ ಕೊಟ್ಟಂತೆ ಕಾಣುವುದಲ್ಲಾ?"

"ತಾಳು; ಅಷ್ಟೇನವಸರ? ಅವನು ಹಾಗೇನೂ ಪಂಕ್ತಿಭೇದ ಇಟ್ಟುಕೊಂಡಿದ್ದಿಲ್ಲ. ಅದರಿಂದಲೇ 'ಭಾರತಿ'ಯಲ್ಲಿ (೧೮೭೭) 'ಬಂಗಾಳಿಗಳ ಪ್ರತ್ಯಾಶೆ–ನಿರಾಶೆ' ಎಂಬ ಪ್ರಬಂಧವನ್ನು ಬರೆದು ಪ್ರಕಟಿಸಿದ. ಅದರಲ್ಲಿ ಯೂರೋಪಿನ ಬೌದ್ಧಿಕ ಸ್ವಾತಂತ್ರ್ಯ, ಕಲೆಗಳು ಮತ್ತು ರಾಜಕೀಯ ಸ್ವಾತಂತ್ರ್ಯಗಳೊಡನೆ ಭಾರತದ ಸಂಕುಚಿತವಾದ ಸಂಚಿತ ಸಂರಕ್ಷಣ ಬುದ್ಧಿ, ತತ್ವಜ್ಞಾನ ಮತ್ತು ಮಾನಸಿಕ ಶಾಂತಿಮತ್ತೆಗಳು ಎರಕ ಹುಯ್ಯಲ್ಪಟ್ಟರೆ

ಹೆಚ್ಚು ಉನ್ನತ ಮಟ್ಟದ ನಾಗರಿಕತೆ ಉಂಟಾದೀತು ಎಂದು ಪ್ರತಿಪಾದಿಸಲಾಗಿದೆ. ಅದೇ ವರ್ಷ ಆತ ಭಾಷೆಗೂ ಚಾರಿತ್ರಕ್ಕೂ ಮತ್ತು ಸಾಹಿತ್ಯಿಕ ಪ್ರಗತಿಗೂ ನೈತಿಕ ಪ್ರಗತಿಗೂ ಸಂಬಂಧವುಂಟೆಂದು ಪ್ರತಿಪಾದಿಸುತ್ತ 'ತನ್ನ ಭಾಷೆ ಸುಧಾರಿಸಿದ ಹೊರತೂ ಯಾವ ಕುಲವೂ ಸುಧಾರಿಸಲಾರದು' ಎಂದು ಸಾರಿದ. ಕೇವಲ ಹದಿನೇಳನೆಯ ವಯಸ್ಸಿನಲ್ಲಿದ್ದ ರವೀಂದ್ರನು ಸ್ಯಾಕ್ಸನ್ಸ್ ಮತ್ತು ಆಂಗ್ಲೋ ಸ್ಯಾಕ್ಸನ್ ವಾಙ್ಮಯ, ಪೆಟ್ರಾರ್ಕ್ ಎಂಡ್ ಲೌರಾ, ಡಾಂಟೆ ಮತ್ತು ಅವನ ಕಾವ್ಯ, ಗಯಟೆ—ಎಂಬ ಪ್ರಬಂಧಗಳನ್ನು ಬರೆದನು."

"ಶಾಲೆ-ಕಾಲೇಜುಗಳಲ್ಲಿ ವ್ಯವಸ್ಥಿತ ಅಭ್ಯಾಸವನ್ನು ಮಾಡದ ಈ ಕಿಶೋರಕವಿ ಎಳೆಯ ವಯಸ್ಸಿನಲ್ಲಿ ಇಷ್ಟೆಲ್ಲ ಬಲ್ಲವನಾಗಿದ್ದನೇ? ಆತನೊಬ್ಬ ಓದಿನ ಬಕಾಸುರನಾಗಿಯೇ ಮನೆಯಲ್ಲಿ ಬೆಳೆದಿರಬೇಕು!"

"ಹೌದು; ೧೮ ವರ್ಷ ವಯಸ್ಸಾಗುವುದರೊಳಗೆ ಆತ ಸುಮಾರು ೭೦೦೦ ಸಾಲುಗಳಷ್ಟು ಪದ್ಯಸಾಹಿತ್ಯವನ್ನು ಸ್ವತಃ ನಿರ್ಮಿಸಿದ್ದ; ಜೊತೆಗೆ ಬೇಕಾದಷ್ಟು ಗದ್ಯಪ್ರಬಂಧಗಳನ್ನೂ ಬರೆದಿದ್ದ. ೧೮೭೭ರಲ್ಲಿ ಆತ ಇಂಗ್ಲೆಂಡಿಗೆ ಹೋಗಿ ೧೪ ತಿಂಗಳು ಇದ್ದ; ಆಂಗ್ಲ ಭಾಷೆಯನ್ನು ಸಂಸ್ಕೃತ ಕಲಿತ ಬಳಿಕ ಚೆನ್ನಾಗಿ ಕಲಿತಿದ್ದ; ಬಂಗಾಳಿಯಲ್ಲಿ ಚೆನ್ನಾದ ಪ್ರೌಢಿಯನ್ನು ಮೊದಲೇ ಸಂಪಾದಿಸಿದ್ದ. ಅಂದಮೇಲೆ ಹೇಳಬೇಕಾದುದೇನು? ಅಭಿಮನ್ಯುವು ಸಶಸ್ತ್ರನಾಗಿ ಚಕ್ರವ್ಯೂಹವನ್ನು ಹೊಕ್ಕು ಭೇದಿಸಿದಂತೆ, ರವೀಂದ್ರನು ಕಾವ್ಯರಹಸ್ಯದ ಕೋಟೆಯನ್ನು ಭೇದಿಸಲು ಸಮರ್ಥನಾದನು.

ವಿದ್ವಾನೇವ ವಿಜಾನಾತಿ ವಿದ್ವಜ್ಜನಪರಿಶ್ರಮಂ
ನ ಹಿ ವಂಧ್ಯಾ ವಿಜಾನಾತಿ ಗುರ್ವಿಂ ಪ್ರಸವವೇದನಾಂ—

ನಿಜವಾದ ವಿದ್ವತ್ತೆಗಾಗಿ ಪಡುವ ಶ್ರಮವನ್ನು ವಿದ್ವಾಂಸನೊಬ್ಬನಷ್ಟೇ ಬಲ್ಲ; ಬಂಜೆಗೆಂದಾದರೂ ಹೆರುವ ಹೊಟ್ಟೆನೋವು ಗೊತ್ತಾಗುವುದುಂಟೇ?—ಎಂದು ಹಿರಿಯರು ಹೇಳಿದ್ದನ್ನಿಲ್ಲಿ ನೆನೆಸಿಕೊಳ್ಳಬೇಕು. ಎಳೆಯನಾದರೂ ತಿಳಿವಿನ ಹಸಿವಿನಲ್ಲಿ ಹಿರಿಯದವರನ್ನೂ ಮೀರಿಸಿದ್ದರಿಂದಲೇ ನಮ್ಮ ಕುಮಾರ ಕವೀಂದ್ರ ೨೦ರೊಳಗೆ ೧೧೦೦೦ ಸಾಲುಗಳಷ್ಟು ಪದ್ಯ ಬರೆದಿದ್ದನಂತೆ — ಅಷ್ಟಕ್ಕೆಲ್ಲಾ ಬೇಕಾದಷ್ಟು ಓದಿನ ಬಂಡವಾಳವನ್ನು ಆಗಲೇ ಸಂಪಾದಿಸಿದ್ದ! ಸಾಹಿತ್ಯ

ವಾಗೀಶ — ಸಂಗೀತಸರಸ್ವತಿಯರಿಬ್ಬರೂ ಆಗಲೇ ಕವಿಹೃದಯದಲ್ಲಿ ಮನೆ ಮಾಡಿಕೊಂಡರು. ಕ್ರಿ.ಶ. ೧೮೮೧ರಲ್ಲಿ ಕವಿ ತನ್ನ ಗೀತಗಳನ್ನು 'ಶೈಶವ ಸಂಗೀತ' ಎಂಬ ಹೆಸರಿನಲ್ಲಿ ಪ್ರಕಟಿಸಿದ್ದು ಇದಕ್ಕೆ ಸಾಕ್ಷಿ."

"೧೮೭೮ರಲ್ಲಿ ಕವಿ ಇಂಗ್ಲೆಂಡಿಗೆ ಹೋದ ಅಂತ ಕೇಳಿದ್ದೆ — ಆಗ ಇಂಗ್ಲೆಂಡಿನಲ್ಲಿ ಅವನು ಏನು ಮಾಡಿದ?"

"ಬ್ರೈಟನ್ನಿನಲ್ಲಿ ಕವಿ ಶಾಲೆಗೆ ಹೋದ. ಅಲ್ಲಿಯ ಹುಡುಗರೆಲ್ಲಾ ಅವನನ್ನು ಚೆನ್ನಾಗಿ ನೋಡಿಕೊಂಡರಂತೆ. ಜೀವನದಲ್ಲಿಯೇ ಮೊದಲ ಬಾರಿಗೆ ಆತನು ಬಿಳಿಯ ಮಂಜಿನ ಸೀರೆಯನ್ನುಟ್ಟ ಭೂದೇವಿಯನ್ನಲ್ಲಿ ಕಂಡನು! ಶಾಲೆಯನ್ನು ಬಿಟ್ಟ ಆತನು ಅನಂತರ ಲಂಡನ್ನಿನ ಚೌಕದಲ್ಲಿಯ ಒಂದು ಗೆಲಪಾಡಿಲ್ಲದೆಡೆ ಉಳಿಯಲಾರಂಭಿಸಿದ; ಒಬ್ಬ ಡಾಕ್ಟರನೊಡನೆ ಕಾಲಕಳೆದ; ವಿಶ್ವವಿದ್ಯಾನಿಲಯದ ಕಾಲೇಜಿನಲ್ಲಿ ಆಂಗ್ಲ ಸಾಹಿತ್ಯದ ಬಗ್ಗೆ ಮಾಡಲಾಗುತ್ತಿದ್ದ ಭಾಷಣಗಳನ್ನು ಕೇಳಿದ; ಹೆನ್ರಿ ಮೋರ್ಲಿ ಎಂಬವರೊಡನೆ 'ರಿಲಿಜಿಯೋ ಮೆಡಿಸೈ' ಎಂಬ ಗ್ರಂಥವನ್ನು ಬಹಳ ಆಸಕ್ತಿಯಿಂದ ಓದಿದ; 'ಕೋರಿಯೋ ಲೇನಸ್' ಗ್ರಂಥವನ್ನೋದಿ ಬಹಳ ಸಂತೋಷಪಟ್ಟ. 'ಆಂಟೊನಿ ಮತ್ತು ಕ್ಲಿಯೋಪಾತ್ರ' ಎಂಬ ಕೃತಿಯೂ ಅವನ ಮೆಚ್ಚಿಗೆಗೆ ಪಾತ್ರವಾಯ್ತು. ಆತನಿಗೆ ಜೊತೆಗಾರನಾಗಿ ಮೇಧಾವಿಯೂ ದುರ್ದೈವಿಯೂ ಆದ ಲೋಕೆನ್ ಪಾಲಿತನಿದ್ದ; ಕವಿಗವನು ಪರಮಸ್ನೇಹಿತನಾಗಿದ್ದ. ಅವನು ಆಮೇಲೆ ಇಂಡಿಯನ್ ಸಿವಿಲ್ ಸರ್ವೀಸಿಗೆ ಸೇರಿದನಂತೆ. ಷೇಕ್ಸ್‌ಪಿಯರ್ ಮಹಾಕವಿಯ ಕೃತಿಗಳನ್ನೂ ರವೀಂದ್ರನು ಓದಿದ."

"ನಾನು ಮೊದಲೇ ಊಹಿಸಿದ ಹಾಗೆ, ಈ ಓದಿನ ಕೂಸುಭಟ್ಟ ಓದಿ ಓದಿ ಮರುಳನಾಗಿರಬೇಕು; ಅಲ್ಲವೆ? ಈ ಪಾಟಿ ಓದಿದರೆ ಯಾವ ತಲೆ ಯಾವರೂ ಸರಿಯಾಗಿರುವುದುಂಟೆ?"

"ನಿಜ— ಓದು ಬೇಡಾದವರ ದೃಷ್ಟಿಯಿಂದ ಅವನು ಮರುಳನೇ; ಆದರೆ ಮರುಳಿನಲ್ಲಿ ಎರಡು ವಿಧಗಳಿವೆ: ಓದನ್ನು ಅಥವಾ ಇನ್ನಾವುದಾದರೂ ಉದ್ಯೋಗವನ್ನು ಅದಕ್ಕಾಗಿಯೇ, ಹಿಂದುಮುಂದಿನ ವಿಚಾರವಿಲ್ಲದೆ, ನಡೆಸುತ್ತ ಹೋಗುವುದು ಒಂದು ವಿಧ. ಇಂಥ ಮರುಳರು ಲೆಕ್ಕಸಂಖ್ಯೆಯಿಲ್ಲದಷ್ಟಿದ್ದಾರೆ ಜಗತ್ತಿನಲ್ಲಿ. ಆದರೆ ಅಂಥ ಉದ್ಯೋಗವನ್ನು ಯಾವುದೋ ಒಂದು ಜ್ಞಾತಾ-

ಜ್ಞಾತವಾದ ಉನ್ನತಸಿದ್ಧಿಗಾಗಿ, ಆದರ್ಶಸಾಧನೆಗಾಗಿ ನಡೆಸುವವರು ನಿಜವಾದ ಮರುಳರಾಗುವುದಿಲ್ಲ. ಮಹರ್ಷಿಯ ಮಗನೆನ್ನಿಸಿದ ರವೀಂದ್ರನು ಎರಡನೆಯ ಜಾತಿಯ ಹುಚ್ಚ. ಇಂಥ ಹುಚ್ಚಿಲ್ಲದೆ ಯಾವ ಮಹಾಕಾರ್ಯವನ್ನೂ ಸಾಧಿಸಲು ಸಾಧ್ಯವಾಗದು. ಮಹಾತ್ಮರು ಬಾಲ, ಉನ್ಮತ್ತ, ಪಿಶಾಚಗಳಂತೆ ಇರುತ್ತಾರೆ (ಬಾಲ, ಉನ್ಮತ್ತ, ಪಿಶಾಚಿಗಳಾಗಿ ಅಲ್ಲ!) ಎಂಬ ಮಾತನ್ನು ಕೇಳಿಲ್ಲವೆ? ಕೇವಲ ಓದಿನಲ್ಲಲ್ಲ, ಇತರ ಕಾರ್ಯಗಳಲ್ಲೂ ಮೈಮರೆತಿರುವುದು ಚಿಕ್ಕಂದಿನಲ್ಲೇ ಅವನಿಗೆ ಸಹಜವಾಗಿತ್ತಂತೆ. ಆಗೀಗ ತಾನೇ ತಾನಲ್ಲವಾಗಿರುವುದು ಕವಿ, ಪ್ರೇಮಿ, ಹುಚ್ಚರಿಗೆ ಸರ್ವಸಾಧಾರಣವೆಂಬುದನ್ನು ಕೇಳಿಲ್ಲವೇ? ರವೀಂದ್ರನು ಈ ನಿಯಮಕ್ಕೆ ಅಪವಾದವಾಗಿರಲಿಲ್ಲ. ಕವಿ, ಪ್ರೇಮಿ, ಯೋಗಿ ಅಥವಾ ಮಹಾತ್ಮನು ಗಾಢವಾದ ಏಕಾಗ್ರತೆಯ ದೆಸೆಯಿಂದ ವಿಕ್ಷಿಪ್ತನಾಗಿ ತೋರಿದರೆ, ಹುಚ್ಚನು ಗಾಢವಾದ ಅನೇಕಾಗ್ರತೆಯ ದೆಸೆಯಿಂದ ವಿಕ್ಷಿಪ್ತನಾಗಿರುತ್ತಾನೆ."

"ಹಾಗಾದರೆ ಹುಚ್ಚರಲ್ಲಿ ಹುಡುಕಿದರೆ ಎಲ್ಲಾದರೂ ಒಬ್ಬ ಪ್ರತಿಭಾವಂತ ಸಿಕ್ಕಬಹುದಲ್ಲವೆ?"

"ಯಾರಲ್ಲೇ ಆಗಲಿ—ಪ್ರತಿಭೆ ಇದ್ದದ್ದೇ ಆದರೆ ಅದು ಇತರ ಯಾರಿಗೂ ತನ್ನ ಪರಿಚಯವನ್ನು ಮಾಡಿಕೊಡದೆ ಇರುವುದಿಲ್ಲ — ಕೆಲವೊಮ್ಮೆ ಬಹಳ ಮಂದಿಯ ಕಣ್ಣಿಗೆ ಬೀಳುವಷ್ಟು ಪ್ರಕಾಶನಾವಕಾಶ ಅದಕ್ಕೆ ದೊರಕದಿರಬಹುದು —ಅಷ್ಟೆ. ಪ್ರತಿಭಾವಂತ ಹುಚ್ಚನನ್ನು ಬಲ್ಲವರಲ್ಲಿ ಯಾರೂ ಹುಚ್ಚನೆಂದು ಗಣಿಸರು. ಅಂಥವನು ಯಾವನಾದರೊಬ್ಬ ಬಲ್ಲವನಿಗೆ ಹುಡುಕದೆಯೇ ಸಿಗುವನು!"

೨. ರವೀಂದ್ರನ ಕೌಮಾರ - ಯೌವನಗಳು

" ಯೌವನದ ಹೊಸ್ತಿಲಲ್ಲಿ ಕಾಲಿರಿಸಿದ ಭಾವಿ ಮಹಾಕವಿಯ ಹೃದಯವು ಚಿತ್ರವಿಚಿತ್ರವಾದ ಅನುಭವಗಳನ್ನು ಪಡೆದಿರಬೇಕಲ್ಲವೆ?"

" ನಿಜ ನೀನನ್ನೋದು; ಬುದ್ಧನಿಗೆ ದಿವ್ಯಜ್ಞಾನ ಬರುವ ಮೊದಲು ಮಾರನೊಡನೆ ಹೋರಾಡಬೇಕಾಯಿತೆಂಬುದನ್ನು ಓದಲಿಲ್ಲವೇನು ?"

" ಒಂದು ಅಡ್ಡಸವಾಲು—ಬೇಸರಪಡದೆ ಇರುವುದಾದರೆ...."

" ಹಾಕು; ಬೇಸರವಿಲ್ಲ—ಅದು ಮೊಂಡ ಸವಾಲಲ್ಲದೆ ಇದ್ದರೆ ಸರಿ."

" ಹಾಗಾದರೆ ನೋಡಿ—ಯಶೋಧರೆಗೆ ಮಾರನೊಡನೆ ಹೋರಾಡುವ ಪ್ರಸಂಗ ಉಂಟಾಯಿತೆಂದು ಯಾರೂ ಬರೆದಿಲ್ಲವಲ್ಲಾ ?"

" ಅವಳು ದಿವ್ಯಜ್ಞಾನವನ್ನು ಬುದ್ಧನಂತೆ ಪಡೆದಳೆಂಬ ಉಲ್ಲೇಖವೂ ಇಲ್ಲ; ಬುದ್ಧನಂತೆ ಅವಳು ಬುದ್ಧಿಯೊಡನೆ ಹೋರಾಡಲು ಸಮರ್ಥಳಾಗಿಯೂ ಇದ್ದಿಲ್ಲ. ಕಾಮಕ್ರೋಧಾದಿಗಳು ಸ್ತ್ರೀಪುರುಷರಿಬ್ಬರಿಗೂ ಇದ್ದರೂ ಧರ್ಮಾ-ಧರ್ಮ ವಿವೇಕವನ್ನು ಬುದ್ಧಿಯೊಡನೆ ಹೋರಾಡಿ ನಿರ್ಣಯಿಸಬಲ್ಲ ಶಕ್ತಿ ಗಂಡಸಿಗೆ ವಿಶಿಷ್ಟ. ಸ್ತ್ರೀಬುದ್ಧಿಗೆ ತತ್ವಗಳಿಗಾಗಿ ಹೋರಾಡುವ ಪ್ರವೃತ್ತಿಯೂ ಶಕ್ತಿಯೂ ಕಡಿಮೆ. ಬುದ್ಧಿಯುಕ್ತವಾದ ಯೋಜನೆಯಂತೆ ರಚಿತವಾಗುತ್ತಿರುವ ಮಾನವ ನಾಗರಿಕತೆಯಲ್ಲಿ ಜಯದೇವ ಕವಿಯು ಹೇಳಿದಂತೆ ಪೌರುಷರಸವು ಗಂಡಸಿಗೆ ವಿಶಿಷ್ಟ. ಪುರುಷವ್ಯಕ್ತಿತ್ವದಲ್ಲಿ ಅದು ಇರುವುದರಿಂದ ಲಂರ ಸನಿಹದಲ್ಲಿ ಇದ್ದಾಗ ನಮ್ಮ ಕವಿಯು ಪುರುಷನಿಗೆ (ಸತ್ಕಾರ್ಯದಲ್ಲಿ) ಸ್ಫೂರ್ತಿಕೊಡುವುದೂ ಬಾಳಿನ ಹೊರಗೆಲಸಗಳಲ್ಲಿ ನೆರವೀಯುವುದೂ ಹೆಂಗಸಿನ ನಿಜವಾದ ಕರ್ತವ್ಯ ವೆಂದು ಸುರೇಂದ್ರನಾಥ ದಾಸಗುಪ್ತರ ಮಗಳಿಗೆ ಅವಳ ಪ್ರಶ್ನೆಯೊಂದಕ್ಕೆ ಉತ್ತರವಾಗಿ ತಿಳಿಸಿದನೆಂದು ಆಕೆ ಉಲ್ಲೇಖಿಸಿದ್ದಾಳೆ. ಹೃದಯಸಮುದ್ರದ ಮಥನವನ್ನು ಮಾಡಬಲ್ಲ ಬುದ್ಧಿಯ ಪೌರುಷವು ನಮ್ಮ ಕವಿಯಲ್ಲಿ ಪ್ರಾಯ ದೊಡನೆಯೇ ದೃಢವಾಗಿ ನೆಲೆನಿಂತು ಬೆಳೆಯಲಾರಂಭಿಸಿತು. ಈ ಪ್ರಕಾರ ಜಗದಾದಿಯಿಂದ ಈವರೆಗೆ ಯಾವ ಸ್ತ್ರೀಕವಿಗೂ ಹೃದಯವನ್ನು ಬುದ್ಧಿಯ

ಕಡೆಗೋಲಿಂದ ಕಡೆಯುವ ವೀರಾವೇಶ ಉಂಟಾಗಿಲ್ಲ. ಅದರಿಂದಲೇ ಸ್ತ್ರೀಯು ಮನಥ್ಮನ ಬತ್ತಳಿಕೆ, ಬಾಣವಲ್ಲ—ಎಂಬ ಮಾತು ದಂಡಿಗೆ ಹೊಳೆದದ್ದು !

ರವೀಂದ್ರ ಕವಿಯು ತನ್ನ ಅಂತರ್‌ನಿರೀಕ್ಷಣೆ(Introspection)ಯಿಂದ ಉದಿಸಿದ ಸಂತಾಪಗಳನ್ನು ತನ್ನ 'ಮುರಿದ ಹೃದಯ' ಎಂಬ ಕೃತಿಯಲ್ಲಿ ವ್ಯಕ್ತ ಪಡಿಸಿದನು. ಕೌಮಾರ - ಯೌವನಗಳ ನಡುವಣ ದಶೆಯಲ್ಲಿ ಒಂದು ವಿಧದ ಎದೆಯ ತುಮುಲವು ಮಹತ್ವಾಕಾಂಕ್ಷೆಯಲ್ಲಿ ನಿಷ್ಮವಾಗಿ ಸಾಗುವುದೆಂದು ಬಲ್ಲವರ ಹೇಳಿಕೆ. ಆದರಿಂಥ ಹೃದಯಸಮುದ್ರದ ಮಥನವು ಸಾಮಾನ್ಯರಲ್ಲಿ ಅಲ್ಪಸ್ವಲ್ಪವಲ್ಲದೆ ಹೇಳುವಷ್ಟು ಆಳವಾಗಿ ಕಂಡುಬರುವುದಿಲ್ಲ. 'ಮುರಿದ ಹೃದಯ'ವನ್ನೂ 'ವಾಲ್ಮೀಕಿಯ ಪ್ರತಿಭೆ'ಯನ್ನೂ ಬರೆದ ಕವಿಯ ಕವಿತ್ವಶಕ್ತಿಯು 'ಸಂಧ್ಯಾಗೀತಗಳು' ಎಂಬ ಕೃತಿಯಲ್ಲಿ ಇನ್ನಷ್ಟು ವಿಕಾಸ ಹೊಂದಿದ್ದು ಕಂಡುಬರುತ್ತದೆ. ಅವನ ಭಾವಗೀತಗಳಲ್ಲಿ ಆಗ ಹೊರಗಿನ ಬಾಳಿನ ಮತ್ತು ಸಮಾಜದ ವಿಷಯವಾಗಿ ಇರುವ ಆಸಕ್ತಿಗಿಂತ ತನ್ನ ಆಂತರಿಕ ಒಳತೋಟೆಯಲ್ಲಿಯ ಆಸಕ್ತಿಯೇ ಹೆಚ್ಚಾಗಿತ್ತು. ಅವುಗಳಲ್ಲಿ ಮೌನ, ಆತ್ಮ, ಹೃದಯ, ಗೀತ, ಮಾತು, ಏಕಾಕಿ, ದಟ್ಟವಾದ, ಆಳವಾದ, ಬಾನಿನ ಅಥವಾ ಕಾಡಿನ ಸೀರೆನಿರಿಗೆ, ಕಂಬನಿ, ನಿಟ್ಟುಸಿರು, ತಾರೆ, ವಧು, ಲಲ್ಲೆ, ಒಲವು ಮತ್ತು ಸಾವು ಎಂಬ ಪದಗಳಿಂದ ಮಾಡಿದ ಪ್ರತಿಮೆಗಳು ಚೆಲುವಾದ ದುಃಖದೀನ ಕಲ್ಪನೆಗಳನ್ನು ಪದೇ ಪದೇ ಮೂಡಿಸುವುದು ಸ್ವಾಭಾವಿಕವಾಗಿದೆ."

"ಅಲ್ಲರೀ, ದುಃಖದೀನ ವ್ಯಕ್ತಿಗಳು ಚೆಲುವರೇ, ಚೆಲುವೆಯರೇ ?"

"ಚೆಲುವರಲ್ಲದಿರಬಹುದು, ಚೆಲುವೆಯರಂತೂ ಹೌದು — ಗಂಡು ಕಣ್ಣಿಗೆ!"

"ಅಯ್ಯೋ, ಅಳುಮೋರೆಯವಳೆಂದು ನೋಡಿಯೇ ನೀವು ನನ್ನನ್ನು ಮದುವೆಯಾದಿರಾ ?"

"ನೀನು ಅಳುಮೋರೆಯವಳಲ್ಲದಿರಬಹುದು. ಆದರೆ ನಿನ್ನ ದೃಷ್ಟಿಯಲ್ಲಿ ನಾನು ದಯಾಶೀಲನೆನ್ನಿಸಿರುವುದೇ ನನ್ನ ಗುರುತ್ವಕ್ಕೆ ಕಾರಣ ಎಂಬುದನ್ನು ನಾನು ಬಲ್ಲೆ. ನನ್ನ ದಯಾ–ದಾಕ್ಷಿಣ್ಯ–ಔದಾರ್ಯಗಳನ್ನು ಮಿಕ್ಕೆಲ್ಲ ಗುಣ ಗಳಿಗಿಂತ ಹೆಚ್ಚೆಂದು ಗ್ರಹಿಸುವ ನಿನ್ನ ಎದೆ ಎಂಥದಾಗಿರಬೇಕು? ಅದು ಆ ಗುಣಗಳಿಗಾಗಿ ಬಹಳ ಹಸಿದಿರಬೇಕು. ಅಂದರೆ ನಿನ್ನ ಪ್ರಕೃತಿಯು ಸ್ವಸಹಜ

ವಾದ ಗುಣಗಳನ್ನಲ್ಲದೇ ಮತ್ತಾವುವನ್ನು ಕೂಡಲೆಳಸುವುದು? ಅಳುವು ಮೋರೆಯಲ್ಲಿರದೆ ಎದೆಯಲ್ಲಿರುವುದಕ್ಕೆ ಮೃದುತ್ವ, ಕರುಣ, ಸುಪ್ತವಾದ ಶೋಕಮೂಲ—ಎಂದು ಎನ್ನುತ್ತಾರೆ. ಅತ್ಯಂತ ನಗುಮೋರೆಯು ಅತ್ಯಂತ ಕರುಣೋನ್ಮುಖ. ಯಾವಾಗ? ಆ ನಗುಮೊಗ ಕೃತಕವಲ್ಲದಾಗಿರುವಾಗ!"

"ಅಲ್ಲರೀ—ಅದು ಕೃತಕವಲ್ಲ ಎಂದು ನೀವು ಹೇಗೆ ಕಂಡುಹಿಡಿದಿರಿ?"

"ಒಂದು ಶಕ್ತಿಯಿದೆ; ಅದಕ್ಕೆ ಪ್ರತಿಭೆ ಎನ್ನುತ್ತಾರೆ. ಕೃತಕ–ಅಕೃತಕ ಎಂಬ ಭೇದವನ್ನು ಶಾಸ್ತ್ರಜ್ಞಾನಬಲದಿಂದ ಯಾರೂ ಗುರುತಿಸಲಾರರು—ಅದರಲ್ಲೂ ಮನುಷ್ಯರ ವರ್ತನೆಯಲ್ಲಿ. ಕವಿಗಳೆಂದುದೆಲ್ಲಾ ಕೃತಕ. ಆದರೆ ರಸದೃಷ್ಟಿಯಿಂದ ಅದೆಲ್ಲಾ ಸಹಜ. ರವೀಂದ್ರನ ಭಾವಗೀತ ಬಂಗಾಳಿ ಸಾಹಿತ್ಯದ ಶೃಂಗಾರ ಸಾಹಸಿಕ (Romantic) ಪ್ರಸ್ಥಾನಕ್ಕೆ ನಾಂದಿಯನ್ನು ಮಾಡಿತು. ಆತನ 'ಸಂಧ್ಯಾಗೀತ'ಗಳಲ್ಲಿ "The sweetest songs are those that tell of saddest thoughts—ಅತ್ಯಂತ ಕರುಣಾಜನಕ ವಿಚಾರಗಳನ್ನು ಹೇಳುವ ಹಾಡುಗಳು ಅತ್ಯಂತ ಮಧುರ" ಎಂದ ಆಂಗ್ಲ ಕವಿ ಷೆಲ್ಲಿಯ ಚಿತ್ತವೃತ್ತಿಯನ್ನು ಅನೇಕ ಕಡೆ ಕಾಣಬಹುದಾಗಿದೆ. ಅವುಗಳಲ್ಲಿಯ 'ಸಂಧ್ಯೆ' ಎಂಬ ಭಾವಗೀತವು ಬಹಳ ಚೆನ್ನಾಗಿದೆ. ಅದರಲ್ಲಿ ಭಾವನೆಯ ಆಳ ಅಷ್ಟು ಇಲ್ಲವಾದರೂ ಅದರ ಸ್ವಪ್ನಸದೃಶವಾದ ಆವರಣವು ಸಹೃದಯರ ಮನವನ್ನು ಸೆಳೆಯದಿರಲಾರದು."

"ನೀವೆಲ್ಲಾ ಹೇಳ್ತೀರಿ 'ಆ ಪದ್ಯ ಚೆನ್ನಾಗಿದೆ, ಈ ಪದ್ಯ ಚೆನ್ನಾಗಿದೆ' ಅಂತ. ಆದರೀಗ ಪಠ್ಯಪುಸ್ತಕದಲ್ಲಿ ಬಂದ ಕವಿತೆಗಳನ್ನು ಬಿಟ್ಟರೆ ಮತ್ತಾವ ಪದ್ಯವನ್ನೂ ಓದುವ ರೂಢಿಯಿಲ್ಲ. ಇನ್ನು ಎಲ್ಲಾದರೂ ಸಾರ್ವಜನಿಕ ಸಮಾರಂಭ ನಡೆದರೆ, ಸ್ವತಃ ಕವಿಯೊ ಇಲ್ಲವೆ ಯಾರಾದರೂ ಗಾಯಕರಾಗಲು ಬಾರದೆ ಸೋತವರೋ ಒಂದೆರಡು ಪದ್ಯಗಳನ್ನು ಓದುತ್ತಾರೆ. ನನಗಂತೂ ಪದ್ಯದ ಪುಸ್ತಕವನ್ನು ಕೊಂಡು ಗೊತ್ತೇ ಇಲ್ಲ!"

"ಹೆಂಗಸಿಗೆ ಬುದ್ಧಿಯಿದೆ, ವ್ಯಕ್ತಿತ್ವವಿದೆ, ಮನೆಯ ಹೊರಗಿನ ಕಾರ್ಯ ಕ್ಷೇತ್ರದಲ್ಲಿ ಇನ್ನೂ ಹೆಚ್ಚು ಸಂಖ್ಯೆಯಲ್ಲಿ ದುಡಿಯಬಲ್ಲಳು—ಎಂದು ಮುಂತಾಗಿ ಪತ್ರಿಕೆಗಳಲ್ಲಿ ಬರೆದ ಹುಡುಗಿಯರಿಂದು ನಿನ್ನಂಥವರೇ. ಎಷ್ಟು ವಯಸ್ಸಾದರೂ ಯಾವಾಗಲೂ ಅಲ್ಪಮಟ್ಟದ ಕತೆಕಾದಂಬರಿಗಳನ್ನು ಓದುವುದೊಂದನ್ನುಳಿದರೆ

ಇನ್ನೇನನ್ನೋದಿ ಹೆಂಗಸರು ಬುದ್ಧಿಸಂಸ್ಕಾರವನ್ನು ಪಡೆಯುತ್ತಿದ್ದಾರೆ?—ಹುಡುಗರಿಗೂ ಎಷ್ಟೋ ಸಲ ಇದೇ ಆದರ್ಶ. ಬೌದ್ಧಿಕ ಶ್ರಮವನ್ನು ವಹಿಸುವ ನೈತಿಕ ಸ್ಫೂರ್ತಿಯಿಲ್ಲದ ಯಾರೂ ಗಣ್ಯಕಾರ್ಯವನ್ನು ಸಾಧಿಸಲಾರರು. ಹಿಂದೊಬ್ಬ ಕೇಳಿದನಂತೆ—'ಮೂರ್ಖರೆಂದರೆ ಯಾರು?'—ಅಂತ. ಅದಕ್ಕವನಿಗೆ ಸಿಕ್ಕಿದ ಉತ್ತರ—'ಯಾವಾಗಲೂ ಹಿಂದುಮುಂದು ನೋಡದೆಯೇ ಇನ್ನೊಬ್ಬರು ಹೇಳಿದ್ದೆಲ್ಲಾ ಸತ್ಯ ಎಂದು ನಂಬುವವರು'—ಅಂತ. ಹಾಗೆ ಇಂದು 'ರವೀಂದ್ರ ನಾಥ ಠಾಕೂರರು ದೊಡ್ಡ ಕವಿಗಳು' ಎಂದು ಅವನ ಉತ್ಸವ ಮಾಡುವುದನ್ನು ಸರಕಾರ ರೂಢಿಸಲು ಯತ್ನಿಸುತ್ತಿದೆ; ಅವನ ಒಂದು ಕೃತಿಯನ್ನೂ ಓದದ ಬಹುಸಂಖ್ಯ ವಿದ್ಯಾವಂತರು ಹೌದಪ್ಪನ ಚಾವಡಿಯ ಸದಸ್ಯರಂತೆ ಗೋಣು ಹಾಕುತ್ತಾರೆ! ಅವರ ಸಂಘದ ಸದಸ್ಯತ್ವದಿಂದ ನೀನಾದರೂ ಮುಕ್ತಳಾಗಬೇಕು ಎಂದೇ ಈ ಕತೆಯನ್ನು ನಿನಗೆ ಹೇಳಹೊರಟೆ—ತಿಳಿಯಿತೆ? ಗೊತ್ತಾಯಿತೆ? ಅರ್ಥವಾಯಿತೆ?"

"ತಪ್ಪಾಯ್ತು; ಕೆನ್ನೆಗೆ ಹೊಡೆದುಕೋತೇನೆ, ಮಹಾರಾಯರೇ."

"ಅಯ್ಯೋ, ಅಯ್ಯೋ, ಅಯ್ಯೋ—ಇಂಥ ನಾಟಕ ಈಗ ಬೇಡವೇ!"

"ನಾ ಮಾಡಿದ್ದೆಲ್ಲಾ ನಿಮಗೆ ನಾಟಕವಾಗಿಯೇ ಕಾಣುತ್ತದಲ್ಲಾ! ಅಲ್ಲವೆ? ಇದು ನನಗೊಂದು ಸಮಸ್ಯೆಯೇ ಆಗಿಬಿಟ್ಟಿದೆ! ಇದಕ್ಕೆ ಏನು ಮಾಡಬೇಕು—ಹೇಳಿ."

"ಚಂಚಲ ಚಿತ್ತವೃತ್ತಿಯ ಪ್ರಕೃತಿ ಯಾರಿಗಿದೆಯೋ ಅವರ ಜೀವನದಲ್ಲಿ ನಟನೆಗೂ ನಿಜಕ್ಕೂ ಬಹಳ ದೂರ ಇರುವುದಿಲ್ಲ. ಮೂಲಭೂತವಾದ ರಸ-ರುಚಿ-ಅಭಿಪ್ರಾಯ-ಅಭಿನಿವೇಶಗಳಲ್ಲೂ ಒಮ್ಮೆ ಹಾಗೆ ಒಮ್ಮೆ ಹೀಗೆ ಎಂದು ಜೋಕಾಲಿಯಾಡುವ ಮನಸ್ಸು ಏನು ಮಾಡಿದರೂ ನಾಟಕವೇ ಅಲ್ಲದೆ ಇನ್ನೇನು ಆದೀತು? ಆದರಿಂದಲೇ ನಾನಿತ್ತೀಚೆಗೆ ಸಿನೆಮಕ್ಕೆ ಹೋಗುವುದನ್ನೇ ಬಿಟ್ಟುಬಿಟ್ಟೆ. ಏಕೆಂದರೆ ವಯಸ್ಸಿಗೆ ತಕ್ಕ ಎತ್ತರದ ಮನಸ್ಸಿಲ್ಲದವರು ಮನೆಯ ಒಳಗೂ ಹೊರಗೂ ಮಾಡುತ್ತಿರುವ ನಾಟಕ ನೋಡಿದರೇ ಸಾಕಲ್ಲಾ!"

"ನೀವು ನನಗೀಗ ಬಹಳ ಬೇಸರವಾಗುವಂತೆ ಮಾಡಿದ್ದೀರಿ—ಈ ಮಾತನ್ನಾಡಿ. ಆದರೆ ಉಪಾಯವಿಲ್ಲ. ನಾನೀಗ ಬೇಸರವಾಯ್ತೆಂದರೆ ಅದೂ ಒಂದು ನಾಟಕ ಅಂತ ನೀವಂದುಬಿಟ್ಟರೆ?"

“ನೀನೀಗ ನಿಜವಾಗಿಯೂ ಬುದ್ಧಿವಂತೆ. ದಯವಿಟ್ಟು ಬೇಸರಪಡಬೇಡ. ಸಾಮಾನ್ಯ ಸಂಗತಿಯನ್ನು ತಮಾಷೆಗೆಂದು ನಿನಗನ್ವಯಿಸಿ ಹೇಳಿದೆ—ಅಷ್ಟೆ. ನೀನು ನನ್ನ ಪದ್ಯವನ್ನೇ ಆಕಾಶವಾಣಿಯಲ್ಲಿ ಹಾಡಿದ್ದು ನನಗೆ ಗೊತ್ತಿಲ್ಲವೇ? ನಮ್ಮ ಕವಿ ನಾಟಕಗಳನ್ನೂ ಬರೆದಿದ್ದಾನೆ; ಹೇಳ್ತೀನೆ ಕೇಳು.”

“ನಮ್ಮ ಕವಿ ನಾಟಕಕಾರನೂ ಆಗಿದ್ದನೆ?”

“ನಾಟಕಗಳನ್ನೋ ಮಹಾಕಾವ್ಯಗಳನ್ನೋ ಬರೆದಾಗಲೇ ಒಬ್ಬಾತ ಮಹಾಕವಿ ಎನ್ನಿಸಿಕೊಳ್ಳುತ್ತಿದ್ದ—ಈ ದೇಶದಲ್ಲಿ. ಸಂಧ್ಯಾಗೀತಗಳಂತೆಯೇ ಬೆಳಗಿನ ಹಾಡುಗಳನ್ನೂ ರವೀಂದ್ರ ಬರೆದ. ‘ಸೃಷ್ಟಿ, ಸ್ಥಿತಿ, ಲಯ’ ಎಂಬ ಹೆಸರಿನ ಪದ್ಯ ಬಹಳ ಚೆನ್ನಾಗಿದೆ, ರಸವತ್ತಾಗಿದೆ. ಇಡೀ ಪದ್ಯದಲ್ಲಿ ಆಳವಾದ ತತ್ವಜ್ಞಾನ ಬೆಸೆದುಕೊಂಡಿದೆ. ಅದರಲ್ಲಿ ವೈಜ್ಞಾನಿಕ ಅಂಶಗಳನ್ನು ಪೌರಾಣಿಕ ಪರಿಭಾಷೆಯಲ್ಲಿ ವರ್ಣಿಸಲಾಗಿದೆ. ಅದಾದಮೇಲೆ ಆತ ಕೆಲವು ಭಾಷಾಂತರ ಕೃತಿಗಳನ್ನು ಹೊರಗೆಡಹಿದ. ಅವನು ಈ ಸಂಧಿಯಲ್ಲಿ ‘ಎಳೆಯ ರಾಣಿಯ ಸಂತೆ’ ಎಂಬ ಮೊಟ್ಟಮೊದಲನೆಯ ಕಾದಂಬರಿಯನ್ನು ಬರೆದ. ಆಮೇಲೆ ಒಮ್ಮೆ ಮೈಸೂರು ರಾಜ್ಯದಲ್ಲಿಯ ಕಾರವಾರ ಬಂದರವನ್ನು ಸಂದರ್ಶಿಸಿದ. ಕಾರವಾರವು ಮಾರ್ಮುಗೋವೆಯ ದಕ್ಷಿಣಕ್ಕಿರುವ ಸುಂದರವಾದ ನೈಸರ್ಗಿಕ ರೇವುಪಟ್ಟಣ. ಬಂದರದಲ್ಲಿಯ ಸಮುದ್ರಭಾಗವು ಪ್ರಶಾಂತವಾದ ಪುಷ್ಕರಣಿಯಂತೆ ಕಂಗೊಳಿಸುತ್ತದೆ. ಉದ್ದಕ್ಕೂ ಹಾಲು ಹೊಯ್ದಂತೆ ಬೆಳ್ಳಗಿರುವ ಮಳಲು ಹಾಸಿದ ಕಡಲಂಚು. ಅದರ ಮೇಲೆ ಪುಟ್ಟದಾದ ಒಂದು ಚಿಕ್ಕ, ಚೆಲುವ ಪಟ್ಟಣ. ಈ ಆವರಣದಲ್ಲಿದ್ದಾಗ ರವೀಂದ್ರನಿಗೆ ನಾಟಕ ಬರೆವ ಸ್ಫೂರ್ತಿಯುಂಟಾಯ್ತು. ‘ನಿಸರ್ಗದ ಪ್ರತೀಕಾರ’ ಎಂಬ ಅವನ ಪ್ರಥಮವೂ ಪ್ರಧಾನವೂ ಆದ ನಾಟಕ ಅಲ್ಲಿ ಅವನ ಕೈಯಿಂದ ಹೊರಬಿತ್ತು!”

“ಏನು? ನಮ್ಮ ಕಾರವಾರದ ಕಡಲ ತಡಿ ರವೀಂದ್ರನಿಗೆ ನಾಟಕ ರಚಿಸುವ ಸ್ಫೂರ್ತಿಯನ್ನು ಕೊಟ್ಟಿತೇ? ಅಂಥ ಸೌಂದರ್ಯ ಸ್ಥಳವನ್ನು ಪಡೆದಿರುವ ನಮ್ಮ ಪ್ರಾಂತರಾಜ್ಯವು ನಿಜವಾಗಿಯೂ ಧನ್ಯವೇ ಸರಿ. ಆದರೆ ನಮ್ಮವರಲ್ಲೇ ಎಷ್ಟು ಜನರು ಕಾರವಾರ ನೋಡಿಬಂದಿದ್ದಾರೆ—ಎನ್ನುವುದು ಸಂಶಯಾಸ್ಪದ. ಏನಂತೀರಿ? ಹೌದೋ, ಸುಳ್ಳೋ?”

"ನಮ್ಮ ಜನಗಳೇ? ಅವರ ಮಾತು ಬಿಡು. ಅವರು ಕನ್ನಡ ಸಿನೆಮ, ನಾಟಕ, ಗುಡಿಗಾರಿಕೆಯ ವಸ್ತುಗಳು—ಕನ್ನಡ ಗೀತೆಗಳು, ಕನ್ನಡ ಶಿಲ್ಪ ಮಂದಿರಗಳು ಮುಂತಾದ ಎಲ್ಲವುಗಳಿಗೂ ಹೆಚ್ಚಾಗಿ ವಿಮುಖರು. ಅಂದ ಮೇಲೆ ಕನ್ನಡನಾಡಿನ ನಿಸರ್ಗಸೌಂದರ್ಯದ ಕ್ಷೇತ್ರಗಳನ್ನು ಅವರು ಹುಡುಕಿ ಕೊಂಡು ಹೋಗುವುದುಂಟೇ? ಎಲ್ಲೋ ಕೆಲವರಷ್ಟೇ ಈ ಮಾತಿಗೆ ಅಪವಾದ ವಾಗಿದ್ದಾರೆ. ಹಾಗಿಲ್ಲದಿದ್ದರೆ ಬನವಾಸಿ, ಗೇರುಸೊಪ್ಪೆಯ ನಗಿರೆ, ಚಂದ್ರಗುತ್ತಿ ಮುಂತಾದ ಎಷ್ಟೋ ಕಲಾತ್ಮಕ ಹಾಗೂ ಐತಿಹಾಸಿಕ ಸ್ಥಳಗಳು ಮೂಲೆ ಗುಂಪಾಗುತ್ತಿದ್ದವೇ? ಇರಲಿ. ಕಾರವಾರಕ್ಕಂತೂ ಮಹಾಕವಿಯ ಕೈಯಿಂದ ಅವನ ಮೊದಲ ನಾಟಕವನ್ನು ಬರೆಯಿಸುವ ಭಾಗ್ಯವಿತ್ತು. ಆತನು ನಾಟಕ ಕಾರನಷ್ಟೇ ಆಗಿದ್ದಿಲ್ಲ, ಸ್ವತಃ ಒಳ್ಳೆಯ ನಟನೂ ಆಗಿದ್ದ ಎಂಬುದು ನಿನಗೆ ಗೊತ್ತೇ? ಇಷ್ಟೇ ಅಲ್ಲ — ಆತ ನಾಟ್ಯಾಚಾರ್ಯನೂ ಆಗಿದ್ದ. ಆತ ಸ್ವತಃ ಹುಡುಗರನ್ನೂ ಹುಡುಗಿಯರನ್ನೂ ನಟರನ್ನಾಗಿಯೂ ಗಾಯಕರನ್ನಾಗಿಯೂ ತರಬೇತು ಮಾಡುತ್ತಿದ್ದ. ಅವನು ಬರೆದ ನಾಟಕಗಳೆಲ್ಲಾ ಬಯಲಾಟಕ್ಕೇ ತಕ್ಕವಾಗಿದ್ದವು. ಅವು ಭಾವವಾಹಕಗಳಾಗಿರುವುದೇ ಹೆಚ್ಚು; ಕಾವ್ಯವಾಹಕ ಗಳಾಗಿರುವುದು ಕಡಿಮೆ. ಒಳ್ಳೆಯ ನಾಟಕದಲ್ಲಿ ಕಾರ್ಯ ಅಥವಾ ನಟನಾಂಶ ಇಲ್ಲವೆ ಅಭಿನೇಯ ಭಾವನೆ ಗಣ್ಯವೆಂಬುದು ಪ್ರಾಚೀನ ಪರಂಪರೆ. ಜಾರ್ಜ್ ಬರ್ನಾರ್ಡ್ ಷಾನು ಓದುನಾಟಕಗಳನ್ನು ಬರೆದು ಜನಪ್ರಿಯಗೊಳಿಸಿದ ಈ ಯುಗದಲ್ಲಿ ಭಾವ(Idea)ಪ್ರಧಾನ ನಾಟಕಗಳಿಗೂ ಬೇಕಾದಷ್ಟು ಜನ ಪ್ರೇಕ್ಷಕರು ಸಿಗುತ್ತಾರೆ. ಕಲ್ಕತ್ತದ ದೊಡ್ಡ ರಂಗಸ್ಥಳಗಳ ಪ್ರೋತ್ಸಾಹವು ರವೀಂದ್ರಕೃತ ನಾಟಕಗಳಿಗೆ ಬಹಳ ಕಾಲ ಉಳಿಯಲಿಲ್ಲ. ಕಲಾವಿದರಿಗಿಂತ ಕಲಾಪ್ರವಿಷ್ಟರೇ ಅವನ್ನು ಹೆಚ್ಚಾಗಿ ಆಡಿ ತೋರಿಸಿದರು. 'ನಿಸರ್ಗದ ಪ್ರತೀಕಾರ' ಎಷ್ಟು ಗಣ್ಯವಾಯಿತೆಂದರೆ ರವೀಂದ್ರ ಕವಿ ತನ್ನ ಇಡಿ ಜೀವನದ ಆದರ್ಶವನ್ನೇ ಅದರಲ್ಲಿ ಕಂಡುಕೊಂಡನು. ಆತನ 'ವ್ಯಕ್ತಿತ್ವ' ಎಂಬ ಪ್ರಬಂಧಸಂಗ್ರಹದಲ್ಲಿ ಉಕ್ತನಾಟಕದಲ್ಲಿ ಬಿಂಬಿಸಿದ ಸಂನ್ಯಾಸ-ಕೌಟುಂಬಿಕ ಜೀವನದ ಸಮನ್ವಯದ ತತ್ವವನ್ನು ಅವನು ಕೊನೆಯದಾಗಿ ಸಮರ್ಥಿಸಿದ್ದಾನೆ —ಅದೊಂದು ತ್ಯಾಗಮಯ ಬುದ್ಧಿಯ ಭೋಗಜೀವನದರ್ಶನ—ಅನಾಸಕ್ತಿ ಮತ್ತು ಆಸಕ್ತಿಗಳ ಸುಮಧುರ, ಸಫಲಯೋಗ! ಕಾಳಿದಾಸನು 'ರಘುವಂಶ'

ಮಹಾಕಾವ್ಯದಲ್ಲಿ ಚಿತ್ರಿಸಿದ ದಿಲೀಪನ ಜೀವನಕ್ರಮುವನ್ನದು ಹೋಲುತ್ತದೆ; ಭಗವದ್ಗೀತೆ ಹೇಳಿದ ನಿಷ್ಕಾಮಕರ್ಮಶೀಲನ ಸ್ಥಿತಪ್ರಜ್ಞೆಯ ಬ್ರಾಹ್ಮೀ ಸ್ಥಿತಿಗದು ಸರಿಸಮವಾಗಿದೆ."

"ಅಲ್ಲರೀ, ತ್ಯಾಗ–ಭೋಗಗಳು ಕಪ್ಪು-ಬಿಳುಪುಗಳಷ್ಟು ವಿರುದ್ಧ—ಅಲ್ಲವೇ ?"

"ಹೌದು; ಅವು ಅಸಂಗತವಾಗಿದ್ದಾಗ ಖಂಡಿತವಾಗಿಯೂ ವಿರುದ್ಧ; ಆದರೆ ಬುದ್ಧನಂಥವನೊಬ್ಬನು ಸುಸಂಗತಗೊಳಿಸಿದಾಗ ಅವುಗಳ ಜೋಡಿ ಅಪಶ್ರುತಿಯಾಗದೆ ಏಕಶ್ರುತಿಯಾಗುತ್ತದೆ. ಅಂತಃಕರಣದ ಮೂಲದಲ್ಲಿ ಅನಾಸಕ್ತಿ ಸ್ಥಿರಗೊಂಡಿರಬೇಕು; ಹೊರವಗೆಯಲ್ಲಿ ತೀವ್ರವಾದ ಆಸಕ್ತಿ ಕಾರ್ಯದಕ್ಷತೆಯ ದೃಷ್ಟಿಯಿಂದ ಪೂರ್ಣವಾಗಿ ಇರಬೇಕು. ಈ ಸಮತೋಲವನ್ನು ಪರಮಾತ್ಮನಾದ ಕೃಷ್ಣನ ಜೀವನದಲ್ಲಿ ಚೆನ್ನಾಗಿ ಕಾಣಬಹುದು. ಅಂಥ ಸಿದ್ಧಿಯನ್ನು ಸಾಧಿಸಿಕೊಳ್ಳುವುದೇ ನಿಜವಾದ ಜೀವನಶಿಕ್ಷಣ; ಅದೇ ಭಾರತೀಯ ಸಂಸ್ಕೃತಿಯ ನಿಜವಾದ ಸಂದೇಶ; ಪ್ರಮಿತದಲ್ಲಿ ಅಮಿತವನ್ನು ಕಾಣುವ, ಪಿಂಡಾಂಡದಲ್ಲಿ ಬ್ರಹ್ಮಾಂಡವನ್ನು ಗುರುತಿಸುವ ಸಮಾಧಿದೃಷ್ಟಿ ಸಂಪನ್ನತೆ!"

"ಹಿಮಾಲಯದ ತಲೆಯಿಂದ ಗುಡ್ಡದಂಥ ಮಂಜುಗಡ್ಡೆ ಉರುಳಿದ ಹಾಗಾಯ್ತಲ್ಲರೀ ನಿಮ್ಮ ಸಂದೇಶವ್ಯಾಖ್ಯಾನವನ್ನು ಕೇಳಿದಾಗ!"

"ಹೌದೇ—ಸ್ವತಃ ಕವಿಯೇ ಅಂಥ ಗುಂಬಳಕಾಯಿಯನ್ನು ಉರುಳಿಸಿರುವಾಗ ನಾನೇನು ಮಾಡಲೇ? ಎಷ್ಟಾದರೂ ದೊಡ್ಡ ಕವಿ—ಅವನು ದೊಡ್ಡ ಮಾತಾಡದೆ ಚಿಕ್ಕ ಮಾತಾಡಬಲ್ಲನೇ? ನೋಡು ಬೇಕಾದರೆ ಅವನ ಮಾತಿನಲ್ಲೇ ಹೇಳ್ತೇನೆ, "Even when so young I had the idea of realising the infinite in the finite."

"ನೀವೇನೇ ಹೇಳಿ, ಅದೊಂದೂ ನನಗೆ ತಿಳಿಯೋದಿಲ್ಲ."

"ತಿಳಿಯದಿದ್ದರೆ ಹೋಗಲಿ ಬಿಟ್ಟುಬಿಡು–ನನಗಾದರೂ ಶಬ್ದಾರ್ಥವಷ್ಟೇ ಗೊತ್ತಲ್ಲದೆ ಸತ್ಯಾರ್ಥ ಗೊತ್ತೇ? ಅದೆಲ್ಲಾ ಋಷಿ-ಮುನಿಗಳ ಪ್ರಪಂಚಕ್ಕೆ ಸೇರಿದ್ದು. ನಡೆ, ಇನ್ನು ಮುಂದೆ ಸಾಗೋಣ. ಕಾರವಾರದಿಂದ ಮನೆಗೆ

ಹಿಂದಿರುಗಿದ ಕೂಡಲೆ (ಕ್ರಿ.ಶ. ೧೮೮೩) ನಮ್ಮ ರವೀಂದ್ರನಿಗೆ ಮದುವೆಯಾಯಿತು."

"ಅವನ ಹೆಂಡತಿಯ ಹೆಸರು?"

"ಛೋಟೋ ಬೌ."

"ಅದೇನರೀ ಹಾಗಂದರೆ? ಅದೆಂಥ ಮಾತು?"

"'ಚಿಕ್ಕ ವಧು' ಎಂದು ಶಬ್ದಾರ್ಥ. ರವೀಂದ್ರನು ಹೆಂಡತಿಯನ್ನು ಹೆಸರಿಸುತ್ತಿದ್ದುದೇ ಹಾಗೆ. ಆಕೆಯ ನಿಜವಾದ ಹೆಸರು ಮೃಣಾಲಿನೀದೇವಿ —ಅಂತ."

"ಆಕೆಗೆ ಅಡಿಗೆಗಿಡಿಗೆ ಎಲ್ಲ ಬರ್‍ತಿತ್ತೇ?"

"ಬರ್‍ತಿತ್ತು; ಆಧರೆ ಸಿಹಿ ತಿಂಡಿಗಳನ್ನು ಮಾಡುವ ಕ್ರಮವನ್ನು ರವೀಂದ್ರನೇ ಸ್ವತಃ ಒಲೆಯ ಮುಂದೆ ಕುಳಿತು ಕಲಿಸಿದನಂತೆ!"

"ಅರೆ, ಅರೆ, ಅರೆ! ಕವಿಯಾದವನಿಗೆ ಪಾಕಶಾಸ್ತ್ರದಲ್ಲೂ ಪ್ರಾವೀಣ್ಯ ಇತ್ತೇ? ಇದೊಳ್ಳೆಯ ಸೋಜಿಗ! ಅವನ ಆ ಗಂಡಸುತನದಲ್ಲಿ ಸ್ವಲ್ಪ ಹೆಂಗಸುತನವೂ ಸೇರಿತ್ತು ಅಂತ ಕಾಣತ್ತೆ!"

"ಅನುಮಾನವೇಕೆ? ಸ್ತ್ರೀಪುರುಷರಿಬ್ಬರ ಹೃದಯದ ಗುಟ್ಟನ್ನೂ ಕಾವ್ಯದಲ್ಲಿ ಬಿಂಬಿಸುವ ಮಹಾಕವಿಗಳಿಗೆ ಹೆಣ್ತನ ಇಲ್ಲದೆ ಹೋದರೆ ಹೇಗೆ? ಅದೇ ಸಮನ್ವಿತ ವ್ಯಕ್ತಿತ್ವ ಎಂದರೆ."

"ಹೀಗೇನು? ಹಾಗಾದರೆ ಅಷ್ಟು ದೊಡ್ಡ ಕವಿಯನ್ನಲ್ಲವಾದರೂ ಅವನಿಗಿಂತ ಸ್ವಲ್ಪ ಸಣ್ಣ ಕವಿಯನ್ನಾದರೂ ನಾನು ಮದುವೆಯಾಗಿದ್ದೇನೆ! ಅಂದಮೇಲೆ ನಿಮ್ಮಲ್ಲೂ ಸ್ವಲ್ಪ ಅದೇ ಗುಣ ಇರಬೇಕು! ಅಲ್ಲವೇ?"

"ನಿನಗೆ ಹೇಗೆ ಕಾಣಿಸುತ್ತೇನೋ ನಾನು—ನನಗೇನು ಗೊತ್ತು?"

"ಅಯ್ಯೋ, ಇಷ್ಟೇನೇ? ಒಂದು ಸ್ವಲ್ಪ ನಾನಾಗಿ ನಿಮ್ಮನ್ನೇ ನೀವು ನೋಡಿಕೊಳ್ಳಿ ಒಂದು ಕ್ಷಣ!"

"ಅದು ಈಗ ಸಾಧ್ಯವಿಲ್ಲ—ಆಮೇಲೆ ನೋಡೋಣ."

"ಅಂದರೆ?"

"ಅಂದರೆ, ನಾನಾಗಿರುವಾಗ ನನಗೆ ನೀನಾಗೋಕ್ ಬರೋಲ್ಲ; ನೀನಾಗಿರುವಾಗ ನಾನಾಗೋಕ್ ಬರೋಲ್ಲ!"

" ಇಷ್ಟೇನೇ ನಿಮ್ಮ ಸಮನ್ವಯ ಶಾಸ್ತ್ರ ? "

" ಅಲ್ಲವೇ—ಹಾಗಾಗೋದಕ್ಕೂ ಹೀಗಾಗೋದಕ್ಕೂ ನಡುವೆ ಕಾಲ ಬೇಡವೇನೇ ? ಒಂದೇ ನಾಟಕದಲ್ಲಿ ಸೀತೆಯ ಪಾತ್ರ ವಹಿಸಿದವನು ಒಂದೇ ಕಾಲದಲ್ಲಿ, ಒಂದೇ ಸಂದರ್ಭದಲ್ಲಿ ರಾಮನ ಪಾತ್ರದ ಮಾತನಾಡೋಕ್ ಬರುತ್ತೆಯೇನೇ ? "

" ಏಕಪಾತ್ರಾಭಿನಯದಲ್ಲಿ ನಿಪುಣನಾದ ನೆಲ್ಲೂರಿನ ಹಾಸ್ಯ ವೈದ್ಯ (Fun Doctor) ಒಮ್ಮೆ ಒಂದು ಕ್ಷಣ ಸ್ತ್ರೀಪಾತ್ರ, ಇನ್ನೊಂದು ಕ್ಷಣ ಪುರುಷಪಾತ್ರ ಮಾತಾಡಿದಂತೆ ದನಿ ತೆಗೆದುದನ್ನು ನಾನು ನೋಡಿದ್ದೇನೆ, ಕಣ್ರೀ ! "

" ಹಹ್ಹ ಹ್ಹ ಹ್ಹ ಹ್ಹ ! ಮುಂದೆ ಕೇಳು ರವೀಂದ್ರನ ಕತೆಯನ್ನ. ನಡುವೆ ಅದನ್ನು ಬಿಟ್ಟು ಎಲ್ಲಿಗೋ ಹೊರಟುಬಿಟ್ಟೆಯಲ್ಲಾ ? ಜೊತೆಗೆ, ನನ್ನನ್ನು ಮೆಲ್ಲಗೆ ಸಣ್ಣ ಕವಿ ಎಂದೂ ಕರೆದುಬಿಟ್ಟೆ—ಇರಲಿ."

" ಛೇ—ತಪ್ಪಾಯ್ತು. ಗಂಭೀರವಾಗಿ ಮಹಾಕವಿಗಳೆಂದು ನಿಮ್ಮನ್ನು ನಂಬಿದ ನನಗೆ ಮುಂದಿನ ಕತೆ ಹೇಳಿರಿ. ಒಮ್ಮೆ ಈಗಲ್ಲವೆಂದು ಯಾರಾದರೂ ಹೇಳಿದರೆ ನಾಳೆಯಾದರೂ ಏಕಾಗಬಾರದು ?—ಅದೇ ನನ್ನ ನಿತ್ಯ ಪ್ರಾರ್ಥನೆ."

" ಮೆಚ್ಚಿದೆ, ಮೆಚ್ಚಿದೆ; ಮುಂದಿನ ಕತೆ ಶುರು ಮಾಡ್ತೇನೆ. ರವೀಂದ್ರನ ಯೌವನದ ಕಾಲದ ಕೊನೆಯ ಕವನಗಳಲ್ಲಿ ಮೊದಲಿನದು 'ಚಿತ್ರಗಳು ಮತ್ತು ಹಾಡುಗಳು' ಎಂದು. ಕವಿಗೆ ನಿಜವಾದ ಕವಿಪಟ್ಟ ಕೊಡಿಸುವುದು ಅವನ ವರ್ಣನಾಶಕ್ತಿ. ಅದರ ವೈಶಿಷ್ಟ್ಯವನ್ನು ಈ ಕವನಸಂಗ್ರಹದಲ್ಲಿ ಚೆನ್ನಾಗಿ ಕಾಣಬಹುದು. 'ಯೋಗಿ' ಎಂಬ ಕವನವೂ ಕಾರವಾರದ ಪಾರಾವಾರದಂಚಿಗೆ ನಮ್ಮನ್ನೊಯ್ಯುತ್ತದೆ. ಅಲ್ಲಿ ನಿಸರ್ಗ—ಮತ್ತೆ ಅದರ ಪ್ರಭಾವನ ವ್ಯಕ್ತಾವ್ಯಕ್ತ ವರ್ಣನೆ !

ರವೀಂದ್ರಕವಿಯ ನಾಟಕಯುಗದ ಪ್ರಥಮ ಭಾಗದಲ್ಲಿ ಆತನು ಬರೆದ 'ಚಿತ್ರಗಳು ಮತ್ತು ಗೀತಗಳು' ಕವಿತ್ವಕ್ಕೆ ನಿಕಷವಾದ ವರ್ಣನಶಕ್ತಿಗೆ ಒಳ್ಳೆಯ ಉದಾಹರಣೆಯಾಗಿದೆ ಎಂಬುದನ್ನು ನೆನಪಿಟ್ಟುಕೊಂಡು ಮುಂದೆ ಸಾಗೋಣ. ಈ ಕೃತಿಯಲ್ಲಿ ಕವಿಯ ಶೈಲಿ ಸ್ಪಷ್ಟವಾದ ರೂಪ-ರೇಖೆಗಳನ್ನು ಪಡೆಯಿತು; ಕಂಬನಿ, ನಗೆ, ಹೂ, ಬೆಳಕು ಮುಂತಾದ ಪದಗಳನ್ನು ಪದೇ ಪದೇ ಬಳಸುವ

ಚಟವೂ ನೆಲೆನಿಂತಿತು ; ಕಲ್ಪನೆಗಳ ಪ್ರತಿರೂಪಗಳೂ ಹೆಚ್ಚಾಗಿ ಬಳಸಲ್ಪಟ್ಟವು. ಕೊಳಲುಗಳು, ಗೋಪಾಲಕರು, ಹಾದಿತಪ್ಪಿದ ಕಾಡಾಡಿಗಳು ಮುಂತಾದವರು ಪದೇ ಪದೇ ಬರತೊಡಗಿದರು. ಆದರೂ ಶೈಲಿಯ ಬೆಳವಣಿಗೆಯಲ್ಲಿಯ ಮುಂದಿನ ಮೆಟ್ಟಲನ್ನು ಈ ನಾಟಕೀಯ ಕವನದ ಚುಟುಕುಗಳಲ್ಲಿ ಕಾಣ ಬಹುದು. 'ಯೋಗಿ' ಎಂಬ ಕವನವೂ ಕಾರವಾರದ ಕಡಲಂಚಿನಲ್ಲಿ ಹೊಳೆದ ಚಿತ್ರವೇ. 'ರಾಹುವಿನ ಪ್ರೇಮ' ಎಂಬುದೂ ಒಂದು ಗಣ್ಯವಾದ ಕವನ. ಅದರಲ್ಲಿ ಭಾವನೆಯ ಆಳ, ತೀವ್ರತೆ ಮತ್ತು ಕಲ್ಪಕತೆಗಳು ಅತ್ಯಂತ ಹೆಚ್ಚಾಗಿವೆ. ಹಾಡು ಗಳನ್ನು ಬರೆಯುವುದರ ಜೊತೆಜೊತೆಗೇ ರವೀಂದ್ರನು 'ಬಾಲಕ' ಎಂಬ ಮಕ್ಕಳ ಪತ್ರಿಕೆಯ ಕಾರ್ಯಭಾರವನ್ನೂ ಹೊತ್ತಿದ್ದನು. 'ಕಿರೀಟ' ಮತ್ತು 'ರಾಜರ್ಷಿ' ಎಂಬೆರಡು ಚಿಕ್ಕ ಕಾದಂಬರಿಗಳನ್ನು ಅದಕ್ಕಾಗಿ ಬರೆದನು."

"ಇದೇನ್ರಿ—ಕವನ, ನಾಟಕ, ಕಾದಂಬರಿ, ಕಥೆ—ಒಂದೇ ಎರಡೇ? ಆಡು ಮುಟ್ಟದ ಸೊಪ್ಪಿಲ್ಲ, ರವೀಂದ್ರ ಬರೆಯದ ಸಾಹಿತ್ಯರೂಪವಿಲ್ಲ—ಎನ್ನಬೇಕಾಯಿತಲ್ಲ?"

"ಹೌದು—ಯಾಕನ್ನಬಾರದು, ಅವನು ಬರೆದದ್ದೇ ಅಷ್ಟು ತರಹದ್ದಾಗಿ ರುವಾಗ? ಬರೆವಣಿಗೆಯಲ್ಲಷ್ಟೇ ಅಲ್ಲ—ಜೀವನದ ವ್ಯವಹಾರಗಳಲ್ಲೂ ಬಹಳ ನಮೂನೆ ಕಂಡುಬಂದಿತು! ಬಂಕಿಂಚಂದ್ರ ಚಟರ್ಜಿ ಎಂಬ ಅದ್ವಿತೀಯ ಕಾದಂಬರಿಕಾರನ ಸ್ನೇಹವಾಯಿತು; ಧಾರ್ಮಿಕ ವಿಚಾರಗಳಲ್ಲಿ ಆತನೊಡನೆ ಜಗಳವೂ ಆಯಿತು. ಆ ಹಿರಿಯನು ಅಂತ್ಯದಲ್ಲಿ ಬರೆದ ಔದಾರ್ಯಪೂರ್ಣವಾದ ಪತ್ರದಿಂದ ಆತನಲ್ಲಿ ರವೀಂದ್ರನಿಗಿದ್ದ ವಿರಸವೂ ಕೊನೆಗಂಡಿತು!"

"ಅಲ್ಲರೀ—ಕವಿಗಳಿಗೆ ಕಾವ್ಯಪ್ರಪಂಚ ಸಾಲದೇನು? ಮತಧರ್ಮ, ರಾಜಕಾರಣ ಮುಂತಾದ ಕ್ಷೇತ್ರಗಳಲ್ಲಿ ಅವರು ಮೇಯಲು ಹೋಗುವುದೇಕೆ?"

"ಸಾಹಿತ್ಯವನ್ನು ಓದಿ ಚೆನ್ನಾಗಿದೆ ಅಥವಾ ಇಲ್ಲ ಎಂಬ ಹಕ್ಕು ಎಲ್ಲರಿಗೂ ಇರುವಾಗ ಎಲ್ಲರ ಕಾರ್ಯಕ್ಷೇತ್ರದಲ್ಲೂ ದುಡಿಯುವ, ಸಲಹೆ ಕೊಡುವ ಮತ್ತು ವಿಮರ್ಶಿಸುವ ಹಕ್ಕು ಕವಿಗಳಿಗೇತಕ್ಕಿರಬಾರದು? ನಮ್ಮ ತರುಣ ಕವಿಯು ಸ್ಟೀಮರ್ ಕಂಪೆನಿ ಮತ್ತು ರಾಜಕೀಯ ಹಾಗೂ ಸಾಹಿತ್ಯಿಕ ಸಂಘಗಳಲ್ಲಿ ಸಹ ದುಡಿದದ್ದುಂಟು. ಆಗ ಆತ ಬಂಗಾಳಿ ಷೆಲ್ಲಿ ಅನ್ನಿಸಿಕೊಂಡದ್ದನ್ನು ಮರೆಯ ಬೇಡ. ಭಾವನಾಬಲ ಚೆನ್ನಾಗಿದ್ದವನಿಗೆ ಬುದ್ಧಿಬಲ ಸಾಕಷ್ಟಿರುವುದೇ ಇಲ್ಲ

—ಎಂದೇನಾದರೂ ನಿಯಮವಿಲ್ಲವಲ್ಲಾ ? ವಿಲಕ್ಷಣವಾಗಿಯಾದರೂ ಚೆನ್ನಾಗಿ ಉಡುಪುತೊಡುಪುಗಳನ್ನು ಹಾಕಿಕೊಳ್ಳುತ್ತಿದ್ದ ನಮ್ಮ 'ಚಿಕ್ಕ ದೊಡ್ಡ ಕವಿ'. ಬಂಗಾಳಿಗಳಲ್ಲಿ ನೆಪೋಲಿಯನ್ ಗಡ್ಡ ಮತ್ತು ನೀಳವಾದ ಗುಂಗುರುಗೂದಲುಗಳನ್ನು ಬಿಡುವ ವಿಲಾಸವು ರೂಢಿಗೆ ಬರಲು ರವೀಂದ್ರನೇ ಕಾರಣವೆನ್ನುತ್ತಾರೆ."

"ಹೂಂ—ಒಳ್ಳೆ ಫ್ಯಾಷನಬಲ್ ಆಗಿದ್ದ ಅನ್ನಿ ನಮ್ಮ ಕವಿರತ್ನ."

"ಇದೊಳ್ಳೆ ಹೇಳ್ತೀಯಲ್ಲಾ ! ಯಾರು ಯಾರೋ ಹೇಗೆ ಹೇಗೋ ಫ್ಯಾಷನ್ ಮಾಡಬಹುದಂತೆ, ಕಲಾ–ಔಚಿತ್ಯಜ್ಞನಾದ ಕವಿಯು ಮಾಡಬಾರದೇನು ? ಕವಿಯ ತಲೆಯು ಎಲ್ಲ ಔಚಿತ್ಯಗಳ ಕೇಂದ್ರವಂತೆ ; ಅಂದಮೇಲೆ ಅವನನ್ನು ಬಿಟ್ಟರೆ ಇನ್ನಾರು ವಿಲಾಸಜ್ಞರಾದಾರು ? ಈ 'ಫ್ಯಾಷನಬಲ್, ಜೂನಿಯರ್' ಕವಿಯು 'Sharps and Flats' ಎಂಬ ಪದ್ಯವನ್ನು ಬರೆದದ್ದು ಉಲ್ಲೇಖನೀಯ. ಇದು ಬಹಳ ವೈವಿಧ್ಯಪೂರ್ಣವಾಗಿದೆ. ಇದರೊಳಗೆ ಸುನೀತ ಅಥವಾ ಅಷ್ಟಷಟ್ಪದಿಗಳೇ ಹೆಚ್ಚು. ಭಾಷಾಂತರಗಳೂ ಬಂದಿವೆ."

'ಮಾಯಾಲೀಲೆ' ಎಂಬುದು ರವೀಂದ್ರ ಬರೆದ ಸಂಗೀತ ರೂಪಕ. 'ವಾಲ್ಮೀಕಿಯ ಪ್ರತಿಭೆ'ಯಲ್ಲಿರುವಂತೆಯೇ ಇದರಲ್ಲೂ ಗ್ರೀಕ್ ಪದ್ಧತಿಯ ಮೇಳಗೀತವಿದೆ. ಹೀಗೆ ನಾಟಕಕಾರನಾದ ಕವಿಯ ವಯಸ್ಸು ೨೫. ಆ ವೇಳೆಯಲ್ಲಿ ತಾಯಿಯಂತೆ ರವೀಂದ್ರನನ್ನು ನೋಡಿಕೊಳ್ಳುತ್ತಿದ್ದ ಅತ್ತಿಗೆ (ಜ್ಯೋತೀಂದ್ರನಾಥ ಠಾಕೂರರ ಹೆಂಡತಿ) ದಿವಂಗತಳಾದಳು. ಅದರಿಂದ ಕವಿಗೆ ಬಹಳ ದೊಡ್ಡ ಆಘಾತವುಂಟಾಯಿತು. ಅಷ್ಟೇ ಅಲ್ಲ; ಜೀವನದ ಬಗ್ಗೆ ಆತ ಇಟ್ಟುಕೊಂಡಿದ್ದ ದೃಷ್ಟಿಕೋನದಲ್ಲಿಯೇ ಮೂಲಭೂತ ಬದಲಾವಣೆ ಉಂಟಾಯಿತೆಂದರೆ ಹೆಚ್ಚಾಗಲಾರದು."

"ಅದೆಂಥ ಬದಲಾವಣೆ ?"

"ಮನುಷ್ಯರು ಸಾಯುತ್ತಾರೆ, ಜಗತ್ತಿನಲ್ಲಿ ಯಾವುದೂ ಶಾಶ್ವತವಲ್ಲ, ತೋರುವುದೊಂದಾದರೆ ಇರುವುದಿನ್ನೊಂದು ; ಹೊರಗೆಲ್ಲಾ ನುಣ್ಣಗೆ, ತೆಳ್ಳಗೆ, ಬೆಳ್ಳಗೆ ಕಾಣಿಸುತ್ತಿರುವಾಗಲೇ, ಒಳಗೊಳಗೇ ಕ್ರೂರವೂ ಸ್ಥೂಲವೂ ಆದ ಕೇಸುರಿ ಬುಸುಗುಟ್ಟುತ್ತಿರಬಹುದು. ಆದುದರಿಂದ 'ಹೊಸ ಮಡಕೆಯನ್ನು ಕಂಡೆಯಾ, ಕಿಸಿದೆಯಾ ಬಾಯ ?' ಎಂಬ ಹಾಗೆ ತಾತ್ಕಾಲಿಕವಾದ ಸುಖ, ಜಯ, ಲಾಭಗಳಿಂದ ಮೇರೆ ಮೀರಿ ಹಿಗ್ಗುವುದಕ್ಕಿಲ್ಲಿ ಅರ್ಥವಿಲ್ಲ ಎಂದು ಕವಿ

ಅರಿತ. ಈ ಅನುಭವದ ಅರಿವು ಆತನ ಹೃದಯಪರಿಪಾಕಕ್ಕೆ ಕಾರಣ ವಾಯಿತು; ಅವನನ್ನು ಸಾರ್ಥಕ ಪ್ರೌಢನನ್ನಾಗಿ ಮಾಡಿತು.

‘ ಸುಖದುಃಖ ಸಂಗಮವಾದ ಹೃದ್ರಂಗವು
ಪಾವನವೆಂಬೆನು ಯಾವಾಗಲೂ ’

ಎಂದು ಬೇಂದ್ರೆ ಉದ್ಗರಿಸಿದ ಹಾಗೆ ರವೀಂದ್ರನೆದೆಗೆ ಜೀವನಸೌಂದರ್ಯದ ಸಾರವಾದ ಪಾವಿತ್ರ್ಯದ ಮುಖ ಸುಪರಿಚಿತವಾಗತೊಡಗಿತು.”

“ ಅದೇನ್ರೀ ಅದು ? ಸುಖ–ದುಃಖಗಳನ್ನು ಬೆರೆಸಿಬಿಟ್ಟರೆ ಮನಸ್ಸು ಪವಿತ್ರವಾಗಿಬಿಡುತ್ತೆಯೇ ? ಅದು ಹೇಗೆ ? ”

“ ಅಲ್ಲವೇ — ಹಾಲು–ನೀರುಗಳನ್ನು ಬೆರೆಸಿದ ಹಾಗೆ ಸುಖ–ದುಃಖ ಗಳನ್ನು ಬೆರೆಸೋದಕ್ಕಾಗುತ್ತೆಯೇ ? ಹಾಗಲ್ಲ; ಸುಖದ ಭಾವನೆಯಲ್ಲಿ ಸ್ವಾಭಾವಿಕವಾಗಿ ಬಂದು ಕೂಡಿಕೊಳ್ಳುವ ಪಾಪಬುದ್ಧಿಯನ್ನು ಜಾಗ್ರತೆ ವಹಿಸಿ, ಹತ್ತಿರಕ್ಕೆ ಸುಳಿಯಗೊಡದಂತೆ ಮಾಡುವ ಶಕ್ತಿಯು ದುಃಖಾಗ್ನಿಯಲ್ಲಿ ಹೊಕ್ಕು ಹೊರಟ ಮನಸ್ಸಿಗಿರುತ್ತದೆ; ಮಿಕ್ಕ ಮನಸ್ಸುಗಳು ಗಾಳಿಗೊಡ್ಡಿದ ದೀಪಗಳು, ಹಿಂಸಾಽಹಿಂಸಾವಿವೇಕವಿಲ್ಲದ ಹಸಿದ ಹುಲಿಗಳು ಅಥವಾ ತಿಂದು ಸೊಕ್ಕಿದ ಮಂಗನ ಮರಿಗಳು ! ದುಃಖವು ಶುದ್ಧೀಕರಿಸಿದ ಸುಖವು ನಿರ್ಮಲ; ಆ ನೈರ್ಮಲ್ಯವು ಸೌಂದರ್ಯದ ಆತ್ಮ. ಅಂಥ ಸೌಂದರ್ಯದ ಸ್ಫುರಣವನ್ನು ಉಂಟುಮಾಡಬಲ್ಲ ಕವಿತಾಗುಣಕ್ಕೆ ಪ್ರಸಾದವೆನ್ನುವುದು ಸಾರ್ಥಕವಾಗಿದೆ. ಸರಸ್ವತಿಯ ಅಂಥ ಪ್ರಸಾದವು ರವೀಂದ್ರನಿಗೆ ದೊರೆತುದು ಸ್ಪಷ್ಟವಾಗ ತೊಡಗಿತು.”

೩. ರವೀಂದ್ರನ ಲೋಕಾನುಭವಸಂಗ್ರಹ

“ರವೀಂದ್ರನು ಸ್ವಭಾವತಃ ಏಕಾಂತಪ್ರಿಯನು; ಆದರೆ ಬಹಳ ಕಾಲ ಏಕಾಂತವಾಸಿಯಾಗಿರುವುದೂ ಅವನಿಗೆ ರುಚಿಸದು. ಘಾಜಿಪುರವೆಂಬಲ್ಲಿ (ಉ.ಪ್ರ.) ಒಂದು ಬಂಗಲೆಯನ್ನು ಕಟ್ಟಿಸಿ ಆತನು ಏಕಾಂತವಾಸಕ್ಕೆ ತೊಡಗಿದ್ದು ಸುಮಾರು ೧೮೮೦ರ ಹೊತ್ತಿಗೆ. ಅವನೊಡನಿದ್ದುದು ಅವನ ಹೆಂಡತಿ ಮತ್ತು ಪುಸ್ತಕಗಳ ರಾಶಿ—ಎರಡೇ. ೧೬ ಆಣೆ ಕವಿಜೀವನವನ್ನು ಆತ ಅಂದು ಆರಂಭಿಸಿದನೆಂಬಂತಿತ್ತು. ಅಲ್ಲಿಯ ಗುಲಾಬಿಯ ವನದಲ್ಲಿ ಕುಳಿತು ಅವನು ತನ್ನ ‘ಮಾನಸಿ’ಯನ್ನು ಬರೆದ. ಅದು ಪ್ರಕಟವಾದದ್ದು ೧೮೯೦ರಲ್ಲಿ. ಅಲ್ಲಿಂದ ಅವನ ಶೈಲಿಯು ನಿರ್ದಿಷ್ಟವಾದ ರೂಪವನ್ನು ತಾಳಿತು. ಕಾಳಿದಾಸನಾದ ಬಳಿಕ ತಾನೇ ಭಾರತದ ಮಹಾಕವಿ ಎಂಬ ಆತ್ಮವಿಶ್ವಾಸವು ಅವನ ೨೯ನೆಯ ವಯಸ್ಸಿನಲ್ಲಿ ಮೂಡಿತು! ‘ಮೇಘಸಂದೇಶ’ ಎಂಬ ಹೆಸರಿನಲ್ಲಿ ರವೀಂದ್ರನು ಪದ್ಯ ಬರೆದು ಕಾಳಿದಾಸನ ಬಗ್ಗೆ ತನಗಿರುವ ಗೌರವವನ್ನು ವ್ಯಕ್ತಪಡಿಸಿದ ಸಂಧಿಕಾಲವದು! ಆತನ ‘ಮಾನಸಿ’ಯಲ್ಲಿಯ ‘ಅಹಲ್ಯೆ’ ಎಂಬ ಪದ್ಯವು ಅತ್ಯುತ್ತಮವಾದದ್ದು. ಅದರಲ್ಲಿ ತತ್ವಾರ್ಥವು ಜ್ಯೋತಿಯಾಗಿ ಬೆಳಗುತ್ತದೆ. ಅದೇ ‘ಮಾನಸಿ’ ಎಂಬ ಸಂಗ್ರಹದಲ್ಲಿರುವ ‘ಕೋಗಿಲೆಯ ಕರೆ’ ಎಂಬ ಪದ್ಯವಾದರೂ ತುಂಬ ಚೆನ್ನಾಗಿದೆ. ‘ನಿರೀಕ್ಷೆ’ ಎಂಬುದೂ ಹಾಗೇ.”

“ನೀವು ಹೇಳೋದನ್ನು ಕೇಳಿದರೆ ನನಗೆ ನನ್ನ ಮೇಲೇ ಬಹಳ ಬೇಸರ ಹುಟ್ಟುತ್ತದೆ. ಅಲ್ಲಿ ಇಲ್ಲಿ ಒಂದೊಂದನ್ನು ಬಿಟ್ಟರೆ ಪ್ರಸಿದ್ಧ ಕನ್ನಡ ಕವಿಗಳ ಯಾವ ಒಂದು ಇಡಿ ಕವನಸಂಗ್ರಹವನ್ನೂ ನಾನು ಓದಿಲ್ಲ.”

“ಹಾಗಾದರೆ ನಾನೀಗ ಕವಿಯ ಕತೆ ಹೇಳ್ತಾ ಇರೋದು ಸಾರ್ಥಕವಾದಂತೆಯೇ! ಹಿಂದೊಬ್ಬ ಕವಿ ಹೇಳಿದ—

ಓ ಬ್ರಹ್ಮ ನನಗಿತರ ಸಂಕಷ್ಟಗಳನೆಷ್ಟು
ಬೇಕಾದರೂ ಕೊಡು ಅವೆಲ್ಲ ಸಹಿಸುವೆನು।
ಬರೆಯದಿರು ಬರೆಯದಿರು ಹಣೆಯ ಮೇಲೆಂದಿಗೂ
ಓದೆಂದು ಅರಸಿಕರ ಮುಂದೆ ಪದ್ಯವನು॥

ಆ ಪದ್ಯ ಈ ಪದ್ಯ ಅಂತ ಹೇಳಿ ನಿನಗೆ ಬೇಸರ ಉಂಟುಮಾಡಿದ್ದನ್ನು ವರ್ಣಿಸಲು ಮೇಲಿನ ಪದ್ಯವನ್ನು ತಿರುವುಮುರುವು ಮಾಡಬೇಕಾದೀತು—

ಓ ಬ್ರಹ್ಮ ನನಗಿತರ ಸಂಕಷ್ಟಗಳನೆಷ್ಟು
ಬೇಕಾದರೂ ಕೊಡು ಅವೆಲ್ಲ ಸಹಿಸುವೆನು।
ಬರೆಯದಿರು ಕಾವ್ಯವಾಚನವ ಕೇಳುವುದನ್ನು—
ಕವಿಕಥೆಯನಾಲಿಸುವುದನು ಹಣೆಯ ಮೇಲೆ॥

ಅಲ್ಲವೇನೇ ಮನದನ್ನೆ?"

"ಹೋದ ವರ್ಷ ನೀವೀ ಮಾತನ್ನು ಹೇಳಿದ್ದರೆ ಒಪ್ಪಿಕೊಳ್ಳುತ್ತಿದ್ದೆ; ಈ ವರ್ಷ ಒಪ್ಪಿಕೊಳ್ಳಲಾರೆ. ಶ್ರೀ ಪಿ. ಆರ್. ಭಾಗವತರು ಆಕಾಶವಾಣಿಯಲ್ಲಿ ಕಾವ್ಯಗಾಯನ ಮಾಡಿದ್ದನ್ನು ಕೇಳಿದಮೇಲೆ ನನಗೂ ಹಾಗೇ ಕಲಿತು ಹಾಡಬೇಕೆಂದು ಅತ್ಯಾಶೆಯುಂಟಾಗಿದೆ."

"ಅದಕ್ಕೇ ಹೇಳುತ್ತಾರೆ— 'ರಾಗ ರಸ, ಪದ ಕಸ' ಅಂತ. ಬಹಳ ಜನಕ್ಕೆ ಹಾಡಿನ ಧಾಟಿ ಮುಖ್ಯವಲ್ಲದೆ, ಅದರ ಪದ-ಅರ್ಥಗಳಲ್ಲ."

"ಮೊದಮೊದಲು ಹಾಗಿರಬಹುದು; ಆದರೆ ಕ್ರಮೇಣ ಧಾಟಿ-ಅರ್ಥಗಳೆರಡೂ ಮುಖ್ಯವಾಗಿ ತೋರಬಹುದು; ಮತ್ತೂ ಮಿತಿಮೀರಿದರೆ ಗದ್ಯದಂತೆ ಅರ್ಥವೊಂದೇ ಪ್ರಧಾನ ಎನ್ನಿಸಿದರೂ ಎನ್ನಿಸಬಹುದು! ನನಗೀಗ ಕೇವಲ ಅರ್ಥಪ್ರತಿಮೆಗಳು ಪ್ರಧಾನವೆನ್ನಿಸುವ ಅತಿಗದ್ಯಗತಿಯ ಪದ್ಯಗಳು ಸೇರುವುದಿಲ್ಲ. ಅವಕ್ಕಿಂತ ವಚನಗಳೇ ಎಷ್ಟೋ ಚೆನ್ನಾಗಿವೆ!"

"ರವೀಂದ್ರನ ಪದ್ಯಗಳಲ್ಲಿ ಕೊನೆಕೊನೆಗೆ ಬರೆದ ಕೆಲವೇ ಪದ್ಯಗಳಲ್ಲದೆ ಮತ್ತಾವುವೂ ಇನೆಯ ನಮೂನೆಯವಲ್ಲ. ಸಮುದ್ರಗಾಂಭೀರ್ಯವನ್ನು ತೋರುವ ಶೈಲಿಯಿಂದ ಸಮುದ್ರದ ಲಯಲೀಲೆಯನ್ನು ಅವನು ಬರೆದ 'ಸಮುದ್ರದ ತರಂಗಗಳು' ಎಂಬ ಕವನದಲ್ಲಿ ಕಾಣಬಹುದು. ಆ ರುದ್ರ ರಸದ ಚಿತ್ರಣ ಅನುಪಮವಾದುದು. ೧೮೭೭ರಲ್ಲಿ ೮೦೦ ಪ್ರಯಾಣಿಕರನ್ನು ಪುರಿಗೆ ಕರೆದೊಯ್ಯುತ್ತಿದ್ದ ಹಡಗು ಮುಳುಗಿಹೋದುದು ಅದರ ಕಥಾಬೀಜ.

ತೀರವಿಲ್ಲದ ನೀರಧಿಯ ಎದೆಯ ಮೇಲೆ
ಉಯ್ಯಾಲೆಯಾಡುವಳು ಲಯದೇವತೆ;
ಅವಳ ಆ ಹಬ್ಬ ವೈನಡುಗಿಸುವುದು!
ದುರ್ಜಯಾನಿಲ ದುರ್ನಿಯಮ್ಯಬಲ ತಿರುಗುತಿಹ
ತನ್ನ ಸಾವಿರ ರೆಕ್ಕೆಗಳನು ಬೀಸಿ;
ಗಗನಸಾಗರಗಳೆರಡೂ ಗಿರಿಕೆ ಹೊಡೆಯುತಿವೆ
ಗೊಂದಲದಿ; ಲೋಕದಂಬಕಗಳನ್ನು
ಮುಸುಕಿ ಮರೆಮಾಡಿಹುದು ಕಾರ್ಗತ್ತಲತ್ತಿತ್ತ;
ಮಿಂಚುತಿದೆ ಮಿಂಚು, ನೊರೆ ಬುಸುಗುಡುತಿದೆ!

ಇಲ್ಲಿ ಕ್ರೂರ ಪಶುಗಳನ್ನು ಮೀರಿಸುವ ನಿಸರ್ಗದ ದೈತ್ಯಲೀಲೆಯನ್ನು, ಅದರ ವಿಕಟಾಟ್ಟಹಾಸವನ್ನು ಕವಿ ಚಿತ್ರಿಸುತ್ತಹೋಗಿದ್ದಾನೆ."

"ನಿಜವಾಗಿಯೂ ಎದೆ ನಡುಗಿಸುವಂತಿದೇರೀ ಈ ಪದ್ಯ!"

"ಹೌದೇನು? ಆಮೇಲೆ ಪೂರ್ತಿಯಾಗಿ ಓದಿ ಹೇಗಿದೆಯೆಂದು ನೀನು ಹೇಳುವೆಯಂತೆ. ರವೀಂದ್ರರ ಅಂತಃಕರಣವೂ ಒಂದು ಸಮುದ್ರವೇ ಆಗಿತ್ತು. ರಾಷ್ಟ್ರದ ಸಾಮಾಜಿಕ-ರಾಜಕೀಯ ದೋಷಗಳನ್ನು ಎದುರಿಸಿ ದಂಗೆಯೇಳುವ ಪ್ರವೃತ್ತಿ 'ಮಾನಸಿ'ಯ ಎಷ್ಟೋ ಪದ್ಯಗಳಲ್ಲಿ ಎದ್ದು ಕಾಣುತ್ತದೆ; ಅವನನ್ನು ಮುಂದೆ ಮಹಾಕವಿ, ಮಹಾತ್ಮ ಎಂದೆನ್ನಿಸಿದ ಸ್ವತಂತ್ರ ವಿಚಾರ, ಸ್ವತಂತ್ರ ಮನಃ ಪ್ರಣಾಳಿ, ಧೈರ್ಯ, ಸಾಹಸಗಳು ಆಗಲೇ ಅವರಲ್ಲಿ ಪಡಿಮೂಡಿದ್ದವು. 'ವಿಕಟ ಪ್ರತ್ಯಾಶೆಗಳು', 'ನಮ್ಮ ದೇಶವನ್ನು ಸುಧಾರಿಸುವುದು', 'ಬಂಗಾಳದ ವೀರರು' ಮತ್ತು 'ಧರ್ಮಪ್ರಚಾರ' ಎಂಬ ಕೃತಿಗಳಲ್ಲಿ ಕವಿ ಸಮಕಾಲೀನ ರಾಜಕೀಯ-ಸಾಮಾಜಿಕ ಸನ್ನಿವೇಶಗಳನ್ನು ವಿಡಂಬಿಸಿದ್ದಾನೆ."

"ವಿಡಂಬನೆ ಅಂದರೇನು?"

"ಬಯ್ಯೋದು."

"ಬಯ್ಯೋದು ಸಾಹಿತ್ಯ ಅಂತ ಅನ್ನಿಸಿಕೊಳ್ಳುತ್ತೆಯೇ?"

"ಹುಟ್ಟುಕವಿ ಹೊಗಳಿದ್ರೂ ಸಾಹಿತ್ಯ, ತೆಗಳಿದ್ರೂ ಸಾಹಿತ್ಯ. ಸಾಹಿತಿಯ ಬಾಯಿಂದ ಸಾಹಿತ್ಯವಲ್ಲದೆ ಇನ್ನೇನು ಹೊರಬಿದ್ದೀತು?"

" ಸಾಹಿತಿ ಏಕೆ ಬಯ್ಯುತ್ತಾನೆ ? "

" ಅರಸಿಕತೆ ಹೋಗಲಿ ಅಂತ."

" ಜೀವನದಲ್ಲಿಯ ದೋಷಗಳೆಲ್ಲಾ ಅರಸಿಕತೆಗಳೆನಿಸುತ್ತವೆಯೇ ? "

" ಸಾಹಿತಿಯ ದೃಷ್ಟಿಯಲ್ಲಿ ಹಾಗೇ. ನೀತಿಯ ಮಾತಿನಲ್ಲಿ ಕೇಡು ಎನಿಸಿದ್ದು ರಸಭಾಷೆಯಲ್ಲಿ ಕುರೂಪ, ವಿರಸ ಎನ್ನಿಸಿಕೊಳ್ಳುತ್ತದೆ. ಕಾವ್ಯದ ಆತ್ಮವು ರಸ, ರಸದ ಆತ್ಮವು ಔಚಿತ್ಯ ಅಥವಾ ರಸಾನುಗುಣವಾದ ಪದ-ಅರ್ಥ ಮೌಲ್ಯಗಳ ಯೋಜನಾಚಾತುರ್ಯ. ರಾಜಕೀಯ-ಸಾಮಾಜಿಕ ವ್ಯವಹಾರಗಳು ಅನುಸರಿಸುತ್ತಿರುವ ನೀತಿಗಳಲ್ಲಿಯ ದೋಷಗಳ ದೆಸೆಯಿಂದ ಸಮಾಜವು ಕವಿಗೆ ಕುರೂಪವಾಗಿ ಕಾಣುತ್ತದೆ. ಆಗ ಸಮಾಜದ ದೋಷಗಳ ಅಥವಾ ಅನೌಚಿತ್ಯಗಳ ಪಟ್ಟಿಯನ್ನು ಕೊಡುವುದರ ಬದಲು, ಅವುಗಳಿಂದ ಪ್ರೇರಿತವಾದ ಪಾತ್ರಗಳ ಮಾತು ಹಾಗೂ ವರ್ತನೆಗಳನ್ನು ಆತ ನಮ್ಮೆದುರು ಚಿತ್ರಿಸಿ ಇಡುತ್ತಾನೆ. ಆ ಧ್ವನಿಯು ಸಾಮಾಜಿಕರ ಕಣ್ಣು ತೆರೆಯಿಸುತ್ತದೆ, ತಿದ್ದಿ ಕೊಳ್ಳುವ ಬಯಕೆಯನ್ನು ಉಂಟುಮಾಡುತ್ತದೆ."

" ಜನರಲ್ಲಿ ರವೀಂದ್ರ ಕಂಡ ಕೊರತೆಗಳಾವುವು ? "

" ಉತ್ತರಪೌರುಷಶೀಲ, ಕಾರ್ಯವಿಮುಖತೆ, ವಿಧಿವಾದಶರಣತೆ, ಕೆಲಸಕ್ಕೆ ಬಾರದ ಸಿಟ್ಟು, ಮನಸ್ಸಿನಲ್ಲೇ ಮುಂಡಿಗೆ ತಿನ್ನುವುದು, ಕುರುಡು ಸಂಪ್ರದಾಯಗಳಿಗೆ ಅಂಟಿಕೊಂಡಿರುವುದು, ಬಾಲಬಡಿಕತನ, ಪ್ರಾಚೀನ ಭಾರತದ ವೈಭವವನ್ನು ಅತಿಶಯೋಕ್ತಿಯಿಂದ ಹೊಗಳುತ್ತ ತಿರುಗುವುದರಲ್ಲಿ ಮಾತ್ರ ತೃಪ್ತರಾಗಿರುವುದು, ವಿದೇಶಗಳ ಚರಿತ್ರೆಯನ್ನಷ್ಟು ಓದಿಕೊಂಡು ತನುಗೆಲ್ಲಾ ತಿಳಿದುಹೋಯಿತೆಂದು ಬುರುಡೆ ಹೊಡೆಯುತ್ತ ಕುಳಿತುಕೊಳ್ಳುವ ವಿದ್ಯಾರ್ಥಿತ್ವ, ಸ್ವಧರ್ಮದ ಅರಿವು - ಆಚಾರಗಳಿಲ್ಲದೆ ವಿಧರ್ಮದವರನ್ನು ನೋಯಿಸುವ ಒರಟುತನ, ಬಾಲ್ಯವಿವಾಹವನ್ನು ನಿಲ್ಲಿಸದಿರುವುದು—ಒಂದೇ ಎರಡೇ ? ಇಂಥ ಎಷ್ಟೋ ದೋಷಗಳು ನಮ್ಮ ಜನರಲ್ಲಿ ಈಗಲೂ ಬಹಳ ಕಡೆ ಕಂಡುಬರುತ್ತವೆ."

" ಇಷ್ಟು ಕೆಟ್ಟುಹೋಯ್ತೇ ನಮ್ಮ ಪುಣ್ಯಭೂಮಿ, ಕರ್ಮಭೂಮಿ ? "

" ನೋಡು ರವೀಂದ್ರರ ನಾಟಕಗಳಲ್ಲಿಯ ಕೆಲ ಪಾತ್ರಗಳನ್ನು; ಅವು ಕೆಲ ಮಾದರಿಗಳು ! ಒಂದು ದೇಶದ ಸ್ಥಿತಿಗತಿಗಳಿಗೆ ಒಬ್ಬ ವ್ಯಕ್ತಿಯ ಸ್ಥಿತಿಗತಿ

ಗಳಿಗಿದ್ದಂತೆಯೇ ದಶಾಂತರಗಳಿವೆ. ಒಮ್ಮೆ ಅಲ್ಪಮನಸ್ಕರ ಸಂಖ್ಯೆ ಹೆಚ್ಚು ಆಗುತ್ತದೆ. ಆಗ ಅಂಥ ದೇಶವು ಅವನತಿಮುಖವಾಗುತ್ತದೆ. ಕೆಲಕಾಲದ ಅನಂತರ ಅಲ್ಪತೆ ಅಳಿದಾಗ ಮತ್ತೆ ಅದು ಉದಯೋನ್ಮುಖವಾಗುತ್ತದೆ. ಭಾಸ ಹೇಳಿದ್ದನ್ನು ನಾನೇ ನಿನಗೆ ಹಿಂದೆ ಹೇಳಿಲ್ಲವೇ—' ಚಕ್ರಾಕಾರಪಂಕ್ತಿ-ರಿವ ಗಚ್ಛತಿ ಭಾಗ್ಯಪಂಕ್ತಿಃ ' ಎಂದು ?

೧೮೯೦ರಲ್ಲಿ ' ವೈಕುಂಠನ ಹಸ್ತಪ್ರತಿ ' ಎಂಬ ನಾಟಕ ಅಚ್ಚಾಯಿತು. ಅದು ರವೀಂದ್ರ ಬರೆದ ಮೊದಲನೆ ಸಾಮಾಜಿಕ ನಾಟಕ. ಅದರ ಸಂವಾದವು ಚಮತ್ಕಾರಮಯವಾದದ್ದು, ತೀವ್ರಗತಿಯುಳ್ಳದ್ದು ಮತ್ತು ಬಹುಬೇಗನೆಯೇ ಕೊನೆಗೊಳ್ಳುವ ಸ್ವರೂಪದ್ದು. ಅದರ ಚೆಂದ ಅದರದೇ, ಅದರ ಸ್ವಾರಸ್ಯವೇ ಸ್ವಾರಸ್ಯ ! ' ಚಿತ್ರಾಂಗದ ' ಎಂಬುದೂ ಆತ ಬರೆದ ಒಳ್ಳೆಯ ಶೃಂಗಾರಸಾಹಸ ವೃತ್ತಾಂತದ ನಾಟಕ. ಮಿಕ್ಕವು ಆವಿದ್ಧ ಅಥವಾ ದುರಂತ ನಾಟಕಗಳು. ಆವಿದ್ಧಗಳಲ್ಲಿ ' ರಾಜ ಮತ್ತು ರಾಣಿ ', ' ಯಜ್ಞ ' ಎಂಬ ನಾಟಕಗಳನ್ನು ಕವಿ ಭಾಷಾಂತರಿಸಿದ್ದಾನೆ. ಮೊದಲನೆಯದರಲ್ಲಿ ಮೂಲಕ್ಕೂ ಭಾಷಾಂತರಕ್ಕೂ ಬಹಳ ಅಂತರವಿದೆ; ಸ್ತ್ರೀಪಾತ್ರಗಳನ್ನು ಪುರುಷಪಾತ್ರಗಳಿಗಿಂತ ಚೆನ್ನಾಗಿ ನಿರೂಪಿಸಲಾಗಿದೆ: ಕಥಾವಸ್ತುವು ದ್ವಂದ್ವಾರ್ಥ ಶಕ್ತಿಯಿಂದ ಭಾರತವು ಬ್ರಿಟಿಷರ ದಾಸ್ಯದಲ್ಲಿದ್ದುದನ್ನೂ ಅಸಹಕಾರ ಆಂದೋಲನದ ಕಲ್ಪನೆಯನ್ನೂ ಸೂಚಿಸುತ್ತದೆ. ಈ ನಾಟಕ ಬರೆದ ಒಂದು ತಲೆಮಾರಿನ ಬಳಿಕ ಗಾಂಧಿಯವರು ಆ ಆಂದೋಲನವನ್ನು ಆರಂಭಿಸಿದರು. ರವೀಂದ್ರನ ನಾಟಕಗಳು ಹೆಚ್ಚಾಗಿ ವಿಚಾರಪ್ರಧಾನವೆಂಬುದಕ್ಕಿದೊಂದು ನಿದರ್ಶನ ! ಎಷ್ಟೋ ಸಲ ವಿಚಾರಗಳ ಒತ್ತಡವು ಘಟನಾವಳಿಯ ಗತಿಯನ್ನು ವಿರೋಧಿಸುತ್ತದೆ; ಆದರೂ ನಾಟಕಗಳ ಸಹಜ ಸ್ವರೂಪ ಕೆಟ್ಟಿರುವುದಿಲ್ಲ. ಒಂದು ನಾಟಕದಲ್ಲಿಯ ಒಂದೆರಡು ಪಾತ್ರಗಳ ಹೃದಯ, ಬುದ್ಧಿ, ಮಾತುಗಳಲ್ಲಿ ಇಡೀ ನಾಟಕದ ಹುರುಳು ಅಡಗಿರುವ ಸಂದರ್ಭಗಳು ಹೆಚ್ಚು. ಪಾತ್ರಗಳಲ್ಲಿ ವಿಶಿಷ್ಟತೆ ಕಡಿಮೆ.

' ಯಜ್ಞ '(=ಬಲಿದಾನ)ದಲ್ಲಿ ನಾಟಕೀಯ ರಸಸಿದ್ಧಿ ಉನ್ನತವಾಗಿ ಇದ್ದರೂ ತಂತ್ರ ಅಷ್ಟೇನೂ ಚೆನ್ನಾಗಿದೆ ಎನ್ನಲು ಬರುವಂತಿಲ್ಲ. ಇದರಲ್ಲಿ ಪಶುಯಜ್ಞ ಮತ್ತು ಮೂರ್ತಿಪೂಜೆಗಳ ವಿಡಂಬನೆಯನ್ನು ಸಮರ್ಥವಾಗಿ

ಮಾಡಲಾಗಿದೆ. ಇಲ್ಲಿ ರವೀಂದ್ರನು ರಾಮಮೋಹನ ರಾಯರಿಗಿಂತಲೂ ಹೆಚ್ಚು ಆವೇಶವುಳ್ಳ ಸಮಾಜಸುಧಾರಕನಾಗಿ ತೋರುತ್ತಾನೆ."

"ಅಲ್ಲರೀ — ಮಹಾಕವಿಗಳಾದವರು ಚೆನ್ನಾಗಿಲ್ಲದ ಕೃತಿಗಳನ್ನೂ ಬರೆದಿರುತ್ತಾರೆಯೇ ?"

"ಅಲ್ಲವೇ—ಮಹಾಕವಿಯು ಮಹಾ ಆಗೋದು ಹೋಗಲಿ, ಕವಿಯಾದರೂ ಆಗಿರ್ತಾನೆಯೇ ಹುಟ್ಟುವಾಗಲೇ ? ಯಾವ ಮರದಲ್ಲಾದರೂ ಒಂದೇ ಸಲ ಹಣ್ಣುಗಳೇ ಆಗಿದ್ದನ್ನು ನೀನೆಲ್ಲಾದರೂ ನೋಡಿರುವೆಯಾ ? ಮೊದಲು ಮಿಡಿ, ಆಮೇಲೆ ಕಾಯಿ, ಆಮೇಲೆ ಹಣ್ಣು —ಎಂಬುದೇ ನಿಸರ್ಗನಿಯಮವಲ್ಲವೆ? ಹಾಗೇ ಯಾರಾದರೂ ಹುಟ್ಟುವಾಗಲೇ ಮುದುಕರಾಗಿರುತ್ತಾರೆಯೆ ? ಎಂದೂ ಇಲ್ಲ. ರವೀಂದ್ರನಾದರೂ ಮನುಷ್ಯನಾಗಿ, ಕವಿಯಾಗಿ ಅನಂತರ ಮಹಾಕವಿಯಾದವನು. ಅವನಿಗೆ ಹೇಗೋ ಹಾಗೇ ಅವನ ಕೃತಿಶಕ್ತಿಗೂ ಬಾಲ್ಯ, ಕೌಮಾರ, ಯೌವನ, ಮಧ್ಯವಯಸ್ಸು ಮತ್ತು ವಾರ್ಧಕ್ಯಗಳೆಂಬ ಬೆಳವಣಿಗೆಯ ಹಂತಗಳಿರುವುದು ಸಹಜ. ಆದ್ದರಿಂದಲೇ ಮಹಾಕವಿತ್ವದ ಕಿಡಿಗಳಿದ್ದರೂ ಕೆಲ ಕೃತಿಗಳಗಲ್ಲಿ ಅದು ಇಡಿಯಾಗಿ ಹಿನ್ನೆಲೆಯಲ್ಲಿ ನಿಂತು ಅವುಗಳನ್ನು ರೂಪಿಸಲಿಲ್ಲ.

೪. ರವೀಂದ್ರನ ಸಾಹಿತ್ಯಸಾಧನಾಯುಗ

“ ರವೀಂದ್ರನ ಅಣ್ಣ ಜ್ಯೋತೀಂದ್ರನಾಥನೊಬ್ಬ ಅಪ್ರತಿಮ ರಾಷ್ಟ್ರಭಕ್ತ. ಅವನು ಅಂತರ್‌ದೇಶೀಯ ನೌಕಾಯಾನದ ಕಂಪನಿಯೊಂದನ್ನು ನಡೆಸುತ್ತಿದ್ದನು. ಆಗ ಯೂರೋಪಿಯನ್ನರ ಕಂಪೆನಿಗಳೊಡನೆ ಪೈಪೋಟಿ ನಡೆಸಬೇಕಾಗಿ ಬಂದು ಅವನು ಅದರಲ್ಲಿ ಸೋತನು; ಅನಂತರ ಆ ಉದ್ಯೋಗವನ್ನೇ ಬಿಟ್ಟುಕೊಟ್ಟನು. ಹಿರಿಯ ಅಣ್ಣನಾದ ದ್ವಿಜೇಂದ್ರನಾಥನು ವೇದಾಂತಪರನೆಂದೂ ವ್ಯವಹಾರಕ್ಕೆ ತಕ್ಕವನಲ್ಲವೆಂದೂ ನಿಶ್ಚಯಿಸಿ, ರವೀಂದ್ರನ ತಂದೆ ‘ ನೀನೇ ಈಗ ಮನೆತನದ ಆಸ್ತಿಯ ಮೇಲ್ವಿಚಾರಕನಾಗು ’ ಎಂದು ಅವನಿಗೆ ಹೇಳಿದರು. ‘ ಇದು ನನ್ನ ಕೆಲಸವಲ್ಲ ’ ಎಂದು ಮೊದಲು ಬುಸುಗುಟ್ಟಿದರೂ ಆಮೇಲೆ ಆ ಹೊಣೆಯನ್ನು ಹೊರಲು ಆತ ಒಪ್ಪಿಕೊಂಡನು. ಶೈಲೀಡವು ಅವನ ಮನೆತನದ ಜಮೀನು ಗಳಿರುವ ಸ್ಥಳದ ಒಂದು ಕೇಂದ್ರ. ಇದು ೧೮೯೦ರ ಸಮಯ. ಈ ನಡುವೆ ರವೀಂದ್ರನು ಇಂಗ್ಲೆಂಡಿಗಿನ್ನೊಮ್ಮೆ ಹೋಗಿಬಂದ; ಬಂದಕೂಡಲೇ ಪದ್ಮಾ ನದಿಯ (=ಗಂಗೆಯು: ಬ್ರಹ್ಮಪುತ್ರ ನದಿಯೊಡನೆ ಸೇರುವಲ್ಲಿ) ದಂಡೆಯ ಮೇಲಿನ ಶೈಲೀಡಕ್ಕೆ ಪ್ರಯಾಣ ಬೆಳೆಸಿದ. ಕಲಕತ್ತೆಗದು ಹತ್ತಿರ. ಪ್ರವಾಸವು ದೋಣಿಯಲ್ಲಿ. ಕಾಲಿಗ್ರಾಮುವೆಂಬ ಸ್ಥಳವನ್ನವನು ಈ ಸಂದರ್ಭದಲ್ಲಿ ಅನೇಕ ಸಲ ಸಂದರ್ಶಿಸಿದ. ಈ ಜಲಪ್ರವಾಸದ ದೆಸೆಯಿಂದ ರವೀಂದ್ರನಲ್ಲಿ ಗಂಗಾನದಿಯ ಮೇಲೆ ಅಪಾರವಾದ ಪ್ರೇಮ ಉಂಟಾಯಿತು. ಈ ಕಾಲದಲ್ಲಿ ಅವನು ಅನೇಕ ನಾಟಕ, ಪದ್ಯ, ಸಣ್ಣಕತೆ, ವಿಡಂಬನ, ವಿಮರ್ಶೆ, ಪ್ರಬಂಧ ಮತ್ತು ಖಾಸಗಿ ಪತ್ರಗಳನ್ನು ಬರೆದನು.

ಆಗ (Neo-Hinduism) ಹೊಸ ಹಿಂದು ಧರ್ಮವು ಬಂಗಾಳದಲ್ಲಿ ಉದಯಿಸುತ್ತಿತ್ತು. ನಂಬಲರ್ಹವಾದ ಅಸಂಖ್ಯ ಧಾರ್ಮಿಕ ಅತಿಮಾನುಷ ಕತೆಗಳಿಗೆಲ್ಲಾ ಆಧುನಿಕ ವೈಜ್ಞಾನಿಕ ಅರ್ಥಗಳನ್ನು ಮಾಡಿ ಹೇಳುವ ಗುಂಪು ತಲೆಯೆತ್ತಿತ್ತು. ಅಂಥ ವಿಜ್ಞಾನಾಭಾಸಕ್ಕೆ ‘ ನವಜೀವನ ’ ಪತ್ರಿಕೆಯು ಪ್ರಕಟನಸಾಧನವಾಗಿತ್ತು. ನವಜೀವನದ ಆಂದೋಲನವನ್ನು ನಮ್ಮ ಕವಿ ಬಲವಾಗಿ ಪ್ರತಿಭಟಿಸಿದ. ಶೈಲೀಡದಲ್ಲಿದ್ದಾಗ ಆತನು ಮೊದಮೊದಲು ಹೊರ

ರಾಜಕಾರಣದಿಂದ ದೂರ ಇದ್ದನು ; ಆತನ ವಾದಪ್ರತಿವಾದಗಳಿಗೆ ಸಮಾಜ, ಮತಧರ್ಮ ಮತ್ತು ಸಾಹಿತ್ಯಗಳೇ ಮುಖ್ಯ ಲಕ್ಷಣಗಳಾದವು. ಕೆಲ ಸಮಯ ಉದ್ದಕ್ಕೂ ಕಠೋರ ಮೌನವನ್ನೂ ಅವನು ವಹಿಸಿದ್ದುದುಂಟು. (Theosophy) ದೇವತಾಜ್ಞಾನದ ಪಂಥವೂ ಅವನಿಗೆ ಹಿಡಿಸುತ್ತಿರಲಿಲ್ಲ. ಏಕೆಂದರೆ ಅದಕ್ಕೂ ನವಹಿಂದು ಚಳವಳಕ್ಕೂ ನಿಕಟವಾದ ಸಂಬಂಧವಿತ್ತು. ಜನಪ್ರಿಯ ಹಿಂದು ಮತದಲ್ಲಿಯ ಹಲವಾರು ರೂಢಿ-ಸಂಪ್ರದಾಯಗಳು ಅವನ ತಲೆ ಕಾಯಿಸಿದವು. ಶಾಕ್ತ ಪಂಥಕ್ಕವನು ಕಡುವಿರೋಧಿಯಾಗಿದ್ದನು. ಏಕೆಂದರೆ ಅದು ಸಾಕ್ಷಿ ಪ್ರಜ್ಞೆ ಇಲ್ಲದ ಶಕ್ತಿಯ ಅಂಧ ಆರಾಧನೆಯಾಗಿತ್ತು. ಸಾಕ್ಷಿಯು ನಮ್ಮ ನೀತಿ ಬುದ್ಧಿಯ ಪವಿತ್ರತಮವಾದ ಕೇಂದ್ರ. ಆತ್ಮಸಾಕ್ಷಿಗೆ ಸ್ಥಳವಿಲ್ಲದ ವ್ಯಕ್ತಿಯೂ ಒಂದೇ, ಶಕ್ತಿಯೂ ಒಂದೇ. ಅದೊಂದು ಅರೆ!

ಆಗ ಸುಧೀಂದ್ರನಾಥ ಠಾಕೂರರು ಸಂಪಾದಿಸುತ್ತಿದ್ದ 'ಸಾಧನಾ' ಎಂಬ ಪತ್ರಿಕೆಯ ಮುಕ್ಕಾಲು ಭಾಗವನ್ನು ತುಂಬಿಸಿಕೊಡುತ್ತಿದ್ದುದು ನಮ್ಮ ಕವಿಯೇ. ಅದರ ನಾಲ್ಕನೇ ಸಂಪುಟದ ಹೊಣೆಯನ್ನು ರವೀಂದ್ರನೇ ಸಂಪೂರ್ಣವಾಗಿ ವಹಿಸಿಕೊಂಡನು. ಹಣಕಾಸಿನ ಮುಗ್ಗಟ್ಟಿನಿಂದ ಅನಂತರ ಆ ಪತ್ರಿಕೆಯನ್ನು ನಿಲ್ಲಿಸಬೇಕಾಗಿ ಬಂತು (೧೮೯೫). ಆ ನಾಲ್ಕು ವರ್ಷದಲ್ಲಿ ರವೀಂದ್ರನ ಪತ್ರಿಕಾ ವ್ಯವಸಾಯದ ಕಲಾಶಕ್ತಿಯು ಉಜ್ವಲವಾಗಿ ಬೆಳಗಿತು. ಅಂದು ಅವನು ಬರೆಯಲೆತ್ತಿಕೊಳ್ಳದ ವಿಷಯವೇ ಇರಲಿಲ್ಲವೆನ್ನಬಹುದು."

"ಅರೆ, ಅರೆ, ಅರೇ ! ರವೀಂದ್ರನು ಅಂಥ ಸರ್ವಜ್ಞನಾಗಿದ್ದನೇ ?"

"ಒಂದು ದೃಷ್ಟಿಯಿಂದ ಸ್ವಲ್ಪಮಟ್ಟಿಗೆ ಅವನಲ್ಲಿ ಸರ್ವಜ್ಞತ್ವವು ಮೊಳಕೆ ರೂಪದಲ್ಲಿ ತಲೆದೋರಿತ್ತೆನ್ನಬಹುದು. ಅಂಥ ವಿಚಿತ್ರವಾದ ಹೃದ್ಬುದ್ಧಿಗಳ ಸಮತೋಲವು ಜಗತ್ತಿನ ಕೆಲವೇ ಮಹಾಶಯರಲ್ಲಿ ಕಂಡುಬಂದಿದೆ. ಜೀವನಕ್ಕೆ ವಾಸ್ತವಿಕವಾಗಿ ಸಂಬಂಧಿಸಿದ ಎಲ್ಲ ವಿಷಯಗಳ ಅಂತಃಸೂತ್ರವನ್ನೂ ಸಾಮಾನ್ಯಮಟ್ಟದಲ್ಲಿ ಅಳೆದು ವರ್ಗೀಕರಿಸುವ ಹರಿತವಾದ ವಿಚಾರಶಕ್ತಿಯು ಕೇವಲ ಬುದ್ಧಿವಂತರಿಗೂ ಇಲ್ಲ, ಕೇವಲ ಹೃದಯವಂತರಿಗೂ ಇಲ್ಲ ; ಬುದ್ಧಿ-ಭಾವನಾಬಲಗಳ ಸಮತೋಲ-ಸಹಕಾರಗಳಿದ್ದವರಿಗಷ್ಟೇ ಇರುತ್ತದೆ. ಇಂಥ ತುಲಾಧಾರಪಟ್ಟವನ್ನು ರವೀಂದ್ರನ ವ್ಯಕ್ತಿತ್ವವು ಆಗ ಏರಿತ್ತು. ಆದುದರಿಂದ ಸರ್ವ ವಿಷಯಗಳ ಸರ್ವ ವಿವರಗಳನ್ನೂ ವೈಜ್ಞಾನಿಕವಾಗಿ ವಿವರಿಸಲಾಗದಿದ್ದರೂ

ಆತನು ಅವುಗಳ ಪ್ರಯೋಜನಸಿಷ್ಠವಾದ ವಾಸ್ತವಿಕ ಮೌಲ್ಯಗಳನ್ನು ವಿವರಿಸಿ, ವಿಶ್ಲೇಷಿಸಿ, ಖಂಡಿಸಿ, ಮಂಡಿಸಿ ಹೇಳಬಲ್ಲವನಾಗಿದ್ದನು ; Jack of all Trades but Master of none—ಎಲ್ಲವನ್ನೂ ಬಲ್ಲ, ಆದರೆ ಯಾವುದರಲ್ಲೂ ಪೂರ್ಣ ಹಿಡಿತವಿಲ್ಲ—ಎಂಬ ನಿಂದೆಗವನು ಗುರಿಯಾಗಲಿಲ್ಲ. ರಾಜಕೀಯ, ಸಾಮಾಜಿಕ ಪ್ರಶ್ನೆಗಳನ್ನಲ್ಲದೆ, ಆರ್ಥಿಕ ಪ್ರಶ್ನೆಗಳನ್ನೂ ತೆಗೆದುಕೊಂಡು ರವೀಂದ್ರನು 'ಸಾಧನೆ'ಯಲ್ಲಿ ಬರೆಯುತ್ತಿದ್ದ. ಹಿಂದಿನ ಹಾಗೂ ಇಂದಿನ ಭಾರತಗಳ ಚಿತ್ರಗಳಲ್ಲಿರುವ ಅಂತರವನ್ನು ಎತ್ತಿತೋರಿಸುವ ಅಭ್ಯಾಸವು ಅವನಿಂದಲೇ ಇತರ ಲೇಖಕರಲ್ಲಿಯೂ ರೂಢಿಗೊಳಿಸಲ್ಪಟ್ಟಿತು. ಅವನ ಪ್ರಕಾರ ಹಿಂದಿನ ಭಾರತವು ಮೌನಗಂಭೀರ ಮತ್ತು ವೈಭವಪೂರ್ಣವಾಗಿದ್ದರೆ ಆಧುನಿಕ ಭಾರತವು ಗಲಭೆಯಿಂದ ಕೂಡಿದ್ದೂ ಕ್ಷುದ್ರ ಗುರಿಗಳನ್ನುಳ್ಳದ್ದೂ ಆಗಿದೆ; ಒಂದು ಧ್ಯಾನಶೀಲವಾಗಿದ್ದರೆ, ಇನ್ನೊಂದು ಧನ-ಸ್ಥಾನ-ಮಾನಗಳಿಗಾಗಿ ಬರ್ಬರರಂತೆ ಮುಗಿದುಬೀಳುವ ಸ್ವಭಾವವುಳ್ಳದ್ದು. ಇಂದಿನ ಭಾರತವೆಂದೂ ಪ್ರಾಚೀನ ಭಾರತಕ್ಕೆ ನ್ಯಾಯವನ್ನು ದೊರಕಿಸಿಕೊಡಲಾರದು : ಒಂದೇ ಅದು ಕ್ರೂರವೂ ಅಜ್ಞಾನಿಯೂ ಆಗಿತ್ತೆಂದು ದೂರುತ್ತಾರೆ—ಅಥವಾ ಮುಗ್ಧವೂ ವಿವೇಕಿಯೂ ಆಗಿತ್ತೆಂದು ಹೊಗಳುತ್ತಾರೆ, ಅಷ್ಟೆ.

ಶೈಲೀಡದಲ್ಲಿದ್ದಾಗ ರವೀಂದ್ರನು ಬಹಳ ಓದುತ್ತಿದ್ದ ; ಆದರೆ ಓದಿ ಓದಿ ಕೂಸುಭಟ್ಟನಂತೆ ಮರುಳನಾಗಲಿಲ್ಲ. ಆತನ ವಿಮರ್ಶೆಗಳ ಸಂಖ್ಯೆ ಕಡಿಮೆ ಆಗಿದ್ದರೂ ಅವು ಬಹಳ ಜಾಗ್ರತೆಯಿಂದ ಬರೆಯಲ್ಪಟ್ಟಿದ್ದವು. ಅವನ ಓದು ಅವನಿಗೆ ವಿಶಾಲದೃಷ್ಟಿಯನ್ನು ಕೊಟ್ಟಿತು. ಅವನು ಬರೆದ 'ಪಂಚಭೂತಗಳ ದಿನಚರಿ' ಎಂಬ ಗ್ರಂಥದಲ್ಲಿ ಅಗ್ನಿ-ಜಲಗಳು ಸ್ತ್ರೀಮಾದರಿಗಳು, ಮಿಕ್ಕ ಮೂರು ಪುರುಷ ಮಾದರಿಗಳು. ಸ್ತ್ರೀಪಾತ್ರಗಳು ಭಾವನಾಮಯವೂ ಕುತೂಹಲಯುಕ್ತವೂ ಆದರೆ, ಪೃಥ್ವಿ, ವಾಯು, ಆಕಾಶಗಳು ಸಂಕುಚಿತ ಸ್ವಭಾವದವೂ ಅಚಲವೂ ಆಗಿವೆ. ಈ ಪಂಚಭೂತಗಳು ಐದು ವಿಭಿನ್ನ ವ್ಯಕ್ತಿತ್ವ ಗಳನ್ನು ಪ್ರತಿನಿಧಿಸುತ್ತವೆ. ಅವು ಚರ್ಚಿಸದ ವಿಷಯಗಳೇ ಇಲ್ಲ!"

"ಅದು ಬಹಳ ಚಮತ್ಕಾರವುಳ್ಳದ್ದೆಂದು ತೋರುವುದಲ್ಲಾ!"

"ಹೌದು, ತುಂಬ ನಾಟಕೀಯ ಸೌಂದರ್ಯವುಳ್ಳದ್ದಾಗಿದೆ. ಕವಿಗೆ ಕೊನೆಯ ತನಕ ಈ ಗ್ರಂಥ ಬಹಳ ಅಚ್ಚುಮೆಚ್ಚಿನದಾಗಿತ್ತು. ಕೊನೆಗಿದು

ಶಾಂತಿನಿಕೇತನದಲ್ಲಿ ಬಂಗಾಳಿಯನ್ನು ಕಲಿಯುವ ವಿದೇಶೀಯ ವಿದ್ಯಾರ್ಥಿಗಳಿಗೆ ಪಠ್ಯಪುಸ್ತಕವೂ ಆಯಿತು.

ಶೈಲೀಡದ ಆವರಣವು ಕವಿಯ ಮನಸ್ಸಿನ ಮೇಲೆ ಬಹುಕಾಲ ನಿಲ್ಲುವಂಥ ಪರಿಣಾಮವನ್ನುಂಟುಮಾಡಿತು. ಎದೆ ತಣಿಸುವ, ಹೃದಯವನ್ನು ಹಗುರುಗೊಳಿಸುವ, ಹಾಯಾಗಿಸುವ ಅವನ ಕವಿತೆಗಳಿಗೆ ಈ ವಿಶಾಲವೂ ಪ್ರಶಾಂತವೂ ನಿರ್ಮಲವೂ ಕಾಂತಿಸಂಪನ್ನವೂ ಆದ ಪ್ರದೇಶದಲ್ಲಿ ವಸತಿನಿಂದದ್ದು ಬಹಳ ಮಟ್ಟಿಗೆ ಕಾರಣ ಎನ್ನಬಹುದು. 'ಹರಿದ ಹಾಳೆಗಳು' ಎಂಬ ಕೃತಿ ಅವನ ಶೈಲೀಡವಾಸವನ್ನು ಚಿತ್ರಿಸಿದೆ.

ಶೈಲೀಡವಾಸದಲ್ಲಿ ರವೀಂದ್ರ ಬರೆದ ಕೆಲವು ಕತೆಗಳಲ್ಲಿ 'ಮಗುವಿನ ಪುನರಾಗಮನ' ಎಂಬುದು ಮೊದಲಿನದು. ಕತೆಗಳೆಲ್ಲಾ ಅನಂತರ 'ಗಲ್ಪ ಗುಚ್ಛ', 'ಹಸಿದ ಕಲ್ಲುಗಳು', 'ಮಾಷಿ', 'ಮುರಿದ ಸಂಬಂಧಗಳು' ಎಂಬಂತಹ ಹೆಸರಿನ ಸಂಕಲನಗಳಲ್ಲಿ ಹೊರಬಿದ್ದವು. ಇವು ಬಂಗಾಳದಲ್ಲಿ ಬಹು ಜನಪ್ರಿಯವಾದವು."

"ರವೀಂದ್ರನು ಒಳ್ಳೆಯ ಕತೆಗಾರನೆಂದು ನಾನು ಚೆನ್ನಾಗಿ ಬಲ್ಲೆ. ಅವನ ಪದ್ಯಗಳಿಗಿಂತ ಕತೆಗಳನ್ನೇ ನಾನು ಹೆಚ್ಚಾಗಿ ಓದಿದವಳು!"

"ಹೆಂಗಸರಿಗೆ ಕತೆಯ ಹುಚ್ಚು ಬಹಳವೆಂದು ತೋರುತ್ತದೆ; ಅಲ್ಲವೆ?"

"ಶ್ರೀ ಅ. ನ. ಕೃಷ್ಣರಾಯರು ಹೇಳಿದ್ದನ್ನು ಕೇಳಿಲ್ಲವೇ? ಹೋಟೇಲುಗಳ ಮಾಣಿಗಳೂ ಹೆಂಗಸರೂ ತಮ್ಮ ಕಾದಂಬರಿಗಳನ್ನೋದಿದಂತೆ ಮತ್ತಾರೂ ಓದಲಿಲ್ಲ—ಎಂದು. ಅವರೇ ಕೃಷ್ಣರಾಯರ ಪ್ರಥಮ ಆಶ್ರಯದಾತರಂತೆ!"

"ಸರಿಯಾಗಿ ಹೇಳಿದ್ದಾರೆ ರಾಯರು: ಹೆಂಗಸರಿಗೂ ಮಕ್ಕಳಿಗೂ ಸಾಮಾನ್ಯರಿಗೂ ಸಾಮಾನ್ಯವಾಗಿ ಇತರ ಸಾಹಿತ್ಯರೂಪಗಳಿಗಿಂತ ಕತೆ ಮತ್ತು ಕಾದಂಬರಿಗಳೇ ಹೆಚ್ಚು ಪ್ರಿಯ. ಮಾನವನಾಗರಿಕತೆಯ ಆದಿಯಿಂದಲೂ ಹೀಗೇ ನಡೆದುಬಂದಿದೆ—ಇನ್ನೂ ಹೀಗೇ ಸಾಗುವುದು. ಇದರ ಮೇಲೆ ನೀನಂತೂ ಕತೆಗಳನ್ನು ಕಬಳಿಸುವ ಬಕಾಸುರ!"

"'ನೂಲಜ್ಜಿಯ ಕತೆಯಲ್ಲಿರುವ ಹಾಗೆ ನೀನು ಸತ್ತಮೇಲೆ ನಿನ್ನ ಹೆಣವನ್ನು ಸುಟ್ಟರೆ ಕತೆಗಳು ಎಳೆ ಎಳೆಯಾಗಿ ಗಳುವಿನ ಬೂದಿಯಂತೆ ಕಾಣಿಸಿಕೊಂಡಾವು' ಅಂತ ನೀವೇ ಒಮ್ಮೆ ಹೇಳುತ್ತಿದ್ದದ್ದು ಜ್ಞಾಪಕವಿದೆಯೇ?"

" ಅಯ್ಯೋ, ನಾನೆಲ್ಲಾದರೂ ನಿನ್ನ ಸಾವನ್ನು ಎಣಿಸಿ ಬದುಕಬಲ್ಲೆನೇ?"

" ಅಲ್ಲರೀ. ನೀವು ಹಾಗೆ ತಮಾಷೆಗಾಗಿ ನನ್ನನ್ನು ಕುರಿತು ಹೇಳಿದ್ದಿರಿ ಅಂದೆ—ನಿಜವಾಗಿಯೂ ಅಲ್ಲ. ನನಗೆ ಗೊತ್ತಿಲ್ಲವೇನು—ನಾನು ೩ ದಿನಗಳು ತವರುಮನೆಯಲ್ಲಿ ಉಳಿದರೆ ನಿಮ್ಮ ೯ ಕಾಗದಗಳು ಅಂಬನಂಬಟ್ಟುವಂತೆ ಬರುತ್ತಿದ್ದುದನ್ನು? ಹೆಂಗಸರಿಗಿಂತ ಗಂಡಸರಿಗೆ ವಿರಹತಾಪ ಹೆಚ್ಚು ಅಂತ ನನಗೆ ಆಗಲೇ ಗೊತ್ತಾದದ್ದು!"

" ಆದರೆ ಹೆಂಗಸರಿಗಿಂತ ಗಂಡಸರಿಗೇ ಪ್ರಣಯಶಕ್ತಿ ಹೆಚ್ಚಿರುವುದೆಂಬುದನ್ನು ನಾನೂ ಆಗಲೇ ಅರಿತದ್ದು! ರಾಯನಿಗೆ ರಾಜ್ಯವಾಗಲಿ, ಹೋಗಲಿ—ನಮ್ಮ ಹೆಂಗಸರು ರಾಗಿಯನ್ನು ಬೀಸಿಕೊಂಡೋ ಬೈರಾಗಿಯನ್ನು ಬೆನ್ನಟ್ಟಿಕೊಂಡೋ ರಾಗ ಮಾಡುತ್ತಲೋ ರಂಪ ಮಾಡುತ್ತಲೋ ತಮ್ಮ ನೂರು ಆಯುಷ್ಯವನ್ನು ಹಾಯಾಗಿ ಕಳೆದುಬಿಡುತ್ತಾರೆ!"

" ಹೌದು—ಗಂಡಸರ ಹಾಗೆ ಎಲ್ಲದಕ್ಕೂ ಯಾರಾದರೂ ತಲೆ ಕೆಡಿಸಿಕೊಂಡು ಕೂಡ್ರುತ್ತಾರೆಯೇ?"

" ಒಪ್ಪಿದೆ; ನಾನಿನ್ನು ಹೆಂಗಸಾಗಲು ಯತ್ನಿಸಿ ಶಾಂತಿಯನ್ನು ಪಡೆವೆ!"

" ಅಯ್ಯೊ, ಸಿಟ್ಟು ಬಂತೇನು? ದಯವಿಟ್ಟು ಕ್ಷಮಿಸಿ."

" ನೋಡಿದೆಯಾ—ಈಗ ನೀನು ಗಂಡಸಾಗಲು ಪ್ರಯತ್ನಿಸಿದೆ; ಇನ್ನು ನನಗೆ ಸಿಟ್ಟಿಲ್ಲ! ರವೀಂದ್ರನಿಗೆ ಜೀವನದೇವತೆಯ ಕಾವಲಿತ್ತಂತೆ; ಹಾಗೆ ನನಗಿನ್ನು ನಿನ್ನ ಕಾವಲು—ಕೇಳು ಹೇಳ್ತೀನೆ:

' ಸೋನಾರ್ ತರಿ (ಚಿನ್ನದ ದೋಣಿ)' ಎಂಬುದು ರವೀಂದ್ರ ಬರೆದ ಒಂದು ಭಾವಗೀತಸಂಗ್ರಹ. ೧೮೯೧-೯೩ರ ನಡುವೆ ಅವು ರಚಿತವಾದವು—ಅಂದರೆ, ಸಾಧನಾ ಪತ್ರಿಕೆಯ ಯುಗಕ್ಕೆ ಸೇರಿದವೆಂಬರ್ಥ. ' ಜೀವನ ದೇವತೆ' ಎಂಬ ಕೃತಿವಸ್ತು ಹೊರಟದ್ದು ಈ ಸಂಗ್ರಹದಿಂದ. ೧೮೯೩-೯೫ರ ನಡುವಣ ಕಾಲದಲ್ಲಿ ಹೊರಟ ' ಚಿತ್ರೆ'ಯಲ್ಲೂ ಈ ವಸ್ತುವಿನ ಪ್ರಭಾವವನ್ನು ಕಾಣಬಹುದು.

ಜೀವನದೇವತೆಯು ಕವಿಯ ವೈಯಕ್ತಿಕ ಜೀವನದ ಅಧಿಷ್ಠಾನದೇವತೆ—ಅಥವಾ ಸ್ವತಃ ಕವಿಯ ವ್ಯಕ್ತಿತ್ವವೆಂದರೂ ಸರಿಯೆ—ಅವನ ಅಂತರಾತ್ಮ, ಅವನ ಭೌತಿಕ ಶರೀರವನ್ನು ಮೀರಿದ ಒಂದು ಶಕ್ತಿ. ಜೀವನದೇವತೆಯು

ದೇವರಲ್ಲ, ಕವಿಯ ಜೀವಾತ್ಮ; ವಿವಿಧ ಶರೀರಗಳಲ್ಲಿ ಹೊಕ್ಕು ಹೊರಟ ವ್ಯಕ್ತಿತ್ವನಿರೂಪಕವಾದ ಚೇತನೆ. ಕವಿಯ ಕರ್ಮದಲ್ಲಿ ಅದು ತನ್ನನ್ನು ತಾನು ಅರಿಯುತ್ತಹೋಗುವುದು; ಅದು ಮಾನಸಿಕ–ಶಾರೀರಿಕ ಜೀವನದ ಅಧಿಪತಿ. ಕವಿಯು ತನ್ನ ಕಾವ್ಯಕರ್ಮದ ಮೂಲಕ ತನ್ನ ಆತ್ಮವನ್ನು ಅಭಿವ್ಯಕ್ತಗೊಳಿಸುತ್ತಾನೆ. ಈ ಅರ್ಥದಲ್ಲಿಯೇ ಅವನು ಸ್ಫೂರ್ತಿಪಡೆಯುವುದು. ಪ್ರತಿಯೊಬ್ಬನ ಜೀವನಕಾರ್ಯಕ್ಕೂ ಇಂಥ ಸ್ಫೂರ್ತಿ ಇರಬಹುದು. ಜೀವನದ ಕರ್ತವ್ಯವನ್ನು ದೈವದತ್ತವೆಂದು ತಿಳಿದು ಎಚ್ಚರಿಕೆಯಿಂದ 'ಅದೆಲ್ಲ ದೇವರ ಸೇವೆ' ಎಂದು ತಿಳಿದು ಮಾಡುತ್ತಹೋಗುವುದರಿಂದ ಮನಸ್ಸಿನ ಮಾಲಿನ್ಯ ತೊಳೆದುಹೋಗಿ ಅದು ಚೊಕ್ಕವಾಗುತ್ತದೆ; ಅದರಿಂದ ಬರುವ ನಮ್ರತೆಯು ಮನುಷ್ಯನನ್ನು ಹುಚ್ಚು ದುರಹಂಕಾರದಿಂದ ಮುಕ್ತಗೊಳಿಸುತ್ತದೆ."

"ರವೀಂದ್ರನು ಭಕ್ತಕವಿ ಎಂಬುದು ಗೊತ್ತು. ಆತನ 'ಗೀತಾಂಜಲಿ' ಜಗತ್ತಿಗದನ್ನು ತಿಳಿಸಿಕೊಟ್ಟಿದೆ."

"ಭಕ್ತನೆಂದರೆ ಸಾಮಾನ್ಯವಾಗಿ ಲೋಕವನ್ನು ತುಂಬಿರುವ ಅಂಥ ಶ್ರದ್ಧೆಯ ಮೂರ್ತಿಯಲ್ಲ; ಉನ್ನತಜ್ಞಾನವುಳ್ಳ, ಯೋಗಪರನಾದ ಭಕ್ತ. ದೇವರು ಮನುಷ್ಯನ ಆತ್ಮದ ಹಿರಿಯ ಅಂಶ; ಅವನು ತನ್ನ ಕಿರಿಯ ಅಂಶಗಳೆಲ್ಲವನ್ನೂ ಹಿರಿಯ ಅಂಶಕ್ಕೆ ಸಂಪೂರ್ಣವಾಗಿ ವಶಪಡಿಸಿಬಿಡುವುದೇ ಪರಮಭಕ್ತಿ—ಎಂಬ ಅರ್ಥದಲ್ಲಿ ರವೀಂದ್ರನು ಭಕ್ತನಲ್ಲದೆ ಇನ್ನಾವ ಅರ್ಥದಲ್ಲೂ ಅಲ್ಲ."

"ಯಾಕೋ ವೇದಾಂತಕ್ಕೇರಿದಿರಲ್ಲಾ ಒಮ್ಮೆಲೇ?"

"ನಾ ಮೊದಲೇ ಹೇಳಿದ್ದೆನಲ್ಲಾ—ನಮ್ಮ ಕವಿಯದು ವೇದಾಂತದ ಗೆರೆ ಪ್ರಧಾನವಾಗಿರುವ ವ್ಯಕ್ತಿತ್ವ—ಎಂದು. ವೇದಾಂತ ಬಂದಕೂಡಲೆ ಹೆದರೋದೇತಕ್ಕೆ? ನಿಜವಾದ ವೇದಾಂತಿಯು ಮಗುವಿನಂತೆ ಮುಗ್ಧ, ದೇವರಂತೆ ಜ್ಞಾನಿ; ತರ್ಕಪಾಂಡಿತ್ಯಗಳಿಂದ ಅವನು ಯಾರನ್ನೂ ಬೆದರಿಸಬಯಸುವವನಲ್ಲ—ಗೆಲುವಿನ ಹುಚ್ಚು ಆತನಿಗಿಲ್ಲ."

"ಅಷ್ಟು ದೊಡ್ಡವನೇನು ನಮ್ಮ ಕವಿ?"

"ಆ ದೊಡ್ಡತನ ಅವನ ಆದರ್ಶ; ಅದರ ಅನೇಕ ಮೆಟ್ಟಲುಗಳನ್ನು ಏರಿ ಅವನು ಇತರ ಸಾಮಾನ್ಯರನ್ನು ಮೀರಿಸಿ, ಪರಿಪಕ್ವ ಜೀವನವನ್ನು ನಡೆಸಿ

ದವನು! ಅವನ ಜೀವನದೇವತೆಯು ವೈಷ್ಣವ ದ್ವೈತವನ್ನು ಔಪನಿಷದಿಕ ಅದ್ವೈತದೊಡನೆ ಬೆಸೆದು ರಚಿತವಾದದ್ದೆಂದು ವಿದ್ವಾಂಸರ ಮತ."

"ಮೊದಲು ಸಂಸಾರಿ ಆಮೇಲೆ ಸಂನ್ಯಾಸಿ' ಅಂದಹಾಗಾಗಲಿಲ್ಲವೇ?"

"ಸ್ವಲ್ಪ ಹಾಗೇ: ಸಾಧನೆಯ ಪೂರ್ವಾರ್ಧದಲ್ಲಿ ದ್ವೈತ, ಉತ್ತರಾರ್ಧದಲ್ಲಿ ಅದ್ವೈತ. ಏಕಕಾಲದಲ್ಲಿ ಯಾರೂ ಎರಡು ಸಂಪೂರ್ಣ ವಿರುದ್ಧ ಸ್ವರೂಪಗಳನ್ನು ತಾಳಲಾರರು. ಆತ್ಮ-ಪರಮಾತ್ಮ ವಿಚಾರದಲ್ಲಿ ಒಮ್ಮೆ ಹಾಗೆ ಒಮ್ಮೆ ಹೀಗೆ ಒಲೆದರೂ ಔಪನಿಷದಿಕವೂ ಮಾನಸಶಾಸ್ತ್ರೀಯವೂ ಆದ ತಲ್ಲೀನತೆಯ ರಸಾಸ್ವಾದಸೂತ್ರವೇ ರವೀಂದ್ರಸಂಮತ."

'ಚಿನ್ನದ ದೋಣಿ', 'ಚಿತ್ರೆ' ಎಂಬ ಕೃತಿಗಳಂತೆಯೇ 'ಸ್ವರ್ಗಕ್ಕೆ ಬೀಳ್ಕೊಡುಗೆ' ಎಂಬುದನ್ನೂ ಕೆಲವರು ಜೀವನದೇವತಾಪ್ರಭಾವಕ್ಕೆ ಸೇರಿದ್ದೆನ್ನುತ್ತಾರೆ. 'ರಾಕೆ' ಎಂಬ ಪದ್ಯವೂ ಹಾಗೇ ಬಹಳ ಆಕರ್ಷಕವಾಗಿದೆ; 'ಊರ್ವಶಿ' ಎಂಬುದಂತೂ ಅದ್ಭುತರಮ್ಯವಾದ ಪದ್ಯ! ರವೀಂದ್ರನ ಪ್ರಾಕೃತಿಕ ಪದ್ಯಗಳ ಯುಗವಿದು; ಅವುಗಳಲ್ಲಿಯ ರತ್ನಪ್ರಾಯವಾದ ಪದ್ಯಗಳಿವು! ಈ ಮಾದರಿಯ ಪದ್ಯಗಳಲ್ಲಿ ಇಷ್ಟು ಉತ್ತಮವಾದಂಥವನ್ನು ಅವನು ಆಮೇಲೆ ಬರೆಯಲೇ ಇಲ್ಲವೆನ್ನಬಹುದು. ಜೀವನ, ವಿಧಿವಿಲಾಸ, ಧಾರ್ಮಿಕ ಚಿಂತನಗಳ ಅತಿಭಾರವೆಂದೂ ಈ ಪದ್ಯಗಳಲ್ಲಿ ಕಂಡುಬಂದಿಲ್ಲ."

"ರೀ—ಒಂದು ಸಂಶಯ: ಗಂಡುಕವಿಗಳು ಪ್ರಕೃತಿಯ ವಸ್ತು, ಪಾತ್ರ, ಸಂನಿವೇಶಗಳಲ್ಲಿ ಅನೇಕವನ್ನು ಸ್ತ್ರೀರೂಪ ಕೊಟ್ಟು, ಹೊಗಳುವುದೇಕೆ?"

"ಈ ಪ್ರಶ್ನೆಗೆ ರವೀಂದ್ರನ ಇಳಿವಯಸ್ಸಿನ ಪಕ್ವಾಭಿಪ್ರಾಯವೇ ಉತ್ತರ: ಗಂಡಸರು ಹೆಂಗಸರನ್ನು ಚಿತ್ರಿಸುವುದು ಸ್ವಾಭಾವಿಕ; ಅಂಥ ಚಿತ್ರಗಳಲ್ಲಿ ಹೆಚ್ಚಾಗಿ ಹೆಂಗಸರ ದುರ್ಗುಣಗಳನ್ನು ಅಡಗಿಸಿಟ್ಟು ಸದ್ಗುಣಗಳನ್ನೇ ಎತ್ತಿ ಹೊಗಳುವುದೂ ಗಂಡಸರ ಸ್ವಭಾವ. ಹೆಂಗಸರಿಗೇ ಈ ಸ್ವಾಭಾವಿಕತೆಯಿಲ್ಲ; ಅವರು ತಮ್ಮನ್ನೇ ತಾವು ಹೊಗಳಿಕೊಳ್ಳುವ, ಸಿಂಗರಿಸಿಕೊಳ್ಳುವ, ಚಿತ್ರಿಸಿಕೊಳ್ಳುವ, ನೋಡಿಕೊಂಡು ಹಿಗ್ಗುವ ಡಾಂಭಿಕತೆಯನ್ನೇ ಬಹಳ ಸಲ ವ್ಯಕ್ತಪಡಿಸುತ್ತಾರೆ! ಗೊತ್ತಾಯಿತೆ?"

"ಗೊತ್ತಾಯ್ತು, ಗೊತ್ತಾಯ್ತು; ರವೀಂದ್ರ ಹೇಳಿದ್ದೆಂದು ನೀವು ಹೇಳಿದ ತತ್ವಜ್ಞಾನ, ಇದೆಲ್ಲಾ—ನನಗಷ್ಟೂ ಗೊತ್ತಾಗುವುದಿಲ್ಲವೇ?"

" ಹುಚ್ಚಿ ; ಬೇಕಾದರೆ ' ಒಲೆಯ ಮುಂದೆ ಠಾಕೂರ್ ' ಎಂಬ ಪುಸ್ತಕದ ೧೭೩ನೆಯ ಪುಟವನ್ನು ತೆರೆದು ನೋಡು. ರವೀಂದ್ರನೆಂದೂ ಅಸತ್ಯವನ್ನು ಹೇಳಿದ್ದಿಲ್ಲ. ಸಾಮಾನ್ಯ ಪುರುಷರ ಮತ್ತು ಸಾಮಾನ್ಯ ಸ್ತ್ರೀಯರ ದೃಷ್ಟಿಕೋನಗಳಲ್ಲಿಯ ಅಂತರ ಅವನು ಹೇಳಿದಂತೆಯೇ ಇದೆ. ಅಪವಾದಪಂಕ್ತಿಗೆ ಸೇರಿದ ಸ್ತ್ರೀಯರಲ್ಲಿ ನೀನು ಅಗ್ರಗಣ್ಯಳೆಂದು ನಾನು ಎಂದಿನಿಂದಲೂ ಹೇಳುತ್ತ ಬಂದಿಲ್ಲವೇ ? ಆದುದರಿಂದ ನನ್ನ ಮನದನ್ನೆಯಾದ ನಿನಗೆ ಖಂಡಿತ ಬೇಸರ ಆಗಕೂಡದು."

" ಸಾಕು, ಸಾಕು ; ಈ ಬುದ್ಧಿವಂತಿಕೆಯ ಚಮತ್ಕಾರ ನನ್ನ ಮುಂದೆ ನಡೆಯದು."

" ಅಯ್ಯೋ, ಇದು ಬರಿ ಬುದ್ಧಿವಂತಿಕೆಯ ಚಮತ್ಕಾರವೆ? ಕ್ಷಮಿಸು ಹಾಗಾದರೆ : ನಾನಿನ್ನು ನಿನ್ನ ಜಾತಿಯ ಸುದ್ದಿಯನ್ನೆಂದೂ ಎತ್ತುವುದಿಲ್ಲ."

" ನಾನೇನೂ ಸುದ್ದಿ ಎತ್ತಬಾರದೆನ್ನಲ್ಲಿಲ್ಲ; ಎತ್ತಿದರೆ ಯಾವಾಗಲೂ ಇಂಥ ಏನಾದರೊಂದು ಟೀಕೆ ನಿಮ್ಮ ಬತ್ತಳಿಕೆಯಲ್ಲಿ ಇದ್ದೇ ಇರುತ್ತದಲ್ಲಾ— ಎಂಬುದಷ್ಟೇ ನನಗಚ್ಚರಿ ! ಹೆಂಗಸನ್ನು ಹೊಗಳುವ ಸ್ವಭಾವವುಳ್ಳ ಬಹುಸಂಖ್ಯ ಗಂಡಸರ ಪಂಕ್ತಿಗೆ ನೀವು ಅಪವಾದವೇ ಸರಿ ! "

" ಅಪವಾದಸುಂದರಿಗೆ ಅಪವಾದಸುಂದರನಲ್ಲದೆ ಮತ್ತಾವನು ತಕ್ಕ ವರ ? "

" ' ಅಪವಾದ 'ದಿಂದ ಅಪವಾದ ಹೊರಿಸುವ ನಿಮ್ಮ ಮಾತೇ ನನಗೆ ಬೇಸರ ಹುಟ್ಟಿಸುತ್ತದೆ."

" ಬಹಳ ಚೆನ್ನಾಗಿದೆಯಲ್ಲಾ ನಿನ್ನ ಶ್ಲೇಷಾಲಂಕಾರ ! ಬೇಸರ ಅಂದರೆ ಜುಗುಪ್ಸೆ ; ಅದು ಬೀಭತ್ಸವೆಂಬ ರಸಕ್ಕೆ ಸ್ಥಾಯಿ. ಆ ರಸವು ಹೆಂಗಸರಲ್ಲಿ ಕೆಲವರಿಗೆ ಪದೇ ಪದೇ ಪ್ರಿಯ ! ಆದುದರಿಂದ ಅಂಥವರು ಸಂದರ್ಭಾಸಂದರ್ಭ ವಿವೇಕವಿಲ್ಲದೆ ಬೇಕಾದಾಗ ಬೇಸರಪಟ್ಟುಕೊಳ್ಳುತ್ತಾರೆ—ಅಲ್ಲವೆ ? "

" ನಿಮಗೆ ಬೈದರೆ ಸಂತೋಷವಾಗುತ್ತೆಯೆ ? "

" ಬೈಗುಳಕ್ಕೂ ವಿಮರ್ಶೆಗೂ ವ್ಯತ್ಯಾಸ ತಿಳಿಯದಷ್ಟು ದಡ್ಡಳೇನು ನೀನು ? ಬಹಳ ಚೆನ್ನಾಗಿದೆಯಲ್ಲಾ ನಿನ್ನ ನಿಲುವು ! "

" ಈಗ ಮೆಚ್ಚಿದೆ—ನೀವು ನನ್ನ ನಿಲುವನ್ನು ಮೆಚ್ಚಿದ್ದಕ್ಕಾಗಿ."

"ಭೇಷ್; ನಿನ್ನ ವಾದದ ನಿಲುವನ್ನು ನಾನು ವರ್ಣಿಸಿದೆನಲ್ಲದೆ, ನಿಂತ ನಿಲುವನ್ನಲ್ಲ! ಅಲ್ಲ, ಅಲ್ಲ—ಕ್ಷಮಿಸು ಮಹಾರಾಯತಿ, ನೀನು ನಿಂತ ನಿಲುವೂ ಹಾಗೇ ಇದೆ. ಹಿಂದೊಬ್ಬ ಕವಿ ಹೇಳಿದ:

ಆ ಕವಿತೆಯಿಂದೇನು? ಆ ವನಿತೆಯಿಂದೇನು—
ಮನಸೆಳೆಯದಿರೆ ಪದನ್ಯಾಸದಿಂದ?

ಪದನ್ಯಾಸದಂತೆಯೇ ನಿಲ್ಲುವ ನಿಲುವಾದರೂ ಆಕರ್ಷಕ ನಿನ್ನದು: ನಿಷ್ಪಕ್ಷಪಾತದಿಂದ ಹೇಳುತ್ತೇನೆ—ನಂಬುವುದೂ ಬಿಡುವುದೂ ನಿನ್ನ ಇಷ್ಟ."

"ರವೀಂದ್ರನೂ ತನ್ನ ಕವಿತೆಯಲ್ಲಿ ಪದವಿನ್ಯಾಸಕ್ಕೆ ಅಷ್ಟು ಪ್ರಾಧಾನ್ಯವನ್ನು ಕೊಡುತ್ತಾನೆಯೇ?"

"ಓಹೋ; ನವ್ಯಕಾವ್ಯ ಅಥವಾ ಗದ್ಯಪದ್ಯ (Prose-Poems) ಎಂದೆಂದೂ ಶುದ್ಧ ಪದ್ಯಕ್ಕೆ ಸರಿದೊರೆಯೆನ್ನಿಸಲಾರದು — ಎಂದು ಆತ ಕಂಠೋಕ್ತವಾಗಿ ಹೇಳಿದ್ದಾನೆ. ಏಕೆಂದರೆ ನವ್ಯಕಾವ್ಯವನ್ನು ಪದೇ ಪದೇ ಅಹೋರಾತ್ರ ಪುನಃ ಪುನಃ ಹಾಡಿಕೊಂಡು ಮೈಮರೆಯಲು ಯಾರಿಗೂ ಸಾಧ್ಯವಾಗದು; ಅದರಲ್ಲೆಂದೂ ಶುದ್ಧಪದ್ಯದಲ್ಲಿ ದೊರಕುವ ಆನಂದೋನ್ಮಾದ ಸಿಗಲಾರದು. ಯಾರನ್ನು ಬೇಕಾದರೂ ಕೇಳು. ಹೋಗಲಿ — ಮುಂದಿನ ಕತೆ ಕೇಳು:

ರವೀಂದ್ರನಿಗೆ ೩೫ ವರ್ಷ ವಯಸ್ಸಾಗುವ ಹೊತ್ತಿಗೆ ಅವನ ಕಾವ್ಯ ಶೈಲಿಯು ಸ್ಥಿರರೂಪನ್ನು ತಾಳಿತೆನ್ನಬಹುದು. 'ಛೈತಾಲಿ' ಎಂಬುದು ಆಗ ಹೊರಟ ಕವನ ಸಂಗ್ರಹ. 'ಚಿತ್ರಗಳು ಮತ್ತು ಗೀತಗಳು' ಎಂಬುದು ಅದಕ್ಕಿಂತ ಸ್ವಲ್ಪ ಮೊದಲು ಪ್ರಕಟವಾದ ಸಂಗ್ರಹ. 'ತೋಟಿಗ' ಮತ್ತು 'ಕರ್ನ್ಮ' ಎಂಬ ಕೃತಿಗಳು ಕೆಳಗಿನ ವರ್ಗದ ಜನರ ಜೀವನಚಿತ್ರಗಳನ್ನು ಕೊಡುತ್ತವೆ."

"ಆಳುಕಾಳುಗಳನ್ನಿಟ್ಟುಕೊಂಡ ದೊಡ್ಡ ಮನುಷ್ಯನಾಗಿದ್ದ ರವೀಂದ್ರ ಚಿಕ್ಕ ಮನುಷ್ಯರ ಜೀವನದ ಸುಖದುಃಖಗಳನ್ನೇನು ಬಲ್ಲ?"

"ಛೇ ಏನು ಹೇಳುವೆ? ನೀನು ಹೇಳುವುದು ಸಾಮಾನ್ಯ ಶ್ರೀಮಂತರಿಗೆ ಅನ್ವಯಿಸುವ ಮಾತು—ಬಡವ ಬೇಡಿದರೆ, 'ನಿನಗಿಂತ ಬಡವರನ್ನು ನೋಡಿ

ಸಮಾಧಾನಪಟ್ಟುಕೊ’ ಎಂಬ ವೇದಾಂತವನ್ನು ಉಗುಳಿ–ಬೊಗಳಿ, ಕಣ್ಣು ಕೆಕ್ಕರಿಸಿ, ಹುಬ್ಬೇರಿಸಿ ಮನೆಯೊಳಗೇ ಅದೃಶ್ಯರಾಗುವುದು ಜನರಲ್ಲಿರುವ ದೈತ್ಯ ಧರ್ಮದ ಮುಖ್ಯ ಲಕ್ಷಣ. ರವೀಂದ್ರನದು ದೈತ್ಯಶ್ರೀಯಲ್ಲ, ದೇವಶ್ರೀ. ಹೃದಯಮರ್ಮಜ್ಞತೆ ಇಲ್ಲದವ ಕವಿಯೇನು? ‘ಪರೇಂಗಿತಜ್ಞಾನಫಲಾಹಿ ಬುದ್ಧಯಃ’—ಪರರ ಅಂತಃಕರಣದ ಆಳದಲ್ಲಿರುವ ಭಾವಗಳನ್ನು ತಿಳಿಯ ಲಾರದ ಬುದ್ಧಿಗೆ ಬುದ್ಧಿಯೆಂಬ ಹೆಸರು ಸಾರ್ಥಕವೆ? ಪೂರ್ವಜನ್ಮದ ಸಂಸ್ಕಾರ ರವೀಂದ್ರನಿಗೆ ಆ ಬಗೆಯ ವಿಜ್ಞಾನಪ್ರಜ್ಞೆಯನ್ನು, ಪ್ರತಿಭಾಪ್ರಕಾಶವನ್ನು ಒದಗಿಸಿಕೊಟ್ಟಿರುವಾಗ ಶ್ರೀಮಂತಿಕೆ ಎಷ್ಟಿದ್ದರೂ ಅವನ ಬುದ್ಧಿಗೆ ಕುತರ್ಕವನ್ನು ಕಲಿಸುತ್ತಿದ್ದಿಲ್ಲ. ಇನ್ನು ನಿಜವಾಗಿಯೂ ಆತ ಬಹಳ ದೊಡ್ಡ ಶ್ರೀಮಂತನೆಂದು ಗಣಿಸುವಂತೆಯೂ ಇದ್ದಿಲ್ಲ. ಆದುದರಿಂದ ತನ್ನ ಮನೆಯ ಆಳುಕಾಳುಗಳ ಮತ್ತು ಸುತ್ತುಮುತ್ತಲಿನ ಬಡಬಗ್ಗರ ಹೃದಯಾಕಾಶದಲ್ಲಿ ಓಡಾಡುವ ಭಾವಶಕ್ತಿಗಳ ಇತಿಮಿತಿಗಳನ್ನೂ ಲಕ್ಷಣಲಕ್ಷ್ಯಗಳನ್ನೂ ಸೂಕ್ಷ್ಮವಾಗಿ ಅವನು ಅರಿತಿದ್ದನು. ಅರಿವಿಲ್ಲದ ಯಾವ ಕೃತಿ ಅಮರವಾಗಬಲ್ಲದು? ‘Empathy ಅಥವಾ ರಸಾತ್ಮಕ ಭಾವಸಾದ್ವೈತ’ ಎಂಬುದೇ ಕವಿಹೃದಯದ ದಿವ್ಯಲಕ್ಷಣ. ಅದರ ದೆಸೆಯಿಂದ ಕವಿಯು ಸುತ್ತುಮುತ್ತಲಿನ ಜೀವಿಗಳ ಭಾವ–ಭಾವನೆಗಳಲ್ಲಿ ಸಮರಸನಾಗಿ ಅವವುಗಳ ಸಹಜ ದೃಷ್ಟಿಕೋನಗಳನ್ನು ತನ್ನಲ್ಲಿ ಆರೋಪಿಸಿ ಕೊಂಡು ಜಗತ್ತನ್ನು ನೋಡಬಲ್ಲನು. ಬಾಲರಲ್ಲಿ ಬಾಲನಾಗಿ, ವೃದ್ಧರಲ್ಲಿ ವೃದ್ಧನಾಗಿ, ಸ್ತ್ರೀಯಲ್ಲಿ ಸ್ತ್ರೀಯಾಗಿ, ಪುರುಷರಲ್ಲಿ ಪುರುಷನಾಗಿ ಬೆರೆಯಬಲ್ಲ ವ್ಯಕ್ತಿತ್ವವಿರುವುದು ಕವಿಗೇ: ಅವನು ಬಡವರ ನಡುವೆ ಬಡವ, ಸಿರಿವಂತರ ನಡುವೆ ಸಿರಿವಂತ. ಇಷ್ಟೇ ಅಲ್ಲ—ಬಾಲರಿಗೆ ಬೇಕಾದ ವೃದ್ಧ, ವೃದ್ಧರಿಗೆ ಬೇಕಾದ ಬಾಲ, ಸ್ತ್ರೀಗೆ ಬೇಕಾದ ಪುರುಷ, ಪುರುಷನಿಗೆ ಬೇಕಾದ ಸ್ತ್ರೀ, ಬಡವ ಮೆಚ್ಚುವ ಸಿರಿವಂತ, ಸಿರಿವಂತರಿಗೆ ಪ್ರಿಯನಾಗಬಲ್ಲ ಬಡವ—ಎನ್ನಿಸುವಂತೆ ಭಾವಿಕ ಶರೀರಿಯಾಗುವುದೂ ಕವಿಗೆ ಸಾಧ್ಯ. ಈ ಶಕ್ತಿಯಿಲ್ಲದ ಕವಿ ಅರೆಕವಿ, ಅಕವಿ ಅಥವಾ ಕುಕವಿ. ಗೊತ್ತಾಯಿತೇ? ರವೀಂದ್ರನು ವರಕವಿ ಎನ್ನಿಸಲು ಅವನಿಗಿದ್ದ ಈ ಆದರ್ಶ ಮನುಷ್ಯತ್ವದ ಸುವರ್ಣರೇಖೆಯೇ ಕಾರಣ. ರವಿ ಕಾಣದುದನ್ನು ಕವಿ ಯಾವ ಪ್ರಜ್ಞೆಯ ಮಿಂಚಿನಲ್ಲಿ ಕಾಣಬಲ್ಲನೋ ಆ ಮಿಂಚನ್ನೇ ಪ್ರತಿಭೆ ಎಂದೂ ಕರೆಯುತ್ತಾರೆ. ಆ ಒಳನೋಟವು ಒಂದು

'ಎಕ್ಸರೇ' ಇದ್ದ ಹಾಗೆ. ವಸ್ತುವಿನ ಬಿಡಿಸಹಿತವಾದ ಇಡಿಯನ್ನದು ಒಳಹೊಕ್ಕು ನೋಡಿ, ತನ್ನ ಕಲಾಪ್ರಜ್ಞೆಯ ಬಲದಿಂದ ತಿದ್ದಿ, ತನ್ನ ಆಶುಯೋಜನೆಯಂತೆ ರೂಪಿಸಿ, ಪ್ರಕಟಗೊಳಿಸುತ್ತದೆ. ಕೆಳಮಟ್ಟದ ಜನರ ವಿವಿಧ ಮನೋಧರ್ಮಗಳನ್ನು ಒಂದೇ ಒಂದು ನೋಟದಿಂದ ಗ್ರಹಿಸಿ ತಿಳಿದುಕೊಳ್ಳಬಲ್ಲ ರವೀಂದ್ರನು ಆ ಕಾರಣದಿಂದಲೇ ಅವರೆಲ್ಲರಿಗೂ ಸುಪ್ರಿಯನೆನಿಸಿ ಬಾಳಲು ಸಮರ್ಥನಾದದ್ದು."

"ಹಾಗಾದರೆ ರವೀಂದ್ರನನ್ನು ನಿಂದಿಸುವವರೇ ಇರಲಿಲ್ಲವೇ? ಇದ್ದರು; ಆತನ ಮೇಲ್ಮೆಯನ್ನು ಸಹಿಸಲಾರದವರು ನಾನಾ ವಿಧವಾದ ವೈಯಕ್ತಿಕ, ಸಾಹಿತ್ಯಿಕ ಟೀಕೆಗಳನ್ನು ಮಾಡುತ್ತಿದ್ದರು. ಸಾಮಾನ್ಯ ಮನುಷ್ಯರು ಹೋದರೆ ಅವರನ್ನು ಸರಿಯಾಗಿ ಮಾತಾಡಿಸುತ್ತಿರಲಿಲ್ಲ—ಎಂಬಂತಹ ಅಪಪ್ರಚಾರಕ್ಕೆ ರವೀಂಪ್ರನು ತುತ್ತಾಗದೆ ಇರಲಿಲ್ಲ. ಆದರೆ ಇಂಥ ಅಪಲಾಪಗಳು ಆತನ ಕೀರ್ತಿಯನ್ನೆಂದೂ ಕಲಂಕಗೊಳಿಸಲು ಶಕ್ತವಾಗಲಿಲ್ಲ. ಅಂಥ ಮಾತುಗಳನ್ನು ಯಾರಾದರೂ ಅವರ ಕಿವಿಯ ಮೇಲೆ ಹಾಕಿದರೆ ತನ್ನ ಸಹಜ ಹಾಸ್ಯಪ್ರವೃತ್ತಿಯಿಂದ, "ಅಂಥ ರಾಜಠೀವಿ ಒಂದುವೇಳೆ ನನಗಿದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು!" ಎಂದು ಮುಗುಳ್ನಗೆಯಿಂದ ಅವನು ಹಾರಿಸಿಬಿಡುತ್ತಿದ್ದನು."

"ಅಂಥ ಆದರ್ಶಮನುಷ್ಯನ ಆಲೋಚನೆಗಳಿದ್ದರೆ ಸ್ವಲ್ಪ ಹೇಳಬಲ್ಲಿರಾ?"

"'ತೋಟಿಗ'ದಲ್ಲಿ ರವೀಂದ್ರ ಒಬ್ಬ ತಪ್ಪುತಿಳಿವಳಿಕೆಯ ಸಂನ್ಯಾಸಿಯ ಚಿತ್ರವನ್ನು ಕೊಟ್ಟದ್ದು ತುಂಬ ಚೆನ್ನಾಗಿದೆ. ಅವನು ಸ್ವಭಾವತಃ ಸ್ವಾರ್ಥಿ, ಸ್ವಾರ್ಥನಿಷ್ಠವಾದ ಅಪ್ರಯೋಜಕ ಜೀವನವನ್ನು ಸಂನ್ಯಾಸವೆಂದು ಭಾವಿಸಿದ್ದನು.

ಸಂನ್ಯಾಸಿ :

'ನಟ್ಟಿರುಳಿದು, ಬಿಡುವೆ ಮನೆಯ ದೇವನನ್ನು ಹುಡುಕಲು
ವಿಷಯಗಳನ್ನೆದುರು ಹಿಡಿದು ಹಿಡಿದನಾವನೆನ್ನನು?'

ದೇವ :

'ನಿನ್ನ ಬಂಧಿಸಿಟ್ಟವ ನಾ' ಎಂದನು ಆಲಸ್ಯದಿ
ಸಂನ್ಯಾಸಿಯ ಮಂದಕರ್ಣವನ್ನು ಮುಟ್ಟುವಂದದಿ!

ನಿದ್ದೆಯಲ್ಲಿ ಮುಳುಗಿದ ಮಗುವನ್ನೆದೆಗಪ್ಪಿದಳು—
ಅವನ ಪತ್ನಿ ಅತಿಸುಖಮುದದಿಂದ ವಿರಮಿಸಿದ್ದಳು.

ಸಂನ್ಯಾಸಿ :

‘ ನೀನದಾರು, ಮಾಯೆ ಮಾಡಿ ಮುಂದೆ ಬಿಟ್ಟ ಮೋಸವೇ ? ’

‘ ನಾನೆ ’ಂದಾಸ್ವರ ನುಡಿಯಲು ಲಕ್ಷಿಸದೆಯೆ ಆತನು—

‘ ದೊರೆಯೇ ನೀನಾರು ? ’ ಎಂದು ಹೋಗುತ್ತಾ ಕೇಳಿದ.

‘ ಇತ್ತ ತಿರುಗು ’ ಎನಲು ದೇವ ವ್ಯರ್ಥವಾಯಿತಾ ಸ್ವರ.

ಕನಸಿನಲ್ಲಿ ಕಂತಿದ ಮಗು ಕೂಗಿತೊಮ್ಮೆ ಬೆಚ್ಚಿ
ಅಪ್ಪಿತು ಬಿಗಿಯಾಗಿ ತಾಯ ಎದೆಗೆ ತಲೆಯ ಹಚ್ಚಿ.

‘ ತಿರುಗು ’ ಎಂದು ದೇವನಿತ್ತನಾಜ್ಞೆಯನೇನೆನ್ನುವೆ—
ಕೂಗಳತೆಯ ದಾಟಿದ್ದನು ಯೋಗಿಬ್ರುವನಾಗಳೇ.

ದೇವ ಬಿಸುಸುಯ್ದು :

ನನ್ನ ಭಕ್ತ ಹೋದನಲ್ಲ ನನ್ನ ಬಿಟ್ಟು ದೂರ
ಎಲ್ಲಿಗೆಂದು ಯಾವನೂ ನಿಜಾಂಶ ಹೇಳಲಾರ ! ”

“ ಬಹಳ ಚಮತ್ಕಾರವಾಗಿದೆಯಲ್ಲ ಈ ಸಂತಮಹಾರಾಜರ ವೈರಾಗ್ಯ ಪ್ರವೃತ್ತಿ ! ”

“ ಹೌದು ; ಸ್ವಾರ್ಥವನ್ನು ಸಾಧಿಸಲಾಗದವರ ವೈರಾಗ್ಯವನ್ನೇ ಅಭಾವ ವೈರಾಗ್ಯವೆನ್ನುತ್ತಾರೆ.”

“ ಅವನಿಗೆ ಹೆಂಡತಿಯಿದ್ದಳು, ಮಗುವಿತ್ತು — ಅಂದಮೇಲೆ ಅವನಿಗೆ ಯಾವ ಕೊರತೆಯಿತ್ತು ? ವಿದ್ಯೆ-ಧನ ಮುಂತಾದವುಗಳ ಕೊರತೆ ಅವನಿಗೆ ಇತ್ತೆಂದು ಕವಿ ಎಲ್ಲಿಯೂ ಹೇಳಿಲ್ಲ ; ಅವನ ಹೆಂಡತಿಯ ದುರ್ಗುಣವೇನಾದರೂ ಕಾರಣವಾಯಿತೆನ್ನಲು ಅಂಥ ಯಾವುದನ್ನೂ ಉಲ್ಲೇಖಿಸಿಲ್ಲ. ಹೀಗಿರುವಾಗ ಅವನದು ಹೇಗೆ ಅಭಾವವೈರಾಗ್ಯ ? ”

“ ಅದಕ್ಕೇ ನಾ ಹೇಳೋದು—ರಸಿಕತೆಯ ಮರ್ಮಜ್ಞತೆ ಸಾಕಷ್ಟಿಲ್ಲದವರಿಗೆ ಕವಿವಾಣಿಯ ಧ್ವನ್ಯರ್ಥ ಹೊಳೆಯದು—ಎಂದು.”

" ಅಂದರೇನು ? ಹೇಳಿಯಾದರೂ ತಿಳಿಸಬಾರದೇ ? "

" ನೋಡು—ಮನೆ ಬಿಟ್ಟವನ ಮನ ದೇವರಲ್ಲಿ ನಿಲ್ಲಲಿಲ್ಲ ; ಎತ್ತೆತ್ತಲೋ ಹರಿಯುತ್ತಹೋಯ್ತು ; ಪ್ರಯೋಜನವನ್ನು ಕಾಣದೆ ಅಲೆಯಲಾರಂಭಿಸಿತು. ಇದರ ಅರ್ಥವೇನೆಂದರೆ, ಸಾಮಾಜಿಕ ಜೀವನದ ಬಗ್ಗೆ ಅವನಿಗೆ ಬೇಸರ ಉಂಟಾಗಲು ಅದರ ಮೂಲವಾದ ಕೌಟುಂಬಿಕ ಜೀವನದಲ್ಲಿ ಅವನಿಗೆ ಬೇಕಾದಷ್ಟು ತೃಪ್ತಿಯು ಉಂಟಾಗಲಿಲ್ಲ—ಎಂದು. ಏಕೆ ಉಂಟಾಗಲಿಲ್ಲವೆಂದು ಕೇಳಿದರೆ, ಅವನ ಹೆಂಡತಿಯು ಅತಿಸುಖದ ಮದದಿಂದ ಪತಿಯ ಅನುಕೂಲತೆ ಗಳನ್ನು ಒದಗಿಸುವುದರತ್ತ ಸಾಕಷ್ಟು ಲಕ್ಷ್ಯಹಾಕದೆ ' ಉಂಡಾಡಿ ಮಲಗುವ ಗುಂಡಮ್ಮ'ನಾಗಿದ್ದಳು. ಸಮಾಜದ ಪ್ರತಿನಿಧಿಯಾದ ಹೆಂಡತಿ ಅತ್ಯಂತ ನಿಶ್ಚಿಂತಳಾಗಿ, ನಿದ್ರಾಸಮಾಧಿಶೀಲವನ್ನು ಬೆಳೆಯಿಸಿಕೊಂಡಾಗ, ಅಂಥ ಜೀವನ ವ್ಯವಸ್ಥೆಯನ್ನು ಬಿಟ್ಟು, ತನಗೆ ತಕ್ಕ ಮತ್ತೊಬ್ಬಳನ್ನು ಮದುವೆಯಾಗಿ ಸುಖದಿಂದ ಇರುವ ಆಲೋಚನೆಯನ್ನು, ಅದು ಯಶಸ್ವಿಯಾಗದೆಂಬ ನಿರ್ಣಯ ದಿಂದ, ಬದಿಗೊತ್ತಿ—ದಿಕ್ಕುಗಾಣದೆ ದೇವರ ಹೆಸರೆತ್ತಿ, ಆತ ಮನೆ ಬಿಟ್ಟು ಹೊರಟ. ಅದರಿಂದಲೇ ದೇವಭಾವ ಅವನಲ್ಲಿ ಕ್ಷಣಿಕವಾಗಿ ಮೂಡಿದರೂ ಅದು ಅವನಲ್ಲಿ ಸತ್ ಪರಿಣಾಮವೇನನ್ನೂ ಉಂಟುಮಾಡಲಾರದಾಯಿತು. ಇಂಥ ಮಂಕುಸಾಧುತ್ವವನ್ನೇ ಅಭಾವವೈರಾಗ್ಯವೆನ್ನುವುದು ! "

" ಹಾಗಾದರೆ ಅಭಾವವೈರಾಗ್ಯವು ರಾವಣಸಂನ್ಯಾಸವೇನಲ್ಲ ! "

" ಖಂಡಿತವಾಗಿಯೂ ಅಲ್ಲ ; ಆದರೆ ಕ್ರಮೇಣ ಹಾಗಾಗಿ ಪರಿಣಮಿಸಿದರೆ ಯಾರೂ ಆಶ್ಚರ್ಯಪಡಬೇಕಾಗಿಲ್ಲ. ಹಾಗಾದಾಗ ಅಂಥವನನ್ನು ಲೋಕ ನಿಂದಿಸುವುದಲ್ಲದೆ ಕನಿಕರದಿಂದ ನೋಡುವುದಿಲ್ಲ ! "

" ಅಂದರೆ ನಿಮ್ಮ ಪ್ರಕಾರ ಇಷ್ಟೆಲ್ಲ ಅನಾಹುತಕ್ಕೆ ಏನೂ ಅರಿಯದ ಅವನ ಹೆಂಡತಿಯೇ ಕಾರಣ ಎಂದಂತಾಗುವುದಲ್ಲವೇ ? "

" ನಿಜವಾಗಿಯೂ ; ಆದರೆ ನಿನ್ನ ಮತದಂತೆ ಅವಳು ನಿಷ್ಪಾಪ ಜಂತು ಎಂದಲ್ಲವೇ ? "

" ಅಲ್ಲವೇ ? ಅವಳಿಗೆ ಗೊತ್ತಾಗದುದು ಅವಳ ತಪ್ಪೆ ? ಗೊತ್ತಾಗದೆ ಇದ್ದಾಗ ಅವಳ ಗಂಡ ಅವಳಿಗೆ ಹೇಳಿಕೊಡಬಾರದಾಗಿತ್ತೇ ? "

" ಆಗಲಿ, ಒಳ್ಳೆಯದು; ಹೇಳಿಕೊಡಬೇಕೆಂಬುದು ಅವನಿಗೆ ಗೊತ್ತಾಗದೆ ಇರಬಹುದು; ಗೊತ್ತಾದರೂ **ಹೇಗೆ** ಹೇಳಿಕೊಡಬೇಕೆಂಬುದು ಅವನಿಗೆ ಗೊತ್ತಾಗದೆ ಇರಲೂ ಬಹುದು. ಹೀಗಿರುವಾಗ ಮಂಕುಸಾಧುವಾಗಿ ಮನೆ ಬಿಟ್ಟು ಹೊರಟ ಅವನ ಮೇಲೆ ಹೆಂಡತಿ–ಮಕ್ಕಳನ್ನು ನಡುನೀರಿನಲ್ಲಿ ಕೈಬಿಟ್ಟು ಹೋದ ಅಪರಾಧವನ್ನು ಹೊರಿಸಲು ಸಾಧ್ಯವಿಲ್ಲ!"

" ಅರೆ, ಇದೇನೆನ್ನುತ್ತೀರಿ? ಕವಿಗಂತೂ ಈ ಅರ್ಥ ಹೊಳೆದು ಇದನ್ನು ಧ್ವನಿಸಲೆಂದೇ ಹೀಗೆ ಬರೆದನೆಂದು ನನಗೆ ತೋರುವುದಿಲ್ಲ."

" ನಿನ್ನಂಥ ಸುಕುಮಾರಮತಿಗಳು ಪ್ರಾಥಮಿಕ ರಸಿಕರು. ಅವರಿಗೆ ಒಂದು ಮಟ್ಟದ ಅರ್ಥ, ಪ್ರೌಢರಿಗೆ ಅದರ ಮೇಲಿನ ಮಟ್ಟದ ಅರ್ಥ—ಹೀಗೇ ಮಹಾಕವಿಯ ಕೃತಿಗಳು ಪಾಮರ–ಪಂಡಿತರಿಬ್ಬರಿಗೂ ಮೆಚ್ಚಿಗೆಯಾಗುವಂತಾದದ್ದು—ಗೊತ್ತಾಯಿತೇನೇ?"

" ಏನೇನಾದರೂ ತರ್ಕಮಾಡಿದರೆ ಎಂಥ ಅರ್ಥವನ್ನಾದರೂ ಹೊರಡಿಸಬಹುದು!"

" ಏನೂ ತರ್ಕ ಮಾಡದೆ, 'ಮಂಕುಸಾಧುವಿನ ವಿಡಂಬನೆಯಷ್ಟೇ ಉಕ್ತ ಕೃತಿಯ ಉದ್ದೇಶ' ಎಂದು ಹೇಳುವುದೂ ಅತಿ ತರ್ಕಮಾಡಿ 'ಅವನು–ಅವನ ಹೆಂಡತಿ–ಈ ಇಬ್ಬರೂ ನಿರಪರಾಧಿಗಳು, ದೇವರಷ್ಟೇ ತಪ್ಪಿತಸ್ಥ' ಎಂದು ಹೇಳುವುದೂ ಸರಸ್ವತಿಯ ಕೆನ್ನೆಗೆ ಹೊಡೆದ ಹಾಗೆ. ಮಂಕು ಸಾಧುವಿನ ವಿಡಂಬನೆ ವಾಚ್ಯ, ಅವನ ಹೆಂಡತಿಯ ಸ್ವಭಾವದ ಮೇಲೆ ಬೆಳಕು ಬೀರುವುದು ವ್ಯಂಗ್ಯ! ಮಹಾಕೃತಿಗಳು ಯಾವಾಗಲೂ ಮೇಧಾವಿಗಳಿಗೆ ಚಿಂತನಾವಕಾಶವನ್ನು ಕೊಟ್ಟೇ ತೀರುತ್ತವೆ. ಅಂಥ ಅವಕಾಶವನ್ನು ಸ್ವಾಭಾವಿಕವಾಗಿ ಕೊಡದವು ಅಲ್ಪಕೃತಿಗಳು. **ಅತಿಸುಖದ ಮುದದಿಂದ** ಅವಳು ವಿರಮಿಸಿದಳೆಂಬ ಮಾತೇ ಈ ಚಿಂತನಕ್ಕೆ ಅವಕಾಶ ಕೊಡಬಲ್ಲುದು! ಆ ಮಾತನ್ನು ನೋಡದಿರುವುದು ದೃಷ್ಟಿದೋಷವೇ ಸರಿ!"

" ಅದೂ ಸರಿ ಅನ್ನಿ. ನನ್ನಂಥವರಿಗೇನು ತಿಳಿಯುತ್ತೆ?"

" ಹಾಗಲ್ಲವೇ; ವಿಚಾರಮಾಡಿದರೆ ಎಲ್ಲರಿಗೂ ತಿಳಿಯುತ್ತೆ. ರವೀಂದ್ರನು ಪ್ರಖರವಾದ ವಿಚಾರಶಕ್ತಿಯುಳ್ಳವನು. 'ಅನಾವೃಷ್ಟಿ' ಎಂಬ ಅವನ ಪದ್ಯದಲ್ಲಿ ಅವನಿಗೆಷ್ಟು ವಾಸ್ತವಿಕ ದೃಷ್ಟಿಯಿತ್ತು ಎಂಬುದು ಸ್ಪಷ್ಟವಾಗುತ್ತದೆ. ಅವನ ಲೋಕಾನುಕಂಪವು ಇದರಲ್ಲಿ ವ್ಯಂಗ್ಯಶೈಲಿಯ ಮೂಲಕ ವ್ಯಕ್ತವಾಗಿದೆ:

ಓಬೀರಾಯನ ಕಾಲದಲಿ
ದೇವರಾಜ್ಯ ನಡೆಯುತ್ತಿರಲು
ಇಂದ್ರಾದಿಗಳೀ ಮನುಷ್ಯಲೋಕದ
ಹೆಂಗಸರೊಲವಿಗೆ ಮರುಳಾಗಿ
ಬಂದರಂತೆ ಬುವಿಗಿಳಿದಾಕಾಲವು
ಅಂದೇ ಮುಗಿಯಿತು; ಮಳೆಯೇ ಇಲ್ಲದ
ಗದ್ದೆಗಳಿಂದೀಬಗೆಯಿಂದುರಿದಹ
ಸುಟ್ಟುಹೋಗಿಹವು ಬಿರುಬಿಸಿಲಿಂದ!

ವೈಶಾಖದ ಶಾಖ | ಇಂತಿದೆ
ವೈಶಾಖದ ಶಾಖ!
'ಸುರಿಯೋ ಸುರಿಯೋ ಮಳೆರಾಯ'
ಎಂದೊರಲುತ್ತಿಹಳೊಕ್ಕಲುಹುಡುಗಿಯು
ಕಸವಿಸಿಗೊಂಡತಿದುಃಖದಿಂದ ಹಾ
ಹಾರಯಿಸುತ ಮಳೆಬರವ ಪದೇ ಪದೆ
ನೋಡುತ್ತಿಹಳಾಕಾಶವ ಕಂಗಳ
ಎತ್ತಿ ಎತ್ತಿ ಭಗವಂತಗೆ ಮೊರೆಯಿ-
ಟ್ಟೆನ್ನುವಂತೆ ದೀನಾನಾಥೆ!

ಆದರೆ ಬೀಳದು ಮಳೆಹನಿಯೊಂದೂ
ಕಿವುಡುಗಾಳಿ ತಾ ಹಿಂದೂ ಮುಂದೂ
ತಪ್ಪಿ ಉಳಿದ ಕೆಲ ಕಳ್ಳ ಮೋಡಗಳ
ಸುತ್ತಿ ದೂರ ಒಯ್ಯುತ್ತಿಹುದು!
ಉರಿವ ನಾಲಿಗೆಯ ಚಾಚಿಹ ನೇಸರು
ವಾಯುಮಂಡಲದ ತೇವವನೆಲ್ಲಾ
ನೆಕ್ಕಿ ಹೀರುತಿಹನೆಂತಹ ಕಾಲ?—
ಪಾಪದ ಕಾಲ
ಪಾಪದ ಕಾಲ!

ಸಗ್ಗದ ದೇವರು ಮುದುಕರಾಗಿಹರು
ಬುವಿಯ ಹೆಣ್ಣುಗಳ ಪ್ರಾರ್ಥನೆಗೊಲಿಯರು ;
ಕೇವಲ ಮರ್ತ್ಯರೆ ಕೇಳುವ ಗತಿ ಆ
ಪ್ರಾರ್ಥನೆಗೊದಗಿಹುದು !

ಲೋಕದ ಕಷ್ಟಕ್ಕೆ ಕರಗದವನೆಂತು ಕವಿಯಾದಾನು? ಕನಿಕರವಿಲ್ಲದ ಕವಿಯ ಕೃತಿಯೆಂದೂ ಮಹಾಕೃತಿಯೆನ್ನಿಸದು. ಅದು—

‘ ರಂಗು ಇಹುದು ರೂಪವಿಹುದು
ಗಂಧ ಒಳ್ಳಿತಿಲ್ಲವು
ನಯವು ನುಣುಪು ಇದ್ದು ಏನು
ವ್ಯರ್ಥವಾಯಿತೆಲ್ಲವೂ ’

ಎಂಬಂತಾಗದೆ ಹೋಗದು. ‘ ನದೀ ಪ್ರವಾಸ ’ವೆಂಬ ಕವನದಲ್ಲಿ ನದಿಯನ್ನವನು ಬಣ್ಣಿಸಿದ ಕಾವ್ಯಮಯ ಶೈಲಿ ಎಷ್ಟು ಚೆನ್ನಾಗಿದೆ ಗೊತ್ತೇ ?

ಮಳೆಯಿಂದ ಮೈದುಂಬಿ
ನಿಸ್ತರಂಗಿತವಾಗಿ
ತೃಪ್ತ ಶಿಶುವಿನ ಹಾಗೆ
ಮೈಭಾರದಿಂದ
ಮೌನದಲಿ ನಿದ್ರಿಸಿದೆ
ನೋಡೀ ನದಿ ! ”

“ ಅಯ್ಯೋ, ಎಷ್ಟು ಮುದ್ದಾಗಿದೆ ಈ ವರ್ಣನೆ ! ”

“ ನಿಜ; ಪ್ರಾಚೀನ ಭಾರತದ ಯತಿ–ಭೂಪತಿಗಳ ನಾಗರಿಕತೆಯ ಮಹಾವೀರ ಯುಗದ ಬಗ್ಗೆ ಉಂಟಾದ ರವೀಂದ್ರನ ಹೆಮ್ಮೆ ಅವನ ಕೆಲವು ಸುಂದರ ಕೃತಿಗಳಲ್ಲಿ ಕಂಡುಬರುತ್ತದೆ. ಆದರೆ ಅಂದಿನ ರಣವೀರರಿಗಿಂತ ಕ್ರಮೇಣ ಆತನಿಗೆ ನಿಸರ್ಗದ ಮಡಿಲಲ್ಲಿ ಬಾಳಿದ ಜ್ಞಾನವೀರರಾದ ಋಷಿ ಮುನಿಗಳ ಬಗ್ಗೆ ಹೆಚ್ಚು ಆಸಕ್ತಿ–ಆದರಗಳುಂಟಾದದ್ದು ಕಂಡುಬರುತ್ತದೆ. ಭಾರತದ ‘ ಅರಣ್ಯಸಂದೇಶ ’ವನ್ನು ನ್ಯಾಯವಾಗಿ ಎತ್ತಿ ಹೊಗಳಿದ್ದಾನೆ.”

"ಮ್ಯಾಕ್ಸ್‌ಮುಲ್ಲರರಂಥ ಜರ್ಮನ್ ವಿದ್ವಾಂಸರು 'ಭಾರತ ಅಂದು ಒಂದು ತತ್ವಜ್ಞಾನಿಗಳ ರಾಷ್ಟ್ರವಾಗಿತ್ತು' ಎಂದು ಸಾರಿದ್ದನ್ನು ನಾನು ಓದಿದ್ದೆ. ಇಂಥ ದೇಶದಲ್ಲಿ ಹುಟ್ಟಿದ ಪ್ರತಿಭಾವಂತನಾದ ಯಾವ ಸಾಹಿತಿ ತತ್ವಜ್ಞರ ಬಗ್ಗೆ ಅಭಿಮಾನ ತಾಳದೆ ಉಳಿದಾನು? ಅದರಲ್ಲೂ ಪ್ರಕೃತ್ಯಾ ತತ್ವಜ್ಞತೆಯ ಪ್ರಧಾನ ರೇಖೆಯುಳ್ಳ ಮನೋಧರ್ಮ ಕಂಡುಬಂದ ರವೀಂದ್ರ ಕವಿಯ ಎದೆ ಹಾಗೆ ಹಿಗ್ಗದೆಂತು ಇರಬಲ್ಲದು?"

"ಸರಿಯಾಗಿ ಹೇಳಿದೆ; ದಾರ್ಶನಿಕತೆಯ ಸುವರ್ಣರೇಖೆಯು ರವೀಂದ್ರನ ಚಾರಿತ್ರದ ಅಂತಃಸಾರವಾಗಿ ಹುಟ್ಟಿನಿಂದೇ ಬೆಳೆದುಬಂದಿತ್ತು ಎಂಬುದು ನಿಜ. ಅದರಿಂದಲೇ ಅವನ ರಸಜೀವನವು ವಿಜ್ಞಾನಮಯವಾಗಿತ್ತು.

ಸಾಮಾನ್ಯ ಪದ್ಯಗಳಿಗಿಂತ ರವೀಂದ್ರನ ಜನಪ್ರಿಯತೆಗೆ ಅವನ ಗೀತಗಳೇ ಹೆಚ್ಚು ಕಾರಣ. ಅವನು ಬರೆದ ಗೀತಗಳು ಸುಮಾರು ೨೦೦೦ಗಳಷ್ಟಿವೆ. ಅವನ ಕವಿಜೀವನದ ೨ ಅಧ್ಯಾಯಗಳಲ್ಲಿ ಮೊದಲನೆಯದರಲ್ಲಿ ಬರೆದಂಥವು ಸುಮಾರು ೨೦೦. ೨ ರಿಂದ ೬೦ ಪಂಙ್ಕ್ತಿಗಳವರೆಗೂ ಇರುವ ಗೀತಗಳು ಸಿಕ್ಕುತ್ತವೆ. ಅವುಗಳ ವಸ್ತುವಾದರೋ ಸಾರ್ವಕಾಲಿಕ. ಕಿರೀಟ ಧರಿಸಿದ ಶರದ್ರಾಜ್ಞಿ, ನರ್ತಿಸುವ ವಸಂತ, ಋತುಗಳು, ಪರಿವರ್ತನಶೀಲೆಯಾದ ಪೃಥಿವಿ, ದೋಣಿಯವ ಮತ್ತು ಹೊಳೆ, ಮಳೆ, ಹೂ, ಹಕ್ಕಿ, ಕಂಬನಿ, ನಗೆ, ಪ್ರಿಯನು ಪ್ರೇಯಸಿಗಾಗಿ—ಪ್ರೇಯಸಿ ಪ್ರಿಯನಿಗಾಗಿ ಕಾದಿರುವುದು ಮುಂತಾದ ವಸ್ತುಗಳನ್ನು ಸುಲಭವಾದ ಸುಮಧುರ ಶೈಲಿಯಿಂದ ರವೀಂದ್ರ ಬರೆದುದು ಕೇವಲ ಕಲಾಕೌಶಲದಿಂದ ಎನ್ನಲು ಬಾರದು; ಅದಕ್ಕೂ ಮೇಲುಮಟ್ಟದ ಅಂತಃಶಕ್ತಿಯಿಂದ ಎನ್ನಬೇಕು. ಕೆಲವು ಸಲ ಆತನ ಕೆಲವು ಗೀತಗಳು ತಮ್ಮ ಶಬ್ದಶಕ್ತಿಯಿಂದ ಜನಪ್ರಿಯವಾದವೋ ಅಥವಾ ನಾದಶಕ್ತಿಯಿಂದಲೋ ಎಂಬುದನ್ನು ಹೇಳುವುದು ಕಷ್ಟ. ಎಷ್ಟೋ ಸಲ 'ರಾಗ ರಸ, ಪದ ಕಸ' ಎಂಬ ಗಾದೆಯಂತಾದದ್ದೂ ಉಂಟು. 'ನಾನು ನನ್ನ ಜನವನ್ನು ನನ್ನ ಗೀತದಿಂದ ಗೆದ್ದಿದ್ದೇನೆ' ಎಂದು ರವೀಂದ್ರ ಹೇಳಿದ್ದು ಸಾರ್ಥಕವಾಗಿದೆ."

"ಅದರಿಂದಲೇ ಅವನ ಜಗತ್ಪ್ರಸಿದ್ಧಿಯು 'ಗೀತಾಂಜಲಿ'ಯಿಂದಲೇ ಆರಂಭವಾಯಿತಲ್ಲವೆ?"

"ಹೌದು; ಅವನೊಬ್ಬ ಗೀತಗಂಧರ್ವನೇ ಸರಿ; ಗೀತಕಲೆಯಲ್ಲಿ ಅವನು ಐಂದ್ರಜಾಲಿಕನೇ ಸರಿ. ಆತನ ಬ್ರಾಹ್ಮಸಂಗೀತವು ಬ್ರಾಹ್ಮಸಮಾಜದವರ ಮನೆಮಾತಾಯ್ತು. ಅವನ ಲೌಕಿಕ ಗೀತಳಷ್ಟೇ ಈ ವೈದಿಕ ಗೀತಗಳೂ ಜನಪ್ರಿಯವಾಗಿದ್ದವು. ಹೆಚ್ಚು ಹೇಳುವುದೇಕೆ? ಟಾಂಗಾದವರಿಂದ ಹಿಡಿದು ಪದವೀಧರರವರೆಗಿನ ಬಂಗಾಳಿ ಜನವರ್ಗಗಳಲ್ಲಿ ಆತನ ಹಾಡುಗಳನ್ನು ಹಾಡದವರಿಲ್ಲ. ಔಷಧ ಮಾರುವವರು ಸಹ ಅವನ ಗೀತಗಳನ್ನು ಜಾಹೀರಾತಿ ಗಾಗಿ ಬಳಸುತ್ತಿದ್ದರು!"

"ಸಿನೆಮ ಹಾಡುಗಳನ್ನು ಮೀರಿಸಿದ ಜನಪ್ರಿಯತೆ ರವೀಂದ್ರನ ಹಾಡು ಗಳಿಗೆ ದೊರೆತದ್ದು ಅದ್ಭುತವೇ ಸರಿ. ಆದರೆ ಬಹುಶಃ ಅದು ಬಂಗಾಳದಲ್ಲಿ ನಡೆಯಲು ಸಾಧ್ಯವಾಯ್ತು. ಮೈಸೂರಿನ ಎಷ್ಟೋ ಪ್ರದೇಶಗಳಲ್ಲಿ ಮಕ್ಕಳನ್ನು ತೂಗುವ ಹಾಡುಗಳನ್ನು ಕೂಡ ಈಗ ಕೇಳುವುದು ಕಷ್ಟ! ನಮ್ಮ ಊರಿನ ಶಿಕ್ಷಿತ ರಸಿಕರ ರಸೋಪಾಸನೆ ನಮಗೆ ಗೊತ್ತಿಲ್ಲವೆ? ಅಂತೂ ರವೀಂದ್ರನು ಪುಣ್ಯಾತ್ಮನೇ ಸರಿ!"

"ರವೀಂದ್ರನ ಗೀತಾಂಜಲಿಯ ಜೊತೆಗೇ ಬರುವ ಗೀತಸಂಗ್ರಹಗಳೆಂದರೆ 'ಗೀತಮಾಲ್ಯ' ಮತ್ತು 'ಗೀತಾಲಿ'. ಇಲ್ಲಿಯವರೆಗೆ ಬರೆದ ಗೀತ, ನಾಟಕ, ಪದ್ಯ ಮುಂತಾದ ಎಲ್ಲ ಕೃತಿಗಳಲ್ಲಿಯೂ ಭಾವಗೀತಧರ್ಮವು ಒಳಸೂತ್ರ ವಾಗಿತ್ತು. ಚಿತ್ರಾಂಗದೆ, ಮಾಲಿನಿ, ಚಿನ್ನದ ದೋಣಿ ಅಥವಾ ಸುವರ್ಣ ನೌಕೆ, ಮಾನಸಿಗಳು ಭಾವಗೀತಧರ್ಮದ ಅಂತರ್‌ಧ್ವನಿಯುಳ್ಳವು. 'ಚೈತಾಲಿ' ಮತ್ತು 'ಚಿತ್ರಗಳು ಮತ್ತು ಗೀತಗಳು' ಎಂಬ ಕೃತಿಗಳಲ್ಲಿ ಕವಿಯ ವರ್ಣನ–ವಿವೇಚನಶಕ್ತಿಗಳು ಎದ್ದುಮೂಡಿವೆ; ಅಷ್ಟೇ ಅಲ್ಲದೆ ಅಲ್ಲಲ್ಲಿ ಗೀತಧರ್ಮವೂ ಬೆರೆತುಕೊಂಡಿದೆ. ಬರಬರುತ್ತ ಅವನ ಗೀತಭಾವದೊಡನೆ ಸಾಮಾನ್ಯರ ನಿತ್ಯ ಜೀವನದ ಸುಖದುಃಖಗಳಲ್ಲಿ ಭಾಗಿಯಾಗುವ ಸಹಾನುಭೂತಿ ಗುಣವೂ ಕೃತಿಗಳಲ್ಲಿ ಬಿಂಬಿಸಲ್ಪಡಲಾರಂಭಿಸಿದ್ದು ಸ್ಪಷ್ಟವಾಗುತ್ತದೆ; ಜೊತೆಗೆ ಧಾರ್ಮಿಕ ಅನುಭವದ ಯೋಗಿಸಹಜ ಅರ್ಥ ಹೊಳೆಯುವ ರಚನಾರೀತಿಯೂ ಅವನಿಗೆ ವಿಶಿಷ್ಟವೆಂದು ಜಗತ್ತು ಮೆಚ್ಚಿಕೊಳ್ಳುವಂತೆ ರೂಪಿತವಾಯ್ತು. 'ಕಥೆ', 'ಪಲಾತಕೆ'ಗಳಲ್ಲಿ ರವೀಂದ್ರನ ಕಥನಕವನರಚನೆಯ ಕೌಶಲಕ್ಕೂ ಒಳ್ಳೆಯ ಉದಾಹರಣೆಗಳನ್ನು ಕಾಣಬಹುದು. ಚೈತಾಲಿಯೊಂದಿಗೆ ಒಂದು ಮಾದರಿಯ

ಸತ್ವವಾಹಿನಿಯನ್ನಾಧರಿಸಿದ ಕೃತಿರಚನಾಪದ್ಧತಿಯು ೨೦ ವರ್ಷಗಳಲ್ಲಿ ಕೊನೆ ಮುಟ್ಟುವಂತಾಯಿತು. ಇಲ್ಲಿಂದ ಮುಂದೆ ರವೀಂದ್ರನ ಕವಿಜೀವನದ ಹೊಸ ಅಧ್ಯಾಯ ಆರಂಭವಾಯಿತು.

ರವೀಂದ್ರನ ಮೊದಲ ಸಂಗೃಹೀತ ಕವನಸಂಗ್ರಹ ಅಚ್ಚಾದ್ದು ೧೮೭೬ರಲ್ಲಿ. ಅನಂತರ ೨ ವರ್ಷಕಾಲ ಹೇಳುವಂಥ ಘಟನೆ ಯಾವುದೂ ನಡೆಯಲಿಲ್ಲ. ಬರೆವಣಿಗೆಯೂ ಆಗ ಸ್ಥಗಿತಗೊಂಡಿತು. ೧೮೭೮ರಲ್ಲಿ 'ಭಾರತಿ'ಯ ಸಂಪಾದಕನಾಗಿ, ಒಂದು ವರ್ಷ ಕೆಲಸ ಮಾಡುತ್ತಿದ್ದಾಗ ಅದರ ಅರ್ಧದಷ್ಟು ಸಾಹಿತ್ಯವನ್ನು ರವೀಂದ್ರನೇ ಬರೆದು ತುಂಬಿಸುತ್ತಿದ್ದ. ಆಗ ಬರೆದ ಅವನ ಹೊಳೆ ಅಥದಾ ನದಿ ಎಂಬ ಕವನವು ಅತ್ಯುತ್ತಮವಾದ ಮಕ್ಕಳ ಪದವೆನ್ನಿಸಿತು. ಅದರಲ್ಲಿ ಭೂಗೋಲಶಾಸ್ತ್ರದ ಮೂಲ, ಪ್ರಕೃತಿವಿಮರ್ಶೆಯ ಬುಡ, ಕೃಷಿ-ಅರ್ಥಶಾಸ್ತ್ರಗಳ ತಳಹದಿಗಳು ಅಡಗಿದ್ದವು. ಅದರ ಶೈಲಿಯು ಸರಳವೂ ಛಂದಸ್ಸು ತರಂಗಿತವೂ ದೃಶ್ಯವು ಭಾರತೀಯ ನದಿಯೊಂದರ ಪೂರ್ಣ ಪ್ರವಾಹವೂ ಆಗಿದ್ದುದೇ ಅದರ ಆಕರ್ಷಕತೆಗೆ ಕಾರಣ.

'ಮೊದಲಿನಿಂದ ತಪ್ಪುತ್ತ ಬಂದದ್ದು' ಎಂಬುದು ರವೀಂದ್ರ ಬರೆದ ಸಾಮಾಜಿಕ ನಾಟಕ. ಅಂಥ ಸಾಮಾಜಿಕಗಳಲ್ಲಿ 'ವೈಕುಂಠನ ಹಸ್ತಪ್ರತಿ' ಎಂಬುದು ಬಹಳ ಗಣ್ಯ. 'ಬ್ರಹ್ಮಚಾರಿ ಸಂಘ' ಎನ್ನುವುದು ಅವನ ಇನ್ನೊಂದು ಸಾಮಾಜಿಕ ನಾಟಕ. 'ಪ್ರಜಾಪತಿಯ ಆದೇಶ' ಎಂಬುದು ಆಮೇಲೆ ಅದಕ್ಕಿಟ್ಟ ಹೆಸರು. ೧೯೦೦ರಲ್ಲದು 'ಭಾರತಿ'ಯಲ್ಲಿ ಬೆಳಕು ಕಂಡಿತು. ಅದರಲ್ಲಿ ಗ್ರಂಥಕರ್ತ ಚತುರ ಸಂವಾದವನ್ನು ರಚಿಸಿ ಕೀರ್ತಿಶಾಲಿ ಯಾಗಿದ್ದಾನೆ.

ಅದೇ ಸಮಯದಲ್ಲಿ 'ಕಣಿಕೆ' ಎಂಬ ಸಂಗ್ರಹ ಹೊರಬಿತ್ತು. ಅದರ ತುಂಬ ರವೀಂದ್ರಸುಭಾಷಿತಗಳು ತುಂಬಿವೆ.

"ಎಲ್ಲಿ, ಒಂದೆರಡು ಸುಭಾಷಿತಗಳನ್ನು ಹೇಳಿಬಿಡಿ, ನೋಡೋಣ."

"ಏನು, ನೀನು ನನ್ನ ಪರೀಕ್ಷೆ ಮಾಡುತ್ತೀಯಾ ?"

"ಪರೀಕ್ಷೆಯಲ್ಲ ನಾನು ಮಾಡಬಯಸಿದ್ದು ; ಗೊತ್ತಿಲ್ಲ, ತಿಳಕೋಬೇಕು —ಅಂತ."

" ಹಾಗಾದರೆ ಕೇಳು—

ಒಳಗೆ ತಪ್ಪು ಹೊಗದಿರಲಿ ಎಂದು ಹಾಕಿದೆವು ಬಾಗಿಲುಗಳ
ಆದರೆಂತು ಬರಲೊಳಗೆ ಎಂದು ಸರಿ ಕೇಳಿತೆಮ್ಮ ತಾನು || ೧ ||

ಅದು ಅದೇ ನೋಡು ಇದು ಇದೇ ನೋಡು ನೀನೆತ್ತ ತಿರುಗಿಸಿದರೂ
ಒಡಲನೆಡವೆ ಎಡಬಲದ ಕೈಯೆ ಬಲಗಡೆಗೆ ನಿಲ್ಲದಿಹುದೇ ? || ೨ ||

ಶ್ರಮನಿದ್ರೆಗಳತಿನಿಕಟವರ್ತಿಗಳು ಗಳಸ್ಯ ಕಂಠಸ್ಯ
ಶ್ರಮದ ಕಣ್ಣ ಮೇಲ್ಮುಚ್ಚಳಾಗಿ ತಾನುರುಳದಿರದು ನಿದ್ರೆ || ೩ || "

" ತುಂಬ ಚೆನ್ನಾಗಿವೆ ! "

" ಹೌದು ; ಕಲ್ಕತ್ತದ ಭವನದಲ್ಲಿ ಕುಳಿತು ಚಿಂತಿಸಿದ ಚಿಂತನದ ಫಲವಾಗಿ ಇಂಥ ನುಡಿಮುತ್ತುಗಳೆಷ್ಟೋ ರವೀಂದ್ರನ ಬಾಯಿಯಿಂದ ಹೊರಟವು ! "

೫. ರವೀಂದ್ರನ ರಚನಾವೈವಿಧ್ಯ

"ರವೀಂದ್ರನಾಥನು ರಾಷ್ಟ್ರದ ಕವಿರಾಜನಾದ, ಜಗತ್ ಕವಿಯಾದ ಅವನಿದ್ದ ಕಾಲದಲ್ಲಿ ಭಾರತವು ದಾಸ್ಯಶೃಂಖಲೆಯನ್ನು ಹರಿದೊಗೆಯಲು ಅಹೋರಾತ್ರ ಹೋರಾಡುತ್ತಿತ್ತು. ಹೀಗಿರುವಾಗ ಆತನು ತನ್ನ ರಾಷ್ಟ್ರಪ್ರೇಮ ವನ್ನು ಹೊರಗೆಡಹದೆ ಇದ್ದನೇನು?"

"ನಿಜ; ಅವನು ರಾಷ್ಟ್ರಪ್ರೇಮಿಯಲ್ಲವೆಂದು ಹೇಳುವ ಧೈರ್ಯ ಯಾರಿಗೆ ಬಂದೀತು? ಆದರೆ ಅವನ ರಾಷ್ಟ್ರಪ್ರೇಮವು ಸ್ವಲ್ಪ ಬೇರೆ ಬಗೆಯದು; ಶ್ರೀ ದ. ರಾ. ಬೇಂದ್ರೆಯವರ ರಾಷ್ಟ್ರಪ್ರೇಮದ ಬಣ್ಣ ಅದಕ್ಕಿತ್ತು. 'ಹರ್ ಬಂಡರ್ ಗೀತ'ದಲ್ಲಿ ಕಡುಗನ್ನಡತನದ ಅಭಿನಿವೇಶಗಳನ್ನು ಘೋಷಿಸುತ್ತ ಕೊನೆಗೆ—

'ಕನ್ನಡವೂ ಭಾರತವೂ ಜಗವೆಲ್ಲವು ಒಂದೇ' ಎಂದು,

'ಒಂದೇ ಒಂದೇ ಒಂದೇ ಕರ್ನಾಟಕ ಒಂದೇ' ಎಂಬ ಮೊಳಗಿನ ಸಂಕುಚಿತತೆಯನ್ನು ಹಿಗ್ಗಿಸಿ ಜಗದಗಲ ಬಿತ್ತರಿಸಿದರು. ರವೀಂದ್ರನ ಭಾರತ ಪ್ರೇಮವಾದರೂ ಹಾಗೇ ಭಾರತೋತ್ತರ ವ್ಯಾಪಕವಾಗಿತ್ತೆನ್ನಬಹುದು. ಅವನ ಪ್ರಕಾರ ಸ್ವಾತಂತ್ರ್ಯವು 'ತನ್ನ ಭವಿಷ್ಯವನ್ನು ಸಂಪೂರ್ಣವಾಗಿ ತಾನೇ ರೂಪಿಸಿ ಕೊಳ್ಳಲು ಅಗತ್ಯವಾದ ಅನಿರ್ಬಂಧಸ್ವರೂಪದ ವ್ಯಕ್ತಿಸ್ವಾತಂತ್ರ್ಯ ಜನರೆಲ್ಲ ರಿಗೂ ಇರಬೇಕೆಂ'ಬ ಪಂಥಕ್ಕೆ ಸೇರಿದ್ದು. ಅವರಲ್ಲಿ ರಾಜಕೀಯ ಐಕ್ಯ ವೆಂಬುದು ಯುರೋಪಿಯನ್ ರಾಷ್ಟ್ರೀಯರಲ್ಲಿದ್ದಂತೆ ಇರಬೇಕೋ ಬೇಡವೋ ಎಂಬ ಪ್ರಶ್ನೆ ಅವನನ್ನು ಬಾಧಿಸಲಿಲ್ಲ. ಟಾಲ್‌ಸ್ಟಾಯ್ ಮಹಾಶಯನ ಉಪದೇಶಕ್ಕೂ ಆತನ ಮನಃಪ್ರವೃತ್ತಿಗೂ ಹೋಲಿಕೆಯಿತ್ತು. ಸೈನಿಕ ಪ್ರಭುತ್ವ ಮತ್ತು ಸಂಘಟನೆಗಳಲ್ಲಿ ಅವನಿಗೆ ವಿಶ್ವಾಸವಿರಲಿಲ್ಲ. ವರ್ತಮಾನವನ್ನು ರೂಪಿಸುವುದರಲ್ಲೇ ಅವನ ಮನಸ್ಸು ಆಸಕ್ತವಾಗಿತ್ತು—ಅದರಲ್ಲೂ ಒಕ್ಕಲಿಗರ ಏಳಿಗೆಯ ಬಗ್ಗೆ ಅವನಲ್ಲಿ ಅತ್ಯುತ್ಸಾಹವಿದ್ದಿತ್ತು. ಸ್ವದೇಶೀಯ-ವಿದೇಶೀಯ ರಿಬ್ಬರ ಮನಗಳಲ್ಲೂ ರಾಜ್ಯಶಾಸನಾಕಾಂಕ್ಷೆ ತುಂಬಿರುವುದನ್ನು ಕಂಡ ಆತನು ಸರಕಾರದೆದುರು ನಿಂತು ಕೈಯೊಡ್ಡಿ ಬೇಡುವುದನ್ನೂ ಅದೇನನ್ನಾದರೂ ಕೊಟ್ಟರೆ ಅದನ್ನು ತಿರಸ್ಕರಿಸುವುದನ್ನೂ ತಪ್ಪೆಂದು ಭಾವಿಸಿದ್ದನು. ಇದರಿಂದ

'ಅನಾಯಾಸೇನ ಮರಣಂ ವಿನಾ ದೈನ್ಯೇನ ಜೀವನಂ' ಎಂಬ ವ್ಯಕ್ತಿಧರ್ಮ ಸೂತ್ರವನ್ನು ರಾಷ್ಟ್ರೀಯ ವ್ಯಕ್ತಿತ್ವಕ್ಕೂ ಅವನು ಅನ್ವಯಿಸಿದಂತಾಯ್ತು."

"ಯಾಕೋ ಸ್ವಲ್ಪ ನೀರು ಬೆರೆಸಿದ ಹಾಲಿನಂತೆ ತೋರುವುದಲ್ಲಾ ರವೀಂದ್ರನ ರಾಷ್ಟ್ರೀಯತೆ! ನಿಮಗೆ ಹಾಗೆನ್ನಿಸುವುದಿಲ್ಲವೆ?"

"ಋಷಿಪಟ್ಟಕ್ಕೆ ತಯಾರಿ ನಡೆಸುವ ಮನಃಪ್ರವೃತ್ತಿಯುಳ್ಳ ಮಹಾಜನರ ದೃಷ್ಟಿಯು ಯಾವಾಗಲೂ ವಿಶ್ವಭಾರತೀಯವಾಗಿರುತ್ತದೆ. ಪತಿಪ್ರೇಮವನ್ನು ಮೀರಿ ಪರಮಾತ್ಮನ ಪ್ರೇಮವನ್ನು ಬಯಸುವ ಮಟ್ಟಕ್ಕೇರಿದ ಪತಿವ್ರತೆಯ ಪಾತಿವ್ರತ್ಯವಿದ್ದಹಾಗೆ ರವೀಂದ್ರನ ದೇಶಭಕ್ತಿಯು ಭಾರತವನ್ನು ತುಂಬಿ, ಅಷ್ಟಕ್ಕೇ ಬರಿದಾಗದೆ, ವಿಶ್ವದಲ್ಲೆಲ್ಲಾ ತುಂಬಿಕೊಳ್ಳಹೋಯಿತು ಎಂದರೆ ಅವನ ರಾಷ್ಟ್ರೀಯತೆಗೆ ಮತ್ತೆ ಪರಿಷ್ಕಾರ ಬೇಡ. ಭಾರತಕ್ಕೆ ಸ್ವಾತಂತ್ರ್ಯ ಬೇಕೆಂದು ಆತ ಅಭಿಪ್ರಾಯಪಟ್ಟದ್ದು ಭಾರತೀಯರು ತಮ್ಮೊಳಗಿನ ಸಾಮಾಜಿಕ ಅನ್ಯಾಯವನ್ನು ಬೇಗನೆ ಪರಿಹರಿಸಿಕೊಳ್ಳಲು ಅವಕಾಶ ಸಿಗಲಿ ಎಂದು."

"ಸ್ವಾತಂತ್ರ್ಯಾಂದೋಲನದಲ್ಲಿ ರವೀಂದ್ರನು ವಹಿಸಿದ ಪಾತ್ರವೆಂಥದು?"

"ರವೀಂದ್ರನು ರಾಜಕಾರಣಿಯಲ್ಲ, ಆದರೆ ಸಾರ್ವಜನಿಕ ಜೀವನದಲ್ಲಿ ಆಸಕ್ತಿಯಿಂದ ಭಾಗವಹಿಸಿದವನು. ಮೊದಮೊದಲು ಅದರ ಪರಿಣಾಮವು ಅವನ ಕೃತಿಗಳಲ್ಲಿ ಕಂಡುಬರದಿದ್ದರೂ ಕೊನೆಗೊಮ್ಮೆ 'ನೈವೇದ್ಯ' ಎಂಬುದರಲ್ಲಿ ಕಂಡುಬಂದಿತು. ಅಂಥ ಎರಡನೆಯ ಉದಾಹರಣೆಯೆಂದರೆ 'ಕಾಹಿನಿ'. 'ಪ್ರಗತಿ ಚಿಹ್ನಗಳ'ಲ್ಲಿ ಅವನು ತನ್ನ ದೇಶದವರ ಲೋಪದೋಷಗಳನ್ನು ಉಗ್ರವಾಗಿ ವಿಡಂಬಿಸಿದ್ದು ಕಂಡುಬರುತ್ತದೆ. 'ಆಶೆ' ಮತ್ತು 'ಬಂಗಲಕ್ಷ್ಮಿ' ಎಂಬವುಗಳಲ್ಲಿ ಸೊಗಸಾದ ದೇಶಭಕ್ತಿ ಹೊರಹೊಮ್ಮಿದೆ."

"ರವೀಂದ್ರನು ಪ್ರೇಮಗೀತಗಳನ್ನು ಬರೆಯಲಿಲ್ಲವೆ?"

"ಬರೆಯದೆ ಏನು—ಬೇಕಾದಷ್ಟು ಬರೆದಿದ್ದಾನೆ. 'ಕ್ಷಣಿಕಾ' ಮತ್ತು 'ಕಲ್ಪನಾ' ಎಂಬವು ಪ್ರೇಮಗೀತಗಳ ಸುಂದರ ಸಂಗ್ರಹಗಳು. 'ತೋಟಿಗ'ವಂತೂ ರವೀಂದ್ರನನ್ನು ಮತ್ತಷ್ಟು ಜನಪ್ರಿಯಗೊಳಿಸಿತು. 'ಕಲ್ಪನೆ'ಯ ಕೆಲ ಪದ್ಯಗಳು ಗೀತಗಳೆಂದು ಬಹಳ ಕೊಂಡಾಟಕ್ಕೆ ಪಾತ್ರವಾಗಿವೆ. Lover's Gift ಅಥವಾ 'ಬೇತ್ರಯತೀ' ಎಂಬ ಜನಪ್ರಿಯ ಕೃತಿಯಲ್ಲಿ ಮೊದಲಿ

ನಿಂದಲೂ ಸೃಷ್ಟಿಯೆಲ್ಲವೂ ಹೇಗೆ ಸುದೀರ್ಘವಾದ ಪ್ರೇಮಲೀಲೆ ನಡೆಸುತ್ತ ಬಂದಿದೆ ಎಂಬ ಅಂಶವನ್ನು ಬಣ್ಣಿಸಲಾಗಿದೆ."

"ಅದೆಂಥ ಪದ್ಯರೀ ಅದು?"

"ಅದೊಂದು ಪ್ರೇಮಲೀಲಾ ಅಗರಬತ್ತಿ, ಪ್ರೇಮಪರಿಮಳ!"

"ಅದು ಹೇಗಿದೇರೀ?"

"ಅದೋ—

ನೈದಿಲೆಯ ಕೂರ್ಮೆಯನು ತಂಗದಿರ ಕುಡಿದಾಗ
ಕವಿಯನ್ನು ಕಂಡಾ ಶಶಾಂಕ ಭೂಪ
ಅರಿಯನೀ ಕವಿ ಕಣ್ಣ ಮಾತನಹಹಾ ಎಂದು
ನಕ್ಕುಬಿಟ್ಟನು (ರಾತ್ರಿಗಗನದೀಪ)!

ಹೀಗೆ ಮುಂಬರಿಯುತ್ತದೆ."

"ಎಷ್ಟು ಚೆನ್ನಾಗಿದೆ ಅಂದರೆ!"

"ಚೆನ್ನಾಗಿದೆ ಅಂದರೆ ಚೆನ್ನಾಗಿದೆ—ಅಷ್ಟೆ! ಹಾಗೇ ಕಾಮನ ಮೇಲೆಯೂ ಸುಂದರವಾದ ಎರಡು ಪದ್ಯಗಳನ್ನು ರವೀಂದ್ರನು ಬರೆದಿದ್ದಾನೆ. ಹರನ ಕೋಪದಿಂದ ಸುಟ್ಟುಹೋದ ಕಾಮನ ಮೈಯ ಬೂದಿಯು ವಿಶ್ವಾಂತರ್ಯಾಮಿ ಆಯಿತು; ಆದುದರಿಂದಲೇ ನಾವೆಲ್ಲಾ ಕಾಮಮಯರಾದೆವು—ಎಂಬುದು ಎಂಥ ಸತ್ಯ! ಪ್ರೇಮ, ಪ್ರೀತಿ, ರತಿ, ವಾತ್ಸಲ್ಯ, ಆಶೆ, ರಾಗ, ಭಕ್ತಿ, ಪ್ರತ್ಯಾಶೆ, ಅಪೇಕ್ಷೆ ಮುಂತಾದವೆಲ್ಲಾ ಕಾಮ ಅಥವಾ ಮನಸ್ಸನ್ನು ಮಥಿಸಿ ತೆಗೆದ ಒಲವಿನ ವಿವಿಧ ಮುಖಗಳು! ಅದರಿಂದಲೇ ಒಂದು ಕಾವ್ಯೋದ್ಗಾರದ ಪ್ರಕಾರ ಪ್ರೇಮವೇ ದೇವರು."

"ಜಗತ್ತಿನಲ್ಲಿ ಎಲ್ಲವೂ ಪ್ರೇಮಾರ್ಹವಾಗಿಯೇ ಇರುತ್ತದೆಯೇ? ಅದು ಹೇಗೆ ಸಾಧ್ಯ? ಕಚ್ಚೋ ಹುಲೀನೂ ಪ್ರೀತಿಸೋದಕ್ಕಾಗುತ್ತೆಯೇ?"

"ಅದಕ್ಕೂ ಹೇಳಿದ್ದಾನೆ ಕವಿ. ಭಯಂಕರವಾದ ಮುಖವೂ ಪ್ರಕೃತಿಗಿದೆ. ಬ್ರಿಟಿಷ್ ಆಡಳಿತದ ಭಯಂಕರತೆಯನ್ನು ಪ್ರತಿಭಟಿಸಲೋ ಎಂಬಂತೆ ಸಿಕ್ಕ (ಶೀಖ) ಹಾಗೂ ಮರಾಠವೀರರ ಕತೆಯನ್ನವನು ಹಾಡಿದ್ದಾನೆ. ಪರಕೀಯರ ಆಡಳಿತವನ್ನು ಕೊನೆಗೊಳಿಸಲೇಬೇಕೆಂದು ವೀರಾವೇಶದಿಂದ ಕವಿ ತನ್ನ

ಸಂದೇಶವನ್ನು ಕಾವ್ಯವಾಣಿಯ ಮೂಲಕ ಶ್ರುತಪಡಿಸಿದ್ದಾನೆ. ವಿದೇಶದ ಆಡಳಿತದ ಹೊರೆಗಿಂತ ಅದರಿಂದುಂಟಾದ, ನೀತಿಯನ್ನು ನಿರ್ವೀರ್ಯಗೊಳಿಸುವ ದಾಸ್ಯ ಅವನನ್ನು ಹೆಚ್ಚಾಗಿ ಕೆರಳಿಸಿತು. ಅದು ಅವನಿಗೆ ಭಯಂಕರವೆನ್ನಿಸಿತು.

ರವೀಂದ್ರನು ಕವನರೂಪದಲ್ಲಿ ಕತೆಗಳನ್ನೂ ಬರೆದಿದ್ದಾನೆ. 'ಕಾಹಿನಿ' ಮತ್ತು 'ಕಥೆ' ಎಂಬೆರಡು ಅಂಥ ಕಥಾಸಂಗ್ರಹಗಳು. ಈ ಕಥೆಗಳೆಲ್ಲಾ ಹೆಚ್ಚಾಗಿ ಬೌದ್ಧಕಾಲೀನ, ಸಿಕ್ಕ – ಮರಾಠ – ರಜಪೂತಕಾಲೀನ. ಇಂಥವು ರಾಜಕೀಯ ಪ್ರಚಾರವನ್ನು ಅಪ್ರತ್ಯಕ್ಷವಾಗಿ ಮಾಡಿದವೆನ್ನಬೇಕು. ದೇಶ ಪ್ರೇಮದ ಗೀತಗಳನ್ನಿವು ಪರಿಣಾಮಕತೆಯಲ್ಲಿ ಮೀರಿಸುತ್ತವೆ. ಕವಿ ಹಿಂದೆ ಬರೆದ ಪ್ರಬಂಧಗಳಲ್ಲಿರದ ಪ್ರಸಾದ ಮತ್ತು ಅರ್ಥವ್ಯಕ್ತಿಗಳು ಈ ಕತೆಗಳಲ್ಲಿ ಕಂಡುಬಂದವು. ರಜಪೂತರ ಎರಡು ಭಯಂಕರ ಕತೆಗಳಿದಕ್ಕೆ ಪ್ರಸಕ್ತ ಉದಾಹರಣೆಗಳು. 'ಮದುವೆ'ಯು ಕರುಣೆ ಮತ್ತು ಭಯಾಯನಕ ರಸಗಳ ಅಭಿವ್ಯಕ್ತಿಗೆ ಕಾರಣವಾಗಿದೆ. 'ಯಜ್ಞ' ಎಂಬುದರಲ್ಲಿ ಮೂಢ ನಂಬಿಗೆ, ಮೂಢರು, ಕ್ರೌರ್ಯ ಮತ್ತು ಭಯಗಳ ಚಿತ್ರಣವಿದೆ. 'ಕಾಹಿನಿ'ಯಲ್ಲಿ ೫ ನಾಟಕಗಳೂ ೨ ಕಥನ ಕವನಗಳೂ ಬಂದಿವೆ. 'ಕರ್ಣ ಮತ್ತು ಕುಂತಿ', 'ನರಕದಲ್ಲಿ ವಾಸ', 'ಸತಿ', 'ಲಕ್ಷ್ಮೀಪರೀಕ್ಷೆ', 'ಗಾಂಧಾರಿಯ ಪ್ರಾರ್ಥನೆ' ಎಂಬವು ನಾಟಕಗಳು. ಜಗತ್ತಿನ ಉತ್ತಮ ದುರಂತ ನಾಟಕಗಳಷ್ಟು ಇವು ಪರಿಣಾಮಕಾರಿಗಳಾಗಿವೆ."

"ದುರಂತನಾಟಕವು ನನಗಂತೂ ಸೇರದು. ಅದೆಂತಹ ಪರಿಣಾಮ ಅದರಿಂದಾಗೋದು?"

"ಮನಃಕಷಾಯಗಳ ವಿರೇಚನ, ಪರಿಮಾರ್ಜನ—ಭಾವನೆಯ ಶುದ್ಧೀಕರಣ."

ಷೇಕ್ಸ್‌ಪಿಯರ್ 'ಹ್ಯಾಮ್ಲೆಟ್' ಎಂಬ ಸರ್ವಾಂಗ ದುರಂತ ನಾಟಕದಲ್ಲಿ ಮಾಡಿದಹಾಗೆ ನಾಟಕದ ಪಾತ್ರಗಳನ್ನೆಲ್ಲ ಮುಗಿಸುವುದು ಪಕ್ಕಾ 'ಟ್ರಾಜೆಡಿ'! ಅಲ್ಪ ಪಾಪಕ್ಕೆ ಮಹಾಶಿಕ್ಷೆ ವಿಧಿಸುವ 'ನ್ಯಾಯ'ವನ್ನು ನಾನಂತೂ ನೋಡಿ ತಣಿಯಲಾರೆ. ಅಸಮಾಧಾನವೇ ರಸಾಸ್ವಾದವೆಂದು ಹೇಳುವುದಾದರೆ ಅಡ್ಡಿಯಿಲ್ಲ."

"'ರಸ-ಅಸಮಾಧಿ' ಎಂದು ಅಂಥ ರಸಾಸ್ವಾದವನ್ನು ಕರೆಯಬಹುದು—ನಿನಗೆ ಸಂತೋಷವಾಗುವುದಾದರೆ; ಅದು ರಸಸಮಾಧಿ ಅಥವಾ ತಣಿವು ಎನ್ನಿಸದಿರಬಹುದು. ಆದರೆ ಅದು ರಸೋತ್ತರ ಚಿಂತನಕ್ಕೆ ಎಡೆಮಾಡಿ ಕೊಡುವ ಸಮಸ್ಯಾತ್ಮಕತೆಯುಳ್ಳದ್ದು: ಕರುಣ-ಭಯಗಳ ಸ್ಪರ್ಶ ಅಲ್ಲಿ ರಸಾಸ್ವಾದ; ಆದರೆ ಮುಂದೆ ಬುದ್ಧಿಯ ಅವಿಶ್ರಾಂತ ನಿರೀಕ್ಷೆ, ಮುಗಿಯದ ಪ್ರಶ್ನಾವಳಿ!

'ಜಗತ್ತೇ ಒಂದು ಪ್ರಶ್ನಾರ್ಥಕ ಚಿಹ್ನೆ' ಎಂದು ನಾನು ಹೇಳುತ್ತಿದ್ದುದು ನೆನಪಿಲ್ಲವೇ? ಹಳಬರೆನ್ನುತ್ತಿದ್ದರು — ಅತಿಪ್ರತಿಭರಿಗೆ ಕಾವ್ಯ ಬೇಡ, ಶಾಸ್ತ್ರ ಸಾಕು; ಸುಕುಮಾರಮತಿಗಳಿಗೆ (ಮುಗ್ಧ-ಮುಗ್ಧೆಯರಿಗೆ) ಕೃತ್ಯಾಕೃತ್ಯ ವಿವೇಕ ಮೂಡಲು ಕಾವ್ಯಮಾರ್ಗವೇ ಸಾಧನ — ಎಂದು. ರಸೋತ್ತರ ಚಿಂತನವಿಲ್ಲದೆ ವಿವೇಕ ಹೇಗೆ ಮೂಡೀತು?"

"ಚಿಂತನಕ್ಕೆ ಅಶುಭಾಂತ ಕೃತಿಯೊಂದೇ ಸಮರ್ಥ ಪ್ರೇರಕ ಎಂದು ನಿಮ್ಮ ಮತವೇ?"

"ಅಲ್ಲ; ಶುಭಾಂತ (ಸುಕುಮಾರ) ನಾಟ್ಯ ಪ್ರಯೋಗವೂ ಉತ್ತರ ಚಿಂತನ ಮಾಡಿಸುತ್ತದೆ. ಆದರೆ ಅದು ಅಶುಭಾಂತ (ದುರಂತ ಅಥವಾ ಆವಿದ್ಧ) ಪ್ರಯೋಗದಷ್ಟು **ನೇರವಾಗಿ, ಬೇಗನೆ** ಯೋಚನೆ ಹಿಡಿಸುವುದಿಲ್ಲ, ತಲೆ ಕೆರಳಿಸುವುದಿಲ್ಲ."

"ಅಂದರೆ ದುರಂತವನ್ನು ಹೆಚ್ಚೆಂದು ಮೆಚ್ಚುವವರು ಶುಭಾಂತಪ್ರಯೋಗವನ್ನು ಹೆಚ್ಚೆಂದು ತಿಳಿದು ಮೆಚ್ಚಿಕೊಳ್ಳೋರಿಗಿಂತ ಕಡಿಮೆ ಪ್ರೌಢರೆಂದು ನಿಮ್ಮ ಅಂಬೋಣವೇ?"

"ನೀನು ಹೇಗೆ ಬೇಕಾದರೂ ಅಂದುಕೋ. ಅಶುಭಾಂತ ನಾಟಕಗಳು ಇಂದು ಕೆಲ ರಸಿಕರಿಗೆ ಪ್ರಿಯವೆಂಬುದು ಸುಳ್ಳಲ್ಲ. ಮನಃಶುದ್ಧಿಯು (ಭಾವನಾ ವಿಮೋಚನಾತ್ಮಕವಾಗಿ) ಅದರಿಂದಾಗುವುದು ಸಹಜ. ಕಣ್ಣೀರು ಸುರಿದಾಗ ತಲೆ ಹಗುರವಾಗುವುದಿಲ್ಲವೆ? ಹಾಗೇ ಆಧುನಿಕ ಭಾರತದಲ್ಲಿ ಹಲವರ ಮನಸೆಳೆದ ದುರಂತ ಕೃತಿಗಳಲ್ಲೂ ರವೀಂದ್ರನು ರಚನಾನಿಪುಣನೆನಿಸಿದ್ದು ಪ್ರಕೃತ ನಾನು ಹೇಳಹೊರಟ ವಿಷಯ. ಪರಲೋಕ, ಪರಮೇಶ್ವರ, ಪುನರ್ಜನ್ಮಗಳಲ್ಲಿ

ಖಚಿತವಾದ ಶ್ರದ್ಧೆಯಿಲ್ಲದಾಗ ದುರಂತಪರ್ಯವಸಾನವುಳ್ಳ ಕೃತಿಯು ಹೆಚ್ಚು ಪರಿಣಾಮಕರವಾಗುತ್ತದೆ.

'ಕ್ಷಣಿಕಾ' ಎಂಬುದು ರವೀಂದ್ರನ ಪ್ರತಿಭಾಕಾವ್ಯದ ೨ನೆಯ ರಂಗವನ್ನು ಆರಂಭಿಸಿದೆ. ಅದರಲ್ಲಿಯ 'ಕುಡಿಕ' ಎಂಬ ಪದ್ಯದಲ್ಲಿ ಕ್ಷಣಿಕೆಯ ಸಂಚಾರಿ ಭಾವದ ಮಾದರಿಯನ್ನು ಕಾಣಬಹುದು. ಅದರಲ್ಲಿಯ 'ಎರಡು' ಎಂಬ ಪದ್ಯವು ಕವಿಯ ಹಾಸ್ಯಪ್ರವೃತ್ತಿಗೆ ದೃಷ್ಟಾಂತ ಕೊಡುತ್ತದೆ. 'ಬೇತ್ರಯತೀ' ಎಂಬುದರಲ್ಲಿಯ ೯ನೆಯ ಪದ್ಯವೂ 'ತೋಟಿಗ'ದಲ್ಲಿಯ ೪೩ನೆಯ ಪದ್ಯವೂ ಕವಿಯ ತುಂಟತನವನ್ನು ಪ್ರಕಟಿಸುತ್ತವೆ. ಅಲ್ಲಿ ಪಂಡಿತಂಮನ್ಯರನ್ನು ಚೆನ್ನಾಗಿ ಅಣಕಿಸಲಾಗಿದೆ. ಪ್ರೇಮಗೀತಗಳಲ್ಲೂ ಕ್ಷಣಿಕತೆಗೆ ಸಹಜವಾದ ಲಘುಭಾವವಿದೆ. ಆದರೆ 'ಕ್ಷಣಿಕೆ'ಯಲ್ಲಿ ಗೀತಾಂಜಲಿಯ ಭಾವಕ್ಕೆ ಪೀಠಿಕಾ ರೂಪದ ಭಾವವುಳ್ಳ ಪದ್ಯಗಳೂ ಬಂದಿವೆ. ಅದರ ಕೊನೆಯ ಪದ್ಯವು ಜೀವನ ದೇವತಾಯುಗವೆಂಬ ಕವಿಯ ಕಾವ್ಯಜೀವನದ ಪೂರ್ವಾರ್ಧವು ಮುಗಿದುದನ್ನು ಸೂಚಿಸುತ್ತದೆ."

೬. ರವೀಂದ್ರನ ಶಾಂತಿನಿಕೇತನ

"ಕ್ರಿ.ಶ. ೧೯೦೦ರಲ್ಲಿ ರವೀಂದ್ರನು ಶಾಂತಿನಿಕೇತನದಲ್ಲಿ ನೆಲೆಸಿ ನಾಲ್ಕು ವಿದ್ಯಾರ್ಥಿಗಳೊಂದಿಗೆ ತನ್ನ ಆದರ್ಶ ಶಾಲೆಯನ್ನು ಸ್ಥಾಪಿಸಿದನು. ಶಾಂತಿನಿಕೇತನದಲ್ಲಿ ಉಳಿದ ಕಾಲದಿಂದ ಅವನು ಧಾರ್ಮಿಕ ಭಾವಗೀತಗಳನ್ನು ಬರೆಯಲಾರಂಭಿಸಿ ಭರತಖಂಡದಲ್ಲೂ ಜಗತ್ತಿನಲ್ಲೂ ವಿಖ್ಯಾತನಾದನು. ಅಂಥ ಕವನಗಳ ಸಂಗ್ರಹಗಳಲ್ಲಿ 'ನೈವೇದ್ಯ'ವು ಮೊದಲನೆಯದು. ಅದು ಪ್ರಕಟವಾದುದು ಕ್ರಿ.ಶ. ೧೯೦೭ರಲ್ಲಿ. ಅದರಲ್ಲಿಯ ಬಹುಸಂಖ್ಯೆ ಕವನಗಳಲ್ಲಿ ಕವಿಯ ಪೂರ್ವಶೈಲಿಯೇ ಎದ್ದು ಕಾಣುತ್ತದೆ. ಅದು ಸ್ಥೂಲವಾಗಿ ಅವನ ಹಿಂದಿನ ಧಾರ್ಮಿಕೇತರ ಕೃತಿಗಳಿಗೂ ಮುಂದಿನ ಧಾರ್ಮಿಕ ಕೃತಿಗಳಿಗೂ ನಡುವಣ ಸೇತುವೆನ್ನಬಹುದು. ಕ್ರಿ.ಶ. ೧೯೦೦–೧೯೦೭ ನಡುವಣ ಕಾಲದಲ್ಲಿ ರವೀಂದ್ರನು ಭಾರತದ ರಾಜಕೀಯ ಚಳವಳದಲ್ಲಿ ಭಾಗಿಯಾಗಿದ್ದ. ಈ ಕಾಲದಲ್ಲೇ ಅವನ ಪದ್ಯಗಳು ಸ್ತೋತ್ರಪರ ಅಥವಾ ಧರ್ಮೋನ್ಮುಖವಾಗತೊಡಗಿದವು. 'ನೈವೇದ್ಯ'ದಲ್ಲಿ ಅಷ್ಟಷಟ್ಪದಿಗಳೇ (Sonnet ಸುನೀತಗಳೇ) ಹೆಚ್ಚು. ಅದರಲ್ಲಿ ಕವಿಯು ಕಾವ್ಯದ ರೂಪಪರಿಪೂರ್ಣತೆಗೆ ಹೆಚ್ಚು ಲಕ್ಷ್ಯ ಹಾಕಿದಂತೆ ತೋರುತ್ತದೆ. ಅವನ ದೇಶಪ್ರೇಮದ ಅಭಿವ್ಯಕ್ತಿಯೂ ಅಲ್ಲಿಂದಲೇ ಆರಂಭವಾಗಿದೆ."

"ರವೀಂದ್ರನ ಜೀವನ ಅಂದರೆ ಅವನ ಕಾವ್ಯವೇ ಆಗಿಹೋಯ್ತಲ್ಲ?"

"ಹೌದು: ಸೌದೆ ಒಡೆದು ಜೀವಿಸುವವನ ಜೀವನದಲ್ಲಿ ಸೌದೆಗೂ ಅದನ್ನು ಸಂಗ್ರಹಿಸಿ ಒಡೆಯುವುದಕ್ಕೂ ಒಡೆದುದನ್ನು ಹೊರೆ ಕಟ್ಟಿ ಮಾರುವುದಕ್ಕೂ ಪ್ರಾಮುಖ್ಯವಲ್ಲದೆ ಮತ್ತಾವುದಕ್ಕೆ? ಬೇಕಾದರೆ ಅದರಿಂದ ಅವನಿಗಾದ ಸುಖ–ದುಃಖ, ಲಾಭ–ನಷ್ಟಗಳನ್ನು ಜೊತೆಗೆ ಬಣ್ಣಿಸಬಹುದು. ರವೀಂದ್ರನದು ಕವಿತೆ, ಕತೆ, ನಾಟಕ, ಪ್ರಬಂಧಗಳನ್ನು ಬರೆದು ಪ್ರಕಟಿಸುವ ಜೀವನ. ಅವನಿಗೆ ತಾಯಿ, ತಂದೆ, ಅಣ್ಣ, ಅತ್ತಿಗೆ, ಸಂಪತ್ತಿ, ಮಕ್ಕಳಿದ್ದರೆಂಬುದು ನಿಜ. ಆದರೆ ಅವನ ವ್ಯಕ್ತಿವೈಶಿಷ್ಟ್ಯವನ್ನು ಒಡಮೂಡಿಸುವ ಲಕ್ಷಣಗಳಾವುವೂ ಅವನಿಗೂ ಅವರಿಗೂ ನಡೆದ ನಿತ್ಯ–ನೈಮಿತ್ತಿಕ ವ್ಯವಹಾರಗಳಲ್ಲಿ ಹೇಳಬಹುದಾದಷ್ಟಿಲ್ಲ. ಅವನೇ ಹೇಳಿರುವ ಹಾಗೆ ಹೊರಹೊರಗೆ ಎಲ್ಲರೊಡನೆಯೂ ಬೆರೆತು ನಗುಮೊಗದಿಂದ ಕೂಡಿ ತಿಳಿಹಾಸ್ಯಮಯವಾಗಿ ಅಥವಾ ಅವಶ್ಯಬಿದ್ದಾಗ ಗಂಭೀರವಾಗಿ

ಮಾತಾಡಿಕೊಂಡಿದ್ದರೂ **ಒಳಒಳಗೇ** ಅವನು ಸರ್ವರಿಂದಲೂ ದೂರ, ಏಕಾಕಿ, ಮೌನಿ, ಆತ್ಮನಿಷ್ಠ, ಏಕಾಗ್ರಗತಿಯ ಮನಸ್ಸುಳ್ಳವ.* ಬಾಲಕೃಷ್ಣ ಲೀಲೆಯ ಮಟ್ಟಕ್ಕೆ ಅತಿಶಯೋಕ್ತಿಮಾಡಿ ಅವನ ವೈಯಕ್ತಿಕ ಕೌಟುಂಬಿಕ ನಡೆಯ ಮಹತ್ವವನ್ನು ವಿವರಿಸುವುದು ನಿನ್ನಂಥ ಪ್ರೌಢೆಯ ಎದುರಿಗಲ್ಲ— ಮುಗ್ಧಾಂಗನೆಯರೆದುರಿಗಷ್ಟೆ—ಅದೂ ಕೇವಲ ರಂಜನೆಗಾಗಿ ಮಾತ್ರ. ಅವನ ವ್ಯಕ್ತಿತ್ವದಲ್ಲಿ ಕವಿತ್ವವೊಂದೇ ಮಿಕ್ಕ ಸರ್ವಸಾಧಾರಣ ಮುಖಗಳನ್ನು ಮರೆಯಿಸುವಷ್ಟು ವಿಶಾಲವೂ ಎತ್ತರವೂ ಆಗಿ ಕಣ್ಣೆದುರು ನಿಲ್ಲುತ್ತದೆ. ಅವನು ಒಕ್ಕಲಿಗೆ ಒಳ್ಳೆಯ ಒಡೆಯ, ಮಕ್ಕಳಿಗೆ ಒಳ್ಳೆಯ ತಂದೆ, ಹೆಂಡತಿಗೆ ಒಳ್ಳೆಯ ಗಂಡ, ಅತ್ತಿಗೆಗೆ ಒಳ್ಳೆಯ ಮೈದುನ, ಅಣ್ಣಂದಿರಿಗೆ ಅಭಿಮಾನಾಸ್ಪದನಾದ ತಮ್ಮ ಎನ್ನಿಸಿದ್ದೂ ಸ್ಮರಣೀಯವೆಂಬುದು ನಿಜ. ಕವಿಗಳೆಲ್ಲರೂ ಹೇಗಿರುವರೋ ನನಗೆ ಗೊತ್ತಿಲ್ಲ. ಆದರೆ ರವೀಂದ್ರ ಮಾತ್ರ ಬೇಂದ್ರೆಯವರೆಂದ ಹಾಗೆ ‘ ಪಟ್ಟ ಪಾಡೆಲ್ಲವು ಹುಟ್ಟು ಹಾಡಾಯಿತು ’ ಎಂದಹಾಗೆ ಬದುಕಿದವನು. ಅವನ ಕಾವ್ಯರಚನೆಯ ಪೂರ್ವಯುಗದಲ್ಲಿ ಒಂದುವೇಳೆ ಅನುಭವದ ಆಳತೆಗಿಂತ ಕಲ್ಪನಾವಿಲಾಸದ ಶತಾಂಶವು ಹೆಚ್ಚಿರಬಹುದೆಂದರೂ ಉತ್ತರಯುಗದಲ್ಲಿ ಅನುಭವದ ಭಾರವೇ ಹೆಚ್ಚಾಗಿದೆ ಎಂದು ಧಾರಾಳವಾಗಿ ಹೇಳಬಹುದು. ಆತನ ಪ್ರೇಮಕ್ಕೆ ಪಾತ್ರವಾಗಿದ್ದ ‘ ಕ್ಷಣಿಕೆ ’ಯಿಂದ ಆತನು ತನ್ನ ಅತಿವೃದ್ಧ ವಯಸ್ಸಿನಲ್ಲೂ ಉದ್ಧಾರ ವಾಕ್ಯಗಳನ್ನು ಉದ್ಗರಿಸುತ್ತಿದ್ದನು. ‘ ಗತಸ್ಯ ಶೋಚನಂ ನಾಸ್ತಿ ’ ಎಂಬ ನೀತಿಯನ್ನು ವಿವೇಕಿ ಅನುಸರಿಸಬೇಕು—ಎಂದು ತೀರ್ಮಾನಿಸುವ ಒಂದು ಸಂದರ್ಭದಲ್ಲಿ ಆ ಅರ್ಥವಿರುವ ಕ್ಷಣಿಕಾಪಂಕ್ತಿ

---

* (1) " I was always detached, aloof ; I disciplined myself to remain apart from everything inwardly "—*Tagore on page 97 in ' Tagore by Fireside '*

(2) " I had not often heard him talk about his family life ; only did he occasionally refer to it very briefly. He managed to keep an amazing silence about it ; about his own sorrows and also about physical sufferings "—*Maitreyi Devi in the same book.*

ಯನ್ನೊಮ್ಮೆ ಉದ್ಗರಿಸಿದ್ದು ನಿದರ್ಶನೀಯ. ‘ ಗತವಿಚಾರ ಬರಿಯ ಭಾರ ’ ಎಂದು ಆ ಮೂಲಕ ತನ್ನ ವಾದವನ್ನವ ಸಮರ್ಥಿಸಿಕೊಂಡದ್ದಿಲ್ಲಿ ಸೂಚಿತ. ದಿನಚರಿಯನ್ನು ಬರೆದಿಡುವುದು ವ್ಯರ್ಥವೆಂದು ಅವನು ಆ ಸಂದರ್ಭದಲ್ಲಿ ಅಭಿಪ್ರಾಯಪಟ್ಟಿದ್ದ. ಜಗತ್ತಿನ ವಿವಿಧ ಜೀವನರೂಪಗಳ ಅಂತಃಸೂತ್ರಗಳನ್ನು ಅರಿಯುವುದರಲ್ಲೇ ಕುತೂಹಲಿಯಾಗಿ, ಆಂತರಿಕ ಏಕಾಗ್ರತೆಯನ್ನೂ Objectivity ವೈರಾಗ್ಯವನ್ನೂ ಬೆಳೆಸಿಕೊಂಡುಬಂದಿದ್ದ ರವೀಂದ್ರನು ತನ್ನ ಜೀವನದ ಉಲ್ಲಾಸ-ವೈಭವಗಳತ್ತ ಗಮನಿಸದೆ, ಅತ್ಯಾಸಕ್ತಿಯನ್ನು ಸಾಮಾನ್ಯರಂತೆ ವಹಿಸದೆ, ತನಗೆ ಎಷ್ಟು ಬೇಕೋ ಅಷ್ಟು ಲಕ್ಷ್ಯವನ್ನು ಆ ದಿಶೆಯಲ್ಲಿ ಹಾಕುತ್ತಿದ್ದುದರಿಂದ ಅವನ ಬಾಳ ಬೆಳವಣಿಗೆಯ ಹಂತಗಳ ಹೊರಮುಖಗಳು ಯಾವಾಗಲೂ ಅಸಾಧಾರಣವೆಂದು ತೋರುವಂತಿದ್ದಿಲ್ಲ. ಅವನೇ ಹೇಳಿದ ಒಂದು ಘಟನೆಯನ್ನಿಲ್ಲಿ ಹೇಳುತ್ತೇನೆ :

ಒಮ್ಮೆ ಕವಿ ಕಲ್ಕತ್ತದ ತನ್ನ ಬಂಗಲೆಯ ಕೆಳ ಒಳದಲ್ಲಿ ಮಲಗಿದ್ದನು. ಸಾಮಾನ್ಯವಾಗಿ ಅಲ್ಲಿ ಯಾರೂ ಮಲಗುತ್ತಿದ್ದಿಲ್ಲ. ನಟ್ಟಿರುಳಲ್ಲಿ ಏನೋ ಒಂದು ತೀಕ್ಷ್ಣವಾದ ವೇದನೆಯುಂಟಾಗಿ ಅವನು ಹಾಸಿಗೆಯ ಮೇಲೆ ಎದ್ದು ಕುಳಿತನು. ನೋಡಿದಲ್ಲಿ ಅವನಿಗೆ ಒಂದು ದೊಡ್ಡ ಕರಿಯ ಚೇಳು ತನ್ನ ಕಾಲಿಗೆ ಕಚ್ಚಿದ್ದು ಗೊತ್ತಾಯಿತು. ಗಾಯದ ನೋವು ತಡೆಯಲಾರದಷ್ಟು ಏರುತ್ತಹೋಯಿತು. ಮನೆಯಲ್ಲಿ ಎಲ್ಲರೂ ಗಾಢನಿದ್ರೆಯಲ್ಲಿದ್ದುದರಿಂದ ಕವಿಗೆ ಅವರಲ್ಲಿ ಯಾರನ್ನೂ ಎಬ್ಬಿಸುವುದು ಬೇಡವೆನ್ನಿಸಿತು. ಆಗ ಆತನು—‘ ಚೇಳು ಕಚ್ಚಿದ್ದು ಯಾರಿಗೆ? ಆ ಕಾಲೆಂದರೆ ಏನು? ಅದರ ಹೆಬ್ಬೆಟ್ಟು ಯಾರದು? ಅದು ನಾನೇ? ಶರೀರವುಳ್ಳ ರವೀಂದ್ರನಾಥನು ಯಾರು? ನಾನೂ ನೋವಿನಿಂದ ನರಳುವ ಶರೀರವೂ ಬೇರೆ ಬೇರೆ ’—ಎಂಬ ಆಲೋಚನೆಯಲ್ಲಿ ಸಮಾಧಿಸ್ಥನಾಗಿಬಿಟ್ಟನು. ಅದರಿಂದ ಅವನ ಆತ್ಮವು ಅವನ ಶರೀರದಿಂದ ತಾನು ಪ್ರತ್ಯೇಕ ಎಂಬುದನ್ನು ಅನುಭವಿಸಿತು. ಈ ಅನುಭವವು ರಸರೂಪತಾಳಿದ ವಿವೇಕದಿಂದ ಕ್ಷಣಾರ್ಧದಲ್ಲಿ ಆತನಿಗೆ ಚೇಳು ಕಡಿದ ನೋವಿನ ಅರಿವೇ ಹೊರಟುಹೋಯಿತು. ಮರುದಿನ ಹಾಸಿಗೆಯಿಂದ ಎದ್ದಾಗ ಚೇಳು ಕಚ್ಚಿದ ಹೊರಗುರುತೊಂದನ್ನು ಬಿಟ್ಟರೆ ಮತ್ತೇನೂ ಇರಲಿಲ್ಲ. ಅವನೇ ಒಪ್ಪಿಕೊಳ್ಳುವಂತೆ ಅನಂತರ ಎಷ್ಟೋ ಸಲ ಎಷ್ಟು ಪ್ರಯತ್ನಪಟ್ಟರೂ ಅಷ್ಟು ಪರಿಪೂರ್ಣವಾದ ಪ್ರತ್ಯಗಾತ್ಮಾನುಭವ ಉಂಟಾಗಲಿಲ್ಲವಂತೆ.

ಈ ಘಟನೆಯು ರವೀಂದ್ರನ ಆಧ್ಯಾತ್ಮಿಕ ಉನ್ಮುಖತೆಗೆ ನಿದರ್ಶನವಾಗಿದೆ. ಇಂಥ ವ್ಯಕ್ತಿವರರು ಬಾಳಿನಲ್ಲಿ ಬಹುಬಗೆಯ ಸುಖ–ದುಃಖ–ಸಾಧನಗಳನ್ನು ಗುರುತಿಸಿ, ಅವುಗಳ ಆತ್ಯಂತಿಕ ನಿಯಂತೃತ್ವವನ್ನು ದೇವರು ಎಂದು ಭಾವಿಸಿ, ತತ್ಸಮರ್ಪಣಬುದ್ಧಿಯಿಂದ ಎಲ್ಲ ಕರ್ಮವನ್ನೂ ಮಾಡುತ್ತ ಹೋಗುತ್ತಾರೆ. ಅದರಿಂದಲೇ ಆತನ ಕಾವ್ಯಜೀವನದ ೨ನೆಯ ಅಧ್ಯಾಯವು ಲೌಕಿಕ ರೀತಿಯ ಶುದ್ಧವಾದ ಕಾವ್ಯರಸವನ್ನು ಅಪೇಕ್ಷಿಸದೆ, ಅಲೌಕಿಕ ಮಟ್ಟದ ಹಿಂದಿನ ಮೆಟ್ಟಿಲಾದ ಭಕ್ತಿಸ್ತೋತ್ರದ ರಸವನ್ನು ಈಂಟಲೆಳಸಿ ಕಾವ್ಯವನ್ನು ರಚಿಸತೊಡಗಿದ್ದು ಸಾರ್ಥಕವಾಗಿದೆ."

" ನೈವೇದ್ಯವೆಂದರೆ ದೇವರಿಗರ್ಪಣವಲ್ಲವೇ ? "

" ಹೌದು :

ಬ್ರಹ್ಮಾರ್ಪಣಂ ಬ್ರಹ್ಮಹವಿರ್ಬ್ರಹ್ಮಾಗ್ನೌ ಬ್ರಹ್ಮಣಾ ಹುತಂ ।
ಬ್ರಹ್ಮೈವ ತೇನ ಗಂತವ್ಯಂ ಬ್ರಹ್ಮಕರ್ಮಸಮಾಧಿನಾ ॥

—ಎಂಬ ತತ್ವವು ಭಾರತೀಯತೆಯ ಸಾರಸರ್ವಸ್ವವಲ್ಲವೇ? ಅಂದಮೇಲೆ ರವೀಂದ್ರನೆಂತು ಪ್ರೌಢನಾದಮೇಲೆ ಉಕ್ತತತ್ವವನ್ನು ಅವಲಂಬಿಸದೆಯೇ ಉಳಿದಾನು? ದೈವಸಮರ್ಪಣಬುದ್ಧಿಯ ಮೂಲಕ ಶಾಂತಿಯನ್ನು ಹೊಂದುವುದೇ ಬಾಳಿನ ದೊಡ್ಡ ಗುರಿ ಎಂದು ನಂಬಿದ್ದ ರವೀಂದ್ರ.

ರವೀಂದ್ರನಿಗೂ ಶಾಂತಿನಿಕೇತನಕ್ಕೂ ಇರುವ ನಿಕಟ ಸಂಬಂಧವನ್ನು ಹೇಳಲಿದು ತಕ್ಕ ಸಮಯ. ಹೆಸರೇ ಮೊದಲು **ಶಾಂತಿನಿಕೇತನ!** ಎಂದಮೇಲೆ ರವೀಂದ್ರನು ಶಾಂತಿಯನ್ನು ಕೊಟ್ಟು ಶಾಂತಿಯನ್ನು ಪಡೆಯಲು ಅಲ್ಲಿ ಯಾವ ಆವರಣವನ್ನು ನಿರ್ಮಿಸಿರಬಹುದು? ಎಂಬುದು ಯಾರ ಕುತೂಹಲವನ್ನಾದರೂ ಕೆರಳಿಸದಿರದು. ರವೀಂದ್ರನಿಗೆ ಜನತೆಯೇ ಬ್ರಹ್ಮ. ಅವನ ಗುರುತ್ವ–ಕವಿತ್ವಗಳ ಸೇವೆ ಜನತೆಗೆ ಸಲ್ಲಲು ಶಾಂತಿನಿಕೇತನವು ಎಂಥ ಪ್ರೇರಣೆಯನ್ನಿತ್ತಿರಬೇಕು ! "

" ಅಷ್ಟು ಚೆನ್ನಾಗಿದೆಯೇ ಶಾಂತಿನಿಕೇತನ ? "

" ಹೌದು : ಶಾಂತಿಪ್ರೇರಕವಾದ ಚೆಲುವೆ ನಿಜವಾದ ಚೆಲುವು; ಚೆಲುವಿನ ಮಿಕ್ಕ ಬಗೆಗಗಳು ಭ್ರಾಂತಿಪ್ರೇರಕಗಳು. ಶಾಂತಿನಿಕೇತನವನ್ನೊಂದು ಬರಿಯ

ಶಾಲೆಯನ್ನಾಗಿ ಮಾಡಬೇಕೆಂದು ಕವಿ ಬಯಸಲಿಲ್ಲ. ಅದು ಇಡಿ ಭಾರತದ ಆತ್ಮಕ್ಕೆ ಒಂದು ಮನೆಯಾಗಬೇಕೆಂದು ಆತ ಆಶಿಸಿದನು.

ಶಾಂತಿನಿಕೇತನವು ಮಹರ್ಷಿ ದೇವೇಂದ್ರನಾಥ ಠಾಕೂರರ ತಪೋವನವಾಗಿತ್ತು. ಅಲ್ಲಿ ಅವರು ಸದಾ ಧ್ಯಾನಮಗ್ನರಾಗಿ ಇರುತ್ತಿದ್ದರು. ಅಲ್ಲಿ ಮರಗಳಿಗಿಂತ ಪೊದೆಗಳೇ ಜಾಸ್ತಿಯಾಗಿದ್ದವು; ಎರಡೇ ಎರಡು 'ಛಾತೀಂ' ಮರಗಳು ಮಾತ್ರ ಎದ್ದುಕಾಣುತ್ತಿದ್ದವು. ಈಗ ಶಾಂತಿನಿಕೇತನವು ಅನೇಕ ತರುಲತಾಕುಂಜಗಳಿಂದ ಕಂಗೊಳಿಸುತ್ತದೆ. ಶರತ್ಕಾಲದಲ್ಲಿ ಮಾಲತಿಯ ಬಳ್ಳಿಯ ಬಿಳಿಯ ಹೂಗಳು ಅಲ್ಲಿ ಅರಳಿರುತ್ತವೆ. ಮಹರ್ಷಿಗಳು ಅಲ್ಲಿ ದೈವ ಭಕ್ತಿಪ್ರೇರಕವಾದ ವಿವಿಧ ನೀತಿಸೂತ್ರಗಳನ್ನು ಕಲ್ಲುಗಳಮೇಲೆ ಕೊರೆಯಿಸಿದ್ದರು. ಪ್ರಾಣಿಹತ್ಯೆ, ಮಾಂಸಾಶನ, ವಿಗ್ರಹಾರಾಧನೆ, ದೇವರ ಹಾಗೂ ಪೂಜೆಯ ಬಗ್ಗೆ ಕೀಳು ಮಾತನಾಡುವುದು ಮತ್ತು ಅಶ್ಲೀಲ ಹಾಸ್ಯದಲ್ಲಿ ಅಲ್ಪವಾದರೂ ತೊಡಗುವುದು ಆಶ್ರಮದ ಆವರಣದಲ್ಲಿ ವರ್ಜ್ಯ—ಎಂದು ಕಲ್ಲುಗಳು ಕೂಗಿ ಸಾರುತ್ತಿದ್ದವು. 'ಸೇಫಾಲಿ' ವೃಕ್ಷಗಳ ಕಾಡುಬೆಳೆಯ ಅಕ್ರಮ ಪರಾಕ್ರಮದಿಂದಲೂ ಮಾವಿನ ಮರಗಳಿಂದಲೂ ಸಾಲುವೃಕ್ಷಗಳ ಸಾಲುಗಳಿಂದಲೂ ಶಾಂತಿನಿಕೇತನವೀಗ ಸೌಂದರ್ಯಮಂದಿರವಾಗಿದೆ. ಭಾರತದ ಪರಿಪೂರ್ಣ ಐಕ್ಯವನ್ನು ಸಾಧಿಸಿ, ಅಷ್ಟಕ್ಕೇ ನಿಲ್ಲದೆ, ಜಗತ್ತಿನ ಐಕ್ಯವನ್ನೂ ಸಾಧಿಸುವಷ್ಟರ ಮಟ್ಟಿನ ಶಿಕ್ಷಣವನ್ನು ಜನರಿಗೆ ಕೊಡಬೇಕೆಂಬುದೇ ರವೀಂದ್ರನು ಶಾಂತಿನಿಕೇತನ ಶಾಲೆಯನ್ನು ಸ್ಥಾಪಿಸಿದುದರ ಮಹೋದ್ದೇಶ. ಅಸಹಕಾರ ಕ್ರಾಂತಿಯನ್ನು ಗಾಂಧೀಜಿ ಪ್ರಾರಂಭಿಸಿದಾಗ ರವೀಂದ್ರನು ಅದಕ್ಕೆ ಸಮ್ಮತಿಸದಿರಲು ಆತನಲ್ಲಿ ಅಡಗಿದ್ದ ಈ ಆಳವಾದ ಅಂತಾರಾಷ್ಟ್ರೀಯತೆಯೇ ಕಾರಣವೆನ್ನಲಾಗಿದೆ. ಆದರೆ ಅಂಥ ಸ್ವಾತಂತ್ರ್ಯಾಂದೋಲನದ ವಿರೋಧವು ನಮ್ಮ ಜನರಿಗೆ ಆಡಳಿತಜ್ಞಾನ ಸಾಲದು ಎಂಬ ವಾಸ್ತವಿಕ ಪ್ರಜ್ಞೆಯಿಂದ ಹೊರಟಿದ್ದರೆ ಅರ್ಧ ಸಮರ್ಥನೀಯ ಎಂದು ತೋರುತ್ತಿತ್ತು. ಆಗಲೂ ಪೂರ ಸಮರ್ಥನೀಯವಲ್ಲ; ಏಕೆಂದರೆ ಪರದಾಸ್ಯವು ಹೆಚ್ಚು ಕಾಲ ಮುಂಬರಿದಷ್ಟೂ ಸ್ವಶಾಸನಶಕ್ತಿ ಹ್ರಾಸವಾಗುತ್ತ ಹೋಗುವುದೇ ವಿನಾ ವೃದ್ಧಿಯಾಗಲಾರದು."

"ಈ ವಿಚಾರ ರವೀಂದ್ರನಿಗೆ ಹೊಳೆಯಲಿಲ್ಲವೇ?"

"ಹೊಳೆಯದಿರಬಹುದು; ಒಮ್ಮೆ ಹೊಳೆದಿದ್ದರೂ ಪಡೆದ ಸ್ವಾತಂತ್ರ್ಯ

ವನ್ನು ನಮ್ಮ ಜನ ಬಹಳ ದಿನ ಉಳಿಸಿಕೊಳ್ಳಲು **ಅಂದು** ಸಮರ್ಥರಾಗಿರಲಿಕ್ಕಿಲ್ಲ ಎನ್ನಿಸಿದ್ದರೂ ಎನ್ನಿಸಿರಬಹುದು. ಏಕೆಂದರೆ ಇಳಿವಯಸ್ಸಿನಲ್ಲಿಯೂ ರವೀಂದ್ರನ ಅಭಿಪ್ರಾಯವು ನಮ್ಮ ಜನದ ಬಗ್ಗೆ ಆತ್ಮವಿಶ್ವಾಸವನ್ನು ವ್ಯಕ್ತಪಡಿಸುವಂಥ ದಾಗಿರಲಿಲ್ಲ. 'But in our country of course there are men, who in their hearts, are really women—and more than that, they are children ಆದರೆ ನಮ್ಮ ದೇಶದಲ್ಲಿಯಾದರೋ ಗಂಡಸ ರಿದ್ದಾರೆ; ಅವರ ಎದೆ ಮಾತ್ರ ಹೆಂಗಸರದ್ದು—ಅದಕ್ಕೂ ಹೆಚ್ಚಾಗಿ ಅವರು ಮಕ್ಕಳೇ ಎಂದರೂ ಎನ್ನಬಹುದು' ಎಂದು ಒಂದು ಸಂದರ್ಭದಲ್ಲಿ ಆತ ಉದ್ಗರಿಸಿದ್ದುಂಟು. ಆದುದರಿಂದ ಗಾಂಧೀಜಿಯ ನೇತೃತ್ವದಲ್ಲಿ ನಡೆದ ಅಸಹಕಾರ ಚಳವಳವನ್ನವನು ವಿರೋಧಿಸಿದನು. ಇಷ್ಟುಮಾತ್ರದಿಂದ ಗಾಂಧಿಯವರ ಸ್ವಾತಂತ್ರ್ಯಸಾಧನೆಯ ಪ್ರಯತ್ನಗಳನ್ನೆಲ್ಲ ಅವನು ಅಲ್ಲಗಳೆಯುತ್ತಿದ್ದನೆಂದಲ್ಲ; ತದ್ವಿರುದ್ಧವಾಗಿ ಅಂಥ ಪ್ರಯತ್ನಗಳಲ್ಲಿ ಸಹಕಾರ–ಸಹಾನುಭೂತಿಗಳನ್ನೇ ತೋರುತ್ತಿದ್ದನು.

ರವೀಂದ್ರನಿಗೆ ಪ್ರಾಚೀನ ಭಾರತದ ಧ್ಯಾನಶೀಲ ಮೌನವು ಅತ್ಯಂತ ಮೆಚ್ಚಿಗೆಯದಾಗಿತ್ತು; ಮತ್ತೆ ಅಂಥ ಪರಿಸರವನ್ನು ನಿರ್ಮಿಸಬೇಕೆಂಬುದು ಅವನ ಬಯಕೆ. ಇಂದಿನ ವಿದ್ಯಾಭ್ಯಾಸವು ಎಷ್ಟೋ ಕಡೆ ಯಾಂತ್ರಿಕ, ಆಕಸ್ಮಿಕ ಆಗಂತುಕ, ವಿದೇಶೀಯ ಭಾಷೆಯ ಮೂಲಕ ಉರುಹೊಡೆಯುವ ಸ್ವರೂಪ ವುಳ್ಳದ್ದು. ತದ್ವಿರುದ್ಧವಾಗಿ ಶಾಂತಿನಿಕೇತನದಲ್ಲಿ ಮಳೆಗಾಲ ಬಿಟ್ಟು ಮಿಕ್ಕೆಲ್ಲ ಕಾಲಗಳಲ್ಲೂ ಕಟ್ಟಡದ ಹೊರಗೇ ಪಾಠಪ್ರವಚನ ನಡೆಯುವಂತೆ ಆತನು ವ್ಯವಸ್ಥೆ ಮಾಡಿದನು. ವರ್ಷಭಾಗಾಂತಗಳಲ್ಲೂ ಇತರ ಸಂದರ್ಭಗಳಲ್ಲೂ ಕವಿ ಬರೆದ ನಾಟಕಗಳನ್ನೇ ವಿದ್ಯಾರ್ಥಿಗಳು ಆಡುತ್ತಿದ್ದರು. (ಬ್ರಾಹ್ಮಸಮಾಜದ) ಮತಧಾರ್ಮಿಕ ನೆಲಗಟ್ಟಿನ ಮೇಲೆಯೇ ಅಲ್ಲಿಯ ಚಟುವಟಿಕೆಗಳೆಲ್ಲವೂ ನಡೆಯುತ್ತಿದ್ದವು. ಅಲ್ಲಿದ್ದ ಗಾಜಿನ ಮನೆಯು ಶಾಲೆಯ ದೇವಸ್ಥಾನ. ಅದಕ್ಕೆ ನಾಲ್ಕು ಗೋಡೆಗಳಲ್ಲ, ಒಂದೂ ಇಲ್ಲ. ವಾರಕ್ಕೆ ಎರಡು ಸಲ ಅದರಲ್ಲಿ ದೇವ ಪೂಜೆ ನಡೆಯುತ್ತದೆ. ಪ್ರತಿದಿನ ಬೆಳಗ್ಗೆ ಮತ್ತು ಸಾಯಂಕಾಲ ಧ್ಯಾನಕ್ಕೆಂದು ಕಾಲಾವಧಿಯೊಂದನ್ನು ಗೊತ್ತುಮಾಡಲಾಗಿದೆ. ಯಾವನಾದರೊಬ್ಬ ವಿದ್ಯಾರ್ಥಿ ಧ್ಯಾನಮಾಡಲೊಲ್ಲದವನಾದರೆ ಸುಮ್ಮನಾದರೂ ಇರಬೇಕಾಗಿತ್ತು.

ಹಿಂದು ಹಬ್ಬಗಳನ್ನು ಶಾಲೆ ಆಚರಿಸುತ್ತಿದ್ದಿಲ್ಲ; ಆದರೆ ಕ್ರೈಸ್ತ, ಬುದ್ಧ, ಮಹಮ್ಮದ, ಚೈತನ್ಯ, ರಾಮಮೋಹನ ರಾಯ, ಮಹರ್ಷಿ ದೇವೇಂದ್ರನಾಥ ಠಾಕೂರ ಮುಂತಾದ ವಿಭೂತಿಪುರುಷರ ವರ್ಧಂತಿಗಳನ್ನು ಅಲ್ಲಿ ಆಚರಿಸಲಾಗುತ್ತಿತ್ತು. ಈ ದಿನಾಚರಣೆಗೆಲ್ಲಾ ಅರ್ಧ ಅರ್ಧ ದಿನದ ರಜೆ; ವರ್ಷದಲ್ಲಿ ಎರಡು ದೀರ್ಘ ರಜೆಗಳು ಇದ್ದವು.

ಶಾಂತಿನಿಕೇತನದ ಬಯಲು ಪ್ರದೇಶ, ಧಾರ್ಮಿಕ ಆವರಣ, ಗುರುಶಿಷ್ಯ ವಾತ್ಸಲ್ಯಗಳು ಪ್ರಾಚೀನ ಭಾರತದ ಗುರುಕುಲ ಪದ್ಧತಿಯನ್ನು ನೆನಪಿಗೆ ತಂದು ಕೊಡುತ್ತವೆ. ಆದರೆ ತನ್ನ ವಿದ್ಯಾಪೀಠದಲ್ಲಿ ತರಬೇತಾಗುವ ಶಿಷ್ಯರಲ್ಲಿ ಸ್ವತಂತ್ರ ವಿಚಾರಶೀಲ, ಮನೋದಾರ್ಢ್ಯ, ಸ್ವಾವಲಂಬನಪರತೆಗಳು ನೆಲೆ ನಿಲ್ಲಬೇಕೆಂದು ರವೀಂದ್ರನು ಅಮೇರಿಕದ ಸಂಯುಕ್ತ ರಾಜ್ಯಗಳಲ್ಲಿರುವ 'ಜಾರ್ಜ್ ಜೂನಿಯರ್ ರಿಪಬ್ಲಿಕ್ಕಿ'ನ ಸಂವಿಧಾನವನ್ನು ಅನ್ವಯಿಸಿ ಶಾಂತಿ ನಿಕೇತನವನ್ನೊಂದು ಸ್ವರಾಜ್ಯ ಸರಕಾರವನ್ನಾಗಿ ಮಾಡಿದನು. ಷೋಕಿಯ ವಸ್ತುಗಳನ್ನುಳಿದು ಬೇಕಾದ ಎಲ್ಲ ವಸ್ತುಗಳನ್ನೂ ವಿದ್ಯಾರ್ಥಿಗಳಿಗೆ ಒದಗಿಸಲಾಗಿತ್ತು: ಅವರಿಗೆ ಅವರವೇ ಆದ ಹಾಲು-ಹೈನ-ಕೃಷಿಕ್ಷೇತ್ರ, ಟಪ್ಪಾಲು ಕಟ್ಟಿ, ಆಸ್ಪತ್ರೆ, ದೇವಸ್ಥಾನ, ಕಮ್ಮಾರಸಾಲೆಗಳಿರುವಂತೆ ವ್ಯವಸ್ಥೆಯನ್ನು ಮಾಡಲಾಯಿತು. ತನ್ನ ಪುಸ್ತಕಗಳನ್ನು ಪ್ರಕಟಿಸಲು ಶಾಂತಿನಿಕೇತನಕ್ಕೆ ತನ್ನದೇ ಆದ ಮುದ್ರಣಾಲಯವಿದೆ. ಔದ್ಯಮಿಕ ತರಬೇತಿನ ಕಟ್ಟಡಗಳು ಅದರಲ್ಲಿವೆ; ಬಟ್ಟೆ ನೇಯುವ ಮಗ್ಗಗಳೂ ಅಲ್ಲಿ ಸಿದ್ಧವಾಗಿವೆ. ಅದರ ಪುಸ್ತಕ ಭಂಡಾರದಲ್ಲಿ ಅತ್ಯುತ್ತಮ ಲಲಿತಸಾಹಿತ್ಯಕೃತಿಗಳಿವೆ. ಯೂರೋಪು ಮತ್ತು ಅಮೆರಿಕಗಳ ಗ್ರಂಥಕರ್ತರು ಕಾಣಿಕೆಯಾಗಿ ಕೊಟ್ಟ ಪುಸ್ತಕಗಳನೇಕ ಅದರಲ್ಲಿವೆ. ಶಾಂತಿನಿಕೇತನದಿಂದ ಹುಡುಗರು ಹಳ್ಳಿಗಳಿಗೆ ಹೋಗಿ ರಾತ್ರಿಶಾಲೆಗಳನ್ನು ತೆರೆದು ಕೂಲಿಕುಂಬಳಿಯವರಿಗೂ ಹಿಂದುಳಿದ ವರ್ಗದವರಿಗೂ ಶಿಕ್ಷಣವನ್ನು ಕೊಡುತ್ತಿದ್ದರು. ಹೀಗೆ ಹುಡುಗರು ಜಾತೀಯ ಪ್ರತ್ಯೇಕತೆಯನ್ನು ಮುರಿದು ತಮ್ಮ ನಾಡಿಗಾಗಿ ದುಡಿಯುವುದನ್ನು ಕಲಿಯುತ್ತಾರೆ. ಶಾಂತಿನಿಕೇತನದಲ್ಲಿ ಹುಡುಗರೇ ನಡೆಸುವ ನ್ಯಾಯಾಲಯವಿತ್ತು. ಅವರವೇ ಆದ ಶಿಕ್ಷೆಗಳನ್ನವರು ವಿಧಿಸುತ್ತಿದ್ದರು. ದೈಹಿಕ ಶಿಕ್ಷೆ ಅಲ್ಲಿಲ್ಲ. ಹುಡುಗರಲ್ಲಿ ಅನೇಕರು ಕ್ರೀಡಾ ಪಟುತ್ವವನ್ನು ಗಳಿಸಲು ತಕ್ಕ ಏರ್ಪಾಡೂ ಅಲ್ಲಿದೆ.

ಆದರೆ ಈ ಬಾಹ್ಯೋಪಕರಣಗಳೆಲ್ಲವನ್ನೂ ಮೀರಿದ ಪ್ರಚೋದಕಶಕ್ತಿ ಎಂದರೆ ಸ್ವತಃ ರವೀಂದ್ರನ ಉಪಸ್ಥಿತಿ. ಕಾರ್ಯಬಾಹುಲ್ಯದಿಂದ ಆತನಿಗೆ ಪಾಠ ಹೇಳಲಾಗದಿದ್ದರೂ ಆತ ಆಗಾಗ ಶಾಲೆಗೆ ಬಂದುಹೋಗುತ್ತಿದ್ದುದೇ ವಿದ್ಯಾರ್ಥಿಗಳ ಮೇಲೆ ಹೆಚ್ಚಿನ ಪ್ರಭಾವ ಬೀರಲು ಸಾಕಾಯಿತು. ಆತ ಆರಿಸಿ ಕೊಂಡ ಉಪಾಧ್ಯಾಯರು ದಕ್ಷರೂ ಕುಶಲರೂ ಪ್ರಾಮಾಣಿಕರೂ ಆಗಿದ್ದರು. ಅಜಿತ ಚಕ್ರವರ್ತಿ, ನಂದಲಾಲ ಬಸು, ಅಸಿತ ಹಲ್ದಾರ ಮುಂತಾದವರು ಅಂದಿನ ಪ್ರಸಿದ್ಧ ಆಚಾರ್ಯರು. ರೆವರೆಂಡ್ ಫಾದರ್ ಸಿ. ಎಫ್. ಅಂಡ್ರೂಸರು ಸಹ ತಮ್ಮ ನಿಃಸ್ವಾರ್ಥ ವ್ಯಕ್ತಿತ್ವದಿಂದ ಅಲ್ಲಿ ಪ್ರಭಾವಿಗಳಾಗಿ ದುಡಿಯುತ್ತಿದ್ದರು. ವಿಲ್ಲಿ ಪಿಯರ್‌ಸನ್, ಲಿಯೊನಾರ್ಡ್ ಎಲ್ಮ್‌ಹರ್ಸ್ಟ್, ಸಿಲ್ವನ್ ಲೆವಿಗಳಲ್ಲದೆ ಕವಿಯ ಮನೆತನದ ವಿದ್ವದ್ಬಾಂಧವರೂ ಅಲ್ಲಿ ಗಣ್ಯವಾದ ಸೇವೆಸಲ್ಲಿಸಿದರು. ಒಟ್ಟನಲ್ಲಿ ಅಂದಿನ ಶಾಂತಿನಿಕೇತನದಲ್ಲಿ ಕಂಡುಬಂದಷ್ಟು ವಿವಿಧ ಹಾಗೂ ವಿಶಿಷ್ಟ ವ್ಯಕ್ತಿತ್ವಪ್ರಭಾವವು ಇನ್ನಾವ ಶಿಕ್ಷಣಸಂಸ್ಥೆಯಲ್ಲೂ ಕಾಣಸಿಗುತ್ತಿದ್ದಿಲ್ಲ.

ಹೆಸರಿಗೆ ತಕ್ಕಂತೆ ಶಾಂತಿನಿಕೇತನವು ರವೀಂದ್ರನ ಶಾಂತಿದಾಯಕ ನಿವಾಸ ಆಯಿತು. ಅಂಥ ಸ್ನೇಹಮಯ ಆವರಣವು ಇನ್ನೆಲ್ಲೂ ಸಿಗಲಾರದು : ಎಲ್ಲೆಲ್ಲೂ ವಿರಾಮ, ಎಲ್ಲರೂ ದಯಾಮಯರು ! ರವೀಂದ್ರನನ್ನು ಅಲ್ಲಿ ಯಾರೂ ಎಷ್ಟು ಹೊತ್ತಿಗೂ ನೋಡಬಹುದಾಗಿತ್ತು. ನಸುಕಿನಲ್ಲೂ ಬೆಳುದಿಂಗಳಿನಲ್ಲೂ ಆತ ಅಲ್ಲಿ ಸಂಚರಿಸುತ್ತಿದ್ದನು. ಅವನು ಬಹಳ ನಿದ್ರೆ ಮಾಡುತ್ತಿದ್ದಿಲ್ಲ. ದಿನವೂ ಸಂಗೀತಕಚೇರಿ ಅಲ್ಲಿ ನಡೆಯುತ್ತಿತ್ತು. ಸಾಮಾನ್ಯ ದಿನಗಳಲ್ಲಿ ರವೀಂದ್ರನ ಸುತ್ತ ವಿದ್ಯಾರ್ಥಿಗಳಿದ್ದರೆ ದೀರ್ಘ ರಜೆಗಳಲ್ಲಿ ಅವನ ಸ್ನೇಹಿತರು ಜಗತ್ತಿನ ಎಂಟೂ ದಿಕ್ಕುಗಳಿಂದ ಬಂದು ಸುತ್ತುವರಿಯುತ್ತಿದ್ದರು. ಹತ್ತಿರದಲ್ಲೇ ಅವನ ಅಣ್ಣ ದ್ವಿಜೇಂದ್ರನಾಥರೂ ವೃದ್ಧಾಪ್ಯವನ್ನು ಕಳೆಯುತ್ತಿದ್ದರು. ಅಪಕ್ಕೆ ಸ್ವಲ್ಪ ದೂರದಲ್ಲಿ ಮಗನೂ ಸೊಸೆಯೂ ವಾಸವಾಗಿದ್ದರು. ಪಾವಿತ್ರ್ಯವೇ ಸೌಂದರ್ಯ ಎಂದು ಗಾಂಧಿಯವರು ಹೇಳಿದ್ದಲ್ಲಿ ಸಾರ್ಥಕವಾಗಿತ್ತು. ೧೯೦೨ರಲ್ಲಿ ರವೀಂದ್ರನು ತನ್ನ ಹೆಂಡತಿ ಮೃಣಾಲಿನೀದೇವಿಯನ್ನು ಕಳೆದುಕೊಂಡನು."

೭. ರವೀಂದ್ರನ ಆದರ್ಶ ದಾಂಪತ್ಯ

“ರವೀಂದ್ರ–ಮೃಣಾಲಿನಿಯರ ದಾಂಪತ್ಯ ಆದರ್ಶವಾಗಿದ್ದಿರಬಹುದು, ಅಲ್ಲವೆ ?”

“ಅದನ್ನು ರವೀಂದ್ರನ ಮಾತಿನಲ್ಲೇ ಹೇಳುತ್ತೇನೆ: ‘ಶಾಂತಿನಿಕೇತನದಲ್ಲಿ ಅವಳು ನನ್ನೊಂದಿಗೆ ಕೆಲಸ ಮಾಡುತ್ತಿದ್ದಳು. ಆದರೆ ನಾವು ಈಗಿನ ಹುಡುಗ–ಹುಡುಗಿಯರಂತೆ ಪ್ರದರ್ಶನಶೀಲರಾಗಿ ಕೆಲಸಮಾಡುತ್ತಿದ್ದಿಲ್ಲ. ನಾವು ಪ್ರೇಮ ವಿವಾಹದಿಂದ ಜೀವನವನ್ನು ಆರಂಭಿಸಿದವರಲ್ಲ. ಆದರೆ ಅದರಿಂದ ನಮಗೆ ನಮ್ಮ ಬಾಳಿನಲ್ಲಿ ಯಾವ ಲೋಪವೂ ಕಾಣಿಸಲಿಲ್ಲ. ನಮ್ಮ ಸಂಬಂಧವು ಅತ್ಯಂತ ಹೆಚ್ಚಿನ ಗೌರವವನ್ನು ಆಧರಿಸಿತ್ತು.’”

“ಪ್ರೀತಿಸುವ ಸಂಕಲ್ಪದಿಂದಲೇ ಮದುವೆಯಾಗುವ ಭಾರತೀಯ ಪದ್ಧತಿಯಂತೆಯೇ ವಿವಾಹವಾದವನೆಂದಾಯ್ತು—ರವೀಂದ್ರ. ಬಹುಶಃ ಅದರಿಂದಲೇ **ಸಂಕಲ್ಪಶಕ್ತಿ ಅಧಿಕವಾಗಿದ್ದ** ಆ ದಂಪತಿಗಳು ಆದರ್ಶ ಪ್ರೇಮಿಗಳಾಗಿ ಬಾಳಿದರು.”

“ನಿಜ. ಶಾಂತಿನಿಕೇತನದಲ್ಲಿರುವಾಗ ಮತ್ತೆ ಎರಡೇ ವರ್ಷಗಳಲ್ಲಿ ರವೀಂದ್ರನು ತನ್ನ ಎರಡನೆಯ ಮಗಳ ಸಾವನ್ನೂ ನೋಡಬೇಕಾಯ್ತು. ಕೊನೆಗೆ ಅವನು ಶಾಂತಿನಿಕೇತನವನ್ನು ಬಿಟ್ಟು ಆಲ್ಮೋರಕ್ಕೆ ಹೋದನು. ಅವನ ಹಿರಿಯ ಮಗ ೧೯೦೭ರಲ್ಲಿ ಮೊಂಘೀರಿನಲ್ಲಿ ಮಡಿದನು. ಈ ದುಃಖದ ಕಾಲದಲ್ಲಿ ಆತನು ಸಾರ್ವಜನಿಕ ಕಾರ್ಯದಲ್ಲಿ ಸತತವಾಗಿ ದುಡಿಯುತ್ತಿದ್ದುದು ಬಹುಶಃ ದುಃಖವನ್ನು ಮರಿಯಲೆಂದೇ ಇರಬೇಕು.”

“ಕವಿಗಳು ತಮ್ಮ ಸುಖವನ್ನಷ್ಟೇ ಅಲ್ಲದೆ ದುಃಖವನ್ನೂ ಹಾಡಿ ಕಳೆದು ಕೊಳ್ಳಬಲ್ಲರೆಂದು ಕೇಳಿದ್ದೇನೆ.”

“ಹೌದು; ಹೆಂಗಸರೂ ಮಕ್ಕಳೂ ಅತ್ತು ಕಳೆದುಕೊಂಡಹಾಗೆ!”

“ಆಗಲಿ—ನಾವು ಅಳುವವರು; ನೀವು ಅಳುವ ವರ್ಗದವರೂ ಅಲ್ಲ—ಹಾಡುವ ವರ್ಗದವರಾದರೂ ಆ ಬಗ್ಗೆ ಹಾಡಿ ಕಳೆದುಕೊಂಡದ್ದನ್ನು ನಾನು ಕಂಡಿಲ್ಲ.”

"ಹಾಡುವವರು ಹಾಡುತ್ತಾರೆ; ಹಾಡಲೊಲ್ಲದವರು ತಮ್ಮ ವಿಚಾರ ಲಹರಿಗಳಲ್ಲಿ ದುಃಖವನ್ನು ಕಾಯಿಸಿ ತೆಳುವಾದ ಆವಿಯನ್ನಾಗಿ ಮಾಡಿ ಬಿಡುತ್ತಾರೆ; ವರ್ತನೆಯನ್ನು ಅದರಿಂದ ಪರಿವರ್ತಿಸಿಕೊಳ್ಳುತ್ತಾರೆ."

"ಹಾಗಾದರೆ ರವೀಂದ್ರನೇನು ಮಾಡಿದ?"

"ಎರಡನ್ನೂ ಮಾಡಿದ: ಸ್ಮರಣ, ಉತ್ಸರ್ಗ, ಶಿಶು ಮತ್ತು ಖೇಯೆ ಎಂಬ ನಾಲ್ಕು ಕವನಸಂಗ್ರಹಗಳಾಗ ಪ್ರಕಟವಾದವು. ಅವುಗಳಲ್ಲಿ ಹಳೆಯ ಕವನಗಳೊಟ್ಟಿಗೇ ಹೊಸ ಕವನಗಳನ್ನೂ ಬರೆದು ಸೇರಿಸಲಾಗಿತ್ತು. 'ಶಿಶು' ವಿನಲ್ಲಿ ಹೆಚ್ಚಾಗಿ ಕವಿ ತನ್ನ ದುಃಖವನ್ನು ತೋಡಿಕೊಂಡಿದ್ದಾನೆ. ಆದರೆ ವಿಚಾರಶೀಲನಾದ ಅವನಿಗೆ ಪ್ರೇಮ (Love) ಇತ್ತಲ್ಲದೆ ಸಂಗ (Attachment) ಎಂಬುದು ಯಾರ ಬಗ್ಗೂ ಇರಲಿಲ್ಲ. ತಾಯ ಮರಣಾನಂತರ ಅವನ ಮನಸ್ಸಿಗೆ ಅಂಥ ಸಂಸ್ಕಾರ ಸಿಕ್ಕಿತ್ತು. ಈ ಅಂಶವನ್ನು ಅವನೇ ಒಂದು ಸಂದರ್ಭದಲ್ಲಿ ಸ್ಪಷ್ಟಪಡಿಸಿದ್ದಾನೆ. ಆದುದರಿಂದ ಅವನಿಗೆ ದುಃಖವಾದರೂ ಅವನು ಆ ದುಃಖಕ್ಕೆ ಸೋಲಲಿಲ್ಲ."

"ದುಃಖವಾಗುವುದು ಮತ್ತು ಅದಕ್ಕೆ ಸೋಲದೆ ಇರುವುದು ಒಳ್ಳೆಯ ತರಬೇತೀ ಸರಿ. ಸಾಮಾನ್ಯರಿಗದು ಅಸಾಧ್ಯ. ಸಾಮಾನ್ಯರಲ್ಲಿ ಕೇವಲ ಸ್ವಾರ್ಥಿಗಳು ಪರರ ಸುಖದುಃಖಗಳತ್ತ ಕಲ್ಲಾಗಿರುವರು; ಕೆಲವೇ ಜನರು ಅವರಿಕ್ಕಾಗಿ ಮರುಗಿ ಶಕ್ತಿಮೀರಿ ನೆರವಿತ್ತು ತಮಗೇ ಎಷ್ಟೋ ವೇಳೆ ಕಷ್ಟವನ್ನು ತಂದುಕೊಳ್ಳುವರು. ಅನುಕಂಪದ ನಟನೆಯನ್ನು ಬಿಟ್ಟುಬಿಡಿ; ಆದರೆ ನಟ ಸಾರ್ವಭೌಮರೇ ಸಮಾಜದಲ್ಲಿ ಅಧಿಕಸಂಖ್ಯರು!"

"ಕೆಲ ಪದ್ಯಗಳಲ್ಲಿ ರವೀಂದ್ರನು ಪತ್ನಿಯ ಬಗ್ಗೆ ಕೊರಗಿದುದು ಕಂಡು ಬರುತ್ತದೆ. ಅವಳ ನಿಃಸ್ವಾರ್ಥ ಸೇವೆಯನ್ನವನು ಕೊಂಡಾಡಿದ್ದಾನೆ; ಮುಂದಿನ ಜನ್ಮದಲ್ಲಿ ತಾನು ಅವಳನ್ನು ಸೇರುವ ಬಯಕೆಯನ್ನು ವ್ಯಕ್ತಪಡಿಸಿದ್ದಾನೆ."

೮. ಕಾದಂಬರಿಕಾರ ರವೀಂದ್ರ

“ ೧೯೦೧–೧೯೦೭ರ ನಡುವೆ ರವೀಂದ್ರನು ಕಾದಂಬರಿಗಳನ್ನು ಹೆಚ್ಚಾಗಿ ಬರೆದನು. ‘ Eyesore ಕಣ್ಣುಹುಗಳು ’ ಮತ್ತು ‘ Wreck ಜಲಸಮಾಧಿ ’ ಎಂಬ ಕಾದಂಬರಿಗಳು ಮೊದಲನೆಯವು ; ಇವು ಅಷ್ಟೇನೂ ಚೆನ್ನಾಗಿಲ್ಲ.— ‘ ಗೋರಾ ’ ಎಂಬುದು ಈ ಅವಧಿಯಲ್ಲಿ ಬರೆದ ಕೊನೆಯ ಕಾದಂಬರಿ. ಇದು ಬಂಗಾಳಿ ಕಾದಂಬರಿಗಳಲ್ಲೆಲ್ಲಾ ಅತ್ಯುತ್ತಮವಾದುದೆಂದು ಕೆಲವರ ಮತ.”

“ ರವೀಂದ್ರನ ಶೈಲಿ ಬಹಳ ಆಕರ್ಷಕ ಮತ್ತು ಅವನ ವರ್ಣನೆ ತುಂಬ ಸ್ವಾರಸ್ಯವುಳ್ಳದ್ದು ಎಂದು ಹೇಳುತ್ತಾರಲ್ಲ—ನಿಜವೆ ? ”

“ ನಿಜ ; ಇಂದಿನ ಹೊಸ ಕನ್ನಡ ಕಾದಂಬರಿಗಳಲ್ಲಿ ಎಷ್ಟೋ ಕೇವಲ ವಸ್ತುಕಥನಕ್ಕಷ್ಟೇ ಅಂಟಿಕೊಂಡಂಥವು. ಶೈಲಿಗೂ ಅವಕ್ಕೂ ಮೈಲುಗಟ್ಟಲೆ ದೂರ ; ವರ್ಣನೆಯನ್ನು ಹುಡುಕುವವ ವಿವರ್ಣನಾಗಬೇಕು ! ಆದರೆ ವಸ್ತು ಸಂವಿಧಾನಚಾತುರ್ಯವೂ ಅಷ್ಟೇ ಅಗತ್ಯ. ‘ ಕಣ್ಣುಹುಗಳು ’ ಮತ್ತು ‘ ಜಲ ಸಮಾಧಿ ’ಗಳಲ್ಲಿ ವಸ್ತುಸಂಘಟನೆ ಚೆನ್ನಾಗಿಲ್ಲ. ಮಿಕ್ಕ ಕಾದಂಬರಿಗಳಲ್ಲಿ ರವೀಂದ್ರನು ಎರಡಕ್ಕೂ ಸಮಪ್ರಾಧಾನ್ಯವನ್ನು ಕೊಟ್ಟಿದ್ದಾನೆ. ‘ ಆತ್ಮಕ್ಕೆ ತಕ್ಕ ದೇಹ, ದೇಹಕ್ಕೆ ತಕ್ಕ ಆತ್ಮ ’ ಎಂಬುದೇ ಕಲಾನ್ಯಾಯ. ರಸವು ದೇವರಿದ್ದ ಹಾಗೆ, ಅದಕ್ಕಾಗಿ ಶೈಲಿಯಿಂದ ವಿನ್ಯಸ್ತವಾದ ವಸ್ತುವು ಜೀವಾತ್ಮವಿದ್ದ ಹಾಗೆ, ರೂಪ ಅಥವಾ ಶೈಲಿಯು ಅಂಗ–ಉಪಾಂಗಗಳಿಂದ ಕೂಡಿದ ದೇಹವಿದ್ದ ಹಾಗೆ. ದೇವರಾದ ರಸವು ಸರ್ವಕಲಾಸಾಧಾರಣ. ಜೀವಾತ್ಮರೂಪದ ವಸ್ತುವಿನ ತಾತ್ಪರ್ಯವು ಕೃತಿ–ಕೃತಿಗೆ ಭಿನ್ನ. ಪ್ರತಿಯೊಂದು ಕೃತಿಯೂ ಜೀವೇಶ ಯುಕ್ತವಾದ ಶರೀರ ಅಥವಾ ಮನುಷ್ಯನಿದ್ದ ಹಾಗೆ. ಉತ್ತಮ ಮನುಷ್ಯನ ದರ್ಶನ ದೇವತ್ವದ ಕಲ್ಪನೆಯನ್ನು ನೋಟಕರಲ್ಲಿ ಮೂಡಿಸುವಂತೆ ಉತ್ತಮ ಸಾಹಿತ್ಯಕೃತಿಯು ರಸತ್ವವನ್ನು ರಸಿಕರ ಮನಸ್ಸಿಗೆ ತಂದುಕೊಡುತ್ತದೆ. ರವೀಂದ್ರನ ಕಾದಂಬರಿಗಳು ರಸದೈವತವನ್ನು ಸಾಕ್ಷಾತ್ಕರಿಸಿಕೊಡುತ್ತವೆ.

೯. ರವೀಂದ್ರನ ಸಾಮಾಜಿಕ, ಶೈಕ್ಷಣಿಕ ಚಟುವಟಿಕೆ

೧೯೦೫ರಲ್ಲಿ ವಂಗಭಂಗದ ಆಜ್ಞೆ ಹೊರಟಿತು. ಬಂಗಾಳಿಗಳನ್ನು ಒಡೆದು ಆಳಲು ಬ್ರಿಟಿಷರು ಹೂಡಿದ ತಂತ್ರ ಎಂದು ಬಗೆದು ಬಂಗಾಳಿಗಳು ಅದನ್ನು ಪ್ರತಿಭಟಿಸಿದರು. ಆ ಸಮಯದಲ್ಲಿ ರವೀಂದ್ರನು ಸಾಮ್ರಾಜ್ಯವಾದವನ್ನು ಖಂಡಿಸಿದನು. ಭಾರತದಲ್ಲಿ ವಿದೇಶೀಯ ವಸ್ತುಗಳ ಬಹಿಷ್ಕಾರ ಆರಂಭವಾಯ್ತು. ಆಗ ರಾಜಕೀಯ ಕೊಲೆಗಳೂ ದರೋಡೆಗಳೂ ನಡೆದವು. ರವೀಂದ್ರನು ಇಂಥ ಕೃತ್ಯಗಳಿಂದ ಬಹಳ ದೂರ ಉಳಿದನು. 'ಮನೆ ಮತ್ತು ಜಗತ್ತು' ಎಂಬ ಕೃತಿಯಲ್ಲಿ ಅವನು ದೇಶಭಕ್ತರಲ್ಲಿ ಕಂಡುಬಂದ ಅಸಹಿಷ್ಣುತೆಯನ್ನು ಬಲವಾಗಿ ಖಂಡಿಸಿದನು. ಆ ಬಗ್ಗೆ ನಿರ್ದಾಕ್ಷಿಣ್ಯದಿಂದ ವೇದಿಕಾಭಾಷಣಗಳನ್ನು ಮಾಡಿ ಜನರನ್ನು ಮುಗ್ಧಗೊಳಿಸಿದನು. ಅಂಥ ಭಾಷಣಗಳಲ್ಲಿ 'ಒಡೆಯನ ಬಯಕೆಯಂತೆ ದುಡಿಯುವುದು' ಎಂಬ ಭಾಷಣ ಅತ್ಯಾಕರ್ಷಕವಾಗಿತ್ತು.

ರವೀಂದ್ರನು ಸ್ವದೇಶೀಯ ಚಳವಳದ ಅನೇಕ ಮುಖಗಳ ನೇತೃತ್ವವನ್ನು ವಹಿಸಿದನು. ಅವನ ಹಾಡುಗಳು ವಿದ್ಯಾರ್ಥಿಗಳನ್ನು ಎಚ್ಚರಿಸಿದವು. **ಆದರೆ ಆತನು ಕಾಂಗ್ರೆಸ್ಸಿಗೆ ಸೇರಲಿಲ್ಲ;** ಹೊಸದಾಗಿ ರಚಿತವಾದ ರಾಷ್ಟ್ರೀಯ ಶಿಕ್ಷಣ ಪರಿಷತ್ತಿಗೆ ಸೇರಿದನು. ಆ ಪರಿಷತ್ತಿನಲ್ಲಿ ಅವನ ಉಪನ್ಯಾಸಮಾಲೆ ನಡೆಯಿತು. ಎರಡು ವರ್ಷಗಳ ಬಳಿಕ ಅದು 'ಸಾಹಿತ್ಯ' ಎಂಬ ಹೆಸರಿನಲ್ಲಿ ಅಚ್ಚಾಯಿತು. ಅದರ ಮೂರು ಸಂಪುಟಗಳ ಪೈಕಿ ಮೊದಲನೆಯದು ಸಾಮಾನ್ಯ ರಸಶಾಸ್ತ್ರದ ವಿಷಯಗಳನ್ನು ವಿವರಿಸುತ್ತದೆ; ಎರಡನೆಯದು ಸಂಸ್ಕೃತ ಸಾಹಿತ್ಯದ ಬಗ್ಗೆ ಹೇಳುತ್ತದೆ; ಮೂರನೆಯದು ಬಂಗಾಲಿಯ ಸಾಹಿತ್ಯವನ್ನು ಸಮಾಕ್ಷಿಸುತ್ತದೆ—ಟೆನಿಸನ್ ಮತ್ತು ಜಾಬರ್ಟರ ಕೃತಿಗಳ ಬಗ್ಗೂ ಅದರಲ್ಲಿ ಹೇಳಲಾಗಿದೆ. ರಾಷ್ಟ್ರೀಯ ಶಾಲೆ-ಕಾಲೇಜುಗಳನ್ನು ಸ್ಥಾಪಿಸಲು ರವೀಂದ್ರನು ನೆರವಾದನು. ಕೈಮಗ್ಗಗಳನ್ನು ಸ್ಥಾಪಿಸುವ ಪ್ರಚಾರದಲ್ಲಿ ತೊಡಗಿ ಹೇರಳ ಹಣವನ್ನು ಕಳೆದುಕೊಂಡ ಆತನು ೧೬ ವರ್ಷಗಳ ಬಳಿಕ ಗಾಂಧಿಯವರ ಚರಕ ಚಳವಳ ಸಾಕಷ್ಟು ಪ್ರಯೋಜನಕಾರಿಯಲ್ಲ ಎಂಬ ಅಭಿಪ್ರಾಯಕ್ಕೆ ಬಂದನು. ಸಹಕಾರಿ ಸಂಘಗಳನ್ನು ಸ್ಥಾಪಿಸುವುದ

ರಲ್ಲೂ ಅವನು ದುಡಿದನು. ಈ ಕಾರ್ಯಬಾಹುಲ್ಯದ ಕಾಲದಲ್ಲೂ ಆತನು ಬರೆಯುತ್ತಲೂ ಭಾಷಣ ಮಾಡುತ್ತಲೂ ಇದ್ದನು. ಆ ಬರಹ-ಭಾಷಣಗಳು ಇಂದಿಗೂ ಸ್ಫೂರ್ತಿದಾಯಕವಾಗಿವೆ. ಅವನ ಈ ಚಟುವಟಿಕೆಗಳ ಫಲವಾಗಿ ಬ್ರಿಟಿಷ್ ಸರಕಾರವು ಅವನ ರಾಜನಿಷ್ಠೆಯಲ್ಲಿ ಸಂಶಯತಾಳಿ ಅವನ ಕಾರ್ಯ ವಿಧಾನಗಳನ್ನೆಲ್ಲಾ ಸೂಕ್ಷ್ಮವಾಗಿ ನಿರೀಕ್ಷಣ ಮಾಡುತ್ತಿತ್ತು."

"ಇಷ್ಟಿದ್ದರೂ ರವೀಂದ್ರನು ಕವಿಯೆಂದು ಪ್ರಸಿದ್ಧನಾಗಿರುವಷ್ಟು ದೇಶ ಭಕ್ತನೆಂದೇಕೆ ಪ್ರಸಿದ್ಧನಾಗಿಲ್ಲ?"

"ಅಲ್ಲವೇ, ಆಗಲೇ ಒಂದು ಕಾರಣ ಸ್ಪಷ್ಟವಾಗಿದೆ; ಅವನಿಗೆ ದೇಶ ಸಮಸ್ಯೆಗಿಂತಲೂ ಮಾನವಕುಲದ, ಜಗತ್ತಿನ ಸಮಸ್ಯೆ ದೊಡ್ಡದೆನ್ನಿಸಿತ್ತು. ಎರಡನೆಯದಾಗಿ, ಅವನ ಕಾವ್ಯಪ್ರತಿಭೆಯು ಆತನ ಇತರ ಪ್ರತಿಭೆಗಳನ್ನು ಕಡೆಗಣಿಸಿ ನಿಲ್ಲುವಷ್ಟು ಉಜ್ವಲವಾಗಿತ್ತು. ಅವನ Aesthetic ರಸಾತ್ಮಕ Consciousness ಪ್ರಜ್ಞೆಯ ಜ್ವಾಲೆಯು ಮಿಕ್ಕ ಪ್ರಜ್ಞೆಗಳನ್ನು ಮೀರುವಷ್ಟು ಪ್ರಖರವಾಗಿತ್ತು. ಅವನು ಇನ್ನೂ ಹತ್ತು ಕಾಲ ಬದುಕಿದ್ದರೆ ಅವನ ವಿಶ್ವ ಭಾರತಿಯ ಕಾರ್ಯಪ್ರತಿಭೆಯು ಕಾವ್ಯಪ್ರತಿಭೆಯ ಕಾರ್ಯಗಳೆಲ್ಲವನ್ನೂ ಮೀರಿಸಿ ಬಿಡುತ್ತಿತ್ತೋ ಏನೋ! ಶಾಂತಿನಿಕೇತನವು ಅವನ ಜೀವಂತ ಮಹಾಕಾವ್ಯ ಎಂದು ಹೇಳಿದವರುಂಟು!

ಕವಿಯ ರಾಜಕೀಯ ಕಾರ್ಯಗಳು ಅನಂತರ ಒಮ್ಮಿಂದೊಮ್ಮೆ ನಿಂತು ಹೋದವು. ಏಕೆಂದರೆ ಮೊದಲಿನಿಂದಲೂ ಅವನ ಪ್ರಕಾರ **ರಾಷ್ಟ್ರೀಯ ಆಂದೋಲನವು ಸಮಾಜಸುಧಾರಣೆಯನ್ನು ಕಡೆಗಣಿಸಿದ್ದು ಅನ್ಯಾಯ** —ಎಂಬ ಅಭಿಪ್ರಾಯವಿತ್ತು. ಗಾಂಧಿಯವರೂ ಜವಾಹರಲಾಲರೂ ನಿಃಸಂಧಿಗ್ಧ ಜನನಾಯಕರಾಗುವ ಮೊದಲು ಹಾಗೇ ಇತ್ತು. ಆಮೇಲೂ ಸಮಾಜ ಸುಧಾರಣೆಯ ಕಾರ್ಯವು ಮಂದಗತಿಯಿಂದಲೇ ಸಾಗುತ್ತ ಬಂದಿರುವುದಕ್ಕೆ ಇಂದಿನ ಜಾತಿ-ಮತವೈಷಮ್ಯಗಳು ಸಾಕ್ಷಿ."

"ಸಮಾಜಸುಧಾರಣೆಯೆಂದರೆ ಎಲ್ಲಾ ಜಾತಿಗಳನ್ನು ಒಂದು ಮಾಡಿ ಬಿಡುವುದೇನು?"

"ಯಾಕೆ ಮಾಡಬಾರದು? ಅಂತೀನಿ."

"ಅದು ಹೇಗೆ ಸಾಧ್ಯ? ಅಂತ ನಾನೂ ಕೇಳತೀನಿ."

" ಆರ್ಯ ಅಥವಾ ಬ್ರಾಹ್ಮ ಸಮಾಜವನ್ನು ಏಕೆ ಅನುಸರಿಸಬಾರದು? ಅವುಗಳಲ್ಲಿರುವಷ್ಟು ಸುಧಾರಣೆಯನ್ನೂ ಮಾಡಿಕೊಳ್ಳದ ಹಿಂದು ಧರ್ಮವು ಧರ್ಮವೇ?"

" ಯಾಕಲ್ಲ?"

" Concordantia Oppositorum ವಿರುದ್ಧವಾದವುಗಳ ಸಮನ್ವಯ ಮಾಡಬಲ್ಲುದೇ ಧರ್ಮ. ವಿರುದ್ಧ ಶಕ್ತಿಗಳನ್ನು ಹುಟ್ಟಿಸಿ, ಬೆಳೆಯಿಸಿ, ಸಾಕುವ ಮತಧರ್ಮದ ಧರ್ಮಕ್ಕೆ ಯಾವ ಹೆಸರಿಡಬೇಕಾದೀತು?"

" ಜನರು ಕೆಟ್ಟರೆ ಧರ್ಮವೇನು ಮಾಡೀತು?"

" ಜನರ ಬಿಟ್ಟು ಧರ್ಮವಿಲ್ಲ, ಜನರು ಕೆಟ್ಟಾಗ ಧರ್ಮವೂ ಕೆಟ್ಟಿತೆಂದೇ ತಿಳಿಯಬೇಕು. ಕೆಟ್ಟ ಜನರ ಸುಧಾರಣೆಯೆಂದರೂ ಒಂದೇ, ಅವರಿಗೆ ಕೇಡು ಮಾಡಿದ ಅವರ ಧರ್ಮವಿಚಾರಗಳನ್ನು ಸುಧಾರಿಸುವುದೆಂದರೂ ಒಂದೇ. ಅರ್ಥದಲ್ಲಿಯೇ ಜಗವಿದೆಯಲ್ಲದೆ ಶಬ್ದದಲ್ಲಲ್ಲ. ಅಂದಿನ ಮತ್ತು ಇಂದಿನ ಬಹು ಸಂಖ್ಯ ಹಿಂದುಗಳು ಹಿಂದು ಧರ್ಮವೆಂದು ತಿಳಿದು ನಡೆದುಕೊಳ್ಳುತ್ತಿರುವ ಬಗೆಗಳು ಹಿಂದು ದರ್ಶನಸಾರಕ್ಕೆ ಅನುಗುಣವಾಗಿಲ್ಲ ಎಂಬುದನ್ನು ರವೀಂದ್ರ ನಂಥವರಲ್ಲದೆ ನಿನ್ನಂಥವರು ತಿಳಿಯಬಲ್ಲರೇ?"

" ಹಾಗಾದರೆ ಅಂಥ ತಿಳಿವಳಿಕೆಯುಳ್ಳ ಕವಿ ತಾನಾದರೂ ಏನು ಮಾಡಿದ?"

" ಇನ್ನೇನು ಮಾಡುತ್ತಾನೆ? ಗೀತಾಂಜಲಿಯಲ್ಲಿರುವ ಎಷ್ಟೋ ಉದ್ದವಾದ ಪದ್ಯಗಳನ್ನು ಆಗ ಬರೆದ. 'ದೇವರೇ ಗತಿ' ಎಂದು ಆಧ್ಯಾತ್ಮಿಕ ಭಕ್ತಿ ಭಾವದಿಂದ ತನ್ನ ಹಿಂದು ಸಹೋದರರಿಗಾಗಿ ಪ್ರಾರ್ಥಿಸಿದ; 'ಜನಸೇವೆಯೇ ಜನಾರ್ದನ ಸೇವೆ' ಎಂದು ವಿಚಾರ-ಉಚ್ಚಾರ-ಆಚಾರಗಳಲ್ಲಿ (ರಾಜಕೀ ಯೇತರ ಕಾರ್ಯಕ್ಷೇತ್ರಗಳಲ್ಲಿ) ಮಾನವಾಂತರ್ಗತ ದೈವತವನ್ನು ಆರಾಧಿಸಿದ. ಕೇಶವಚಂದ್ರ ಸೇನರ ಕಾಲಾನಂತರ, ಐವತ್ತು ವರ್ಷಗಳ ಬಳಿಕ, ರವೀಂದ್ರನು ಬ್ರಾಹ್ಮಸಮಾಜದಲ್ಲಿ ಉಳಿದುಕೊಂಡಿದ್ದ ಜಾತೀಯ ವಿಂಗಡಣೆಯನ್ನು ತೊಡೆದು ಹಾಕಲು ಪ್ರಯತ್ನಿಸಿದ; ಆದರೆ ಆಗ ಅವನು ಅದರಲ್ಲಿ ಜಯವಂತನಾಗಲಿಲ್ಲ.

ಕ್ರಿ.ಶ. ೧೯೦೮ರಲ್ಲಿ ತನ್ನ ಗದ್ಯಲೇಖನಗಳನ್ನು ರವೀಂದ್ರ ತಾನು ಪ್ರಕಟಿಸಲಾರಂಭಿಸಿದನು. ೧೯೦೯-೧೯೧೬ರ ನಡುವೆ ಶಾಂತಿನಿಕೇತನದಲ್ಲಿ

ಆತ ಕೊಟ್ಟ ಧಾರ್ಮಿಕ ಉಪನ್ಯಾಸಗಳ ಪುಸ್ತಿಕೆಗಳು ಹೊರಬಿದ್ದವು. ಆತನ ಜೀವನಸ್ಮೃತಿ ಪ್ರಕಟವಾದದ್ದು ೧೯೧೨ರಲ್ಲಿ. ಅನೇಕ ಮಧುರ-ಸುಂದರ ಗೀತಗಳಲ್ಲದೆ ನಾಟಕಗಳೂ ಹೊರಬೀಳಲಾರಂಭಿಸಿದವು. ಅಂದಿನ ನಾಟಕಗಳಲ್ಲಿ ಶಾರದೋತ್ಸವ, ಪಶ್ಚಾತ್ತಾಪ, ರಾಜ ಮತ್ತು ಟಪ್ಪಾಲುಕಟ್ಟೆಗಳು ಗಣ್ಯ ಎನಿಸಿದಂಥವು.

'ಶಾರದೋತ್ಸವ ಅಥವಾ ಶರತ್ಕಾಲದ ಹಬ್ಬ' ಎಂಬುದು ಗದ್ಯಮಯವಾದ ಬಯಲಾಟಗಳ ವರ್ಗಕ್ಕೆ ಸೇರಿದ್ದು; ನಡುನಡುವೆ ಹಾಡುಗಳೂ ಬರುತ್ತವೆ. ಅದು ಷೇಕ್ಸ್‌ಪಿಯರನ 'As you like it' ಎಂಬ ನಾಟಕವನ್ನು ಹೋಲುತ್ತದೆ. ೧೯೨೨ರಲ್ಲಿ ಅದನ್ನು ವಿಸ್ತರಿಸಿ ಆತನು ಅದಕ್ಕೆ 'ಋಣಸಂದಾಯ' ಎಂಬ ಹೊಸ ಹೆಸರಿಟ್ಟನು. 'ಪಶ್ಚಾತ್ತಾಪ'ವು 'The young Queen's Market' ಎಂಬ ಕಾದಂಬರಿಯ ರೂಪಾಂತರ. ಅದನ್ನು ತಿದ್ದಿ ೧೨ ವರ್ಷಗಳನಂತರ ಕವಿಯು 'ಮುಕ್ತಪ್ರವಾಹ' ಎಂಬ ಉತ್ತಮ ನಾಟಕವನ್ನಾಗಿ ಮಾರ್ಪಡಿಸಿದನು. ಅದು ಅವನ ಗದ್ಯನಾಟಕಗಳಲ್ಲಿ ಉತ್ತಮವಾದದ್ದು.

'ರಾಜ' ಎಂಬ ನಾಟಕವು ಆಂಗ್ಲ ಭಾಷಾಂತರದಲ್ಲಿ 'The King of the Dark Chamber' ಎನ್ನಿಸಿತು. ಇದು ಒಳ್ಳೆಯ ನಾಟಕವೇ ಆದರೂ ಇದರಲ್ಲಿ ಬರುವ ಠಾಕೂರದಾದನ ಪಾತ್ರದ ದೆಸೆಯಿಂದ ಆಗಬಹುದಾದಷ್ಟು ಪರಿಣಾಮಕರವಾಗಲಿಲ್ಲವೆಂದು ಕೆಲವರ ಅಭಿಪ್ರಾಯ. ಇದನ್ನು ರಂಗದಲ್ಲಿ ಆಡುವುದು ಬಲು ಕಠಿಣವೆನ್ನುತ್ತಾರೆ. ೧೯೨೨ರಲ್ಲಿ ಪ್ಯಾರಿಸ್ಸಿನಲ್ಲಿಯೂ ಜರ್ಮನಿಯಲ್ಲಿಯೂ ರಂಗದ ಮೇಲೆ ಇದನ್ನು ಆಡಲಾಯಿತು. ಇದರಲ್ಲಿ ಅಸಂಖ್ಯ ಹಾಡುಗಳಿವೆ. 'ಮುಕ್ತಪ್ರವಾಹ'ದಲ್ಲಿ ಬ್ರಿಟಿಷ್ ಸರಕಾರದ ಪ್ರತಿಭಟನೆ ಅಡಗಿರುವಂತೆ ತೋರಿದರೆ ಇದರಲ್ಲಿ ಗಣರಾಜ್ಯದ ನೀತಿ ಅಡಗಿರುವ ಹಾಗೆ ಕಾಣುತ್ತದೆ. 'ಟಪ್ಪಾಲುಕಟ್ಟೆ'ಯು ಬರ್ಲಿನ್-ಲಂಡನ್‌ಗಳಲ್ಲಿ ಜನಪ್ರಿಯವಾದ ಶುದ್ಧ ಗದ್ಯನಾಟಕ. ಶಾಂತರಸಪ್ರಧಾನವಾದ ಈ ನಾಟಕವು ಮೊದಲಿನವುಗಳ ಸಾಂಕೇತಿಕತೆಯನ್ನು ಮುಂಬರಿಸಿಕೊಂಡು ಹೋಗಿದೆ. ಇದು ಚಿಕ್ಕದು ಆದರೂ ಇದರ ರಚನೆ ಅತ್ಯಂತ ಅಚ್ಚುಕಟ್ಟಾಗಿದೆ. ರವೀಂದ್ರನು ಬರೆದ 'ಅಚಲಾಯತನ'ದಲ್ಲಿ ವೇದಾಭ್ಯಾಸಜಡರ ಅಣಕ, ಮೂದಲಿಕೆ, ಜರೆತಗಳಿವೆ; ಅವರ ಸಂಕುಚಿತ ಭಾವನೆಗಳ ಮತ್ತು ಅತ್ಯಂಧವಿಶ್ವಾಸಗಳ ಉಗ್ರ ವಿಡಂಬನೆಯಿದೆ."

" ನಮ್ಮ ಮೇಷ್ಟ್ರು ಹೇಳುತ್ತಿದ್ದರು—ವೇದಾಭ್ಯಾಸಿಗಳನ್ನು ಜಡರೆಂದು ಕಾಳಿದಾಸ ಕೂಡ ಚೇಷ್ಟೆಮಾಡಿದ್ದಾನೆ—ಅಂತ."

" ಸಾಮಾಜಿಕ ಜೀವನಕ್ಕೆ ವಿಮುಖರಾದವರ ಮಾತು ಬೇರೆ; ಸಂಮುಖರಾಗಿರುವ ಅತಿಸಂಖ್ಯರಲ್ಲಿ ಯಾರಾದರೂ ಅತಿ ಮಡಿಯನ್ನು ತೋರಿಸಿದರೆ ಸ್ವಾಭಾವಿಕವಾಗಿ ಹಾಸ್ಯಾಸ್ಪದರಾಗುತ್ತಾರೆ. ಆದರೆ ನಮ್ಮಲ್ಲಿ ನಿನ್ನಂಥವರು ಈಗಲೂ—ಗಂಡ ಮನೆಯಲ್ಲೇ ಸನ್ಯಾಸಿಯಾದರೆ ಮಾತ್ರ ಪೂಜ್ಯ, ಗೌರವಾರ್ಹ—ಎಂದು ತಿಳಿಯುತ್ತಾರೆ. ಮನೆಯಲ್ಲಿ ಸಂನ್ಯಾಸ ಅಗೌರವಾರ್ಹ; ಸಂನ್ಯಾಸ ಮನೆ, ಮಠ, ಸಮಾಜಗಳ ಸುಖ–ದುಃಖಗಳಿಂದ ದೂರವಿರುವ ಲಕ್ಷಣವುಳ್ಳದ್ದು—ಎಂಬುದನ್ನು ನನ್ನಂಥವನು ಹೇಳಿದರೆ ಬೆಲೆ ಬರುತ್ತದೆಯೇ?"

" ನಾನೆಲ್ಲಿ ಹಾಗೆ ಹೇಳಿದ್ದೆ ನಿಮ್ಮೆದುರಿಗೆ? ಬರೀ ಸುಳ್ಳು ಸುಳ್ಳು ಹೇಳುತ್ತೀರಿ ನೀವು!"

" 'ಸುಳ್ಳು ಸುಳ್ಳು **ಮಾಡುವುದು** ಹೆಣ್ಣಿಗೆ ಸೊಗಸು; ಸುಳ್ಳು ಸುಳ್ಳು **ಹೇಳುವುದು** ಗಂಡಸಿಗೆ ಸೊಗಸು' ಅಂತ ಅಜ್ಜಿ ಹೇಳ್ತಾ ಇರ್ಲಿಲ್ವೆ?"

" ಹೌದು; ಅಜ್ಜಿಯ ಗಾದೆ ನಿಮಗೀಗ ಆಧಾರ—ಅಲ್ಲವೇ!"

" ಗಂಡ ಹೇಳಿದ್ದನ್ನು ಸುಳ್ಳು ಮಾಡುತ್ತೇನೆ ಎಂಬುದು ಹೆಣ್ಣಿನ ಪಂಥ; ಹೆಂಡತಿ ಮಾಡಿದ್ದು ಸುಳ್ಳು ಎಂದೇನೆಂಬುದು ಗಂಡಿನ ಪಂಥ!"

" ನಾನು ಹೀಗೆ ಮಾಡುತ್ತಬಂದಿದ್ದೇನೆಯೇ?"

" ಮತ್ತೇನು—ನನ್ನ Standard ನನಗೆ, ನಿನ್ನ Standard ನಿನಗೆ ಎಂಬುದು ಸ್ಥಿರಪಟ್ಟಿರುವಾಗ?"

" ನೋಡಿ ಮತ್ತೆ ತೆಗೆದಿರಿ ವರಸೇನಾ—ಯಾವಾಗಲೂ ನೀವು ಹೀಗೇ."

" ನೀನು ಯಾವಾಗಲೂ ಹಾಗೇ ಇರುವಾಗ ನಾನು ಯಾವಾಗಲೂ ಹೀಗೇ ಆಗುವುದು ಸಹಜವಲ್ಲವೇ?"

" ರವೀಂದ್ರ ನಿಮ್ಮ ಹಾಗೆ ಹೆಂಡತಿಯೊಡನೆ ಜಗಳವಾಡುತ್ತಿದ್ದನೇನು?"

" ಹೌದು; ಆದರೆ ಅದನ್ನೆಲ್ಲ ಜಗತ್ತಿಗೇಕೆ ಹೇಳಿಯಾನು?"

" ಹಾಗಾದರೆ ನಾನು ಅವನ ಕತೆಯನ್ನು ಕೇಳಲಾರೆ!"

" ಗಂಡಸರು ಯಾವುದನ್ನು **ವಿಚಾರವಿನಿಮಯ, ತರ್ಕ, ನ್ಯಾಯ** ಎನ್ನುತ್ತಾರೋ ಅದನ್ನು ಸಾಮಾನ್ಯ ಹೆಂಗಸರು **ಜಗಳ** ಎಂದು ಕರೆಯುತ್ತಾರೆ.

ಹೆಂಗಸರು ಯಾವುದನ್ನೂ ವಿಚಾರ ಮಾಡರು, ಎಲ್ಲವುದಕ್ಕೂ ಮತದಾನ ಮಾತ್ರ ಮಾಡಬಲ್ಲರು. ಆದುದರಿಂದಲೇ ಅವರಿಗೆ ಋಷಿ, ಮುನಿ, ಬಾವಾಜಿ, ಸಾಧು ಮುಂತಾದ ವೇಷಗಳನ್ನು ತೊಟ್ಟ ಆಷಾಢಭೂತಿಯ ಸ್ವಭಾವದವರು ತುಂಬ ಮೆಚ್ಚಿಗೆಯವರಾಗುತ್ತಾರೆ. ಹಿಂದು ಧರ್ಮದ ಅಂಧಕಂದಾಚಾರದ ಆರಾಧಕರಲ್ಲಿ ಅಗ್ರಗಣ್ಯರು ಯಾರೆಂದುಕೊಂಡೆ?"

"ಹೆಂಗಸರೇ?"

"ಅಲ್ಲವೇನು? ಅವರು ಆಚಾರ ಬಿಟ್ಟರೆ ಗಂಡಸರು ಬೈಯುವುದು ಖಾತ್ರಿಯಾಗಿರುವಾಗ ಅವರಾದರೂ ಏನು ಮಾಡಬೇಕು—ಅಲ್ಲವೇ? ಹೆಂಗಸರ ಆಚಾರ-ಅಭಿಪ್ರಾಯಗಳು ಆ ಈ ಗಂಡಸರ ಸ್ತುತಿ-ನಿಂದೆಗಳನ್ನೇ ಯಾವಾಗಲೂ ಆಧರಿಸಿರುತ್ತವೆ: **ಗಂಡಂದಿರ** ಸ್ತುತಿ-ನಿಂದೆಗಳನ್ನಾಧರಿಸಿ ಅಲ್ಲ!"

"ಹಾಗಾದರೆ ಗಂಡ ಹೇಳಿದಂತೆ ಕೇಳಿದವಳು ನಿಮ್ಮ ಪ್ರಕಾರ ಒಳ್ಳೆಯ ಹೆಂಡತಿ—ಅಲ್ಲವೆ?"

"ಹಾಗಾದರೆ ಗಂಡ ಹೇಳಿದ ಯಾವುದನ್ನೂ ಕೇಳದವಳು ಆದರ್ಶ ಗೃಹಿಣಿ ಎಂದು ನಿನ್ನ ಅಂಬೋಣವೇನು?"

"ಹಾಗೆ ಹೇಗಾದೀತು?"

"ವಿಚಾರಶಕ್ತಿ ಕಡಿಮೆಯುಳ್ಳವರಿಗೆ ಸ್ವಂತದ ಅಭಿಪ್ರಾಯವನ್ನು ಏನಾದರೂ ಹಟ ಮಾಡಿ ಎತ್ತಿಹಿಡಿಯುವ ಚಟ ಹೆಚ್ಚು. ಆದ್ದರಿಂದಲೇ ಈ ಹಿಂದಿನ ದೈನ್ಯ-ದಾಸ್ಯಗಳಿಂದ ಮುಕ್ತಳಾಗುತ್ತಿರುವ ಇಂದಿನ ಸ್ತ್ರೀ ಸನಾತನಿ ಪುರುಷನಂತೆ ತನ್ನನ್ನು ಯಾವಾಗಲೂ ಯೇನಕೇನ ಪ್ರಕಾರೇಣ ಸಮರ್ಥಿಸಿ ಕೊಳ್ಳಲು ಹೋರಾಡಿದಾಗ ಅಪಶಕುನಸ್ವರೂಪವನ್ನು ತಾಳುತ್ತಿರುವುದು! ಅಲ್ಪನಿಗೆ ಐಶ್ವರ್ಯ ಬಂದರೆ ಅರ್ಧರಾತ್ರಿಯಲ್ಲಿ ಕೊಡೆ ಹಿಡಿಸಿಕೊಂಡನಂತೆ!"

"ತಪ್ಪಾಯ್ತು ಸ್ವಾಮಿ, ಕೆನ್ನೆಗೆ ಬಡಿದುಕೊಂಡೆ—ಆಯ್ತೆ?"

"ಆಗಲಿಲ್ಲ—ಮತ್ತೇನೋ ಬೇಕು ಆ ಕೆನ್ನೆಗಳಿಗೆ!"

"ಹೂಂ—ಹೇಳಿ ಮುಂದಿನ ಕತೆಯನ್ನು ಅಂದರೆ."

"ಹೇಳುತ್ತೇನೆ, ಕೇಳುವಂಥವಳಾಗು ಚೆಲುವೆ!"

೧೦. ಗೀತಾಂಜಲಿಯುಗ

"'ಟಪ್ಪಾಲುಕಟ್ಟಿ' ಮತ್ತು 'ಗೀತಾಂಜಲಿ'ಗಳು ಒಂದೇ ಅವಧಿಯಲ್ಲಿ (೧೯೦೭-೧೦) ರಚಿತವಾದಂಥವು. ೧೯೧೩ರಲ್ಲಿ ರವೀಂದ್ರನು ಇಂಗ್ಲೆಂಡಿಗೆ ಹೋಗಿಬಂದ. ಅಲ್ಲಿ ಅವನ ಗೀತಾಂಜಲಿಯ ಅನುವಾದವನ್ನೋದಿ ರೊಥೆನ್‌ಸ್ಟೀನ್, ಯೀಟ್ಸ್, ಸ್ಟಾಫರ್ಡ್ ಬ್ರೂಕ್, ಬ್ರಾಡ್ಲೆ, ಕುಮಾರಿ ಮೇ ಸಿನ್‌ಕ್ಲೇರ್, ನೆವಿನ್‌ಸನ್, ಆಂಡ್ರೂಸ್ ಮುಂತಾದ ರಸಿಕರು ಸಂತೋಷಪಟ್ಟರು. 'ಗೀತಾಂಜಲಿ'ಯಲ್ಲಿ ಬಂಗಾಳಿ 'ಗೀತಾಂಜಲಿ'ಯ ಕವನಗಳ ಸ್ವಯಂಕೃತ ಭಾಷಾಂತರಗಳಲ್ಲದೆ ಅವನ ಇತರ ಸಂಕಲನಗಳಲ್ಲಿಯ ಕವನಗಳ ಅನುವಾದಗಳೂ ಇವೆ. ಅವುಗಳಲ್ಲಿ ಅವನ ವ್ಯಕ್ತಿತ್ವವು ಚೆನ್ನಾಗಿ ಪಡಿಮೂಡಿದೆ.

ಆಗ ಇಂಗ್ಲೆಂಡಿಗೆ ಹೋದ ರವೀಂದ್ರನು ಅಮೇರಿಕಕ್ಕೂ ಆ ಕೂಡಲೇ ಹೋಗಿಬಂದ. ಅಂದಿನಿಂದ ಅವನ ಕೀರ್ತಿಲತೆಯು ಜಗತ್ತಿನ ನಾನಾಕಡೆಗಳಲ್ಲಿ ಟಿಸಿಲೊಡೆದು ಹಬ್ಬಲಾರಂಭಿಸಿತು. ಬೊಂಬಾಯಿಯಲ್ಲಿ ಆತನು ಹಡಗಿನಿಂದ ಇಳಿದಾಗ ದೊಡ್ಡದೊಂದು ಜನಸ್ತೋಮವು ಆತನನ್ನು ಇದಿರುಗೊಳ್ಳಲು ಹಾರ ಹಿಡಿದು ನಿಂತಿತ್ತು. ಭಾರತವನ್ನು ಹೊಕ್ಕಾಗ ಹೆಜ್ಜೆಹೆಜ್ಜೆಗೂ ಅವನ ಮೇಲೆ ಹೊಗಳಿಕೆಗಳ ಹೂಮಳೆ ಸುರಿಯಿತು. ಆತನು ಶಾಂತಿನಿಕೇತನವನ್ನು ತಲುಪುವಷ್ಟರಲ್ಲಿ ಅವನಿಗೆ ನೋಬೆಲ್ ಪಾರಿತೋಷಕ ಬಂದಿದೆ ಎಂದು ರಾಶಿ ರಾಶಿ ತಂತಿಸುದ್ದಿಗಳು ದಟ್ಟೈಸಿದ್ದವು. ಅದರಿಂದ ಎಲ್ಲರಿಗೂ ಆನಂದವಾಯಿತು. ವಿದ್ಯಾರ್ಥಿಗಳಿಗೆ ಆ ಪಾರಿತೋಷಕ ಎಂಥದೆಂಬುದು ಗೊತ್ತಿಲ್ಲದಿದ್ದರೂ ತಮ್ಮ ಗುರುದೇವನು ಎಂದಿನಂತೆ ಏನೋ ಒಂದು ಅದ್ಭುತವನ್ನು ಸಾಧಿಸಿಬಿಟ್ಟದ್ದಾನೆ ಎಂದು ಗ್ರಹಿಸಿ ಸಂತೋಷದಿಂದ ಕುಣಿದಾಡಿದರು, ಹಾಡಿದರು; ಹೆಮ್ಮೆಯಿಂದ ಶಾಂತಿನಿಕೇತನವನ್ನು ಕೊಂಡಾಡಿದರು—ಗುರುದೇವನ ಚರಣಾರವಿಂದಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರು. ರವೀಂದ್ರನು ತಾನು ಅಷ್ಟು ಗೌರವಕ್ಕೆ ಅರ್ಹನಲ್ಲವೆಂಬಂತೆ ಕೊಸರಿ ನಿಲ್ಲಲು ಯತ್ನಿಸಿದನು. ಹುಡುಗರು ಕುಣಿದು ಕೂಗಿ, ಕೊನೆಗೆ ಅಲ್ಲೇ ಹತ್ತಿರದ ಒಂದೆಡೆಯಲ್ಲಿ ದೊಡ್ಡ ಯಜ್ಞಕುಂಡದ ಬೆಂಕಿಯನ್ನೆಬ್ಬಿಸಿ ಹಬ್ಬ ಮಾಡಿಬಿಟ್ಟರು.

ಇಂಥ ಅಭೂತಪೂರ್ವ ಪ್ರಸಿದ್ಧಿಯಿಂದ ಕವಿಯು ಹಿಗ್ಗುವುದರ ಬದಲು ಕುಗ್ಗಿದನು. ಜಗತ್ತಿನ ನಾನಾ ಮೂಲೆಗಳ ಜನರ ಕಣ್ಣಿಗೆ ಬಿದ್ದುದು ಅವನಿಗೆ ಹೆಚ್ಚೆನ್ನಿಸಿತು. ಅಲ್ಲಿಂದ ಪುಂಖಾನುಪುಂಖವಾಗಿ ಬರುವ ಪತ್ರಗಳನ್ನು ನೆನೆದು ಅವನು ಅಂಜಿದನು. ಅವನು ಎಲ್ಲಿಗೂ ಹೋಗದೆ ಕುಳಿತನು."

"ಅದೇಕೆ ಅವನು ಹಾಗಾದ?"

"'ವಿನಯೇನ ವಿನಾ ಕಾ ಶ್ರೀಃ—ವಿನಯವನ್ನು ಬಿಟ್ಟರೆ ಸಿರಿಯೆಲ್ಲಿದೆ?' ಎಂದು ಭಾಮಹ ಕೇಳಿದ. ಹಾಗೆ ಅವನ ವಿನಯ ಅವನನ್ನು ಹಾಗೆ ಮಾಡಿತು. ನಿಜವಾದ ದೊಡ್ಡವರ ದೊಡ್ಡಸ್ತಿಕೆ ಅದು—ಅಲ್ಲವೆ? ಬೂಟಾಟಿಕೆಯ ವಿನಯ ಆಗಿದ್ದರೆ ಕ್ಷಣಾರ್ಧದಲ್ಲಿ ಮಾಯವಾಗಿಬಿಡುತ್ತಿತ್ತು! ಆದರೆ ಅವನ ವಿನಯ ಅವನಿಗೆ ಉಪಕಾರಿಯೇ ಆಯಿತು. ಎಲ್ಲಿಗೂ ಹೋಗದೆ ಕುಳಿತಲ್ಲೇ ಅವನು ಆಮೇಲೆ ಎರಡು ಪುಸ್ತಕಗಳಲ್ಲಿ ಪ್ರಕಟವಾಗುವಷ್ಟು ಹಾಡುಗಳನ್ನು ಬರೆದನು. 'ಗೀತಮಾಲ್ಯ' ಮತ್ತು 'ಗೀತಾಲಿ'ಗಳೇ ಆ ಎರಡು ಕವನಸಂಗ್ರಹಗಳು. ಅವನು ಬರೆದ 'ಫಾಲ್ಗುನಿ' ಎಂಬ ನಾಟಕವನ್ನು ಬೋಲ್ಪುರದ ವಿದ್ಯಾರ್ಥಿಗಳೂ ಉಪಾಧ್ಯಾಯರೂ ಕವಿಯ ಕುಟುಂಬದ ಸದಸ್ಯರೂ ಕೂಡಿ ರಂಗದ ಮೇಲೆ ಆಡಿ ತೋರಿಸಿದ್ದು ಸರ್ವಾಕರ್ಷಕವಾಯ್ತು. 'ಮನೆ ಮತ್ತು ಜಗತ್ತು' ಎಂಬ ಅವನು ಆಗ ರಚಿಸಿದ ಕಾದಂಬರಿಯು ಅಂದಿನ ಬಂಗಾಲಿ ಕಾದಂಬರಿಗಳಲ್ಲೆಲ್ಲಾ ಅತ್ಯಾಧುನಿಕವೆನಿಸಿತು. ಆದರೆ ಕೆಲ ವಿಮರ್ಶಕರ ಕಟೂಕ್ತಿಗಳು ರವೀಂದ್ರನಿಗೆ ಬೇಸರವನ್ನುಂಟುಮಾಡಿದವು. ೧೯೧೬ರಲ್ಲಿ ರವೀಂದ್ರನು ಜಪಾನಿಗೆ ತೆರಳಿದನು; ಹಾದಿಯಲ್ಲಿ 'ಬೀಡುಬಿಟ್ಟ ಹಕ್ಕಿಗಳು' ಎಂಬ ಕೃತಿಯನ್ನು ಬರೆದು ಮುಗಿಸಿದನು. ೧೯೧೯ರಲ್ಲಿ ಅವನ 'ಜಪಾನಿಗೆ ತೆರಳಿದ ಯಾತ್ರಿಕ' ಎಂಬ ಪುಸ್ತಕ ಅವನ ಕೈಯಿಂದ ಹೊರಬಿತ್ತು. ಇಷ್ಟಲ್ಲದೆ ತನ್ನ ಗ್ರಂಥಗಳಾದ 'ಪ್ರಕೃತಿಯ ಪ್ರತೀಕಾರ', 'ಯಜ್ಞ', 'ರಾಜ ಮತ್ತು ರಾಣಿ' ಹಾಗೂ 'ಮಾಲಿನಿ' ಎಂಬವುಗಳ ಅನುವಾದಗಳನ್ನು ಅವನು ಸಿದ್ಧಪಡಿಸಿದನು. ಈ ಭಾಷಾಂತರಕಾರ್ಯವನ್ನವನು ಒಂದೇ ವಾರದಲ್ಲಿ ಮಾಡಿ ಮುಗಿಸಿದ್ದು ಅವನ ಕೈಚುರುಕಿಗೆ ನಿದರ್ಶನ."

"ಈ ವಿಮರ್ಶಕರೆಂಬ ಕಿಡಿಗೇಡಿಗಳಿಂದ ಹೂವಿನಂತಹ ಹೃದಯದ ಎಷ್ಟೋ ಕವಿಗಳು ಎದೆಗುಂದಿ ಬರೆಯುವುದನ್ನೇ ಬಿಟ್ಟುಬಿಡುತ್ತಾರೆ ಎಂದು

ಕೇಳಿದ್ದೇನೆ. ಅಂದಮೇಲೆ ಅಂಥವರು ಏತಕ್ಕಾಗಿಯಾದರೂ ಇರಬೇಕು ಭೂಲೋಕದಲ್ಲಿ ?"

"ಅಲ್ವೆ, ಊರಿದ್ದಲ್ಲಿ ಹೊಲಗೇರಿಯಿದ್ದೇ ಇದೆ. ಆದರೆ ಊರು-ಹೊಲಗೇರಿಗಳಲ್ಲಿ ಒಂದನ್ನು ಇನ್ನೊಂದನ್ನಾಗಿ ತಿಳಿದುಕೊಳ್ಳುವ ಹತ್ತು ಸಮಸ್ತರೂ ಕೆಲಕಾಲ ಯಾವಾಗಲೂ ಇದ್ದೇ ಇರುತ್ತಾರೆ ಎಂಬುದೂ ಅಷ್ಟೇ ಸತ್ಯ. ಕವಿಗಳಲ್ಲಿ ಸುಕವಿ-ಕುಕವಿಗಳಿರುವಂತೆ, ಲೇಖಕರಲ್ಲಿ ಸುಲೇಖಕ-ದುರ್ಲೇಖಕರಿರುವಂತೆ, ವಿಮರ್ಶಕ-ಸಮೀಕ್ಷಕ-ರಸಿಕ ಮುಂತಾದವರಲ್ಲೂ ಅರ್ಹಾನರ್ಹ ಭೇದವಿದ್ದೇ ಇದೆ. ಧೈರ್ಯವಿಲ್ಲದವರು ಜಗತ್ತಿನಲ್ಲಿ ಇರಲನರ್ಹರು. ಆದರೂ ಸರ್ವಪಾಪ ಮೂಲವೆನ್ನಿಸುವ ಹೇಡಿತನವುಳ್ಳವರೇ ಜಗತ್ತಿನಲ್ಲಿ ಹೆಚ್ಚಾಗಿರುತ್ತಾರೆ. ಇದು ದೇವರು ಮಾಡುತ್ತ ಬಂದ ತಮಾಷೆ. ರವೀಂದ್ರನು ಧೀರನು, ಧೈರ್ಯಯುಕ್ತವಾದ ವಿವೇಕ-ಉತ್ಸಾಹಗಳನ್ನು ಉಳ್ಳವನು. ಆದುದರಿಂದ ತಾತ್ಕಾಲಿಕವಾಗಿ ವಿಮರ್ಶಕರ ಕೆಲ ಅರೆನನ್ನಿಯುಳ್ಳ ಕಟೋಕ್ತಿಗಳಿಂದ ನೊಂದರೂ ಮುಂದೆ ಅವನು ಹೆದರಲಿಲ್ಲ. ನಿಜವಾದ ಕಲೆಗಾರನು ತನ್ನ ಯೋಗ್ಯತೆಯನ್ನರಿತುಕೊಂಡವನಾಗಿರುವುದರಿಂದ ದುರುಕ್ತಿಗಳನ್ನು ಕಡೆಗಣಿಸುತ್ತಾನೆ, ಸೂಕ್ತಿಗಳನ್ನು ಸ್ವೀಕರಿಸಿ ಆ ಪ್ರಕಾರ ತಿದ್ದಿಕೊಳ್ಳುತ್ತಾನೆ. ಸುವಿಮರ್ಶೆಯನ್ನು ಅವನು ಮಾತ್ರ ಗುರುತಿಸಬಲ್ಲ; ಸುವಿಮರ್ಶಕ ಮಾತ್ರ ಅವನನ್ನು ಗುರುತಿಸಬಲ್ಲ. ಮಿಕ್ಕವರು ಬರಿ ತೋರಿಕೆಯ ಕವಿ-ಗಮಕಿ-ವಾದಿ-ವಾಗ್ಮಿ-ಪಂಡಿತರು. ಹೊಲೆಗೇರಿಯಿಂದಲೇ (ಭಂಗಿಕೇರಿಯಿಂದಲೇ) ಊರು ಊರಾಗಿ ತೋರುವುದಲ್ಲವೇ ? 'ನಿಂದಕರಿರಬೇಕಿರಬೇಕು' ಎಂದು ದಾಸರೂ 'ಬೈದವರೆನ್ನ ಬಂಧುಗಳೆಂಬೆನು' ಎಂದು ಶರಣರೂ ಉದ್ಗರಿಸಿದ್ದು ಈ ದೃಷ್ಟಿಯಿಂದಲೇ. 'ಊರಿಗೊಂದಿರಬೇಕು ಬಾಯ್ಬಡಿಕ ಮುದುಕಿ' ಎಂದು ಬೇಂದ್ರೆಯವರೆಂದುದೂ ಪ್ರಜಾಪ್ರಭುತ್ವದಲ್ಲಿ ವಿರೋಧಪಕ್ಷವಿರಬೇಕೆಂಬುದೂ ಚಿತ್ರ ಬರೆಯುವಾಗ ಅಳಿಸುವ ರಬ್ಬರ್ ಇರಬೇಕೆಂಬುದೂ ಒಂದೇ ಉದ್ದೇಶಕ್ಕಾಗಿ. ಈ ಸಾರಣಿಗೆಗಳ ಮೂಲಕ ಮಹಾತ್ಮರ ಚರಿತ್ರೆಗಳು ಸೋಸಲ್ಪಟ್ಟು ಶುದ್ಧವಾಗುತ್ತವೆ. ಆದುದರಿಂದ ಅವರು ಯಾವಾಗಲೂ ವಿಮರ್ಶಕರಿಗೆ ಋಣಿಗಳು. ಶಸ್ತ್ರಚಿಕಿತ್ಸಕರಂತೆ ವಿಮರ್ಶಕರೂ ವಿಡಂಬನಕಾರರೂ **ಅಹಿಂಸಾತ್ಮಕ** ಹಿಂಸಾಪರರು. ನಾಟಕದಲ್ಲಿ ಖಲ (ಪ್ರತಿ) ನಾಯಕನ ಪಾತ್ರವಹಿಸಿ ಜನಪ್ರಿಯತೆ ಗಳಿಸುವುದು ಎಷ್ಟು

ಕಷ್ಟವೋ ಎಷ್ಟು ಅಪೇಕ್ಷಣೀಯವೋ ನ್ಯಾಯನಿಷ್ಠುರನಾದ ವಿಮರ್ಶಕ ಅಥವಾ ನ್ಯಾಯಾಧೀಶ ಎನ್ನಿಸಿಕೊಳ್ಳುವುದೂ ಅಷ್ಟೇ ಕಷ್ಟ, ಬಹಳ ಅಪೇಕ್ಷಣೀಯ. ಅತಿಶಯಾಂಶಗಳನ್ನು ಕೆಲವೆಡೆ ತೆಗೆದರೆ ಸುವಿಮರ್ಶಕರ ವಿಮರ್ಶೆ ಎಷ್ಟೋ ಅಂಶ ರವೀಂದ್ರಕೃತಿಗಳಿಗೆ ಅನ್ವಯಿಸುವಂಥವಾಗಿವೆ ಎಂಬುದನ್ನು ಅವನ ಗ್ರಂಥಗಳ ಬಗ್ಗೆ ಪ್ರಸಿದ್ಧವಾದ ಗಣ್ಯ ವಿಮರ್ಶೆಗಳನ್ನೋದಿದರೆ ಗೊತ್ತಾಗುತ್ತದೆ. ಇನ್ನು ವಿಘ್ನಸಂತೋಷಿಗಳ ಮಾತು ಬೇರೆ; ಅವರು ಯಾವ ಕ್ಷೇತ್ರದಲ್ಲಿದ್ದರೂ 'ತೊಡುವುಂಟು ಸೆಡ ಬಿಡ' ಎಂಬಂಥವರು!

ರವೀಂದ್ರನು ಮುಂದೆ ಜಪಾನಿನಿಂದ ಅಮೇರಿಕದ ಸಂಯುಕ್ತ ರಾಜ್ಯಕ್ಕೆ ಹೋದನು. ಈ ಎರಡು ದೇಶಗಳಲ್ಲೂ ಆತನು ರಾಷ್ಟ್ರೀಯತೆಯ ಮೇಲೆ ಉದ್ಬೋಧಕವಾದ ಉಪನ್ಯಾಸಗಳನ್ನಿತ್ತನು. ವ್ಯಕ್ತಿತ್ವ ಅಥವಾ ಆತ್ಮವಂತಿಕೆ ಎಂಬ ವಿಷಯದ ಮೇಲೂ ಅವನು ಅಮೇರಿಕದಲ್ಲಿ ಭಾಷಣ ಮಾಡಿದನು. ಆಗ ನಡೆಯುತ್ತಿದ್ದ ಮೊದಲನೆಯ ಮಹಾಯುದ್ಧದಲ್ಲಿ ಪಾಶ್ಚಾತ್ಯರ ಲೋಭ ಮತ್ತು ಭೌತವಾದಗಳೇ ಅವನಿಗೆ ಎದ್ದುಕಾಣಿಸಿದ್ದರಿಂದ ಅವುಗಳ ನಾಶ ಅಪೇಕ್ಷಣೀಯವೆಂದು ಅವನು ಅಭಿಪ್ರಾಯಪಟ್ಟನು; ಭಾರತದಲ್ಲಿದ್ದ ಬ್ರಿಟಿಷ್ ಸರಕಾರವೊಂದು ಚಿತ್ರಹಿಂಸೆಯ ಯಂತ್ರ ಎಂದೂ ಸಾರಿದನು. ಆದರೆ ಅವನ ಪ್ರಕಾರ ಬ್ರಿಟಿಷರಲ್ಲಿ ಸಮಾನತೆಯಿಂದ ನಡೆಸಿಕೊಳ್ಳಲು ಬೇಡುವ ರಾಜಕೀಯ ಸ್ವಾತಂತ್ರ್ಯ ಬರುವುದರ ಮೊದಲು ಭಾರತೀಯರು ತಾವೇ ತಮ್ಮವರನ್ನು ತಾವು ನಡೆಸಿದ ಸಾಮಾಜಿಕ ಶೋಷಣೆಯಿಂದ ಮುಕ್ತಮಾಡಿಕೊಳ್ಳುವುದು ಅಗತ್ಯವಾಗಿತ್ತು. ಆದುದರಿಂದ ಅವನು ಅಸಹಕಾರ ಚಳವಳಿಯಲ್ಲಿ ಸೇರದೆ ಜನರ ಅಪ್ರೀತಿಗೆ ಕೆಲಕಾಲ ಪಾತ್ರವಾದನು.

೧೯೧೭ರಲ್ಲಿ ರವೀಂದ್ರನು ತನ್ನ ಅಮೇರಿಕ ಪ್ರವಾಸವನ್ನು ಅರ್ಧಕ್ಕೇ ನಿಲ್ಲಿಸಿ ಭಾರತಕ್ಕೆ ಹಿಂದಿರುಗಲು 'ಮಾಡರ್ನ್ ರೆವ್ಯೂ' ಎಂಬ ಪತ್ರಿಕೆಯಲ್ಲಿ ಅವನ ಸಂಚಾರದ ಬಗ್ಗೆ ಪ್ರಕಟವಾದ ಕೆಲ ಲೇಖನಗಳು ಕಾರಣವಾದವು. ತನ್ನ 'ಶಾಂತಿನಿಕೇತನ'ಕ್ಕಾಗಿ ಭಾಷಣಮಾಡಿ ದುಡ್ಡನ್ನು ಅಮೇರಿಕದಲ್ಲಿ ಕಲೆಹಾಕುವ ಅವನ ಕೆಲಸಕ್ಕೆ ಅದರಿಂದ ವಿಘ್ನವುಂಟಾಯ್ತು."

"ರಾಜಕೀಯ ಪ್ರಗತಿಗೆ ಮೊದಲೇ ಸಾಮಾಜಿಕ ಪ್ರಗತಿಯಾಗಬೇಕೆಂದು ರವೀಂದ್ರ ಹೇಳಿದ್ದರಲ್ಲೇನು ತಪ್ಪು? ಭಾರತದ ಸಾಮಾಜಿಕ ಹಿಂದುಳಿಯುವಿಕೆ

ಯಿಂದ ಕದಡಿದ್ದ ಅವನ ಹೃದಯ ಅಮೇರಿಕದ ಪತ್ರಿಕಾ ಪ್ರತಿನಿಧಿಗಳನ್ನು ಸರಿಯಾಗಿ ನಡೆಸಿಕೊಳ್ಳದಿರಲು ಕಾರಣವಾದುದು ಯಾರಿಗೂ ಗೊತ್ತಾಗಲೇ ಇಲ್ಲವೇ ?"

"ನಿಜ, ಸಾಮಾಜಿಕ ಪ್ರಗತಿ ಮೊದಲೇ ಆಗುವುದು ಅಗತ್ಯ. ಹಾಗಾಗದುದರಿಂದಲೇ ಇಂದು ಹಿಂದುಳಿದವರನ್ನು ಮುಂದಕ್ಕೆ ತರುವ ನಮ್ಮ ಪ್ರಯತ್ನ ಅಸಂಬದ್ಧರೂಪವನ್ನು ತಾಳಿದ್ದು. ಆದರೆ ಈ ನಡುವೆ ಇನ್ನೊಂದು ಸಂಗತಿಯನ್ನು ಗಮನಿಸುವುದವಶ್ಯ! ವಿದೇಶೀಯರ ಆಡಳಿತವು ಆಗಲೇ ಭಾರತದಲ್ಲಿ ಜಾತಿಗಳಿಂದ ವಿಭಕ್ತವಾಗಿದ್ದ, ಮತಧರ್ಮಗಳಿಂದ ಭಿನ್ನವಾಗಿದ್ದ ಜನರನ್ನು ಯಶಸ್ವಿಯಾಗಿ ಒಡೆದು ಆಳಲಾರಂಭಿಸಿತ್ತು. ಆ ರಾಜಕೀಯ ಅಡ್ಡಿಯನ್ನು ಮೊದಲು ನಿವಾರಿಸಿಕೊಳ್ಳಬೇಕಾದುದೆಂದು ಗಾಂಧಿ ಮುಂತಾದ ಮುಖಂಡರಿಗೆ ಅನ್ನಿಸಿದ್ದು ತಪ್ಪೆನ್ನಲು ಸಾಧ್ಯವಿಲ್ಲ. ರವೀಂದ್ರನಂತೆ ಯಾರು ಸಮಾಜ ಸುಧಾರಣೆಗೆ ಮುಂದಾದರೂ ಆಮಿಷ ತೋರಿಸಿ ಒಡೆದು ಆಳಲಾರಂಭಿಸಿದ ಬ್ರಿಟಿಷರ ತಂತ್ರಗಳಿಂದ ಅವರಿಗೆ ಯಶಸ್ಸು ದೊರಕುತ್ತಿತ್ತೆನ್ನಲು ಆಧಾರ ಸಾಲದು. ಎರಡನೆಯದಾಗಿ, ಅವನ ಹೃದಯದ ಕಳವಳದ ಅರಿವು ವಿದೇಶೀಯರಿಗೆಂತಾಗಬೇಕು? ಆ ಪ್ರತಿನಿಧಿಗಳಿಗೆ ತಮ್ಮನ್ನು ಆತ ದೂರಮಾಡುತ್ತ ಇದ್ದುದೂ ಟೀಕಿಸುತ್ತಿದ್ದುದೂ ಸರಿದೋರಲಿಲ್ಲ—ಅಷ್ಟೆ.

ಮನೆಗೆ ಮರಳುತ್ತಿದ್ದಾಗ ರವೀಂದ್ರನ ಹಿರಿಯ ಮಗಳು ಮರಣಶಯ್ಯೆಯಲ್ಲಿದ್ದಳು; ಅವನು ಎಷ್ಟೇ ಶುಶ್ರೂಷೆ ನಡೆಸಿದರೂ ಅವಳಿಗೆ ಗುಣವಾಗಲಿಲ್ಲ. ಆದರೆ ಇಂಥ ದುಃಖ–ನಿರಾಶೆಗಳಿಂದ ಕುಗ್ಗದೆ ಧೀರ ಯೋಧನಂತೆ ರವೀಂದ್ರನು ೧೯೧೮ರಲ್ಲಿ 'ಬಂಗಾಳಿ ಗೃಹವಿಶ್ವವಿದ್ಯಾನಿಲಯ ಪುಸ್ತಕ ಭಂಡಾರ'ವನ್ನು ಸ್ಥಾಪಿಸಿ ಯಾವ ವಿಶ್ವವಿದ್ಯಾನಿಲಯವೂ ಕೊಡಲಾರದಂಥ ಸಾಂಸ್ಕೃತಿಕ ಶಿಕ್ಷಣವನ್ನು ತನ್ನ ಜನರಿಗೆ ಕೊಡಲು ವ್ಯವಸ್ಥೆ ಮಾಡಿದನು. ಆದರೆ ಅವನ ಆ ಯೋಜನೆ ಫಲಿಸಲಿಲ್ಲ. ಅದೇ ವರ್ಷ ಅವನ ರೋಗಗ್ರಸ್ತಳಾದ ಹಿರಿಯ ಮಗಳು ಮಡಿದಳು. ಆಗ 'ಪಲಾಯನ' ಎಂಬ ಕಥನ ಕವನಸಂಗ್ರಹದಲ್ಲಿ ಅವನು ತನ್ನ ದುಃಖ–ದುರವಸ್ಥೆಗಳನ್ನು ತೋಡಿಕೊಂಡನು; ದೇಶದಲ್ಲಿ ಅಜ್ಞಾನ–ರೋಗ–ನಿರುದ್ಯೋಗ ಮುಂತಾದವುಗಳಿಂದ ದುಃಖಿತರಾದವರ ಬವಣೆಯನ್ನು ಬಣ್ಣಿಸಿದನು. 'ಪಲಾಯನ'(ಬಂಗಾಳಿಯಲ್ಲಿ 'ಪಲಾತಕಾ')ದಲ್ಲಿ ಬರುವ

ಕರುಣ ಕಥೆಗಳು ಕ್ರೌಂಚ ದಂಪತಿಗಳಲ್ಲಿ ಗಂಡನ್ನು ಬೇಡನೊಬ್ಬ ಕೊಂದಾಗ ಬದುಕಿ ಉಳಿದ ಹೆಣ್ಣಿನ ಕರುಣಾಜನಕತೆಯನ್ನು ಕಂಡ ವಾಲ್ಮೀಕಿಯ ಹೃದಯ ವನ್ನು ನೆನಪಿಗೆ ತಂದು ಕೊಡುತ್ತವೆ. ವಾಲ್ಮೀಕಿಯಂತೆ ಅವನು ದುಷ್ಟ ಶಕ್ತಿಗೆ ಶಾಪ ಕೊಡದಿರಬಹುದು; ಆದರೆ ವಾಲ್ಮೀಕಿಯಂತೆಯೇ ಅವನೆದೆ ಮರುಗಿದುದು ಸ್ಪಷ್ಟವಾಗಿದೆ."

"ಮಾನವತೆಯೆಂದರೇ ದಯೆ, ಧರ್ಮ, ದೇವರು; ಅಂಥ ಮಹಾಕವಿ ಯಲ್ಲಿ ಆ ಗುಣ ಎಷ್ಟಿರಬೇಡ?"

"ಅಪಾರವಾಗಿದೆ. ಅದರಿಂದಲೇ ರವೀಂದ್ರನ ಕವಿತ್ವವೆಂಬ ಶಕ್ತಿಗೆ ಪುಟ ದೊರೆತುದು. ಮಹಾಕಾರುಣ್ಯಸಂಪನ್ನರಲ್ಲದ ಯಾರು ಈ ಜಗತ್ತಿನಲ್ಲಿ ಮಹಾವ್ಯಕ್ತಿಯೆನ್ನಿಸಿ ಜನರ ಮೆಚ್ಚಿಗೆಗೆ ಪಾತ್ರರಾಗಿದ್ದಾರೆ? 'ಏಕೋ ರಸಃ ಕರುಣ ಏವ' ಎಂದ ಭವಭೂತಿಯ ಮಾತು ಅದರಿಂದಲೇ ಅಜರಾಮರವಾಯಿ ತೆಂಬುದು ನಿನಗೆ ಗೊತ್ತಿಲ್ಲವೇ?"

೧೧. ರವೀಂದ್ರನ ‘ ವಿಶ್ವಭಾರತಿ ’, ಪ್ರವಾಸ, ಕೃತಿರಚನೆ

“ ೧೯೧೯ರಲ್ಲಿ ಪಂಜಾಬಿನ ಅತ್ಯಾಚಾರ ಘಟಿಸಿತು. ಅದನ್ನು ಪ್ರತಿಭಟಿಸ ಲೆಂದು ರವೀಂದ್ರನು ಲಾರ್ಡ್ ಚೆಲ್ಮ್ಸ್‌ಫರ್ಡರಿಗೆ ತನಗಿತ್ತ Knighthood ಸರದಾರ ಬಿರುದನ್ನು ತ್ಯಜಿಸುವ ಉದ್ದಂಡ ಪತ್ರವೊಂದನ್ನು ಬರೆದನು. ಆದರೆ ಮತ್ತೆ ಶುರುವಾದ ಅಸಹಕಾರ ಆಂದೋಲನದಲ್ಲೂ ಖಿಲಾಫತ್ ಚಳವಳದಲ್ಲೂ ಆತ ಸೇರಿದನೆ? ಇಲ್ಲ! ಅವನಿಗವು **ಅಸಾಂದರ್ಭಿಕ**ವೆನ್ನಿಸಿದವು. ಸಿ. ಆರ್. ದಾಸರು ಅದರಿಂದ ಅವನ ಬಗ್ಗೆ ಕ್ರುದ್ಧರಾದರು. ಅಹಿಂಸೆಯ ತತ್ವದಂತೆ ಸಾಮೂಹಿಕ ಚಳವಳಗಳು ನಡೆದು ಯಶಸ್ವಿಗಳಾಗುವುದು ಅಸಾಧ್ಯವೆಂದು ರವೀಂದ್ರನು ಘೋಷಿಸಿದನು. ಅಹಿಂಸೆಯನ್ನು ಅಕ್ಷರಶಃ ಪಾಲಿಸದ ಚಳವಳಕ್ಕೆ ಅವನು ಸಹಾನುಭೂತಿ ತೋರಿಸಲಾರದಾದನು. ೧೯೨೧ರಲ್ಲಿ ಗುಜರಾತಿನ ಒಬ್ಬ ಕವಿ ಕೂಡ ಸಿಟ್ಟಿನಿಂದ ಅವನ ರಾಜಕೀಯ ಮನಃಪ್ರಣಾಲಿಯನ್ನು ಟೀಕಿಸಿ ಪ್ರಕಟಪತ್ರ ಬರೆದನು. ಅಂಥ ವಿರೋಧಗಳಿಗೆ ಉತ್ತರ ಕೊಡುತ್ತ ಹೋದ ಕವಿ ಬಹಳ ಸೋತು ನಿರ್ವಿಣ್ಣನಾದನು. ಅದೇ ಕೆಲಕಾಲದಲ್ಲಿ ಮತ್ತೆ ಆತ ಇಂಗ್ಲೆಂಡಿಗೆ ಹೋದರೂ ಅವನ ಮನಸ್ಸಿಗೆ ಶಾಂತಿ ದೊರಕಲಿಲ್ಲ. ೧ನೆಯ ಮಹಾಯುದ್ಧವನ್ನು ನಿಂದಿಸಿ ಅವನು ಹಿಂದೆ ಕೊಟ್ಟಿದ್ದ ಹೇಳಿಕೆಗಳ ದೆಸೆಯಿಂದ ಅಲ್ಲಿಯ ಜನರು ಬೇಸರವನ್ನು ತೋರಿದರು. ಅದೇ ಸ್ವಲ್ಪ ಕಾಲದ ಬಳಿಕ ಅವನು ಫ್ರಾನ್ಸಿಗೆ ಹೋದನು. ಅಲ್ಲಿ ಅವನಿಗೆ ಉತ್ಸಾಹದ ಸ್ವಾಗತ ದೊರಕಿತು. ೧೯೨೧ರಲ್ಲಿ ರವೀಂದ್ರನ ಸವಾರಿಯು ಡೆನ್ಮಾರ್ಕ್ ದೇಶಕ್ಕೆ ತೆರಳಿತು; ಆಮೇಲೆ ಸ್ವೀಡನ್–ಜರ್ಮನಿಗಳಿಗೂ ಚಿತ್ತೈಸಿತು. ಅಲ್ಲಿ ಎಲ್ಲಿಲ್ಲದ ಗೌರವಾದರಗಳಿಂದ ಜನರು ಕವಿಯನ್ನು ಬರಮಾಡಿಕೊಂಡರು. ಅವನ ಭಾಷಣಕ್ಕೆ ಜನರು ಕಿಕ್ಕಿರಿದು ನೆರೆಯುತ್ತಿದ್ದರು. ಅವನ ನಾಟಕಗಳ ಪ್ರದರ್ಶನಗಳಿಗೆ ಎಲ್ಲರ ಮೆಚ್ಚುಗೆ ದೊರಕಿತು. ‘ ಶಾಂತಿನಿಕೇತನ ’ಕ್ಕಾಗಿ ಇಡಿ ಇಡಿ ಪುಸ್ತಕಭಂಡಾರ ಗಳನ್ನೇ ಕೆಲವರು ದಾನಮಾಡಿದರು. ಕೋಪನ್‌ಹೇಗನ್ನಿನಲ್ಲಿ ಅವನನ್ನು ವಿದ್ಯುತ್ತಿನ ದೀವಟಿಗೆಯ ಮೆರವಣಿಗೆಯಲ್ಲಿ ಕೊಂಡೊಯ್ಯಲಾಯ್ತು. ಜರ್ಮನ್

ಪ್ರಕಾಶಕರು ಅವನ ಪುಸ್ತಕಗಳ ಸಾವಿರಾರು ಪ್ರತಿಗಳನ್ನು ಪ್ರಕಟಿಸಿ ಮಾರಿ ಕೊಟ್ಟರು. ಕವಿ ಜನರಿಂದ ಆನಂದಹೊಂದಿದ, ಕೃತಜ್ಞನಾದ, ಜರ್ಮನ್ ವಿದ್ವಾಂಸರ ಬಗ್ಗೆ ಹೆಚ್ಚಿನ ಗೌರವಾದರ ತಾಳಿದ.

"ಭಾರತಕ್ಕೆ ಹಿಂದಿರುಗಿ ೧೯೨೧ರಲ್ಲಿ ಕವಿಯು **ಭಾರತೀಯವಾದ ಜಾಗತಿಕ ವಿಶ್ವವಿದ್ಯಾನಿಲಯವೆನ್ನಿಸಿರುವ ವಿಶ್ವಭಾರತಿಯನ್ನು** ಸ್ಥಾಪಿಸಿದನು. ಡಾಕ್ಟರ್ ಬ್ರಜೇಂದ್ರನಾಥ ಶೀಲರು ಅದನ್ನು ಉದ್ಘಾಟಿಸಿದರು. ಎಂ. ಸಿಲ್ವನ್ ಲೆವಿಯವರು ಪ್ರಾಧ್ಯಾಪಕರಾಗಿ ಸೇರಿದರು. ಆದರೆ ಅದೇ ವೇಳೆಯಲ್ಲಿ ದೇಶದ ನಾನಾಭಾಗಗಳಲ್ಲಿ ಅಸಹಕಾರ ಚಳವಳಿ–ಸಹಕಾರ ಚಳವಳಿಗಳು ನಡೆಯುತ್ತಿದ್ದುವು. ರವೀಂದ್ರನು ಯಾವುದಕ್ಕೂ ತಲೆಹಾಕಲಿಲ್ಲ: ಗಾಂಧಿಯವರೇ ಸ್ವತಃ ಬಂದು ಹೇಳಿದಾಗಲೂ—೬ ತಿಂಗಳು ಚರಕ ಹಿಡಿದು ಕೂತು ಸುಲಭದಲ್ಲಿ ಪಡೆವ ಸ್ವರಾಜ್ಯ ಅತಿ ಸರಳ, ಯಾಂತ್ರಿಕ ಎನ್ನಿಸಿತು: ಅದು ನನಗೆ ಬೇಡ—ಎಂದು ಹೇಳಿಬಿಟ್ಟ!"

"ಹಾಗೇಕೆ ಹೇಳಿದ ಕವಿ ಗಾಂಧಿಯವರು ಕೇಳಿದ್ದಕ್ಕೆ?"

"ಅವನು ಹೇಳಿದ ಹಾಗೆಯೇ ಆಗಿದೆಯಲ್ಲಾ ಈಗ: ರಾಜಕೀಯ ಸ್ವಾತಂತ್ರ್ಯ ಅಷ್ಟು ಸಸಾರವಾಗಿದೆ ನಮ್ಮ ಜನರಿಗೆ. ಇಲ್ಲವಾದರೆ ನಮ್ಮ ಆಡಳಿತ ಇಷ್ಟು ಅವ್ಯವಸ್ಥಿತವಾಗುತ್ತಿತ್ತೇ? ಅಲ್ಲಿ ಲಂಚ, ಇಲ್ಲಿ ಮೋಸ, ಆ ಕಡೆ ಮುಷ್ಕರ, ಈ ಕಡೆ ಆಕ್ರಮಣ—ಒಂದೇ ಎರಡೇ ಆಗುತ್ತಿರುವ ತೊಂದರೆಗಳು! ದೃಢವಾದ ಸಮಾಜವು ರೂಪಿತವಾಗಿದ್ದರೆ ಇಂದು ನಡೆಯುತ್ತಿರುವ ಅಯೋಗ್ಯ ಪುರಸ್ಕಾರ—ಯೋಗ್ಯರ ತಿರಸ್ಕಾರ ಪ್ರಸಂಗಗಳು ಎಲ್ಲಿ ಇರುತ್ತಿದ್ದುವು? ಆದರೆ ಗಾಂಧಿಯವರೆಷ್ಟಾದರೂ ಅತ್ಯಂತ ದೂರದೃಷ್ಟಿಯುಳ್ಳವರು. ಈಗ ನಾವು ಎಚ್ಚೆತ್ತು ವಿದೇಶೀಯರ ಕೈವಾಡದ ಹೆದರಿಕೆ ಇಲ್ಲದೆ ಸಮಾಜವನ್ನು ಸುಧಾರಿಸಿಕೊಳ್ಳುವ ಅವಕಾಶವಾದರೂ ಸಿಗುವಂತಾಗಿದೆ. ಇಲ್ಲವಾದರೆ ನಮ್ಮ ಸುಧಾರಣೆಯ ಪ್ರಯತ್ನವು ಬುಡದಲ್ಲೇ ಅಭದ್ರವಾಗುವಂತೆ ವಿದೇಶೀಯ ಆಳರಸರು ಹಂಚಿಕೆ ಹಾಕಿಬಿಡುತ್ತಿದ್ದರು. ಅಸಹಕಾರ ಚಳವಳವು ದೇಶದಾದ್ಯಂತವಾಗಿ ನಡೆಸಲು ಸುಲಭವಾಗಲಿಲ್ಲ: ಸ್ವಾತಂತ್ರ್ಯವು ಕಷ್ಟದಿಂದಲೇ ಸಂಪಾದಿಸಿದ ವಸ್ತು. ಆದುದರಿಂದ ಸ್ವರಾಜ್ಯ ಆಂದೋಲನವ

ಒಂದೇ ಒಂದು ಅಂಗವೆನ್ನಿಸಿದ ಸ್ವದೇಶೀಯ ವಸ್ತ್ರದ ಉತ್ಪಾದನೆಯನ್ನು ಅಪ್ರಯೋಜಕವೆಂದು ರವೀಂದ್ರ ಹೇಳಿದ್ದು ಗಾಂಧಿಯವರಷ್ಟು ನೇತೃತ್ವಶಕ್ತಿಯಿಲ್ಲದ ಅವನ ಮಟ್ಟಿಗೆ ನ್ಯಾಯವಾಯ್ತಲ್ಲದೆ, ಅದರ ಜೊತೆಗೇ ಅನೇಕ ವಿಧದ ಕಾರ್ಯಕ್ರಮಗಳನ್ನಿಟ್ಟುಕೊಂಡು ಯಶಸ್ವಿಯಾಗಿ ಮೂಕಕೋಟಿಯನ್ನು ನಡೆಸಿಕೊಂಡು ಹೋಗಬಲ್ಲ ಮಹಾನೇತೃಗಳಾದ ಗಾಂಧೀಯವರ ದೃಷ್ಟಿಯಲ್ಲಿ ನ್ಯಾಯವಾಗಲಿಲ್ಲ. ಗಾಂಧಿಯವರ ನೇತೃತ್ವವು ಯಶಸ್ವಿಯಾಗಿ ನಮಗೆ ರಾಜಕೀಯ ಸ್ವಾತಂತ್ರ್ಯವನ್ನು ಕೊಡಿಸಿದ್ದೂ ಅದರ ಮೂಲಕವಾಗಿ ನಾವಿಂದು ತಪ್ಪು ಮಾಡುತ್ತಲಿದ್ದರೂ ಅವನ್ನು ತಿದ್ದಿಕೊಳ್ಳುತ್ತ ಸಮಾಜದ ಏಳಿಗೆಯನ್ನು ನಿಧಾನವಾಗಿಯಾದರೂ ಸಾಧಿಸುವ ದೃಢವಾದ ಪ್ರತ್ಯಾಶೆಯನ್ನಿಟ್ಟುಕೊಳ್ಳಲು ಶಕ್ತರಾದದ್ದೂ ಎಲ್ಲರಿಗೂ ತಿಳಿದ ವಿಷಯಗಳಾಗಿವೆ. ರಸಪ್ರಪಂಚಿಕನು ಎಷ್ಟಾದರೂ ವ್ಯಾವಹಾರಿಕ ತಜ್ಞತೆಯಲ್ಲಿ ಮಹಾಪುರುಷನಾದ ಜನನೇತೃವಿಗೆ ಇರುವ ಖಚಿತ ದೂರದೃಷ್ಟಿಯುಳ್ಳವನಾದಾನೇ? ಆದುದರಿಂದ ರವೀಂದ್ರನು ತಣ್ಣಗೆ ಕುಳಿತು ಹಳೆಯ ನೆನಹುಗಳ ಸುತ್ತಿನಲ್ಲಿ ಹೊಸ ಕೃತಿಗಳನ್ನು ರಚಿಸ ತೊಡಗಿದನು. ಬೇರೆ ಕ್ಷೇತ್ರಗಳಲ್ಲಿ ಅವನಿಗೆ ಎಷ್ಟೇ ಅನುಭವವಿದ್ದರೂ ಅವನ ಅತಿ ಪ್ರಧಾನ ಕಾರ್ಯಕ್ಷೇತ್ರವು ಉದ್ದಕ್ಕೂ ಸಾಹಿತ್ಯಕೃತಿರಚನೆಯೇ ಆಗಿ ಬಂದಿತ್ತಲ್ಲವೇ? ಅವನು ಬರೆದ ಸಾಲುಗಳ ಸಂಖ್ಯೆ ವ್ಯಾಸ-ಅರವಿಂದರ ಸಾಲುಗಳಿಗೆ ಕಡಿಮೆ ಎಂದು ತಿಳಿದೆಯೋ?"

"ಆಗ ಅವನು ಎಂಥ ಕೃತಿಗಳನ್ನು ರಚಿಸಿದನು?"

"ಇಂಗ್ಲಿಷ್ ಪದ್ಯಗಳನ್ನು ಬರೆದ! ೧೯೨೨ರಲ್ಲಿ 'ಲಿಪಿಕಾ' ಎಂಬ ಬಂಗಾಲಿ ಕವನಸಂಗ್ರಹವನ್ನೂ ಹೊರಡಿಸಿದ. ಈ ಪದ್ಯಗಳಲ್ಲಿ ಅವನು ಕ್ರಮೇಣ ಹೇಗೆ ಜಗತ್ತನ್ನು ಅನಾಸಕ್ತಿಯಿಂದ ದೂರ ನಿಂತು ನೋಡುವ ನಿಷ್ಕ್ರಿಯ ದ್ರಷ್ಟಾರನಾಗುತ್ತ ಹೋದ ಎಂಬುದನ್ನು ಸ್ಪಷ್ಟವಾಗಿ ಕಾಣಬಹುದು. ಅದೇ ವರ್ಷ 'ಪ್ರವಾಸಿ'ಯಲ್ಲಿ ಅವನು ಬರೆದ 'ಮುಕ್ತಧಾರಾ' ಎಂಬ ಹೊಸ ನಾಟಕವೊಂದು ಪ್ರಕಟವಾಯ್ತು. ಅದರಲ್ಲಿ ಅವನ ವಿವಿಧ ಸಂದೇಶಗಳ ಹಾಗೂ ದೃಢವಿಶ್ವಾಸಗಳ ಸಮನ್ವಯವನ್ನು ಕಾಣಬಹುದು."

"ಅದರಲ್ಲಿ ಕವಿ ಕೊಟ್ಟ ಸಂದೇಶಗಳಾವುವು?"

"೧. ಯಾಂತ್ರಿಕ ಶಿಬ್ಬಂದಿಯಿಂದ ನಡೆಯುವ ಸರಕಾರ ಒಳಿತನ್ನು ಉಂಟುಮಾಡದು.

೨. ಹಿಂಸೆ-ದಮನಗಳಿಗೆ ಬಳಸಲಾಗುವ ವಿಜ್ಞಾನ ಸಲ್ಲದು.

೩. ದಾಸ್ಯಪದ್ಧತಿಯ ಶಿಕ್ಷಣ ನಿಂದ್ಯ.

೪. ಕುಲದ್ವೇಷ ಸರ್ವಥಾ ತ್ಯಾಜ್ಯ.

೫. ಪರಶೋಷಕ ರಾಜಕಾರಣ ಬಹಿಷ್ಕಾರ್ಯ.

೬. ಸ್ವಾತಂತ್ರ್ಯದಲ್ಲೇ ದೇವರಿದ್ದಾನೆ.

ಇದಲ್ಲದೆ ಆತನು ಎಷ್ಟೋ ಸುಂದರವಾದ ಗೀತಗಳನ್ನು ಸಾಮೂಹಿಕವಾಗಿ ಹಾಡಲು ಅನುಕೂಲವಾಗುವಂತೆ ರಚಿಸಿದನು; ೧೯೨೩ರಿಂದ ೧೯೨೫ರವರೆಗೆ ಮೂರು ವರ್ಷ ವಿಶ್ವಭಾರತಿಯ ಕಾರ್ಯಗಳನ್ನು ನೆರವೇರಿಸುವುದರ ಜೊತೆಗೆ ಎಷ್ಟೋ ಪ್ರಬಂಧಸಂಗ್ರಹ, ಗೀತ, ನಾಟಕ ಮುಂತಾದವನ್ನು ಸಿದ್ಧಗೊಳಿಸಿದನು.

೧೯೨೨ರಲ್ಲಿ ರವೀಂದ್ರನು ಸಿಂಹಳದಲ್ಲಿ ಮತ್ತು ದಕ್ಷಿಣ ಭಾರತದಲ್ಲಿ ಸಂಚರಿಸಿದನು; ೧೯೨೩ರಲ್ಲಿ ಸಿಂಧೂಪ್ರಾಂತದಲ್ಲೂ ಪಶ್ಚಿಮಭಾರತದ ಸಂಸ್ಥಾನಗಳಲ್ಲೂ ತಿರುಗಾಡಿದನು; ೧೯೨೪ರಲ್ಲಿ ಚೀನ-ಜಪಾನುಗಳಿಗೆ ಹೋದನು. ೧೯೨೫ರಲ್ಲಿ ಇಟಲಿಯಲ್ಲಿ ಆತ ಕೆಲಕಾಲ ಕಳೆದ; ಅದಕ್ಕೆ ಮೊದಲು ಪೆರುವಿಗೆ ಹೊರಟು ಬ್ಯೂನೋಸ್ ಐರ್ಸ್ ಎಂಬಲ್ಲಿ ನಿಂತು ಕಾಹಿಲೆಯಾದುದರಿಂದ ಹಿಂದಿರುಗಿದ್ದ. ೧೯೨೬ರಲ್ಲಿ ಪುನಃ ಮುಸ್ಸೋಲಿನಿಯ ಇಟಲಿಯು ಅವನಿಗೆ ಸಂಭ್ರಮದ ಸ್ವಾಗತವನ್ನಿತ್ತಿತು.

ಆಮೇಲೆ ೧೯೨೬ರಲ್ಲೇ ರವೀಂದ್ರನು ಸ್ವಿಜರ್‌ಲೆಂಡ್, ಬಲ್ಗೇರಿಯ, ಬಾಲ್ಕನ್ ದ್ವೀಪಗಳು, ಆಸ್ಟ್ರಿಯ, ನಾರ್ವೇ, ಡೆನ್ಮಾರ್ಕ್, ಜರ್ಮನಿ, ಜೆಕೊಸ್ಲೋವೇಕಿಯಾ, ಯುಗೊಸ್ಲೇವಿಯ, ರುಮೇನಿಯ, ಗ್ರೀಸ್ ಮತ್ತು ಈಜಿಪ್ಟುಗಳ ಸಂಚಾರವನ್ನು ಮುಗಿಸಿದನು.

೧೯೨೭ರಲ್ಲಿ ರವೀಂದ್ರನು ಭಾರತದ ಆದ್ಯಂತ ಪ್ರವಾಸ ಮಾಡಿದನು. ಅದೇ ಜುಲೈ ತಿಂಗಳಲ್ಲಿ ೯ನೆಯ ಸಲದ ವಿದೇಶ ಪ್ರವಾಸಕ್ಕೆ ಸಿದ್ಧನಾಗಿ, ಭಾರತವನ್ನು ಬಿಟ್ಟು ಮಲಯ, ಜಾವ, ಬಲಿ, ಸಯಾಮುಗಳನ್ನು ಸಂದರ್ಶಿಸಿದನು. ೧೯೨೮ರಲ್ಲಿ ಆತನು ಅರವಿಂದ ಘೋಷರನ್ನು ಭೇಟಿಮಾಡಿ,

ಸಿಂಹಳದ ಸಂಚಾರವನ್ನು ಮುಗಿಸಿಕೊಂಡು ಕಲ್ಕತ್ತದಲ್ಲಿ ಏರ್ಪಡಿಸಲಾದ ಬ್ರಹ್ಮಸಮಾಜದ ಶತಮಾನೋತ್ಸವದಲ್ಲಿ ಭಾಗವಹಿಸಲೆಂದು ಹಿಂದಿರುಗಿದನು. ೧೯೩೦ರಲ್ಲಿ ಶಾಂತಿನಿಕೇತನದ ಆವಾರದಲ್ಲಿ ವೈಸ್‌ರಾಯ್ ಲಾರ್ಡ್ ಐರ್ವಿನ್ನನು ಕವಿಯ ಸಂದರ್ಶನವನ್ನು ಪಡೆದನು. ೧೦ನೆಯ ವಿದೇಶ ಪ್ರವಾಸಕ್ಕಾಗಿ ಆತನು ಕೆನಡಕ್ಕೂ ಹೋದನು. ಆಮೇಲೆ ಅಮೇರಿಕಕ್ಕೆ ಹೋಗಿ ಅಲ್ಲಿಯ ಕೆಲವರ ನಡತೆಯಿಂದ ಬೇಸರಪಟ್ಟು ಆ ಸಂಚಾರವನ್ನು ನಿಲ್ಲಿಸಿ ರವೀಂದ್ರನು ಜಪಾನ್ ಮತ್ತು ಇಂಡೋಚೀನಗಳಲ್ಲಿ ಪ್ರವಾಸ ಮಾಡಿದನು."

"ಇಷ್ಟು ದೇಶಗಳನ್ನು ತಿರುಗಿಬಂದನೇ ನಮ್ಮ ಕವಿ?"

"ಭಾರತದ ಜಯಭೇರಿಯನ್ನು ಜಗತ್ತಿನ ಎಲ್ಲಾ ಕಡೆಗಳಲ್ಲೂ ಹೊಡೆದು ಬಂದ ಎನ್ನು. ಎಲ್ಲರಿಗೂ ಈ ವಿಶ್ವಕವಿಯನ್ನು ಕಾಣುವ ಭಾಗ್ಯವಿತ್ತು! ಇಷ್ಟೇ ಅಲ್ಲ. ಕವಿಯೆಂದು ಹೆಸರಾದ ರವೀಂದ್ರನು ೧೯೨೮ರಲ್ಲಿ **ಚಿತ್ರ ಬರೆಯುವುದನ್ನೂ** ನಿತ್ಯೋದ್ಯೋಗ ಮಾಡಿಕೊಂಡು ಸುಮಾರು ೭೦ನೆಯ ವರ್ಷ ವಯಸ್ಸಿನಲ್ಲಿ ಚಿತ್ರಕಾರನಾಗಿಯೂ ಹೆಸರುಪಡೆದನು. ಅವನು ಫ್ರಾನ್ಸ್, ಜೆಕೊಸ್ಲೊವೇಕಿಯ, ಇಂಗ್ಲೆಂಡ್, ಜರ್ಮನಿ, ಡೆನ್ಮಾರ್ಕ್ ಮತ್ತು ರಶಿಯಗಳನ್ನು ಸಂದರ್ಶಿಸಿದ್ದು ಅವನ ೧೧ನೆಯ ವಿದೇಶ ಪ್ರವಾಸವೆನ್ನಿಸಿತು. ರಶಿಯದ ಪ್ರಗತಿಯು ರವೀಂದ್ರನ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರಿತು. ಅಲ್ಲಿಂದ ಆತನು ಪುನಃ ಅಮೇರಿಕದ ಸಂಯುಕ್ತರಾಜ್ಯ ಮತ್ತು ಇಂಗ್ಲೆಂಡುಗಳಲ್ಲಿ ಸಂಚರಿಸಿ ೧೯೩೧ರ ಜನೆವರಿಯಲ್ಲಿ ಭಾರತಕ್ಕೆ ಮರಳಿದನು.

ತನ್ನ ೧೨ನೆಯ ವಿದೇಶ ಪ್ರವಾಸವೆಂದು ೭೦ನ್ನು ದಾಟಿದ ಕವಿಯು ಆಮಂತ್ರಣದಂತೆ ಪರ್ಶಿಯಕ್ಕೆ ೧೯೩೨ರಲ್ಲಿ ಪ್ರಯಾಣಮಾಡಿದನು. ಬಾಗ್ದಾದಿನ ರಾಜನ ಸತ್ಕಾರವನ್ನು ಪಡೆದು ಅವನು ಕಲ್ಕತ್ತಕ್ಕೆ ಹಿಂದಿರುಗಿದನು; ಅಲ್ಲಿಯ ವಿಶ್ವವಿದ್ಯಾನಿಲಯವು ಅವನಿಗೆ ವಿಶೇಷ ಸ್ವಾಗತವನ್ನೇರ್ಪಡಿಸಿತು. ಅನಂತರ ಅವನು ಉಪವಾಸ ಹಿಡಿದಿದ್ದ ಗಾಂಧಿಯವರನ್ನು ಯರವಾಡ ಜೈಲಿನಲ್ಲಿ ಕಂಡನು; ೧೯೩೩ರಲ್ಲಿ ಭಾರತದಲ್ಲಿ ಪುನಃ ಪ್ರವಾಸಮಾಡಿ ೧೯೩೪ರಲ್ಲಿ ಸಿಂಹಳ, ಮದ್ರಾಸ್, ಆಂಧ್ರಪ್ರದೇಶಗಳಲ್ಲಿ ತಿರುಗಾಡಿ ಬಂದನು. ೧೯೩೫ರಲ್ಲಿ ಪಂಜಾಬ್ ಮತ್ತು ಉತ್ತರಪ್ರದೇಶಗಳನ್ನು ಸಂದರ್ಶಿಸಿದ್ದಲ್ಲದೆ, ೧೯೩೬ರಲ್ಲಿ ಅಲಹಾಬಾದ್, ಲಾಹೋರ್, ದಿಲ್ಲಿ, ಹೈದರಾಬಾದ್, ಮೀರತ್, ಡಾಕಾಗಳ ಪ್ರವಾಸವನ್ನೂ

ತೀರಿಸಿದನು. ೧೯೩೭ರಲ್ಲಿ ಅವನು ಕಾಹಿಲೆಬಿದ್ದ. ಆಗ ಗಾಂಧಿಯವರೂ ಜವಾಹರಲಾಲರೂ ಅವನನ್ನು ಹೋಗಿ ನೋಡಿದ್ದಲ್ಲದೆ, ಅಖಿಲಭಾರತ ಕಾಂಗ್ರೆಸ್ ಸಮಿತಿಯು ಅವನ ಆರೋಗ್ಯ ಸುಧಾರಿಸಲೆಂದು ದೇವರನ್ನು ಪ್ರಾರ್ಥಿಸುವ ನಿರ್ಣಯವನ್ನು ಪಾಸುಮಾಡಿತು. ೧೯೩೯ರಲ್ಲಿ ಆತ ಮತ್ತೆ ತಿರುಗಲಾರಂಭಿಸಿದನು; ಓರಿಸ್ಸ, ಹಿಮಾಲಯ, ಮಿಡ್ನಾಪುರಗಳನ್ನವನು ಸಂದರ್ಶಿಸಿದನು. ೧೯೪೦ರಲ್ಲಿ ಗಾಂಧಿಯವರು ಶಾಂತಿನಿಕೇತನಕ್ಕೆ ಭೇಟಿಕೊಟ್ಟರು. ನೆಹರುರವರ ಮಗಳಾದ ಇಂದಿರಾ ಗಾಂಧಿ ಶಾಂತಿನಿಕೇತನದಲ್ಲಿಯೇ ಓದಿದವಳೆಂಬುದಿಲ್ಲಿ ಸ್ಮರಣೀಯ.

ಈ ನಡುವೆ ರವೀಂದ್ರನಿಗೆ ದುಃಖಗಳು ಸಾಲುಸಾಲಾಗಿ ಎದುರಾದವು. ಆತನ ಸಹೋದರರಾದ ಸತ್ಯೇಂದ್ರನಾಥರು ೧೯೨೩ರಲ್ಲೂ ಜ್ಯೋತೀಂದ್ರನಾಥರು ೧೯೨೫ರಲ್ಲೂ ದ್ವಿಜೇಂದ್ರನಾಥರು ೧೯೨೬ರಲ್ಲೂ ದಿವಂಗತರಾದರು. ಆತನ ಮಿತ್ರರಾದ ವಿಲ್ಲಿಪಿಯರ್‌ಸನ್, ಸತ್ಯೇಂದ್ರನಾಥ ದತ್, ಬ್ರಜೇಂದ್ರನಾಥ ಸೀಲ್ ಮುಂತಾದವರೆಲ್ಲಾ ಅಷ್ಟರೊಳಗೆ ಕಾಲಾಧೀನರಾಗಿದ್ದರು. ಬದುಕಿ ಉಳಿದಿದ್ದ ರವೀಂದ್ರನನ್ನು ಗಾಂಧಿಯವರು 'ಮಹಾ ಕಾವಲುಗಾರ' ಎಂದು ಕರೆದರು.

೧೯೪೦ರಲ್ಲಿ ರವೀಂದ್ರನ ಪರಮ ಮಿತ್ರರಾದ ಸಿ. ಎಫ್. ಆಂಡ್ರೂಸರು ಸ್ವರ್ಗವಾಸಿಗಳಾದರು. ಜೊತೆಗೆ ಭಾರತ–ಬ್ರಿಟನ್ನುಗಳ ಸಂಬಂಧ ಹೆಚ್ಚು ಹೆಚ್ಚು ಕಹಿಯಾಗುತ್ತಹೋಯ್ತು. ಇದರಿಂದ ರವೀಂದ್ರನು ಬಹಳ ತತ್ತರಿಸಿದನು. ೨ನೆಯ ಮಹಾಯುದ್ಧ ೧೯೩೯ರಲ್ಲಿ ಪ್ರಾರಂಭವಾಗಿತ್ತು. ಅಂದಿನ ಸನ್ನಿವೇಶದಲ್ಲಿ 'ಪುರಾಣಮಿತ್ಯೇವ ಸಾಧು ಸರ್ವಂ' ಎನ್ನುತ್ತಿದ್ದ ಭಾರತೀಯರನ್ನು ಕಂಡು ಅವನು ಹೇಸಿಹೋದನು, ರೋಸಿಹೋದನು; ಹಿಂದು–ಮುಸಲ್ಮಾನ ಪೂಜಾಸ್ಥಾನಗಳೆರಡರ ಮೇಲೂ ಸೋವಿಯೆಟ್ ಬಾಂಬು ಬೀಳಲಿ —ಎಂದೊಮ್ಮೆ ಹಾಸ್ಯಧ್ವನಿಯಿಂದ ತನ್ನ ಜುಗುಪ್ಸೆಯನ್ನು ವ್ಯಕ್ತಪಡಿಸಿದನು; **ಧಾರ್ಮಿಕರ ಕಪಟಾಚಾರಗಳಿಗಿಂತ ನಾಸ್ತಿಕತೆಯೇ ಒಳಿತೆಂದನು.**

೧೯೩೮ರಲ್ಲಿ ನೊಗುಚಿಯೆಂಬ ಜಪಾನೀಯ ಕವಿಯು ಚೀನವನ್ನು ಆಕ್ರಮಿಸುತ್ತಿದ್ದ ಜಪಾನಿನ ಉದಾತ್ತ ಧ್ಯೇಯವನ್ನು ವರ್ಣಿಸಿ ಬರೆದಾಗ ಆ ಕಾಗದಕ್ಕೆ ಉತ್ತರವಾಗಿ ರವೀಂದ್ರನು ಮಾಸ್ಕೋ ಸುಟ್ಟ ನೆಪೋಲಿಯನ್ನನ ಉದಾತ್ತ ಧ್ಯೇಯಕ್ಕೆ ಅದನ್ನು ಹೋಲಿಸಿ, ಅಂಥ ಆಕ್ರಮಣ ಅತ್ಯಂತ ಅನ್ಯಾಯವಾದುದೆಂದು ನಿಷ್ಠುರವಾಗಿ ಬರೆದುಹಾಕಿದನು!"

" ಎಂಥ ಧೀರೋದಾತ್ತ ನಮ್ಮ ರವೀಂದ್ರ ಕವೀಂದ್ರ!"

" ಖಂಡಿತವಾಗಿಯೂ. 'ಅಪ್ರಿಯಸ್ಯ ಚ ಸತ್ಯಸ್ಯ ವಕ್ತಾ ಶ್ರೋತಾ ಚ ದುರ್ಲಭಃ' ಎಂಬುದು ಸುಳ್ಳೇ? ಗಾಂಧಿಯವರೊಡನೆ ಕೆಲ ವಿಷಯಗಳಲ್ಲಿ ಭಿನ್ನಾಭಿಪ್ರಾಯ ತಳೆದಿದ್ದರೂ ಅವರ ಪರಮ ಮಿತ್ರನಾಗಿರಲು ಅದರಿಂದಲೇ ಅವನಿಗೆ ಸಾಧ್ಯವಾಯ್ತು. ಸಹಜೀವಿಗಳ ಶ್ರಮ ಮತ್ತು ದಾರಿದ್ರ್ಯಗಳ ಪರಿಚಯವು ಗಾಂಧಿಯವರ ಸ್ವಾನುಭವಕ್ಕೆ ಬಂದಿದ್ದರೆ ರವೀಂದ್ರನ ದೃಷ್ಟಿ ಪಥಕ್ಕೆ ಬಿದ್ದಿತ್ತು—ಅಷ್ಟೆ. ದೀನಾನಾಥರ ಬಗ್ಗೆ ಅನುಕಂಪವೋ ಇಬ್ಬರಲ್ಲೂ ಅಷ್ಟೇ ಆಳವಾಗಿತ್ತು. ಆದರೆ ಗಾಂಧಿಯವರು Man of action ಕರ್ಮವೀರ ರಾದರೆ ರವೀಂದ್ರನು ಅದರಲ್ಲಿ ಅವರಿಗೆ ಕಿಂಚಿನ್ನ್ಯೂನ. ಏಕೆಂದರೆ ಅವನು ಹುಟ್ಟುಕವಿ — ಅದರಿಂದ ಶಾಂತಿನಿಕೇತನ-ವಿಶ್ವಭಾರತಿಗಳನ್ನು ನಿರ್ಮಿಸಲು ಹಗಲಿರುಳು ದುಡಿದರೂ ಜನ ಅವನನ್ನು ನೆನೆಸಿಕೊಳ್ಳುವುದು ಮುಖ್ಯವಾಗಿ ಕಾವ್ಯವೀರನೆಂದೇ."

" ದೇಶವಿದೇಶಗಳಲ್ಲಿ ಭಾರತದ ಗೌರವ-ಪ್ರತಿಷ್ಠೆಗಳನ್ನು ರವೀಂದ್ರನು ಹೆಚ್ಚಿಸಿದ್ದು ಗಾಂಧಿಯವರ ಸ್ವಾತಂತ್ರ್ಯಾಂದೋಲನಕ್ಕೆ ಅನುಕೂಲಮತವನ್ನು ವಿದೇಶೀಯರಿಂದ ಕೊಡಿಸಿದ್ದೇನು ಸುಳ್ಳೇ?"

" ಖಂಡಿತವಾಗಿಯೂ ಸುಳ್ಳಲ್ಲ. ಅದು ಅವನು ಮಾಡಿದ ಪರೋಕ್ಷ ಉಪಕಾರ—ಅದನ್ನಾರು ಮರೆಯುವರು? 'ಭಾರತದ ಅತ್ಯಧಿಕಾರಸಂಪನ್ನ ನಾದ ಅನಧಿಕೃತ ಸಾಂಸ್ಕೃತಿಕ ರೂಪ' ಎಂಬ ಕೀರ್ತಿ ಅದರಿಂದ ಅವನಿಗೆ ಸಲ್ಲುತ್ತದೆ. ೧೯೪೦ರ ಫೆಬ್ರುವರಿ ೧೭ರಂದು ಮಹಾತ್ಮಾ ಗಾಂಧಿಯವರೂ ಮಹಾಸತಿ ಕಸ್ತೂರಿಬಾಯಿಯವರೂ ಗುರುದೇವಸಾನ್ನಿಧ್ಯಕ್ಕೆ ತೀರ್ಥಯಾತ್ರೆ ಯೆಂದು ಅವನನ್ನು ಬಂದು ನೋಡಿಕೊಂಡು ಹೋದರು.

ಶಾಂತಿನಿಕೇತನದಲ್ಲಿ ೧೯೪೦ರಲ್ಲಿ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯದ ಪರವಾಗಿ ವಿಶೇಷ ಪದವೀದಾನ ಸಮಾರಂಭವನ್ನೇರ್ಪಡಿಸಿ ಸರ್ ಮಾರಿಸ್ ಗ್ವೇಯರರೂ ಸರ್ ಸರ್ವಪಲ್ಲಿ ರಾಧಾಕೃಷ್ಣನ್ನರೂ ರವೀಂದ್ರನಿಗೆ ಡಾಕ್ಟರೇಟ್ ಪದವಿಯನ್ನು ಕೊಟ್ಟರು. ೧೯೪೧ರ ಆಗಸ್ಟ್ ೭ರಂದು ರವೀಂದ್ರನು ದಿವಂಗತ ನಾದನು. ಆದರೆ ಅವನ ಅಮರ ಕೃತಿಗಳು ಅವನನ್ನಿಂದೂ ಜೀವಂತವಾಗಿ ಉಳಿಸಿವೆ."

೧೨. ರವೀಂದ್ರನ ವಿನೋದಪ್ರಿಯತೆ

" ರವೀಂದ್ರನ ಬಗ್ಗೆ ಇಷ್ಟೆಲ್ಲಾ ಕೇಳಿದರೂ ಅವನು ನಮ್ಮ ನಿಮ್ಮಂತಹ ಮನುಷ್ಯ—ಎಂಬ ಆತ್ಮೀಯತೆ ಉಂಟಾಗಲಿಲ್ಲ. ಅದೇಕೆ ಸ್ವಲ್ಪ ಹೇಳ್ತೀರಾ?"

" ಇದೊಳ್ಳೇ ಹೇಳ್ತಿಯಲ್ಲಾ ನೀನು! ನಮ್ಮಂತೆಯೇ ಅವನು ಭಾರತೀಯ; ಮುಂಜಿ-ಮದುವೆ ಮುಂತಾದವುಗಳನ್ನು ಮಾಡಿಕೊಂಡು ಗೃಹಸ್ಥಜೀವನ ನಡೆಸಿದವನು—ಮಕ್ಕಳುಮರಿಗಳು ಅವನಿಗೂ ಇದ್ದರು!"

" ಅದೆಲ್ಲ ಗೊತ್ತು."

" ಅಂದರೆ?"

" 'ಅಂದರೆ' ಅಂದರೆ? ನೀವೂ ಒಳ್ಳೆ ವ್ಯಾಪಾರಿಗಳಂತೆ ಮಾತನಾಡುತ್ತೀರಲ್ಲಾ! ಲೆಕ್ಕಾಚಾರ ಅಂದರೆ ಲೆಕ್ಕಾಚಾರ—ಅಲ್ಲವೇ?"

" ಲೆಕ್ಕಚಾರವಿಲ್ಲದ್ದೂ ಜೀವನದಲ್ಲಿರುತ್ತೆಯೇ?"

" ಅಯ್ಯೋ, ನಿಮಗರ್ಥವೇ ಆಗೊಲ್ಲವಲ್ಲ—ಅಂತೀನಿ."

" ಅಲ್ಲವೇ, ನನಗರ್ಥವಾಗದೆ ಇರೋದಿದ್ದರೆ ನೀನೇ ನನಗೆ ಹೇಳಬಹುದಲ್ಲಾ!"

" ಅಲ್ಲರೀ—ತಮಾಷೆಗಿಮಾಷೆ ಮಾಡೋಕ್ ಬರ್‍ತಿತ್ತೇ ಅವನಿಗೆ ಅಂತ ಕೇಳಿದೆ—ಅಷ್ಟೆ."

" ಇದೇನು ಹೇಳ್ತೀಯಾ? ಮಹಾಕವಿಗೆ ಅಂತಹ ಚಾತುರ್ಯವಿಲ್ಲದೆ ಇರುತ್ತೆಯೇ?"

" ಹಾಗೇನೂ ನನಗೆ ತಿಳಿದಿಲ್ಲ. ವಾಲ್ಮೀಕಿ ತನ್ನ ರಾಮಾಯಣದಲ್ಲಿ ಹಾಸ್ಯಕ್ಕೆ ಅವಕಾಶ ಕೊಟ್ಟಿದ್ದಾನೆಯೇ?"

" ಅಯ್ಯೋ ಇಷ್ಟೇನೇ ನೀ ರಾಮಾಯಣ ಓದಿ ತಿಳಿದುಕೊಂಡಿರೋದು? ಚೆನ್ನಾಯ್ತು, ಚೆನ್ನಾಯ್ತು. ಶ್ರೀಮದ್ ರಾಮಾಯಣದಲ್ಲಿ ಬರುವ ಕಬಂಧ ಗೊತ್ತಿಲ್ಲವೇ?"

" ಗೊತ್ತು; ಅದೇನು ಮಹಾ ತಮಾಷೆಯೆ?"

" ಅಯ್ಯೋ ತಲೆಯಿಲ್ಲ! ತಲೆಯಿಲ್ಲದೋರಿಗೆ ಹೊಳೆಯುವುದುಂಟೇ? ಕಬಂಧನಿಗೆ ತಲೆಯೇ ಇದ್ದಿದ್ದಿಲ್ಲ. ಆ ಪಾತ್ರ ಅಲ್ಲೇಕೆ ಬಂದಿದೆ? ಕಬಂಧನೆಂಬ ರಾಕ್ಷಸನು ತನ್ನ ಕತ್ತಿನ ತೂತಿನಲ್ಲಿ ಕೈಗೆ ಸಿಕ್ಕಿದ ಮನುಷ್ಯರನ್ನೆಲ್ಲಾ ಹಿಡಿದು ನೂಕಿ ನುಂಗುತ್ತಿದ್ದನಂತೆ. ಆ ನುಂಗಣ್ಣನಿಗೆ ನುಂಗೋದೊಂದನ್ನು ಬಿಟ್ಟರೆ ಮತ್ತೇನೂ ಅರಿಯದು. ಇಂಥ ಆದರ್ಶ ಹೊಟ್ಟೆಬಾಕನನ್ನು ಜಗತ್ತಿನ ಇನ್ನಾವ ಕವಿ ಚಿತ್ರಿಸಿದ್ದಾನೆ?"

" ಅರೆ, ಬಹಳ ಚಮತ್ಕಾರವಾಗಿದೆಯಲ್ಲ!"

" ಬಕಾಸುರನಿಗೆ ಕೂಡ ತಲೆಯಿಲ್ಲದಿರಲಿಲ್ಲ. ತಲೆ ಅಕ್ಷರಶಃ ಇಲ್ಲದ ಪಾತ್ರವನ್ನು ಇನ್ನಾವನೂ ಕಲ್ಪಿಸಿಲ್ಲ. ಅದರಿಂದಲೇ ನಿನಗೆ ಹೇಳಿದ್ದು—ಮಹಾ ಕವಿಗಳ ಮಹತ್ವವು ಕಾಣಿಸದಿರುವ ಅಂಶವು ಮಹಾಕಾವ್ಯಗಳಲ್ಲಿರುವುದಿಲ್ಲ— ಅಂತ. ಕೇವಲ ಉಂಡು ಮಲಗುತನಕ್ಕೆ ಕಬಂಧನಿಗಿಂತ ದೊಡ್ಡ ಉದಾಹರಣೆ ಮತ್ತೆಲ್ಲೂ ನಮಗೆ ಸಿಗಲಾರದು. ಕೇವಲ ಮಲಗುವುದರಲ್ಲೇ ಅದ್ವಿತೀಯನಾದ ಕುಂಭಕರ್ಣನಿಗಿಂತ ದೊಡ್ಡ ಮಲಗಪ್ಪನ ಉದಾಹರಣೆಯೂ ಜಗತ್ತಿನಲ್ಲಿ ಇನ್ನೆಲ್ಲೂ ಸಿಗಲಾರದು. ಗೊತ್ತಿದ್ದರೆ ಹೇಳು ನೋಡೋಣ."

" ಇಲ್ಲ, ಇಲ್ಲ—ಇಂಥ ಅದ್ಭುತ, ಹೀನತಮ ವ್ಯಕ್ತಿಗಳನ್ನು ನಾನು ಊಹಿಸಿಯೂ ಹೇಳಲಾರೆ. ಖಂಡಿತವಾಗಿಯೂ ನಾನು ವಾಲ್ಮೀಕಿಯ ಗ್ರಂಥವನ್ನು ಕಣ್ತೆರೆದು ಓದಿಲ್ಲವೆಂದು ಒಪ್ಪಿಕೊಳುತ್ತೇನೆ. ಈ ಪಾತ್ರಗಳ ಮೇಲೆ ಕ್ಷಕಿರಣ ಬೀರಿದ ನಿಮ್ಮ ಕೌಶಲವನ್ನು ಎಂದೆಂದೂ ಮರೆಯಲಾರೆ."

" ಹಾಗೆ ಹಾದಿಗೆ ಬಾ. ವ್ಯಾಸ ಚಿತ್ರಿಸಿದ **ಯೋಜನ-ಮತ್ಸ್ಯಗಂಧಿ**ಯನ್ನೂ ಲಕ್ಷ್ಮೀಶ ಬರೆದ ಜೈಮಿನಿ ಭಾರತದಲ್ಲಿ ಹೇಳಿದ ಘೋರ ಭೀಷಣನ ಸೇನಾನಾಯಿಕೆ **ಯೋಜನಸ್ತನಿ**ಯನ್ನೂ ಹಾಗೇ ಬಹಳ ಜನರು ಗಮನಿಸಿಲ್ಲ."

" ನಿಜವಾಗಿಯೂ; ಆಕೃತಿಗಳನ್ನು, ಸಂನಿವೇಶಗಳನ್ನು, ನಡತೆಗಳನ್ನು ಮತ್ತು ಹೆಸರುಗಳನ್ನು ಅತ್ಯಂತ ಚಿತ್ರವಿಚಿತ್ರವಾಗಿ ಚಿತ್ರಿಸುವ ಕೌಶಲಕ್ಕೊಮ್ಮೆ ಉದಾಹರಣೆ ಕೊಡುವಾಗ ಹಲಸಂಗಿಯ ಖಾಜಾಸಾಹೇಬ ಚಿತ್ರಿಸಿದ ಆಪಾದ ಮಸ್ತಕ, ಅಂತರ್ಬಹಿಶ್ಚ ಕಪ್ಪಾಗಿರುವ ಹುಡುಗಿಯನ್ನು ನೀವು ಹೇಳಿದ್ದು ನನಗೀಗ ನೆನಪಾಗುತ್ತದೆ!"

" ರವೀಂದ್ರನು ಸ್ವಭಾವತಃ ಗಾಂಭೀರ್ಯದ ಜೊತೆಗೇ ವಿನೋದಪರತೆಯನ್ನೂ ಉಳ್ಳವನು. ಅವನು ತನ್ನ ಹಿರಿಯರ ಜೊತೆಗೆ (ಮದುವೆಯಾಗುವ ಮೊದಲು) ಒಂದು ಕನ್ಯಾದರ್ಶನಕ್ಕೆ ಹೋದ ಘಟನೆಯನ್ನು ಹೀಗೆ ಹೇಳಿದ್ದಾನೆ:

'ಒಂದು ಸಲ ಇನ್ನೊಂದು ಪ್ರಾಂತದ ಒಬ್ಬ ಹುಡುಗಿಯ ಜೊತೆಗೆ ನನ್ನ ಮದುವೆಯಾಗುವುದೆಂಬ ಮಾತು ನಮ್ಮಲ್ಲಿ ಹಬ್ಬಿತ್ತು. ಆ ಹುಡುಗಿ ಅತಿ ದೊಡ್ಡ ಶ್ರೀಮಂತ ಕುಟುಂಬದವಳಾಗಿದ್ದಳು. ಅವಳ ಅಪ್ಪ ಅತಿ ದೊಡ್ಡ ಜಮೀನುದಾರನಾಗಿದ್ದ. ಅವಳು ಏಳು ಲಕ್ಷ ರೂಪಾಯಿ ಬೆಲೆಯ ಆಸ್ತಿಗೆ ವಾರಸುದಾರಳಾಗಿದ್ದಳು. ನಮ್ಮಲ್ಲಿಯ ಕೆಲವರು ಅವಳನ್ನು ನೋಡಲೆಂದು ಅವಳ ಮನೆಗೆ ಹೋದೆವು. ಆಗ ಇಬ್ಬರು ಎಳೆಯ ವಯಸ್ಸಿನ ಹೆಂಗಸರು ಬಂದು ನಮ್ಮೊಡನೆ ಕುಳಿತರು. ಅವರಲ್ಲಿ ಒಬ್ಬಳು ಬಹಳ ಸರಳವಾಗಿದ್ದಳು. ಅವಳು ಮಿಣ್ಣಕ್ಕನಂತೆ ಒಂದು ಮೂಲೆಯನ್ನು ಹಿಡಿದು ಕುಳಿತಿದ್ದಳು. ಇನ್ನೊಬ್ಬಳಾದರೋ ಚಟುವಟಿಕೆಯ ಚೆನ್ನಿ, ಚಮತ್ಕಾರದ ಚೆದುರೆ. ಅವಳು ಆಶ್ಚರ್ಯಕರವಾಗುವಷ್ಟು ಅವಧಾನದಿಂದ ಅತ್ತಿತ್ತ ಚುರುಕಾಗಿ ತಿರುಗುತ್ತಿದ್ದಳಲ್ಲದೆ, ಇಂಗ್ಲೀಷು ಮಾತನ್ನು ಚೆಂದವಾಗಿ ಆಡಬಲ್ಲವಳಾಗಿದ್ದಳು. ಆಕೆ ಪಿಯಾನೊ ಬಾರಿಸಿದಳು ಮತ್ತು ಸಂಗೀತಕಲೆಯ ಬಗ್ಗೆ ಚರ್ಚೆ ನಡೆಸಿದಳು. ಆಗ ನನ್ನೊಳಗೇ—ಈ ಹುಡುಗಿ ನನಗೆ ಸಿಕ್ಕಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು—ಎಂದುಕೊಂಡೆ. ಅಷ್ಟರಲ್ಲಿ ಮನೆಯ ಯಜಮಾನ ದಯಮಾಡಿಸಿದ—ವಯಸ್ಸಾದ ಹಿರಿಯ, ಆದರೆ ಬಹಳ ವಿಲಾಸಿ ಅಂತ ಕಾಣಿಸುತ್ತಿದ್ದ. ಆ ಹೆಂಗಸರಿಬ್ಬರನ್ನು ನಮಗೆ ಪರಿಚಯ ಮಾಡಿಕೊಡಲು ಹೊರಟ ಆತನು ಚೆದುರೆಯಾದ ಚೆಲುವೆಯತ್ತ ತಿರುಗಿ, 'ಈಕೆ ನನ್ನ ಹೆಂಡತಿ' ಎಂದೂ ಮೂಲೆ ಹಿಡಿದ, ನಾಚಿಕೆ ಹೊದೆದ ಮೂಕಮ್ಮನತ್ತ ತಿರುಗಿ, 'ಇವಳು ನನ್ನ ಮಗಳು!' ಎಂದೂ ಸಾರಿದ. ಈ ಘೋಷಣೆಯನ್ನು ಕೇಳಿದ ನಮ್ಮವರೆಲ್ಲರ ತಲೆಯಲ್ಲೂ ಗೊಂದಲವೆದ್ದು ಹೋಯಿತು. ನಾವು ಮಾತಾಡಲಾಗದಾಗಿ, ಒಬ್ಬರ ಮುಖವನ್ನೊಬ್ಬರು ನೋಡಿ ಕಣ್ಣು ಕಣ್ಣು ಬಿಟ್ಟೆವು! ವಿಷಯ ಹೀಗಿದ್ದಮೇಲೆ ನಮ್ಮಂಥ ಮರ್ಯಾದಸ್ಥರನ್ನು ಇಷ್ಟು ದೂರ ಬರಮಾಡಿಕೊಂಡು ಹೀಗೆ ನಿರಾಶೆಗೊಳಿಸಿ ಅವಮಾನ ಮಾಡುವುದೇಕೆ?—ಎಂದು ಮನಸ್ಸಿನಲ್ಲೇ

ಅಂದುಕೊಂಡು, ನಾವೆಲ್ಲರೂ ಬಂದ ದಾರಿಗೆ ಸುಂಕವಿಲ್ಲವೆಂದು ಮನೆಗೆ ಹಿಂದಿರುಗಿದೆವು. ಆದರೆ ನನಗೆ ಆಮೇಲೆ ಒಮ್ಮೊಮ್ಮೆ ಪಶ್ಚಾತ್ತಾಪವಾಗುತ್ತದೆ. ಹೆಣ್ಣು ಹೇಗಿದ್ದರೇನಂತೆ, ಏಳು ಲಕ್ಷವಾದರೂ ಕೈಗೆಟಕುತ್ತಿತ್ತಲ್ಲ—ಆ ಏಳು ಲಕ್ಷ ನನ್ನ ವಿಶ್ವಭಾರತಿಯ ಅಭಿವೃದ್ಧಿಗೆ ಸಿಕ್ಕುತ್ತಿತ್ತಲ್ಲ—ಎಂದು! ಆದರೆ ಅದೇ ಎರಡು ವರ್ಷಗಳಲ್ಲಿ ಮದುವೆಯಾದ ಆ ಹುಡುಗಿ ವಿಧವೆಯಾದಳೆಂಬ ಸುದ್ದಿ ನನಗೆ ಸಿಕ್ಕಿತು. ಆಮೇಲಂದುಕೊಂಡೆ: 'ಬಹುಶಃ ನಾನು ಆ ಹುಡುಗಿಯನ್ನು ಒಲ್ಲೆನೆಂದು ಬಿಟ್ಟುಬಂದದ್ದೇ ಒಳ್ಳೆಯದಾಯಿತು. ಏಕೆಂದರೆ, ಯಾವನಿಗೇ ಆಗಲಿ—ಹೆಂಡತಿ ವಿಧವೆಯಾದಮೇಲೆ ಬದುಕಿಕೊಂಡಿರುವುದು ತೀರ ಕಷ್ಟವಲ್ಲವೇ?'"

"ಇದೇನ್ರೀ ಇದು? ಹೆಂಡತಿ ವಿಧವೆಯಾಗುವುದೆಂದರೆ ಗಂಡನು ಸಾಯುವುದಲ್ಲವೇ? ಗಂಡ ಸತ್ತಮೇಲೆ ಅವನು ಕಷ್ಟದಿಂದ ಬದುಕುವ ಪ್ರಶ್ನೆ ಎಲ್ಲಿ ಬಂತು? ಮೊದಲು ಬದುಕಿರ್ತಾನೆಯೇ ಹೇಳಿ ಅವನು?"

"ಹ, ಹ್ಹ, ಹ್ಹ; ಅದರರ್ಥ ನಿನಗೆ ಗೊತ್ತಾಗಲಿಲ್ಲ ಅಂತ ಕಾಣತ್ತೆ. ಗಂಡನಿಗೆ ಬದಕುವುದೇ ಕಷ್ಟವೆನ್ನಿಸುವಷ್ಟು ಕ್ಷುದ್ರ ಚಿತ್ರಹಿಂಸೆಗಳನ್ನು ಉಂಟು ಮಾಡುವ ಹೆಂಡತಿಯ ಗಂಡ ಇದ್ದೂ ಸತ್ತಂತಾಗುವುದು ಸುಳ್ಳೇ? ಅಂಥವನ ಹೆಂಡತಿ ವಿಧವೆಯಲ್ಲದೆ ಸಧವೆಯೇ? ಅವನು ಅಂತಹ ಸ್ಥಿತಿಯಲ್ಲಿಯೂ ಬದುಕುವುದು ಸುಲಭವೇ?"

"ಓಹೋ ಈ ಧ್ವನಿಯೇ ಆ ಮಾತಿಗೆ! ಬದುಕಿರುವ ಬಲಶಾಲಿಯಾದ ಗಂಡನನ್ನು ಏನೂ ಅರಿಯದ, ನಾಚಿಕೆಮುದ್ದೆಯಾದ, ಭಯಗ್ರಸ್ತ, ಸಂಕೋಚ ಶೀಲೆಯಾದ ಎಳೆ ಹುಡುಗಿಯೊಬ್ಬಳು ಹೇಗೆ ಎಂಥ ಚಿತ್ರಹಿಂಸೆಗೆ ಗುರಿಪಡಿಸ ಬಲ್ಲಳು! ನೀವಾದರೂ ಹೇಳಿ ನೋಡೋಣ."

"ಅದಕ್ಕೇ ಮಹಾತ್ಮಾ ಗಾಂಧಿಯವರೊಮ್ಮೆ ಉದ್ಗರಿಸಿದ್ದು: ಅಹಿಂಸೆ ಅನ್ನೋದು ಹೆಂಗಸಿಗೆ ದಕ್ಕಿದಷ್ಟು ಗಂಡಸಿಗೆ ದಕ್ಕದು—ಎಂದು."

"ಅದಕ್ಕೂ ಇದಕ್ಕೂ ಏನ್ರೀ ಸಂಬಂಧ?"

"ಸಂಬಂಧ ಇದೆ, ಕೇಳು. ನಿನ್ನ ಮನಸ್ಸಿಗೆ ಆಗದುದನ್ನು ನಾನು ಮಾಡಿದರಷ್ಟೇ ನಿನಗೆ ದುಃಖವಾಗುತ್ತದೆ ಎಂದು ನಿನ್ನ ಅಂಬೋಣವೇ? ನಿನ್ನ ಮನಸ್ಸಿಗೆ ಆಗುವ ಯಾವುದನ್ನೂ ಮಾಡದೆ ನಾನು ತಟಸ್ಥನಾಗಿ ನಿತ್ಯವೂ

ತಣ್ಣಗೆ ಕುಳಿತುಬಿಟ್ಟರೆ ನಿನಗೇನೂ ಅನ್ನಿಸುವುದಿಲ್ಲವೋ? ನಿರೀಕ್ಷಿತವು ಕೂಡಿಬರದಿದ್ದರೆ ನಿರಾಶೆ, ನಿರಾಶೆಯಿಂದ ದುಃಖ. ನಿರೀಕ್ಷೆಯಂತೆ ಎಲ್ಲವೂ ಎಲ್ಲರೂ—ಅದರಲ್ಲೂ ಪ್ರಿಯತಮ—ನಡೆದರಲ್ಲವೆ ನಿನಗೆ ಬದುಕು ಹಗುರವಾಗಿ ಕಾಣಿಸೋದು ?"

"ಹೌದು; ಆದರೆ ಹೆಂಗಸಿಗೇ ಆ ಹಿಂಸಾತ್ಮಕ ಅಹಿಂಸೆ ಹೆಚ್ಚು ದಕ್ಕಿದ್ದೆನ್ನಲು ಕಾರಣ? ನೀವು ಹೇಳಿದಂತೆ ನಿಮ್ಮಂಥ ಗಂಡಸೂ ಹಾಗೇ ಮರ್ಮಾಘಾತ ಮಾಡಬಹುದಲ್ಲ?"

"ನಿಜ: ಆದರೆ ಸಾಮಾಜಿಕ ಆವರಣದಲ್ಲಿ ಗಂಡಸುತನವೆಂದರೇನೆಂದು ಅಭಿಪ್ರಾಯವಿದೆಯೋ ಆ ಗಡಿ ಮಿತಿಯಲ್ಲಿ ಗಂಡನ ಹೊಣೆಗೇಡಿತನ ಅಕ್ಷಮ್ಯ ಎಂಬುದನ್ನು ಸಾಮಾನ್ಯವಾಗಿ ಅರಿತೇ ಇರುವ ಗಂಡ ಒಮ್ಮೆ ಸಿಟ್ಟು ಬಂದು ಹಿಂಸೆ ಮಾಡಿ ಗೆದ್ದೋ ಸೋತೋ ಅವಮಾನಿತನಾಗಿಯೋ ಹೋದಾನಲ್ಲದೆ, 'ಈ ಮಿಣ್ಣಗಿದ್ದವರ ಬಣ್ಣ ಬೇರೆ' ಎಂಬ ಕುಯುಕ್ತಿಯನ್ನು ಹಿಡಿಯಲಾರ."

"ಅಜ್ಞಾನವೂ ಕುಯುಕ್ತಿಯೇ!"

"ಉದ್ದೇಶದಿಂದ ಅಲ್ಲವಾದರೂ ಪರಿಣಾಮದಿಂದ ಹಾಗೇ. ಜೊತೆಗೆ ಉದ್ದೇಶಪೂರ್ವಕವಾದ ಕುಯುಕ್ತಿಸಂಪನ್ನರನ್ನು ನಿರ್ದಾಕ್ಷಿಣ್ಯವಾಗಿ ಶಿಕ್ಷಿಸಬಹುದು. ಆದರೆ ಅಜ್ಞಾನಿಗಳ ಕ್ಷಮ್ಯತೆ ಅಡ್ಡಬಂದು ಅವರನ್ನು ಶಿಕ್ಷಿಸಲೂ ಆರ, ಅವರ ಅಜ್ಞಾನದ ಫಲವಾಗಿ ದೈಹಿಕ–ಮಾನಸಿಕ–ಆರ್ಥಿಕ ಮುಂತಾದ ದುರವಸ್ಥೆಗಳಲ್ಲಿ ನಿತ್ಯವೂ ತೊಳಲುತ್ತಲೂ ಇರಲಾರ—ಎಂಬಂಥ ಗಂಡಸಿನ ಗತಿ ಯಾರಿಗೂ ಬೇಡ! ಅಲ್ಲವೇ?"

"ತೀರ ಹೊಣೆಗೇಡಿ ಗಂಡರಿಲ್ಲವೇ ಇಲ್ಲ ಅಂತೀರಾ?"

"ಆ ಮಾತೇ ಇಲ್ಲವಲ್ಲಾ! ಉತ್ಸರ್ಗದ ಜೊತೆಗೆ ಅಪವಾದವಿದ್ದೇ ಇರಬೇಕಲ್ಲವೇ?"

"ಅಬ್ಬಾ, ರವೀಂದ್ರನ ಹಾಸ್ಯದಲ್ಲಿ ಖಾರ, ಕಹಿಗಳೂ ಇರುತ್ತವೆ!"

"ಹುಳಿ, ಒಗರುಗಳೂ ಇರಬಹುದು—ಎಷ್ಟೋ ಸಲ ಕೇವಲ ಉಪ್ಪಾಗಿಯೂ ಇರಲು ಶಕ್ಯವಿದೆ, ಸಿಹಿಯಾಗಿಯೂ ಒಮ್ಮೆ ಇರುವುದುಂಟು! ರವೀಂದ್ರನಿಗೊಬ್ಬ ಜವಾನನಿದ್ದ. ಅವನ ಹೆಸರು ಬನಮಾಲಿ (ವನಮಾಲಿ) ಎಂದು. ಒಂದು ದಿನ ಅವನು ಊಟಕ್ಕೆ ಕುಳಿತಿದ್ದಾಗ ರವೀಂದ್ರ ಕೇಳಿದ:

‘ ಬನವಾಲಿ, ಅಡಿಗೆ ಹೇಗಿದೆಯೋ ? ’

ವನಮಾಲಿ : ‘ ಬಹಳ ಪಸಂದಾಗೈತಿ, ಧಣೇರ ; ಅಕ್ಕಾ ಅವರು ಹಾಲು ಕುಡ್ಯಾಕ್ ಹಚ್ಚ್ಯಾರ ನೋಡ್ರೀ ನನಗ.’

ರವೀಂದ್ರ : ‘ ಕುಡಿಯೋ ಕುಡೀ ಅಂದೆ ; ಆದರೆ ಆಕೆ ಯಾತಕ್ಕೆ ಹೀಗೆ ನಿನಗೆ ಹಾಲು ಕುಡಿಸ್ತಿದ್ದಾಳೋ ನನಗ್ಗೊತ್ತಾಗೋಲ್ಲ ನೋಡು. ಎಷ್ಟು ಹಾಲು ಕುಡಿದರೂ ನಿನ್ನ ಮೈಯ ಬಣ್ಣ ಏನೂ ಬದಲಾಗೋಲ್ಲ— ಏನು ಅಂತೀಯಾ ? ’

ಡಾಮರು ಬಣ್ಣದ ಬನಮಾಲಿ ಚೆನ್ನಾಗಿ ನಕ್ಕನಂತೆ. ‘ ತನ್ನ ಮೈಗೇ ಹಾಲನ್ನುದ್ದಿದರೂ ಒಂದೇ ’ ಎಂದು ಸುಮ್ಮನಾದನಂತೆ.”

“ ಅಂದರೆ ರವೀಂದ್ರನ ಜವಾನನೂ ಒಳ್ಳೆಯ ತಮಾಷೆಗಾರನಾಗಿದ್ದ ಎಂದಾಯ್ತು.”

“ ಹೌದು ; ರವೀಂದ್ರನೇ ಹೇಳಿದ ಹಾಗೆ ಆತನಿಗೆ ತಮಾಷೆಗಾರಿಕೆಯಿಲ್ಲದ ಜವಾನರೇ ಸೇರುತ್ತಿರಲಿಲ್ಲವಂತೆ !

ಒಂದು ದಿನ ರವೀಂದ್ರ ಒಂದು ಪದ್ಯ ಬರೆದ. ಅದು ಹೀಗಿತ್ತು :

> ನಿತ್ಯಾಸಹಿಷ್ಣು ಆ ಅವಳು ದೂರದ ದಾರಿ
> ಹಿಡಿದಳಾಕ್ಷಿತಿಜದೆಡೆ ಮುಳಿಗಾಳಿಬಾವುಟವ-
> ನೆತ್ತಿ ಹಿಡಿದರಳಿಸಿದಳೇರಿ ಮತ್ತೋನ್ಮತ್ತ
> ಮೇಘರಥವನು, ಬಾಗಿಲನ್ನೊಡೆಯೆ ನುಗ್ಗಿದಳು,
> ಮೇಲಿಂದಮೇಲೆ ಬಡಿದಳು ಕವಾಟವನಹಹ !
> ಕಿರಿಚಿದಳನೇಕ ಸಲ “ ಬೇಕೆನಗೆ, ಬೇಕೆನಗೆ ”
> ಎಂದು ನೂಕುತ್ತ ನಡೆದಳದೃಷ್ಟವಿದ್ದೆಡೆಗೆ !
>
> ವೇದಾಗಮಂಗಳನ್ನವಳು ಲಕ್ಷಿಸುವಳೇ ?
> ಅವಳನೆಂದಾದರೂ ಭಯವು ಮುಟ್ಟೀತೇ ?
> ದುರ್ಬಲೆಯೆ ? ಅಲ್ಲ ಭಾವೋದ್ರೇಕದಲ್ಲಿ—
> ಪ್ರತಿಭಟಿಸಿ ನಿಂತಿರುವ ದಂಗೆಖೋರಳು ತನ್ನ
> ಒಡೆಯನಾಣತಿಗಳನು ಶಪಿಸಿವಳು (ಕೂಗಿ) !

ಋಷಿಗಿಷಿಯ ತಪವ ಲೆಕ್ಕಿಸೆನೆಂದಳಾಕೆ;
'ವ್ರತಚಾರಿ, ವ್ರತವ ಮುರಿದೇನಿದೋ ಜೋಕೆ!'
ಎಂದು ಗರ್ಜಿಸಿದವಳ ಬಳಿಯುಂಗುರಂಗಳೂ
ಗಜರಿದವು; ನುಣ್ಚರವ ಹೊರಸೂಸಲಿಲ್ಲ!
ಮೆಲುನಡೆಯ ಚೆಲುನಗೆಯ ದೇವಿಯವಳಲ್ಲ;
ಅಂಜಿ ಹೆಜ್ಜೆಯನಿಡುವ ಮುಗುದತನವಿಲ್ಲ—
ತನ್ನ ಮೊಗವನು ಮುಚ್ಚಿಕೊಂಡ ಮುಸುಕಿಂದಲೇ
ತನ್ನ ದೀಪವನು ಮರೆಮಾಡುವವಳಲ್ಲ!

ಅವಳ ಹೊಟ್ಟೆಯ ಭಂಡ ಹಸಿವಿನಗ್ನಿಜ್ವಾಲೆ
ನಿರ್ಲಜ್ಜನೇತ್ರದಲಿ ಕಿಡಿಗೊಡುತಿರೆ,
ಮೇಲಿಂದಮೇಲೆ ಮಳೆಮೋಡದುದ್ಯದ್ವಾತ
ಅವಳ ಮುಸುಕನು ಬದಿಗೆ ಸರಿಸುತಿತ್ತು!"

"ಇದೇನ್ರೀ, ಇದೂ ಒಂದು ತಮಾಷೆಯ ಪದ್ಯವೇ?"

"ತಮಾಷೆಗಾರರು ಯಾವುದರಿಂದಲೂ ತಮಾಷೆಯನ್ನು ಹುಟ್ಟಿಸ ಬಲ್ಲರು."

"ಅದು ಹೇಗೆ? ಈ ಮಹಾರಾಕ್ಷಸಿಯ ರುದ್ರಚಿತ್ರದಲ್ಲಿ ಯಾವ ಹಾಸ್ಯ ಹುಟ್ಟೀತು?"

"ಈ ಪದ್ಯವನ್ನು ಬರೆದು ರವೀಂದ್ರನು ಒಬ್ಬಳೆದುರಿಗೆ ಓದಿಹೇಳಿದ."

"ಆಮೇಲೆ?"

"ಆಮೇಲೆ ಅವಳು ಗಾಬರಿಯಾಗಿ ದಂಗುಬಡಿದಳು."

"ಅನಂತರ?"

"ಅನಂತರ ಬಿಡಿಸಿ ಹೇಳಿದ ಅವನವಳಿಗೆ—'ಮಹಾರಾಯತೀ, ಇದು ನಿನಗನ್ವಯಿಸಿ ಬರೆದುದಲ್ಲ. ಗಾಬರಿಯಾಗಬೇಡ! ಇದು ಜಗತ್ತನ್ನು ಹಡೆಯುವ ಹೊಟ್ಟೆನೋವಿನಿಂದ ಪೀಡಿತಳಾದ, ನಿರ್ಲಜ್ಜಶೀಲದ, ನಗ್ನ

ಸ್ವರೂಪದ, ಅನಂತದೆಡೆಗೋಡುವ ನಿಸರ್ಗದ ನಿಜವಾದ ಕರಾಳ ಮುಖದ ವರ್ಣನೆ '—ಎಂದು. ಆಗ ಅವಳು ನಿಟ್ಟುಸಿರನ್ನು ಬಿಟ್ಟು ಸಮಾಧಾನವನ್ನು ಹೊಂದಿದಳು."

" ಮತ್ತೆ, ಇಂಥ ವರ್ಣನೆಯನ್ನು ಎದುರು ಕೂತ ಯಾವಳಾದರೊಬ್ಬಳ ಮುಖ ನೋಡುತ್ತ ಓದಿಹೇಳಿದರೆ ಅವಳ ಗತಿ ? "

" ಹಾಸ್ಯಾಸ್ಪದ ! "

" ಬಹಳ ಚೆನ್ನಾಗಿದೆ ! "

" ಚೆನ್ನಾಗಿಲ್ಲವೇ ? ಒಳ್ಳೆಯ ಮಾತು ನಿನ್ನದು ! ಹಾಸ್ಯದಲ್ಲಿ ಮೊದಲು ಖಾರ, ಆಮೇಲೆ ಸಿಹಿ—ಅಲ್ಲವೇ ? ಇನ್ನೊಂದು : ರವೀಂದ್ರನು ಗಂಡಂದಿರನ್ನು **ಪ್ರಥಮಾ ವಿಭಕ್ತಿ**ಗಳೆಂದು ಕರೆಯುತ್ತಿದ್ದ."

" ಅದೇಕೆ ? "

" ಕರ್ತೃಪದವು ಪ್ರಥಮಾ ವಿಭಕ್ತಿಯಲ್ಲಿರುತ್ತದೆ. ಆದುದರಿಂದ ಗಂಡರು ಕರ್ತರು, ಹೆಂಡಿರು ಕರ್ಮರು."

" ತೃತೀಯಾ ವಿಭಕ್ತಿಯಲ್ಲಿ ಕರ್ತರನ್ನಿಡಲು ಬರುತ್ತದೆ ಎಂಬುದನ್ನು ರವೀಂದ್ರನರಿತಿದ್ದಿಲ್ಲವೇ ? "

" ಅರಿತಿದ್ದ ; ಆದರೆ ಪ್ರಥಮಾ ವಿಭಕ್ತಿಯಲ್ಲಿ ಕರ್ತೃಪದವನ್ನಿಡುವುದು ಉತ್ಸರ್ಗ, ಸಾಮಾನ್ಯ ರೂಢಿ ; ತೃತೀಯೆಯಲ್ಲಿಡುವುದು ಅಪವಾದ, ಕಡಿಮೆ."

" ಯಾರೋ ಒಬ್ಬ, ' ಗಂಡನೆಂದರೆ ನಾಮಪದ, ಹೆಂಡತಿ ಎಂದರೆ ವಿಶೇಷಣ ' ಎಂದು ಹೇಳಿದ್ದು ನನಗೆ ನೆನಪಾಗುತ್ತದೆ."

" ಇದೂ ಅದೇ ಅರ್ಥವನ್ನು ಧ್ವನಿಸುತ್ತದೆ."

" ಅಂದರೆ ನಾಮ - ಕ್ರಿಯೆಗಳಲ್ಲಿ ಅಥವಾ ನಾಮ - ವಿಶೇಷಣಗಳಲ್ಲಿ ಯಾವುದು ಮುಖ್ಯ ಅಂತ ಗಂಡಸರ ಅಂಬೋಣ ? "

" ಅದಕ್ಕೂ ಅದೇ ಉತ್ತರ—ಗಂಡಸರು ಅಪವಾದವಾಗಿ ಅಮುಖ್ಯರು, ಯಾವ ಸರ್ವ ಮುಖ್ಯ ಸ್ಥಾನದಲ್ಲಿ ನೋಡಿದರೂ."

" ಬಹಳ ಬುದ್ಧಿವಂತರು, ಬಹಳ ಬುದ್ಧಿವಂತರು ಕಣ್ರೀ ! "

" ನೀನು ನನಗೆ ಬುದ್ಧಿವಂತರ ಪಟ್ಟ ಕೊಟ್ಟದ್ದಕ್ಕೆ ರವೀಂದ್ರ ಒಮ್ಮೆ ಒಂದು ವ್ಯಕ್ತಿಗೆ ಕೊಟ್ಟ ಆಶೀರ್ವಾದವನ್ನೇ ಕೊಡುತ್ತೇನೆ."

" ಅದೇನದು ?"

" ನೀನು ನನ್ನ ತಲೆಯಲ್ಲಿರುವ ಕೂದಲುಗಳ ಸಂಖ್ಯೆಯಷ್ಟು ವರ್ಷಗಳ ವರೆಗೆ ಬದುಕಿರು!" ಎಂದು.

" ಹರಸುವ ಮನುಷ್ಯ ಬೋಳ್ದಲೆಯವನಾಗಿದ್ದರೆ?"

" ಹರಸಿಕೊಳ್ಳುವವರ ಪುಣ್ಯ!"

" ಆಹಾಹಾ, ಬಹಳ ಚೆನ್ನಾಗಿದೆ!"

" ಕೇಳು; ಅದಕ್ಕೂ ಆಗ ಅವನು ಉತ್ತರ ಕೊಟ್ಟಿದ್ದ."

" ಏನೆಂದು?"

" ಚೆಲ್ಲಿಹೋದ ಹಾಲಿನ ಬಗ್ಗೆ ಚಿಂತೆ ಮಾಡಬಾರದು" ಎಂದು.

" ಯಾವುದಕ್ಕಾದರೂ ಕೊಟ್ಟ ಉತ್ತರವನ್ನು ಇನ್ನಾವುದಕ್ಕಾದರೂ ಜೋಡಿಸಿದರೆ?"

" ಅದು ಬುದ್ಧಿವಂತಿಕೆ!"

" ನಿಜವಾಗಿಯೂ, ಒಪ್ಪಿದೆ ಅಂದ್ರೆ ಒಪ್ಪಿದೆ!"

" ಒಪ್ಪದೆ ಏನು ಮಾಡ್ತಿಯಾ?"

" ಹೇಗೆ?"

" ಹೇಗೆಂದರೆ 'ಹೆಂಗಸರು ವಿಚಾರವಿಲ್ಲದೆ ನಗಬಲ್ಲರು, ವಿಷಯವಿಲ್ಲದೆ ಮಾತಾಡಬಲ್ಲರು ಮತ್ತು ಹೇತುವಿಲ್ಲದೆ ಅಳಬಲ್ಲರು' ಅಂತ ರವೀಂದ್ರನು ಹೇಳಿರುವಾಗ........"

" ರವೀಂದ್ರ ಹಾಸ್ಯಕ್ಕಾಗಿ ಹೇಳಿದ್ದಿದ್ದರೂ ನಿಮಗೆ ವೇದವಾಕ್ಯ!"

" ವೇದವಾಕ್ಯವನ್ನು ಹಾಸ್ಯಮಾಡಬಲ್ಲವರೂ ಇದ್ದಾರೆ, ಹಾಸ್ಯದಲ್ಲಿ ವೇದಾರ್ಥವನ್ನು ಕಾಣಬಲ್ಲವರೂ ಇದ್ದಾರೆ!"

" ಇದೆಂಥ ನ್ಯಾಯ?"

" ಇದೆಂಥ ನ್ಯಾಯವೆಂದರೆ, ಒಮ್ಮೆ ಒಬ್ಬಾಕೆ ಬಹಳ ದುಃಖದ ಸಂಗತಿಯೊಂದನ್ನು ಕೇಳಿ ತನ್ನ ಬಂಧುಮಿತ್ರರೊಡನೆ ಆ ಬಗ್ಗೆ ದುಃಖದ ದನಿಯಿಂದ ಮಾತಾಡುತ್ತಿದ್ದಾಗ ರವೀಂದ್ರನು ಅವಳನ್ನು ಕುರಿತು, 'ನಿನ್ನ ಸ್ವರಮಾಧುರ್ಯದ ದೆಸೆಯಿಂದ ನೀನು ದುಃಖದ ಸಂಗತಿಯನ್ನು ಹೇಳುತ್ತಿದ್ದೆಯೋ ಸಂತೋಷದ ಸುದ್ದಿಯನ್ನೋ ಎಂಬುದೇ ಗೊತ್ತಾಗಲಿಲ್ಲ ನನಗೆ' ಎಂದ. ಅದಕ್ಕಾಕೆ,

'ಇದೊಂದು ತಮಾಷೆಯಷ್ಟೆ!' ಎಂದಳು. 'ಒಂದುವೇಳೆ ಇದು ತಮಾಷೆಯೇ ಆದರೂ ನೀನು ಮಾತ್ರ ಇದನ್ನು ನಿಜವೆಂದೇ ನಂಬುವೆ' ಎಂದು ಅವನು ಉತ್ತರಿಸಿದ. ಅದಕ್ಕವನು ಕೊಟ್ಟ ಕಾರಣವಿದು: ತಮ್ಮ ಹೊಗಳಿಕೆಯನ್ನು ಹೆಂಗಸರು ಎಂದೂ ತಮಾಷೆಯೆಂದು ಗ್ರಹಿಸಿಕೊಳ್ಳಹೋಗುವುದಿಲ್ಲ. ಎಷ್ಟು ಅತಿಶಯೋಕ್ತಿ ಬೆರೆಸಿ ಹೊಗಳಿದಾಗಲೂ 'ಯಾಕೆ ತಮಾಷೆ ಮಾಡ್ತೀರಿ?' ಎಂದು ಕೇಳಿ ತಮಗೆ ಅದು ಸಲ್ಲದೆಂಬ ನಟನೆಯನ್ನು ಮಾಡುತ್ತಾರೆ; ಮನಸ್ಸಿನಲ್ಲೇ ಅದೆಲ್ಲಾ ನಿಜವೆಂದೂ ತಮ್ಮ ನಿಜ ಗುಣದ ಮೇಲ್ಮೆಯ ವಸ್ತು ಸ್ಥಿತಿಯೆಂದೂ ನಂಬಿ ಹಿಗ್ಗುತ್ತಾರೆ."

"ಆಗ ಆಕೆ ಸುಮ್ಮನೆ ಒಪ್ಪಿಕೊಂಡಳೆ?"

"ಇಲ್ಲ; ಆಗ, 'ತನಗೆ ನಿಜವಾಗಿ ಸಿಟ್ಟು ಬಂತು' ಎಂದಳು."

"ಅದಕ್ಕೇನೆಂದ ರವೀಂದ್ರ?"

"'ಇಲ್ಲ, ಇಲ್ಲ; ಇನ್ನೆಂದೂ ಈ ಹೊಗಳಿ ಬಯ್ಯುವ ತಂತ್ರವನ್ನು ನಿನ್ನ ಮೇಲೆ ಪ್ರಯೋಗಿಸುವುದಿಲ್ಲ' ಎಂದ."

"ಅಂತೂ ರವೀಂದ್ರ ಒಮ್ಮೆ ಸೋತ!"

"'ಮಾತು ಬಲ್ಲವನೊಮ್ಮೆ ಸೋತು ಹೋಹುದು ಲೇಸು' ಎಂದು ಸರ್ವಜ್ಞ ಕವಿ ಹೇಳಿಲ್ಲವೆ?"

"ಅಂತೂ ನೀವು ಸೋಲನ್ನೊಪ್ಪಿಕೊಳ್ಳುವವರಲ್ಲ."

"ಇಲ್ಲ, ಇಲ್ಲ; ಸೋತೆ ನಿನ್ನ ಹತ್ತಿರ."

"ಸೋಲುವವರಿಗೆ ತಮಾಷೆ ಮಾಡೋಕ್ ಬರುತ್ತೆಯೆ?"

"ಸೋಲದೆ ಇರೋರಿಗೇ ಬರೋಲ್ಲ!"

"ಅದು ಹೇಗೆ?"

"ಒಂದು ಸಲ ಒಬ್ಬ ಆಧುನಿಕ ಮಹಿಳೆಯೆದುರಿಗೆ ರವೀಂದ್ರ ಆಧುನಿಕ ಅಲಂಕಾರಗಳನ್ನು ತೆಗಳಿದ. ಅವಳು ದಬಾಯಿಸಿದಳು. ಅವನು ಸೋತೆನೆಂದ. ಅನಂತರ ಕೆಲದಿನಗಳು ಕಳೆದಮೇಲೆ ಅವಳೆದುರು ಆಧುನಿಕ ಅಲಂಕಾರಗಳನ್ನು ಹೊಗಳಿ, ಬಟ್ಟೆಗಳಿಗೆ ಮುತ್ತು-ರತ್ನ-ಬಂಗಾರಗಳ ಒಡವೆಗಳನ್ನು ಮಾಡಿಸಿ ಹಾಕಿಕೊಳ್ಳುವುದು ಪ್ರಗತಿಶೀಲವಾದ ನವೀನತೆಯೆಂದು ಎತ್ತಿಕಟ್ಟಿದ. ಇದರಿಂದ ಉಬ್ಬಿಹೋದ ಆ ಮಹಾಮಹಿಳೆ ಮೇಲುರವಕೆಗೆ ಗುಂಡಿಗಳ

ಬದಲು ಮುತ್ತುಗಳನ್ನು ಕಟ್ಟಿ ಹೊಲಿದರೆ ಚೆನ್ನ ಎಂಬ ಅವನ ಸಲಹೆಯ ಮೇರೆಗೆ ಅಂಥ ಹೊಸ ಅಲಂಕಾರಗಳನ್ನು ಮಾಡಿಕೊಂಡು ಮನೆಯಲ್ಲಿ ಕುಳಿತಿದ್ದಳು. ರವೀಂದ್ರನೂ ಅವಳ ಅತಿಥಿಯಾಗಿ ಅಲ್ಲೇ ಎದುರಿನೊಳದಲ್ಲಿ ಮಂಡಿಸಿದ್ದ. ಆಗ ಅವಳು, 'ಈಗ ಯಾರಾದರೂ ಬಂದು ನೋಡಿಬಿಟ್ಟರೆ?' ಎಂದು ಅವನನ್ನು ಕೇಳಿದಳು. ಅದಕ್ಕವನು, 'ಯಾರೇನೆನ್ನುತ್ತಾರೆ? ಅವರೊಂದು ಹೊಸ ಬಗೆಯ ವೇಷವನ್ನು ನೋಡುತ್ತಾರೆ—ಅಷ್ಟೇ ತಾನೇ?' ಎಂದ. ಹಾಗೆ ಅವನು ಹೇಳಿ ಬಾಯಿ ಮುಚ್ಚುವಷ್ಟರಲ್ಲಿ ಯಾರೋ ಇಬ್ಬರು ಅಪರಿಚಿತ ಮಹನೀಯರು ಹಜಾರದಲ್ಲಿ ಹೊಕ್ಕರು. ಆಕೆ ಒಳಗೆ ಓಡಿ ಹೋದಳು!"

"ಅಂತೂ ರವೀಂದ್ರನೇ ಗೆದ್ದ ಅಂತ ನಿಮ್ಮ ಹೇಳಿಕೆ!"

"ಅಲ್ಲದೆ ಹೋದರೆ ಅವಳೇಕೆ ಎದ್ದೋಡಬೇಕು ಅವಳ ಆಧುನಿಕತೆಯ ವಾದದಲ್ಲಿ ಅವಳಿಗೆ ವಿಶ್ವಾಸವಿದ್ದಿದ್ದರೆ?"

"ಮತ್ತೇನು ಮಾಡ್ತಾಳೆ ಪಾಪ ಅಂಥ ಕುತಂತ್ರಗಾರನ ಕೈಯಲ್ಲಿ ಸಿಕ್ಕಿಬಿದ್ದಾಗ?"

"ಅದಕ್ಕೇ ಹೇಳಿದ್ದು. ಒಮ್ಮೆ ಅವಳಿಗೇ ರವೀಂದ್ರ ಹೇಳಿದ್ದ: 'ನೋಡು —ನೀನು ವಿಜ್ಞಾನದ ಅಮೂಲ್ಯ ಗ್ರಂಥಗಳನ್ನೆಲ್ಲ ಕೊಂಡು ನಿನ್ನ ಪುಸ್ತಕ ಭಂಡಾರದಲ್ಲಿಟ್ಟುಕೊಂಡದ್ದೇನೋ ಸರಿ; ನೀನು ಓದೋದು ಮಾತ್ರ ಪತ್ತೆದಾರಿ ಕಾದಂಬರಿಗಳನ್ನು' ಎಂದು."

"ಅದಕ್ಕೂ ಇದಕ್ಕೂ ಏನು ಸಂಬಂಧ?"

"ಬುದ್ಧಿಯನ್ನು ದುಡಿಸಲು ಹಿಂಜರಿಯುವವರಿಗೆ ದಡ್ಡರೆನ್ನುತ್ತಾರೆ— ಬುದ್ಧಿಯಿಲ್ಲ ಅಂತ ಒಬ್ಬರಿಗೆ ಬೈದರೆ ಅಷ್ಟೆ ಅರ್ಥ. ಆಧುನಿಕತೆಯ ಅಭಿಮಾನಿ ಗಳಿಂದು ಒಮ್ಮೆ ಬುದ್ಧಿಯನ್ನು ದುಡಿಸಿದರೂ ಕೂಲಂಕಷವಾಗಿ, ಆಮೂಲಾಗ್ರ ವಾಗಿ, ಸಂದರ್ಭಕ್ಕೆ ಸಹಜವಾಗಿ ದುಡಿಸುವ ಕಲೆಯನ್ನು ಅರಿಯದೆಯೇ ತರ್ಕಮಾಡುತ್ತಾರೆ."

"ಅದು ಹೇಗೆ?"

" ರವೀಂದ್ರ ಒಂದು ಕಡೆ, 'ಅತಿಪಂಡಿತಗಿರಿಯನ್ನು ತೋರಿಸುವವರಿಗೆ ಪದ್ಯದ ಅರ್ಥ ಆಗುವುದಿಲ್ಲ' ಎಂದ. ಆ ಮಾತನ್ನು ಒಬ್ಬ ಪಂಡಿತ ಆಯ್ದುಕೊಂಡು ಪಾಮರರಿಗಷ್ಟೇ ಪದ್ಯ ಅರ್ಥವಾಗುವುದು ಅಂದ ಅಂತಿಟ್ಟುಕೋ. ಅಂದರಿದರಲ್ಲಿ ಯಾರು ಬುದ್ಧಿವಂತರು ? "

" ರವೀಂದ್ರನಲ್ಲ, ಪಂಡಿತನೇ ! "

" ಅದು ಹೇಗೆ? ಪಾಮರರಿಗೆ ಪದ್ಯವಲ್ಲ, ಗದ್ಯವೂ ಸರಿಯಾಗಿ ಅರ್ಥ ಆಗದು."

" ಹಾಗಾದರೆ ಅತಿಪಂಡಿತ–ಅತಿಪಾಮರರಿಬ್ಬರ ನಡುವಣ ವರ್ಗ ಯಾವುದೆಂದು ಯಾರು ಹೇಗೆ ಗುರುತಿಸಿಯಾರು ? "

" ಸಹಜವಾದ ಗಂಭೀರ ಹಾಸ್ಯ ಪ್ರತಿಭೆಯುಳ್ಳವರು."

" ಅಂದರೆ ? "

" ಅಂದರೆ ರವೀಂದ್ರನಂಥವರು. ಒಮ್ಮೆ ಒಬ್ಬಳ ಗಂಡನ ಹೆಸರು ದಕ್ಷಿಣಾಚರಣ ಸೆನ್ ಅಥವಾ D. C. Sen ಎಂದಿತ್ತಂತೆ. ಒಂದು ಪ್ರವಾಸಕ್ಕೆ ಹೋಗುವ ವಿಷಯದಲ್ಲಿ ಚರ್ಚೆ ನಡೆದಾಗ, ತನ್ನ ಗಂಡನಿಗೆ ಬಹಳ ಕೆಲಸವಿದೆ, ಪ್ರವಾಸ ಸದ್ಯಃ ಸಾಧ್ಯವಿಲ್ಲ ಎಂದು ಆಕೆ ಹೇಳಿದಾಗ, ಅವಳ ಗಂಡನನ್ನು ಕೇಳಿ ಮೊದಲೇ ಅವನ ಒಪ್ಪಿಗೆಯನ್ನು ಅವಳಿಗೆ ತಿಳಿಯದಂತೆ ಪಡೆದುಕೊಂಡಿದ್ದ ರವೀಂದ್ರ 'ನಿನ್ನ ಗಂಡನು ಹಾಗೆಲ್ಲಾ ಅನಿಶ್ಚಿತವಾದ ಮಾತನ್ನಾಡಲಾರನು. ಅವನ ಹೆಸರೇನೆಂಬುದು ನಿಮಗೆ ಗೊತ್ತಿಲ್ಲವೆ ? D. C. Sen ಎಂದರೆ Decision (ನಿರ್ಣಯ, ನಿಶ್ಚಯ) ಎಂದರ್ಥ. ಆತನಾಗಲೇ ಪ್ರವಾಸ ಮಾಡಲು ನಿರ್ಧರಿಸಿರುವುದರಿಂದ ನಿನಗಾವ ತೊಂದರೆಯೂ ಇಲ್ಲ' ಎಂದು ಅವಳ ಬಾಯಿ ಮುಚ್ಚಿಸಿ ಅವಳನ್ನು ಬೆರಗುಗೊಳಿಸಿದ. ಸಂದರ್ಭಕ್ಕೆ ಅನುಗುಣವಾದ ಅರ್ಥ ತಾನೇ ತಾನಾಗಿ ಹೊತ್ತಿಗೆ ಸರಿಯಾಗಿ ಹೊಳೆಯುವುದು ನೀನು ಹೇಳಿದ ನಡುವಣ ವರ್ಗದವರಿಗೆ—ಅವರೇ ವಿದಗ್ಧರು ; ಪಂಡಿತರೂ ಅಲ್ಲ, ಪಾಮರರೂ ಅಲ್ಲ."

" ಅಂದರೆ ಇಷ್ಟೆಲ್ಲಾ ತಮಾಷೆಗಾರಿಕೆ ಇತ್ತೇ ರವೀಂದ್ರನಲ್ಲಿ ? "

" ೮೦ ವರ್ಷ ವಯಸ್ಸಾದರೂ ಅವನ ಈ ಹಾಸ್ಯಗಾರಿಕೆ ಅವನನ್ನು ಬಿಟ್ಟಿದ್ದಿಲ್ಲ. ಅದರಿಂದಲೇ ಹೆಂಗಸರು ಮಕ್ಕಳೆನ್ನದೆ ಎಲ್ಲರೂ ಅವನನ್ನು

ಸುತ್ತಿಕೊಂಡು ಯಾವಾಗಲೂ ಅವನ ಸೇವೆಗೆ ಹಾಗೂ ಅವನ ವಿನೋದ ಶೈಲಿಯ ವಾತ್ಸಲ್ಯಗರ್ಭಿತವಾದ ಅಣಕ-ಮೂದಲಿಕೆಗಳನ್ನು ಸ್ವೀಕರಿಸುವ ವ್ರತಕ್ಕೆ ಬದ್ಧಕಂಕಣರಾಗಿ ನಿಲ್ಲುತ್ತಿದ್ದರು. ನಿಷ್ಕಲ್ಮಷಮನಸ್ಕರ ಹಾಸ್ಯದ ಗುಣ ಹಾಗಿರುತ್ತೆ. ನಮ್ಮ ಸಂಸ್ಕೃತ ಪ್ರೊಫೆಸರ್ ಸಿ. ಆರ್. ನರಸಿಂಹಶಾಸ್ತ್ರಿಗಳು ಎನ್ನುತ್ತಿದ್ದರು: 'ಈ ಹುಡುಗರು ಏನಾದರೂ ನೆಪಮಾಡಿಕೊಂಡು ನನ್ನ ಹತ್ತಿರ ಬಂದು ಬೈಸಿಕೊಂಡು ಹೋಗುತ್ತಾರೆ. ಅದೇನಿವರಿಗೆ ಬಂದಿದೆಯೋ ನಾನು ಬೇರೆ ಕಾಣೆ' ಎಂದು. ರವೀಂದ್ರನ ಹತ್ತಿರ ಬೈಸಿಕೊಳ್ಳಲು ಅವನ ಇಷ್ಟಮಿತ್ರರಿಗೆ ಹಾಗೇ ಅನ್ನಿಸುತ್ತಿದ್ದಿರಬೇಕಲ್ಲವೆ?"

೧೩. ರವೀಂದ್ರನ ಅಧ್ಯಾತ್ಮಪರತೆ

"ರವೀಂದ್ರನ ಕೆಲ ಪದ್ಯಗಳು ಭಾಷೆಯ ದೃಷ್ಟಿಯಿಂದ ಸುಲಭವೆನ್ನಿಸಿದರೂ ಅವುಗಳ ಅಂತ್ಯದ ತಾತ್ಪರ್ಯದ ದೃಷ್ಟಿಯಿಂದ ಅಷ್ಟು ಸ್ಪಷ್ಟವಾಗುವುದಿಲ್ಲ ಎಂಬುದೊಂದು ತಕರಾರಿದೆ."

"ನಿಜ, ರವೀಂದ್ರನ ಆಧ್ಯಾತ್ಮಿಕ ಒಲವೇ ಅದಕ್ಕೆ ಕಾರಣ."

"ನಮ್ಮಂಥ ಸಾಮಾನ್ಯರಿಗೆ ಅವು ಕೈಗೆಟಕದವು ಎಂದು ಅವನ್ನು ದೂರ ಇಡಬೇಕಾಯಿತು—ಅಷ್ಟೆ."

"ಹಾಗಲ್ಲ; ತನ್ನ ಪ್ರಬಂಧಗಳಲ್ಲಿ ರವೀಂದ್ರನು ತನ್ನ ಆಧ್ಯಾತ್ಮಿಕ ಸಿದ್ಧಾಂತಗಳನ್ನು ಮತ್ತು ನಂಬಿಗೆಗಳನ್ನು ಸ್ಪಷ್ಟಪಡಿಸಿದ್ದಾನೆ. ಅವುಗಳನ್ನು ಬೇಕಾದರೆ ಸಾಮಾನ್ಯರು ಓದದಿರಬಹುದು; ಓದಿದರೆ ಮನಸ್ಸಿಗಷ್ಟು ಖಚಿತವಾಗಿ ಅರ್ಥವಾಗದಿರಬಹುದು. ಆದರೆ ಪದ್ಯದಲ್ಲಿ ಬರುವ ಅವನ ಆಧ್ಯಾತ್ಮಿಕತೆ ಭಾರತೀಯರೆಲ್ಲರ ಸಾಂಸ್ಕೃತಿಕ ಸ್ವತ್ತು."

"ಅದು ಹೇಗೆ?"

"ಬೇರೆ ಬೇರೆ ಸಂಸ್ಕೃತಿಗಳಲ್ಲಿ ಕಲ್ಪಿಸಿಕೊಂಡಿರುವ ಆದರ್ಶ ಪುರುಷರ ಬಗೆಗಳು ಬೇರೆ ಬೇರೆ. ಪ್ಲೇಟೋವಿನ ಕಾಲದ ಗ್ರೀಕರಿಗೆ ಸುಂದರ ಮತ್ತು ಸುಗುಣ ಮನುಷ್ಯನು ಆದರ್ಶ; ಅರಿಸ್ಟಾಟಲನ ಕಾಲದಲ್ಲಿ ವಿಶ್ವಚಿಂತನಪರನಾದ ಉನ್ನತಮನಸ್ಕನು ಪೂಜ್ಯನಾದನು. ಸಂಯಮಿಯಾದ ವಿವೇಕಿಯು ಸ್ಟೋಯಿಕ್ ಆದರ್ಶ. ರಾಜಲಕ್ಷಣಸಂಪನ್ನನು ಚೀನೀಯರ ಮೆಚ್ಚುಗೆಗೆ ಪಾತ್ರ. ಶಿಸ್ತುಗಾರ ಯೋಧನು ಜಪಾನೀಯರಲ್ಲಿ ಉಚ್ಚ ಮಾದರಿ. ಹಿಬ್ರೂಗಳಲ್ಲಿ ಧಾರ್ಮಿಕನು (Righteous Man) ಪರಮಾದರ್ಶ. ರೋಮನ್ನರು ಜಪಾನೀಯರಂತೆಯೇ ಕ್ಷಾತ್ರತೇಜದ ಆರಾಧಕರು. ಬ್ರಿಟಿಷರು ಸೈ ಸೈ ಎನ್ನುವುದು ಗಂಭೀರಸ್ಥನನ್ನು (Gentleman). ಸ್ವಾಭಿಮಾನಿಯು ಜರ್ಮನ್ನರಲ್ಲಿ ಸರ್ವವಂದ್ಯನಾಗುತ್ತಾನೆ. ಕ್ರೈಸ್ತರಿಗೆ ಜಗತ್ತನ್ನು ಸುಧಾರಿಸಬೇಕೆಂಬ ಸಂತರು (Saints) ಪೂಜ್ಯರು. ಮುಸಲ್ಮಾನರಲ್ಲಿ ಸರ್ವಶಕ್ತನಾದ ಅಲ್ಲಾ

ದೇವರಿಗೆ ತನ್ನೆಲ್ಲವನ್ನೂ ಅರ್ಪಿಸಿದ ದಾಸನು ಸರ್ವಜ್ಯೇಷ್ಠ. ಭಾರತೀಯರಿಗೆ **ಸಾಧು** ಸರ್ವಶ್ರೇಷ್ಠ."

"ಸಾಧುತ್ವದ ಆದರ್ಶ ಎಂಥದು ?"

"ಒಳ್ಳೆಯತನ ಮತ್ತು ವ್ರತನಿಷ್ಠೆಗಳು ಸಾಧುತ್ವದ ಮುಖ್ಯ ಲಕ್ಷಣಗಳು. ಒಳ್ಳೆಯತನದ ಲಕ್ಷಣಗಳೆಂದರೆ ನಿರ್ಭೀತಿ, ಪರಿಶುದ್ಧ ಭಾವನೆ, ದಾನಶೀಲ, ಸರ್ವಸಂಗ್ರಾಹಕವಾದ ತಿಳಿವಳಿಕೆ, ಇಂದ್ರಿಯನಿಗ್ರಹ, ತ್ಯಾಗಬುದ್ಧಿ, ನೇರ್ನಡೆ, ತತ್ತ್ವಾನುಸಂಧಾನ, ಸತ್ಯನಿಷ್ಠೆ, ಶಾಂತತೆ, ದಯೆ, ಅಹಿಂಸೆ, ಉದ್ಯಮಶೀಲ, ಮೃದುತ್ವ, ಕ್ಷಮೆ, ಧೃತಿ, ಶುಚಿ, ತೇಜಸ್ವಿತ್ವ, ಅತಿವೃತ್ತಿಯಿಲ್ಲದಿರುವುದು ಮತ್ತು ನಿಷ್ಕಾಪಟ್ಯ. ಒಳ್ಳೆಯತನವೇ ಒಂದು ವ್ರತ. ಸ್ವಾಧ್ಯಾಯ–ತಪಸ್ಸುಗಳು ತತ್ತ್ವಾನುಸಂಧಾನದ ಕ್ರಮಗಳು. ತತ್ತ್ವವು ಜಗತ್ತಿನ ಆಗು–ಹೋಗುಗಳ ಹುಟ್ಟು–ಗುಟ್ಟುಗಳಿಗೆ ಸಂಬಂಧಿಸಿದ್ದು. ಇಂತಹ ವಿಷಯದಲ್ಲಿ ಮಗ್ನನಾದ ಭಾರತೀಯ ವ್ಯಕ್ತಿ ಜ್ಞಾನ–ಭಕ್ತಿ–ವೈರಾಗ್ಯಗಳಿಲ್ಲದೆ ಇರಲಾರ. ಈ ಮೂರು ವ್ಯಾವಹಾರಿಕವಾಗಿ ಮನುಷ್ಯನ ವರ್ತನೆಯಲ್ಲಿ ಪಡಿಮೂಡುವ ಆಧ್ಯಾತ್ಮಿಕ ಗುಣಗಳು. ಜಗತ್ತಿನ ಮೂಲಾಧಾರವಾದ ಬ್ರಹ್ಮಶಕ್ತಿಯ ಕಲ್ಪನೆ ಜ್ಞಾನ; ಅದರಲ್ಲಿ ಆಸಕ್ತಿಯಿಡುವುದು ಭಕ್ತಿ; ಅಂಥ ಭಕ್ತಿಯ ಪರಿಣಾಮವಾಗಿ ವ್ಯಕ್ತ ಪ್ರಪಂಚದ ನಶ್ವರ ವ್ಯವಹಾರಗಳ ಬಗೆಗೆ **ಉದಾಸೀನನಂತಿರುವುದು** ವೈರಾಗ್ಯ—ಎಂದು ಸ್ಥೂಲವಾಗಿ ತಿಳಿದುಕೊಳ್ಳಬಹುದು."

"ಅಷ್ಟು ದೊಡ್ಡ ಶಕ್ತಿಯ ಬಗ್ಗೆ ಪದ್ಯದಲ್ಲಿ ಹೇಳಹೊರಟರೆ ಸ್ವಾಭಾವಿಕವಾಗಿ ಅದು ಅಸಂಬದ್ಧವೋ ಅಸ್ಪಷ್ಟಾರ್ಥಕವೋ ಆಗಿಯೇ ತೀರುತ್ತದೆ."

"ಹಾಗಲ್ಲವೇ; ವ್ಯಕ್ತವಲ್ಲದ, ಕೇವಲ ಕಲ್ಪನಾಶಕ್ತಿಗೆ ಒಳಪಡುವ ಕಲ್ಪನೆಗಳೆಷ್ಟೋ ಇವೆ. ಅವುಗಳನ್ನು ಪದ್ಯವು ಹೇಳಬಹುದಾದರೆ ಇದನ್ನೇಕೆ ಹೇಳಬಾರದು, ಹೇಳಲಾರದು? ಸ್ಥೂಲ ಪದಾರ್ಥಗಳೆಲ್ಲವೂ ನಮ್ಮ ಜ್ಞಾನಗಳಿಗೆ ಸಂಕೇತಗಳಾಗಬಲ್ಲವು. ಬ್ರಹ್ಮಶಬ್ದವೋ ಶಕ್ತಿಶಬ್ದವೋ ಹಾಗೇ ಏಕಾಗಬಾರದು? 'ನ್ಯಾಯ' ಎಂಬುದು ಅವ್ಯಕ್ತವಾದ ಕಲ್ಪನೆ. ಕಣ್ಣಿಗೆ ಕಾಣುವ ಒಂದು ರೀತಿಯ ನಡತೆ ಅದನ್ನು ಸೂಚಿಸುತ್ತದೆ. ಹಾಗೇ ಜಗತ್ತಿನ ರೀತಿಯು ಅದರ ಆತ್ಮವಾದ ಪರಮಾತ್ಮನನ್ನು (ಬ್ರಹ್ಮನನ್ನು) ಸೂಚಿಸುತ್ತದೆ. ಸೂಚನೆಗಳನ್ನು ಒಬ್ಬೊಬ್ಬರು ಒಂದೊಂದು ವಿಧವಾಗಿ ಅರ್ಥಮಾಡಿಕೊಳ್ಳಬಹುದು;

ಆದರೂ ಅನೇಕರು ಒಂದು ಸೂಚನೆಯನ್ನು ಒಂದೇ ರೀತಿಯಿಂದ ಅರ್ಥಮಾಡಿಕೊಳ್ಳುವುದಿಲ್ಲವೇ? ಹಾಗೇ ಭಗವಂತನ (ಬ್ರಹ್ಮನ) ಶಕ್ತಿಯ ಅರಿವು ತನ್ನ ಶಕ್ತಿಯ ಇತಿಮಿತಿಗಳ ಅರಿವಾದ ಪ್ರತಿಯೋರ್ವನಿಗೂ ಮೂಡುತ್ತ ಹೋಗುತ್ತದೆ. ಅದರ ಫಲ ನಿರಹಂಕಾರ, ಸಾತ್ವಿಕತೆ, ಸಾಧುತ್ವ. ಈ ಸಭ್ಯತೆಗೆ ಅತಿಮಾನುಷ, ಅತೀಂದ್ರಿಯ, ಅತಿಭೌತಶಕ್ತಿಯ ಅಸ್ತಿತ್ವದ ನೆನಪೇ ದೃಢವಾದ ಆಧಾರವೆಂದು ಸಾಮಾನ್ಯ ಭಾರತೀಯ ಸಿದ್ಧಾಂತ. ಭಗವದರ್ಪಣಬುದ್ಧಿಯಿಂದ ಕರ್ಮವಾಡುವ ಸಾಧನೆ ಈ ಸಿದ್ಧಾಂತದ ಫಲ."

"ಅದಕ್ಕೇ ಏನೋ ರವೀಂದ್ರನು ಭಕ್ತಿಗೀತಗಳನ್ನು ಹೆಚ್ಚಾಗಿ, ಚೆನ್ನಾಗಿ, ಗಣ್ಯವಾಗಿ ಬರೆದು ಪ್ರಸಿದ್ಧನಾದದ್ದು!"

"ಕೇವಲ ಭಕ್ತಿಯ ಭಾವೋದ್ರೇಕವನ್ನುಂಟುಮಾಡುವ ಪದ್ಯ ಜಟಿಲವಲ್ಲ. ಬುದ್ಧಿರಂಜಕ ಕಲ್ಪನೆಗಳದರಲ್ಲಿ ಭಗವತ್ಪರ, ನಿಸರ್ಗಪರ ಎನ್ನಿಸಿ ಬಂದಾಗ ಸ್ವಲ್ಪ ಕಷ್ಟವಾದೀತು. ಒಂದು ಉದಾಹರಣೆಯನ್ನೆತ್ತಿಕೊಳ್ಳೋಣ:

'ನಾನು ನನ್ನ ಎಲ್ಲವನೂ ಕೊಂಡು ಕಾಯುತಿರುವೆ
ನಂಬಿ ಸರ್ವನಾಶವ;
ನಿರಾಧಾರನನ್ನು ಮಾಡಲೆನ್ನ ಬರುವನೊಬ್ಬನಾತ
ದೃಶ್ಯನಲ್ಲ; ದರ್ಶಕನೀಯೆಲ್ಲವುದರ: ಪ್ರೀತಿಸುವನ-
ದೃಶ್ಯನಾಗಿ ಹಿಂದೆ ನಿಂತು; ಅವನಿಗಾಗಿ ಕಾದಿರುವೆನು!
ಆ ಗಭೀರನನ್ನು ಕುರಿತ ಗುಪ್ತಭಕ್ತಿ ನನ್ನ ಮನವ
ತುಂಬಿಕೊಂಡಿದೆ....'

ಈ ಪದ್ಯದಲ್ಲಿ ಪದಗಳೆಲ್ಲ ಸುಲಭಾರ್ಥಕ. ಕವಿ ಹೇಳಿರುವ ಸರ್ವನಾಶವಿಲ್ಲಿ ಕಷ್ಟದ ಭಾಗ. ಇಲ್ಲಿ ಹೇಳಿದ ಸರ್ವವು ಮನುಷ್ಯನು ತನ್ನದೆಂದು ಭಾವಿಸಿರುವ ಎಲ್ಲ ಪ್ರಾಪಂಚಿಕ ಸಂಬಂಧಗಳ ಸಮೂಹ. ಅದು ನಾಶವಾದರೆ ಸಿಗುವುದು ಮುಕ್ತಿಪದ. ಅಥವಾ ಅಪ್ರಾಪಂಚಿಕವಾದ ನಿತ್ಯಾನಂದ ಸ್ಥಿತಿ. ಮುಕ್ತಪದದ ಕೇಂದ್ರಬಿಂದುವಿನಂತಿರುವ ಪರಮಾತ್ಮನು ಪ್ರಾಪಂಚಿಕ ಅವಲಂಬನಗಳಿಂದ ತನ್ನನ್ನು ಬಿಡಿಸಿ ತನ್ನೆಡೆಗೊಯ್ಯಲು ಬರುತ್ತಾನೆ, ತಾನು ಆ ಅದೃಶ್ಯ ಶಕ್ತಿ

ಸ್ವರೂಪನ ಬರವಿಗಾಗಿ ಕಾದಿದ್ದೇನೆ—ಎಂಬುದು ಕವಿಯ ತಾತ್ಪರ್ಯ. ಅದೃಶ್ಯನಾಗಿ ತನ್ನನ್ನವನು ಪ್ರೀತಿಸುತ್ತಾನೆ, ತನಗೆ ಅವನಲ್ಲಿ ಅದಮ್ಯ ಪ್ರೀತಿಯಿದೆ—ಎಂಬುದು ಕವಿಯ ಆಶಯ. ಇಲ್ಲಿ ಸರ್ವನಾಶ, ನಿರಾಧಾರನನ್ನಾಗಿ ಮಾಡುವುದು—ಎಂಬ ಈ ಎರಡು ಕಲ್ಪನೆಗಳು ಥಕ್ಕನೆ ಓದುಗನ ವಿಚಾರವನ್ನು ತಡೆಗಟ್ಟುತ್ತವೆ. ಇದೇ ಚಮತ್ಕಾರ. 'ರಸೇ ಸಾರಃ ಚಮತ್ಕಾರಃ' ಎಂಬ ಮಾತು ಇದನ್ನೇ ಸೂಚಿಸುತ್ತದೆ. ನೈಪುಣ್ಯ (ಗ್ರಂಥಾವಲೋಕನ ಮತ್ತು ಅನುಭವಗಳಿಂದ ಪಡೆದ ಜ್ಞಾನ) ಇಲ್ಲದವರಿಗೆ ಈ ಚಮತ್ಕಾರ ಕಾಲ್ತೊಡಕು ; ಇದ್ದವರಿಗೆ ಅನಪೇಕ್ಷಣೀಯ ಸ್ಥಿತಿಗಳನ್ನು ಅಪೇಕ್ಷಿಸುವ ಆಭಾಸದ ಮೂಲಕ ಅಂಥ ಸ್ಥಿತಿಗಳು ತುಲನಾತ್ಮಕವಾಗಿ ನಿಜವಾಗಿಯೂ ಅಪೇಕ್ಷಣೀಯ ಎಂದು ಹೊಳೆಯಿಸುವ ಕಾವ್ಯಕಲೆ ಸಂತೋಷವನ್ನುಂಟುಮಾಡುತ್ತದೆ."

"ಇಂಥ ಅಧ್ಯಾತ್ಮಪದ್ಯಗಳನ್ನೋದುವವರು ಯಾವಾಗಲೂ ನಿಮ್ಮಂಥವರನ್ನು ಪಕ್ಕದಲ್ಲಿ ಕೂಡ್ರಿಸಿಕೊಳ್ಳಬೇಕು ಅಷ್ಟೆ."

"ಅಲ್ಲವೇ, ಒಬ್ಬ ಕವಿಯು ತನ್ನ ಎಲ್ಲ ಕೃತಿಗಳನ್ನೂ ಒಂದೇ ಒಂದು ಮಟ್ಟದ ಓದುಗರಿಗಾಗಿ ಬರೆಯಲು ಸಾಧ್ಯವೇ, ಯೋಗ್ಯವೇ? ಒಂದು ಸಾಮಾನ್ಯ ವೃತ್ತಪತ್ರಿಕೆಯು ೨ ಮಟ್ಟಗಳ ಪ್ರಬಂಧ ಲೇಖನಗಳನ್ನಾದರೂ ಪ್ರಕಟಿಸದಿದ್ದರೆ ಅದಕ್ಕೆ ಚಂದಾದಾರರು ಹೆಚ್ಚುವುದು ಅಸಂಭವ. ಸಾಮಾನ್ಯರು ತಮಗೆ ರುಚಿಸಿದ್ದನ್ನು ಓದಿದರೆ, ಪ್ರೌಢರು ತಮಗೆ ರುಚಿಸಿದ್ದನ್ನು ಓದಿಕೊಳ್ಳುತ್ತಾರೆ. ಪ್ರೌಢ ಲೇಖನಗಳನ್ನೆಂದೂ ಪ್ರಕಟಿಸದ ಪತ್ರಿಕೆ ಪ್ರೌಢರಿಂದ ನಿಂದಿಸಲ್ಪಟ್ಟು, ಆ ಮೂಲಕ ಅವರ ಅಭಿಪ್ರಾಯವನ್ನು ಅವಲಂಬಿಸುವ ಅನೇಕ ಸಾಮಾನ್ಯರೂ ತಿರಸ್ಕರಿಸುವ ಸ್ಥಿತಿಯನ್ನು ಮುಟ್ಟುವುದು ವೈಜ್ಞಾನಿಕ ಸತ್ಯ. ಹಾಗೇ ಕೇವಲ ಸಾಮಾನ್ಯರ ಸಂತರ್ಪಣಕ್ಕೆಂದು ಛಲತೊಟ್ಟು ಬರೆವವ ಹಾಗೂ ಪ್ರಕಾಶಿಸುವವ ನಾಗರಿಕತೆಯ ಇತಿಹಾಸಕಾರರ ಅಳತೆಯಲ್ಲಿ ಸಾಮಾನ್ಯ ಲಕ್ಷ್ಯಕ್ಕೂ ಪಾತ್ರನಾಗುವದಿಲ್ಲವೆಂಬುದಕ್ಕೆ ೬೦೦೦ ವರ್ಷಗಳ ನಮ್ಮ ಮಾನವನಾಗರಿಕತೆಯು ಅನೇಕ ನಿದರ್ಶನಗಳನ್ನೀಯುತ್ತದೆ. ಕೇವಲ ಹಾಸ್ಯಗಾರನಾದವನೆಂದೂ ಮಾನವೇತಿಹಾಸದಲ್ಲಿ **ಪರಮ**ಪೂಜ್ಯನೆನ್ನಿಸಿದ್ದಿಲ್ಲ. ಅತಿ ಗಾಂಭೀರ್ಯವನ್ನು ಯಾವಾಗಲೂ ಪ್ರದರ್ಶಿಸುವಾತನು ಒಮ್ಮೆ ಜನಪ್ರಿಯನಾಗದಿದ್ದರೂ ಜನಪೂಜ್ಯನಾದಾನು. ಜನಪ್ರಿಯತೆಯು ಪ್ರಸಿದ್ಧಿಯಂತೆ

ನಶ್ವರ; ಜನಪೂಜ್ಯತೆಯು ಕೀರ್ತಿಯಂತೆ ಶಾಶ್ವತ. ಎರಡೂ ಇದ್ದರೆ ಬಹಳ ಒಳ್ಳೆಯದು. ರವೀಂದ್ರನಿಗೆರಡೂ ದೊರಕಲು ಅವನು ವಿನೋದಶೀಲನೂ ಗಂಭೀರವಿಚಾರಪರನೂ ಆಗಿದ್ದುದೇ ಕಾರಣ."

"ಅಲ್ಲರೀ—ಒಂದೇ ವ್ಯಕ್ತಿ ಹೀಗೆ ಪರಸ್ಪರ ವಿರುದ್ಧ ಸ್ವಭಾವಗಳನ್ನು ಹೊಂದಿರುವುದು ಹೇಗೆ ಸಹಜ?"

"ಸುಖದುಃಖಗಳೆರಡನ್ನೂ ಒಂದೇ ವ್ಯಕ್ತಿ ಅನುಭವಿಸುವುದು ಹೇಗೆ ಸಹಜವೋ ಹಾಗೆ. ಸ್ವಭಾವದಲ್ಲಿ, ನಿಸರ್ಗದಲ್ಲಿ, ಪ್ರಕೃತಿಯಲ್ಲಿ ವಿವಿಧತೆಯಿದೆ. ಆ ವಿವಿಧತೆಯ ಒಂದು ಕೋನದಲ್ಲಿ ವಿರೋಧವು ಭಾಸವಾಗುತ್ತದೆ. ಒಂದು ವೃತ್ತವನ್ನು ಬರೆದು ಅದರ ರೇಖೆಯ ಮೇಲೆ ಒಂದು ಕಡೆ ಒಂದು ಗುರುತನ್ನು ಮಾಡಿದರೆ, ಅದರ ವಿರುದ್ಧ ದಿಕ್ಕಿನಲ್ಲಿ ಒಂದು ಗುರುತನ್ನು ಅದೇ ರೇಖೆಯ ಮತ್ತೊಂದೆಡೆ ಮಾಡಬಹುದು. ಈ ಎರಡು ಗುರುತುಗಳ ನಡುವೆ ಇನ್ನೆಷ್ಟೋ ಚುಕ್ಕೆಗಳನ್ನು ಹಾಕಬಹುದು; ಅವೆಲ್ಲ ವಿವಿಧ, ವಿರುದ್ಧವಲ್ಲ. ಹಾಗೇ ಒಬ್ಬ ವ್ಯಕ್ತಿಯ ಪ್ರತ್ಯೇಕತೆಗೂ ಅವನ ಬ್ರಹ್ಮೈಕ್ಯಕ್ಕೂ ನಡುವೆ ಎಷ್ಟೋ ವಿವಿಧ ಚೇತನಾವಸ್ಥೆಗಳಿವೆ (States of consciousness). ಅದೇ ಮೇರೆಗೆ ವಿನೋದಪರತೆ–ಗಾಂಭೀರ್ಯಗಳೂ ನಮ್ಮ ಚೇತನೆಯ ಒಂದು ವೃತ್ತದ ಪರಿಧಿಯಲ್ಲಿ ವಿರುದ್ಧ ದಿಶೆಯಲ್ಲಿರುವ ಭಾವಗಳು. ಚೇತನೆಗೆ—ಒಮ್ಮೆ ಆ ಚುಕ್ಕೆ ಮುಖ್ಯ ಲಕ್ಷ್ಯವಾದರೆ ಇನ್ನೊಮ್ಮೆ ಈ ಚುಕ್ಕೆ ಮುಖ್ಯ ಲಕ್ಷ್ಯವಾಗಬಹುದು —ಇಷ್ಟೇ. ಮಾನಸಚೇತನೆಯು Dynamic ಉತ್ಕ್ರಿಯಾತ್ಮಕ. ಅದು ಸಂಕಲ್ಪವು (Will) ನಿಲ್ಲಿಸಿದಲ್ಲಿ ನಿಲ್ಲುತ್ತದೆ; ಸರಿಸಿದೆಡೆ ಸರಿಯುತ್ತದೆ."

"ಚೆನ್ನಾಗಿ ಜೀರ್ಣವಾಗುವ ತುತ್ತಲ್ಲ ಕಣ್ರೀ ಇದು!"

"ಎಷ್ಟು ಜೀರ್ಣವಾಯಿತೋ ಅಷ್ಟೇ ಲಾಭ. ಹಾಗೇ ಅಧ್ಯಾತ್ಮ ಭಾವನೆಯನ್ನು ವ್ಯಂಜಿಸುವ ರವೀಂದ್ರಕೃತಿಗಳಲ್ಲೂ ಯಥಾಶಕ್ತಿ ಸಂತೋಷ ಹೊಂದುವುದಷ್ಟೇ ಸಾಧ್ಯ. ಬಲ್ಲವರ ದೃಷ್ಟಿಯಲ್ಲವು ತೂಕದ ಕೃತಿಗಳಾಗಿರುವುದರಿಂದ ಅವನ ವ್ಯಕ್ತಿತ್ವದ ತೂಕ ಅದರಿಂದ ಎಲ್ಲರ ದೃಷ್ಟಿಯಲ್ಲೂ ಹೆಚ್ಚಿನ್ನಿಸಿದೆ. ಬೇಕಾದರೆ ಇನ್ನೊಂದು ಮಾದರಿಯನ್ನು ಅವಲೋಕಿಸೋಣ:

ಬೀಸು, ಬೀಸು, ಬೀಸು—
ಅಂತಪಾರವಿಲ್ಲದೀ ಸಮುದ್ರದಿ ಬೀಸಲಿ ಬಿರುಗಾಳಿ.
ಭೇಟಿಯಾದೆನೆನ್ನೋಪನ ನಾ.
ತುಂಬಿಹುದೆನ್ನಾಲಿಂಗನವು.
ಪ್ರಳಯದುಗ್ರಗರ್ಜನೆಯಿಂದೆನ್ನವನೆಚ್ಚತ್ತಿಹನೀಗ.

*　　　*　　　*

ಭಯಂಕರನೆ ನಿನ್ನುಗ್ರಪ್ರಭೆಯೀ ಬಾಗಿಲನೊಡೆಯಿತಲಾ.
ಕನಸುಬಲೆಯ ಹರಿದೊಗೆದ ಮಿಂಚಿನಂಬೆದೆಯ ನೆಟ್ಟಿತಲ್ಲಾ.
ಏಳಬೇಕೊ ಬೇಡವೋ ಎಂಬುದೇ ತಿಳಿಯದಷ್ಟರಲ್ಲಿ,
ಕುರುಡುಗೊಳಿಸುವೀ ಕಾರ್ಗತ್ತಲು ತಾ ಸರಿಯುವಷ್ಟರಲ್ಲಿ,
ಮುಚ್ಚಿದಕ್ಷಿಗಳ ಹಿಡಿದ ನಿದ್ರೆಯಿಂದೊರೆಸಿ ತೆರೆಯಲೆಂದು
ಬಯಸುವಷ್ಟರಲಿ ಕಹಳೆ ಕೇಳಿಸಿತು ಪ್ರಳಯದೇವ ನಿನ್ನ.
ಬೆಳಗುವಂತರಿಕ್ಷದಲ್ಲುರಿವ ಮೋಡಗಳ ತೂತಿನಲ್ಲಿ
ಬಡಿಯುತಿದೆ, ಬೊಬ್ಬಿರಿಯುತಿದೆ.
ಧಡಾರೆಂದು ಎಚ್ಚತ್ತ ಮೂಡುಬಾನ್ ನಾಣ್ಗೆಂಪೇರುತಿದೆ.

*　　　*　　　*

ಏರಿ ನಡೆವ ಹೆದ್ದಾರಿಯಲಿ
ಕೇಳುವೆ ದನಿಯನ್ನು—
ಇಲ್ಲ ಭಯ, ಅಲ್ಲಿಲ್ಲ ಭಯ—
ಇಡೀ ಬಾಳ ತೆರುವಾತನಿಗೆ
ಕೊನೆಯಿಲ್ಲ, ಕೊನೆಯಿಲ್ಲ.

ಇಲ್ಲಿ ಜೀವಾತ್ಮನು ಮನಸ್ಸಿನೊಡನೆ ಹೋರಾಟ ನಡೆಸಿದ್ದಾನೆ. ಅವನಿಲ್ಲಿ ಸತಿ; ಪರಮಾತ್ಮನು ಪತಿ. ಮನಸ್ಸಿನಲ್ಲಿರುವ ಪ್ರಾಪಂಚಿಕ ಆಸೆಪಾಸೆಗಳ

ಆಂದೋಲನ, ಪ್ರತಿಭಟನೆಗಳು ಪ್ರಳಯಭಯಂಕರ. ಪತಿಯ ಸಂನಿಧಾನವನ್ನು ಸೇರಿ ಅವನಾಲಿಂಗನದಲ್ಲಿರುವ ಸತಿಗೆ ಯಾವ ಆರ್ಭಟದಿಂದಲೂ ಭಯವುಂಟಾಗದು. ಅವಳು ಸರ್ವಾರ್ಪಣದಿಂದ ಪತಿಯನ್ನು ತನ್ನ ಆಲಿಂಗನದಲ್ಲಿ ಇಟ್ಟುಕೊಂಡಿದ್ದಾಳೆ. ಅವಳನ್ನೂ ಅವನನ್ನೂ ಈ ಪ್ರಪಂಚಸಿಷ್ಟ ಮಾನಸದ ಮಹಾರ್ಭಟ-ಮತ್ತನರ್ತನಗಳೆಚ್ಚರಿಸಿ ಒಂದುಗೂಡಿಸಿ, ಅಭಯ-ಅದ್ವೈತ ಸ್ಥಿತಿಗೊಯ್ದು ಮುಟ್ಟಿಸಿದವು ಎಂಬುದನ್ನಿಲ್ಲಿ ಧ್ವನಿಸಲಾಗಿದೆ."

"ದೇಶಪ್ರೇಮಿಗಳು ದುಃಶಾಸಕರ ವಿರುದ್ಧವಾಗಿ ಹೂಡಿದ ಹೋರಾಟದ ಘನಗರ್ಜನೆಯನ್ನೇಕಿದು ಧ್ವನಿಸಬಾರದು ?"

"ಮಹಾರಚನೆಗಳು ಉಚಿತವಾದ ವಿವಿಧ ಪ್ರಕರಣಗಳಿಗೆ ಅನ್ವಯವಾಗುವುದು ಸಹಜ. ನಮ್ಮ ಲೌಕಿಕ ಸ್ವಾತಂತ್ರ್ಯಸಮರವು ಪಾರಲೌಕಿಕ ಸ್ವಾತಂತ್ರ್ಯವೆನ್ನಿಸಿದ ಮುಕ್ತಿಗಾಗಿ ನಡೆಸುವ ಹೋರಾಟವನ್ನು ಹೋಲಿದರೆ ತಪ್ಪೇನಿಲ್ಲ. ರವೀಂದ್ರನು ಸ್ವಾತಂತ್ರ್ಯಪ್ರಿಯ. ತಾನೂ ತನ್ನ ದೇಶೀಯರೂ ಜಗತ್ತಿನ ಎಲ್ಲ ವಿಚಾರವಂತ ಜೀವಿಗಳೂ ಸ್ವತಂತ್ರರಾಗಬೇಕು, ಮುಕ್ತರಾಗಬೇಕು ಎಂಬುದು ಅವನ ಆಧ್ಯಾತ್ಮಿಕತೆಯ ತಿರುಳು."

"ದೇವರಿಗೆ ಶರಣಾಗತರಾಗುವುದು ದೇವದಾಸ್ಯವಲ್ಲವೇ ?"

"ಇದು ನ್ಯಾಯವಾದ ಪ್ರಶ್ನೆ. ದಾಸ್ಯ-ಸ್ವಾತಂತ್ರ್ಯಭಾವಗಳು ಸಾಪೇಕ್ಷ. ಜೊತೆಗೆ, ಅವು ಸಾಧನಭಾವಗಳಲ್ಲದೆ ಸಿದ್ಧಿಭಾವಗಳಲ್ಲ. ಸ್ವತಂತ್ರನಾದರೆ ಸತ್ (Physical Existence), ಚಿತ್ (Mental Life) ಎಂಬವುಗಳ ಮಿಶ್ರಣವಾದ ಮನುಷ್ಯನು ಆನಂದದ (Supreme Psycho-physical Equipoise) ಸಿದ್ಧಿಭಾವವನ್ನು ಹೊಂದಿರುತ್ತಾನೆ. ನಮಗೆ ಉಂಟಾಗುವ ಸುಖದುಃಖಗಳು ಆನಂದದ ನೆರಳುಗಳು, ಆನಂದವಲ್ಲ. ಲೌಕಿಕ ಸ್ವಾತಂತ್ರ್ಯವು ಪ್ರಾಪಂಚಿಕ ಜೀವನದಲ್ಲಿ ಹೆಚ್ಚು ಸುಖ ಕೊಡಬಲ್ಲುದು. ಆಧ್ಯಾತ್ಮಿಕ ಸ್ವಾತಂತ್ರ್ಯವು ಇಹ-ಪರಗಳೆರಡರಲ್ಲೂ ಸುಖಾತೀತವಾದ ಅಚಲಾನಂದವನ್ನು ಉಂಟುಮಾಡಬಲ್ಲುದು ! ಎರಡನೆಯದಾಗಿ, ಅನನುಕೂಲವಾದ ಬಂಧನಗಳನ್ನು ಮುರಿದೊಗೆಯುವ ಕಾರ್ಯವು ಲೌಕಿಕ ಸ್ವಾತಂತ್ರ್ಯಕ್ಕೆ ಕಾರಣವಾದರೆ, ಬಂಧನಗಳ ಸ್ವರೂಪಜ್ಞಾನದ ಬಲದಿಂದ ಬಂಧನಗಳಿದ್ದ ಹಾಗೇ ಇದ್ದೂ ಬಂಧನಕಾರಿಗಳಾಗದಂತಹ ಮನಃಸ್ಥಿತಿಯನ್ನು ಹೊಂದುವುದು ಆಧ್ಯಾತ್ಮಿಕ

ಸ್ವಾತಂತ್ರ್ಯಕ್ಕೆ ಹೇತು. ಛಂದಸ್ಸು-ವ್ಯಾಕರಣ-ಅಲಂಕಾರಗಳ ನಿಯಮಗಳು ಶೋಷಕವಾಗದೆ ಪೋಷಕವಾಗುವಂತೆ ಕಾವ್ಯರಚನೆ ಮಾಡಿದ ಕಾಳಿದಾಸನಂಥ ಸ್ವತಂತ್ರರು ಆಧ್ಯಾತ್ಮಿಕ ಸ್ವತಂತ್ರರ ಕಲ್ಪನೆಯನ್ನು ಚೆನ್ನಾಗಿ ಮಾಡಿಕೊಡ ಬಲ್ಲರು. ಲೋಕದಲ್ಲಾದರೂ ದುರ್ನಿಯಮಗಳನ್ನು ಕಿತ್ತೊಗೆದು ಸುನಿಯಮ ಗಳನ್ನು ಹಾಕಿಕೊಂಡು ಅವುಗಳನ್ನು ಸದುದ್ದೇಶಸಾಧಕವಾಗುವಂತೆ ಪಾಲಿಸುವು ದರಲ್ಲೇ ಸ್ವಾತಂತ್ರ್ಯದ ವ್ಯಕ್ತತೆಯಿದೆಯಲ್ಲವೇ? ದೇವದಾಸ್ಯವು ಅನುಕೂಲ ವಾದ ನಿಯಮದ ಅಂಕೆಗೊಳಪಟ್ಟು ಆ ಮೂಲಕ ಸ್ವಾತಂತ್ರ್ಯ (ಮುಕ್ತಿ) ಪಡೆವ ಮಾರ್ಗ. ಮುಕ್ತನ ಆನಂದಭಾವವೇ ದೇವರು. ರವೀಂದ್ರ ಉದ್ಧರಿಸಿದ ಉಪನಿಷತ್ತು ಹೀಗಿದೆ:

‘ ಆನಂದಾದ್ಧ್ಯೇವ ಖಲ್ವಿಮಾನಿ ಭೂತಾನಿ ಜಾಯಂತೇ
ಆನಂದೇನ ಜಾತಾನಿ ಜೀವಂತಿ
ಆನಂದಂ ಪ್ರಯಂತ್ಯಭಿಸಂವಿಶಂತಿ.’

‘ ಅಭಯ, ನಿರ್ಭೀತಿ ’ ಎಂದರೆ ಹೇಗೆ ಪಾಪಭಯವಿಲ್ಲದಿರುವಿಕೆ ಎಂದು ಅರ್ಥವಾಗುವುದಿಲ್ಲವೋ ಹಾಗೇ ಸ್ವಾತಂತ್ರ್ಯವೆಂದರೂ ಪಾಪ ಮಾಡಲು ಸ್ವಾತಂತ್ರ್ಯ ಅಥವಾ ಸ್ವಾಚ್ಛಂದ್ಯ ಎಂದು ಅರ್ಥವಾಗದು. ಪಾಪ, ದುಃಖ, ಹಿಂಸೆ, ದೌರ್ಜನ್ಯ, ಅನ್ಯಾಯ, ನಿರ್ದಯತೆ, ಅಕ್ರಮ, ಅನೌಚಿತ್ಯ, ಕುರೂಪ, ಕುಕರ್ಮ, ವಿರಸಗಳು ನಮಗೆ ಬೇಡವಾದ ಬಂಧನ ಮತ್ತು ಬಂಧನ ಕಾರಕಗಳು. ಅಧ್ಯಾತ್ಮದ ಅಭಿರುಚಿಯಲ್ಲಿ ಒಲ್ಲದ ಈ ಬಂಧನೆಗಳೆಲ್ಲ ಅವಿದ್ಯೆ, ಒಗ್ಗುವ (ಬೇಕಾದ) ಬಂಧನಗಳೆಲ್ಲ ವಿದ್ಯೆ. ಅವಿದ್ಯಯಾ ಮೃತ್ಯುಂ ತೀರ್ತ್ವಾ ವಿದ್ಯಯಾಽಮೃತಮಶ್ನುತೇ—ಎಂಬುದರಲ್ಲಿ ಬಂದ ವಿದ್ಯೆಯೇ ಸ್ವಾತಂತ್ರ್ಯ ವಿದ್ಯೆ, ಅಮೃತವೇ ಆನಂದ. ಕಲೆಯ ಭಾಷೆಯಲ್ಲಿ ವಿದ್ಯೆಯೇ ‘ ರಸ ’ (ಸೌಂದರ್ಯ) ; ನೀತಿಯ ಭಾಷೆಯಲ್ಲಿ ‘ ಸುಕೃತ (Well-done, Well-made ಪುಣ್ಯ) : ತತ್ವಪರಿಭಾಷೆಯಲ್ಲಿ ಐಕ್ಯ ; ಮಾನಸಶಾಸ್ತ್ರೀಯವಾಗಿ ಪ್ರೇಮ— ಸಮಾಜಶಾಸ್ತ್ರಾನುಸಾರ ಸಹಕಾರ! ಈ ಭಾವಗಳೆಲ್ಲ ಸಾಧನಗಳಾದುದರಿಂದ ಅವು ದಿವ್ಯವಾದಾಗ ಗ್ರಾಹ್ಯ, ದೈತ್ಯವಾದಾಗ ತ್ಯಾಜ್ಯ. ದೇವನಿಷ್ಠವಾದುದು ದಿವ್ಯ ; ದೌಷ್ಟ್ಯನಿಷ್ಠವಾದುದು ದೈತ್ಯ. ದೇವತ್ವವು ಆನಂದ ಚಿಹ್ನ, ದೈತ್ಯತ್ವವು

ತದ್ವಿರುದ್ಧಭಾವದ ಚಿಹ್ನ. ಆತ್ಮದ ಸ್ವಾತಂತ್ರ್ಯವೆಂದರೆ ಮನಸ್ಸು ದೇವದಾಸನಾಗುವುದು. ಅಹಂಕಾರವು ಮನೋರಾಜ್ಯದ ರಾಜಧಾನಿ. ಸ್ವತಂತ್ರ ಆತ್ಮದ ಪೂರ್ಣತೆ ಇರುವುದು ಪರಮಾತ್ಮಕತೆಯಲ್ಲಿ, ಆನಂದವಾಗುವುದರಲ್ಲಿ. ದುರ್ಜನರ ದಾಸ್ಯ ಅಸಹ್ಯ ; ಸಜ್ಜನರ ದಾಸರಾಗಿರುವುದು ಸ್ವಾತಂತ್ರ್ಯ ! "

" ಸ್ವಾತಂತ್ರ್ಯದ ಈ ಲಕ್ಷಣ ಬಹಳ ಚಮತ್ಕಾರವಾಗಿದೆಯಲ್ಲ ! "

" ವಸ್ತುಸಂಗತಿ ಕೆಲವು ಸಲ ಕಲ್ಪನೆಗಿಂತ ಆಶ್ಚರ್ಯಕಾರಕವಾಗಿರುತ್ತದೆ. ದೇವತ್ವದಷ್ಟು ವಿಶ್ವವ್ಯಾಪಕವಾದ ಧ್ಯೇಯ ಇನ್ನೊಂದಿಲ್ಲ. ಅದರ ವಿಸ್ತಾರದ ಅರಿವಿಲ್ಲದವರಷ್ಟೇ ಅಂಥ ಆಸ್ತಿಕರು, ಸನಾತನಿಗಳು, ಕರ್ಮಠರು ಮತ್ತು ವೇದಾಭ್ಯಾಸಜಡರು ; ಹೊರಗಿನ ಔಪಚಾರಿಕವೂ, ಯಾಂತ್ರಿಕವೂ ಆದ ಅತ್ಯಲ್ಪ ವ್ಯಾಪ್ತಿಯುಳ್ಳ ಸ್ಥೂಲವಸ್ತು, ಸ್ಥೂಲ ಕಲ್ಪನೆಗಳನ್ನು ದೇವರೆಂದು ಆಗ್ರಹ ತೊಡುವವರು. ಅಲ್ಪದಲ್ಲಿ ಸುಖವಿಲ್ಲ, ಅನಂತದಲ್ಲಿ—ಅಪಾರದಲ್ಲಿ ಸುಖವಿದೆ ಎಂಬ ಉಪನಿಷತ್ಸಾರವನ್ನು ರವೀಂದ್ರನಂಥವರು ಅರಿತೇ ದೇವೋನ್ಮುಖರಾಗುತ್ತಾರೆ. ಅದರಿಂದಲೇ ಅವರ ಜೀವನ ವಿಶ್ವಕುಟುಂಬಿತ್ವದ್ದಾಗಿ ಪರಿಣಮಿಸುತ್ತದೆ. ರವೀಂದ್ರನ ಆಧ್ಯಾತ್ಮಿಕತೆಯ ವಿಶ್ವವಿಶಾಲದೃಷ್ಟಿಯನ್ನು ಆತನ 'Personality—ವ್ಯಕ್ತಿತ್ವ' ಎಂಬ ಪ್ರಬಂಧದಿಂದಲೇ ಎತ್ತಿಕೊಳ್ಳೋಣ :

'ಬುವಿಯುವನ ಆನಂದ ; ಆಕಾಶ ಕೂಡ ;
ಸೂರ್ಯಚಂದ್ರರ ಹೊಳಪು ಆನಂದಗಾಥ ;
ಆದಿಮಧ್ಯಾಂತಗಳು ಅವನ ಆನಂದ ;
ಬೆಳಕು ಕತ್ತಲು ಕಂಗಳಂತೆ ಆನಂದ.
ಕಡಲು–ಕಡಲಲೆಗಳವನಾನಂದರಾಶಿ ;
ಗಂಗಾಸರಸ್ವತೀಯಮುನಾಪ್ರಭಾಸಿ.
ಒಡೆಯ ತಾನೊಬ್ಬನೇ : ಬಾಳ್, ಸಾವು, ಸಂಗ
ಮೇಣ್ ಭಂಗ—ಆನಂದಲೀಲಾಪ್ರಸಂಗ.'

'I am not a mere stranger resting in the wayside inn of this earth on my voyage of existence, but I live in a world whose life is bound up with mine — ನಾನು ಈ ಭೂಮಿಯಲ್ಲಿರುವ ದಾರಿಯ ಮೇಲಿನ ಹೊಟೇಲಿನಲ್ಲುಳಿದುಕೊಂಡಿರುವ ಅಪರಿಚಿತ ಪ್ರಾವಾಸಿಯಲ್ಲ; ಜಗದ ಜೀವನದೊಡನೆ ನನ್ನ ಬಾಳು ಹಾಸುಹೊಕ್ಕಾಗಿದೆ' ಎಂಬ ಮಾತಿನಲ್ಲಿ ರವೀಂದ್ರನ ವ್ಯಕ್ತಿತ್ವದ ಆಧ್ಯಾತ್ಮಿಕ ವ್ಯಾಪಕತೆಯು ವ್ಯಕ್ತವಾಗಿದೆ. ದೇವರ ಸ್ವಭಾವವನ್ನು ತನ್ನಲ್ಲಿ ಅಳವಡಿಸಿಕೊಳ್ಳುವುದರಲ್ಲೇ ಮಾನವನ ವ್ಯಕ್ತಿತ್ವದ ಸಾರ್ಥಕತೆಯಿದೆಯೆಂದು 'The Second Birth' ಎಂಬ ಅವನ ಪ್ರಬಂಧದಲ್ಲಿ ಸಾರಲಾಗಿದೆ. ಎಂದೂ ವೆಚ್ಚವಾಗದಿರುವಷ್ಟು ಪ್ರೇಮಾಧಿಕ್ಯದಿಂದ ತನ್ನನ್ನೇ ತಾನು ಅನ್ಯರಿಗಾಗಿ ತ್ಯಾಗ ಮಾಡುವುದು ದೇವಸ್ವಭಾವವೆಂದು ನಂಬಿ ನಡೆದವನಾತ. ವ್ಯಕ್ತಿತ್ವದ ಅಥವಾ ವ್ಯಕ್ತತೆಯ ಬಂಧದಿಂದ ಬಿಡುಗಡೆಹೊಂದುವುದು ಪರಿಪೂರ್ಣ ಪ್ರೇಮದಲ್ಲೇ— ಎಂಬುದವನ ಅಧ್ಯಾತ್ಮವಿದ್ಯಾಸಾರ. Unlimited abundance of renunciation —ಅಂತ್ಯವ ಕಾಣದ, ಮೇರೆಯನರಿಯದ ತ್ಯಾಗಶೀಲದಿಂದ ಅಧ್ಯಾತ್ಮಸಿದ್ಧರು ಅಪ್ರಮೇಯ ದೇವನ ಮುಕ್ತ, ಕ್ರಿಯಾಶೀಲ ಜೀವನದಲ್ಲಿ ಒಂದಾಗುತ್ತಾರೆ ಎಂಬುದವನು ಕಂಡ ಸಂಗತಿ. ಅಂಥವರೇ ಅಮರರು ಎಂದು ದೃಢವಾಗಿ ಸಿದ್ಧಾಂತಿಸಿದ ರವೀಂದ್ರನ ಅಧ್ಯಾತ್ಮಪರತೆ ಎಷ್ಟು ವ್ಯಾವಹಾರಿಕ, ಉನ್ನತ, ಉದಾತ್ತ, ವಿಶ್ವಮಾನವೀಯ, ಸರ್ವಾದರಣೀಯ ಎಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ."

"ಖಂಡಿತವಾಗಿ ರವೀಂದ್ರನು ಮಹಾತ್ಮ, ದೊಡ್ಡವ, ವಂದನೀಯ!"

"ಅದರಿಂದಲೇ ಅವನು ಜಗತ್ತಿನಲ್ಲಿ ಸರ್ವಪ್ರಿಯ!"

೧೪. ರವೀಂದ್ರನ ವಿಮರ್ಶಕ ದೃಷ್ಟಿ

" ರವೀಂದ್ರನು ಅಂಥವನು ಇಂಥವನು ಎಂಬುದೆಲ್ಲ ಸರಿ—ಅವನು ಮಹಾಕವಿ ಎಂಬುದಂತೂ ಸಿದ್ಧ; ಆದರೆ ಅವನ ಕಲೆಯ ಗೊತ್ತುಗುರಿಗಳ ಬಗ್ಗೆ ಅವನಿಗೆ ಎಂಥ ಕಲ್ಪನೆಯಿತ್ತು?—ಎಂಬುದು ತಿಳಿದುಕೊಳ್ಳಬೇಕಾದ ಸಂಗತಿ ಎನಿಸುತ್ತದೆ ನನಗೆ—ಅಲ್ಲವೆ?"

" ಅವನು ಅಂಥವನು ಇಂಥವನು ಆಗಿರುವಾಗ ಎಂಥವನೂ ಆಗಿರಲೇಬೇಕು; ಆದುದರಿಂದ ಅವನಿಗೆ ತನ್ನ ಕಲೆಯ ಗೊತ್ತುಗುರಿಗಳ ಅರಿವಿಲ್ಲದೆ ಇರುವುದೇ? ಅವನ ಪ್ರಕಾರ ಕಲೆಯ ಮುಖ್ಯೋದ್ದೇಶವು ಕಲೆಗಾರನ ವ್ಯಕ್ತಿತ್ವದ ಪ್ರಕಟನೆಯಲ್ಲದೆ ರಸಾಭಿವ್ಯಕ್ತಿಯಲ್ಲ."

" ಅಂದರೆ?"

" ರಸವು (ಸೌಂದರ್ಯವು) ವ್ಯಕ್ತಿತ್ವದ ಅಭಿವ್ಯಕ್ತಿಯ ಸಾಧನ—ಕಲೆಗಾರನ ದೃಷ್ಟಿಯಿಂದ. ಒಂದು ವರ್ಣನೀಯ ವಸ್ತುವಿನ ವ್ಯಕ್ತಿತ್ವವು ಅನನ್ಯವೂ ಹೌದು, ವಿಶ್ವಸಾಧಾರಣವೂ ಹೌದು. ಆ ವಸ್ತುವನ್ನು ಪ್ರತ್ಯೇಕಿಸುವುದು ಕಲೆಗಾರನ ಕೆಲಸ. ಅದರ ಬಾಹ್ಯ ಗುಣಗಳನ್ನು ಹೆಕ್ಕುವುದಲ್ಲ; ಆಂತರಿಕ ಚಾರಿತ್ರ್ಯದಂತಿರುವ ಹೊಂದಿಕೆಯನ್ನು, ಸಮಶ್ರುತಿ-ಸಮನ್ವಯಗಳನ್ನು ತನ್ನ ಕೃತಿಯಲ್ಲಿ ಮೂಡಿಸುವುದರ ಮೂಲಕ ಅದರ ಅನನ್ಯತೆಯನ್ನು ಹೊರಗೆಡಹುವುದು ಕಲಾನೀತಿ. ವಿಶ್ವ-ವ್ಯಕ್ತಿಗಳ ಸಾಮರಸ್ಯವನ್ನು (ವಿಶ್ವದ ಮತ್ತು ತನ್ನ ಸ್ಥಾನಮಾನಗಳ ಹೊಂದಿಕೆಯನ್ನು) ಕಲೆಗಾರ ತನ್ನ ಕೃತಿರಚನೆಯಲ್ಲಿ ಸಾಧಿಸುತ್ತಾನೆ. ವಿಶ್ವದೊಡನೆ ಅವನು, 'I see you, where you are what I am—ನಾನು ನೀನಿರುವಲ್ಲಿ ಏನಾಗಿರುವೆನೆಂಬುದರ ಮೂಲಕ ನಿನ್ನನ್ನು ನೋಡುತ್ತೇನೆ' ಎನ್ನುವನಂತೆ—ವಿಶ್ವದ (ತನ್ನ ಸುತ್ತುಮುತ್ತಲಿನ ಪ್ರಪಂಚದ) ಹತ್ತಿರ."

" ಇದೇನು ಮಹಾ? ಎಲ್ಲರೂ ಹೊಂದಿಕೆಯಿಂದಲೇ ಬದುಕಿದ್ದಾರೆ. ಬದುಕೇ ಒಂದು ಹೊಂದಿಕೆ. ಸಮರಸವೇ ಜೀವನ. ಅಂದಮೇಲೆ ಜೀವನವೇ ಒಂದು ಕಲೆ. ಕವಿ ಮತ್ತೇಕೆ ಕಲೆ ಮಾಡಲು ಹೋಗಬೇಕು?"

"ಕಲೆಗಾರನು ಕೇವಲ ಹೊಂದಿಕೆಯನ್ನು ಎತ್ತಿತೋರಿಸುವುದನ್ನು ಗುರಿಯಾಗಿ ಇಟ್ಟುಕೊಳ್ಳುವುದಿಲ್ಲ. ಆ ಮೂಲಕ ವ್ಯಕ್ತ ಪದಾರ್ಥದ ವ್ಯಕ್ತಿತ್ವದ ವ್ಯಕ್ತಿವೈಶಿಷ್ಟ್ಯವನ್ನು (Individuality) ತನ್ನ ಕೃತಿಯಲ್ಲಿ ಧ್ವನಿಸುತ್ತಾನೆ. ವಿಜ್ಞಾನಿಯು ವಸ್ತುಗಳ Impersonal **ವ್ಯಕ್ತೀತರವಾದ** ಏಕೀಕರಣದ ತತ್ವವನ್ನು ಕಂಡುಹಿಡಿದರೆ ಕಲೆಗಾರನು ಅಂಥ **ವೈಯಕ್ತಿಕ** ತತ್ವವನ್ನು ಕಾಣುತ್ತಾನೆ. ಕಲೆಗಾರನು ನಿರ್ಮಿಸುವ ಕಲಾವಸ್ತುವು ಅನನ್ಯವಾದರೂ ವೈಯಕ್ತಿಕವಾದರೂ ವಿಶ್ವದ ಹೃದಯವೆನ್ನಿಸಿರುತ್ತದೆ."

"ಈ ಜಗತ್ತಿನಲ್ಲಿ ಯಾವುದು ವಿಶ್ವದ ಹೃದಯವಲ್ಲ ಅಂತೀರಿ?"

"ಹಾಗಲ್ಲವೇ; ಯಾವುದೂ ಅದರ ಹೃದಯವಾಗಬಹುದಾದರೂ ಕಲೆಗಾರ ಎತ್ತಿತೋರಿಸುವವರೆಗೆ ಇತರರಿಗದು ಅಂಥ ಹೃದಯಸ್ಥಾನವಾಗಿದೆ ಎಂಬ ಅರಿವು ಉಂಟಾಗುವುದಿಲ್ಲ—ಅಷ್ಟೆ."

"ಅಂದರೆ ಕಲೆಗಾರನೊಬ್ಬ ಗುರುದೇವ ಅನ್ನಿ."

"ಖಂಡಿತವಾಗಿಯೂ. ಜಗತ್ತಿನ ಬಗ್ಗೆ ಮನುಷ್ಯನಿಗೆ ಹೆಚ್ಚು ಹೆಚ್ಚು ಅರಿವು ಉಂಟಾಗುತ್ತ ಹೋದ ಹಾಗೆ ಕಲೆಯು ತನ್ನ ರಸವಾಣಿಯಿಂದ ಆ ಅರಿವನ್ನು ಸಂಕೇತಿಸಿ ಹೇಳುತ್ತಹೋಗುತ್ತದೆ. ನಿಸರ್ಗದ ಮೌನಮುದ್ರಿಕೆಯನ್ನು ಈಜಿಪ್ತಿನ ಪಿರಮಿಡ್ಡುಗಳು ಸಂಕೇತಿಸಿವೆ; ಮಾನವನ ಮೌನವೂ ನಿಸರ್ಗದ ಮೌನವೂ ಅಲ್ಲಿ ಕೂಡಿವೆ. ಹಾಗೇ ಮಾನವನ ಆತ್ಮದ ಪ್ರಶಾಂತಿಯು ಗುಹೆಗಳ ಕಾರ್ಗತ್ತಲಲ್ಲಿ ಸಂಧಿಸಿದೆ. ಅದರ ಪ್ರತೀಕವಾಗಿ, ಆ ಶಾಂತಿವಿನಿಮಯದ ಗುರುತಾಗಿ ಅವುಗಳ ಗೋಡೆಗಳಲ್ಲಿ ಕಲಾರೂಪಗಳು ಮೂಡಿವೆ. ಶಾಲೆಗಳಲ್ಲೂ ದೇವಾಲಯಗಳಲ್ಲೂ ಗಂಟೆಗಳು ಸದ್ದುಮಾಡುವುದು ಅಪ್ರಮೇಯ ಪರಮಾತ್ಮನು ನಮ್ಮ ಪಾಲಿಗೆ ಖಾಲಿಯಲ್ಲ ಎಂಬುದನ್ನು ಸೂಚಿಸುತ್ತದೆ. ಜೈಲಿನಲ್ಲಿ ಕೂಡ ಕಲಾಸ್ಪರ್ಶವಿದೆ. ಆ ಮೂಲಕ ಅದು ಜೀವನಕ್ಕೆ ತೀರ ವಿಸಂಗತವಲ್ಲ ಎಂಬುದು ಗೊತ್ತಾಗುತ್ತದೆ. ಏಕೆಂದರೆ ರವೀಂದ್ರ ಹೇಳಿರುವಂತೆ ತನಗೆ ವಿಶ್ವದಲ್ಲಿ ನಿಜವಾಗಿ ಸಂಬಂಧಿಸಿದ ಪ್ರತಿಯೊಂದನ್ನೂ ಮಾನವ್ಯಸ್ವರೂಪಕ್ಕೆ ಮಾರ್ಪಡಿಸುವುದು ಮಾನವ ವ್ಯಕ್ತಿತ್ವದ ನಿತ್ಯಪ್ರಯತ್ನವಾಗಿರುತ್ತದೆ. ಮಾನವರ ಕಲೆಗಾರಿಕೆಯು ವನಸ್ಪತಿಗಳು ಹಬ್ಬುತ್ತಹೋದಹಾಗೆ. ಮರುಭೂಮಿಯ ಎಷ್ಟು ಭಾಗವನ್ನು ಮಾನವನು ಆಕ್ರಮಿಸಿದ್ದಾನೆ ಎಂಬುದನ್ನು ಆ ಹಸಿರು ತೋರಿಸುವುದಿಲ್ಲವೆ?"

“ ನಿಜವಾಗಿಯೂ.”

“ ಹೃದಯಗಳ ಸಂಬಂಧದಲ್ಲಿ ಅತಿಶಯವಿದ್ದಾಗಲೇ ಕಲೆ ಹುಟ್ಟುತ್ತದೆ. ಮನುಷ್ಯನ ವ್ಯಕ್ತಿತ್ವವು ತನ್ನ ವಿಭೂತಿಯ ಇರವನ್ನು ಅನುಭವಿಸಿದಾಗ ಅದು ಅದನ್ನು ಪ್ರದರ್ಶಿಸಲಾರಂಭಿಸುತ್ತದೆ. ನಾವು ಅನುಭವಿಸಿ ನುಂಗುವ ಸಂಪತ್ತು ಖರ್ಚಾಗಿ ಹೋಗುತ್ತದೆ. ನಮ್ಮನ್ನು ತುಂಬಿ ಹೊರಗೆ ಹರಿಯುವ ಸಂಪತ್ತು ನಮ್ಮ ವ್ಯಕ್ತಿತ್ತ್ವಕ್ಕೆ ವಾಚಕವಾಗುತ್ತದೆ. ಶುದ್ಧವಾದ ಪ್ರಯೋಜನದ ಅವಧಿಯು ಕಾವಿನಂತೆ; ಅದರ ಮುಂದಿನ ಅವಸ್ಥೆ ಬೆಳಕುದೋರುವುದು! ಮೊದಲಿನದು ನಮ್ಮ ವ್ಯಕ್ತಿತ್ವದ ಪ್ರಮಿತ ಭಾಗ; ಎರಡನೆಯದು ಅಪ್ರಮೇಯ (Infinite) ಭಾಗ. ಅಪ್ರಮೇಯಾಂಶವು ಸಂಕೇತಗಳ ಮೂಲಕ ಅಮರ ಆಗುತ್ತದೆ. ಅದು ಸ್ವಾಭಾವಿಕವಾಗಿ ಪೂರ್ಣತೆಯನ್ನು ಸಾಧಿಸಲು ಹೊರಡುತ್ತದೆ. ತನ್ನ ಕಟ್ಟಡದಲ್ಲದು ದುರ್ಬಲ, ವಿಸಂಗತ, ಕ್ಷುದ್ರ ಅಂಶಗಳನ್ನು ತೆಗೆದುಕೊಳ್ಳದೆ ದೂರ ಎಸೆದು, ಆ ಸ್ವರ್ಗಭವನವನ್ನು ರಚಿಸಿಕೊಳ್ಳುತ್ತದೆ. ಅಂಥ ರಚನೆಯಲ್ಲಿ ಭೂಮಿಸಹಜವಾದ ನಶ್ವರ ವಸ್ತುವೊಂದೂ ಇರುವುದಿಲ್ಲ.”

“ ಕಲಾಕೃತಿಗಳೆಲ್ಲವೂ ಅಜರಾಮರವೇ ? ”

“ ಎಂದೂ ಅಲ್ಲ. ವಿಚಾರಪ್ರಪಂಚದಲ್ಲಿರುವುದು ಯಾವಾಗಲೂ ಪರಿಪೂರ್ಣವಾದ ಕಲಾಕೃತಿ. ಅದೆಂದಿಗೂ ಅಜರಾಮರ—ಕೊನೆಗೆ ವಿಶ್ವವಿದ್ದಷ್ಟು ಕಾಲ ಒಂದಲ್ಲ ಒಂದು ರೂಪದಲ್ಲಿ ಉಳಿದೀತು—ಮಾನವಕುಲದೆದೆಯಲ್ಲಿ.”

“ ಮಾನವಕುಲವಾದರೂ ಅಜರಾಮರವೆಂಬುದಕ್ಕೆಲ್ಲಿದೆ ಗ್ಯಾರಂಟಿ ? ”

“ ಅಜರಾಮರತ್ವವು ಯಾವಾಗಲೂ ಇದೆ. ಎಲ್ಲರಿಗೂ ಯಾವಾಗಲೂ ಅದರ ಅರಿವಿರುವುದಿಲ್ಲ. ‘ Whenever they (men) fully realise themselves they feel their immortality—ತಮ್ಮನ್ನು ತಾವು ಸಂಪೂರ್ಣವಾಗಿ ಸಾಕ್ಷಾತ್ಕರಿಸಿಕೊಂಡಾಗ ಮನುಜರಿಗೆ ತಮ್ಮ ಅಮರತ್ವದ ಅನುಭವ ಉಂಟಾಗುತ್ತದೆ ’ ಎಂದಿದ್ದಾನೆ ರವೀಂದ್ರ. ಅದರ ಅನುಭವವಾಗುತ್ತಹೋದ ಹಾಗೆ ಮಾನವರು ತಮ್ಮ ಅಮರತೆಯ ಸಾಮ್ರಾಜ್ಯವನ್ನು ತಮ್ಮ ಜೀವನದ ಎಲ್ಲ ಪ್ರದೇಶಗಳಿಗೂ ಹಬ್ಬಿಸುತ್ತ ಹೋಗುತ್ತಾರೆ. ಅಪ್ರಮಿತ ಶಕ್ತಿಯ ಅನುಭವ ಎಲ್ಲೆಲ್ಲಿ ಆಗುವುದೋ ಎಲ್ಲೆಲ್ಲಿ ಮಾನವನು ದಿವ್ಯನೋ ಅಲ್ಲೆಲ್ಲಾ ಅವನಲ್ಲಿಯ ದಿವ್ಯಶಕ್ತಿಯೇ ನಿರ್ಮಾಪಕತ್ವವನ್ನು ವಹಿಸುತ್ತದೆ. ಆದುದರಿಂದ

ಸತ್ಯದ ಸಾಕ್ಷಾತ್ಕಾರವಾದೊಡನೆಯೇ ಅವನು ಸೌಂದರ್ಯದ ಸಾಮಗ್ರಿಗಳ ಮೂಲಕ ಹೊಸ ರಚನೆಯನ್ನು ಮಾಡುತ್ತಾನೆ. ಹೀಗೆ ತನ್ನ ಸತ್ಯ-ಸೌಂದರ್ಯಗಳ ಸಜೀವ ಪ್ರಪಂಚವನ್ನು ಕಟ್ಟಿಕೊಳ್ಳಲು ಮನುಷ್ಯನು ಪ್ರಯತ್ನಿಸುವುದೇ ಕಲೆ."

"ತೀರ Abstract ಅಮೂರ್ತವಾಯಿತು ವಿಚಾರ!"

"ವಿಚಾರ ಯಾವಾಗಲೂ ಅಮೂರ್ತ; ಅದು ಶಾಸ್ತ್ರಸ್ಥ, ವಿವೇಚನಾತ್ಮಕ—ಎಂದು ರವೀಂದ್ರ ಎಂದೋ ಹೇಳಿಬಿಟ್ಟಿದ್ದುಂಟು. ಅಂದಮೇಲೆ ವಿಮರ್ಶೆಗೆ ಕುಳಿತಾಗ ವಿಚಾರ ಬರುವುದೂ ಅದು ಹೆಚ್ಚು ಹೆಚ್ಚು ಅಮೂರ್ತವಾಗುತ್ತ ಹೋಗುವುದೂ ಸಹಜ. ರವೀಂದ್ರನೊಬ್ಬ ಮಾರ್ಮಿಕ ವಿಮರ್ಶಕನೆನ್ನುವುದಕ್ಕೆ ಇದು ಒಂದು ಪ್ರಮಾಣ."

"ಆಯಿತು; ಮನುಷ್ಯ ಕಲಾಸೌಧದಲ್ಲಿ ಕುಳಿತು ಜೀವನವನ್ನೇ ಸದಾ ಮರೆತಿರಲು ಸಾಧ್ಯವೇ?"

"ಸಾಧ್ಯ ಯಾರಿಗಾಗುವುದೋ ಅವರು ಋಷಿಗಳು, ಆದರ್ಶ ಮಾನವರು. ಸಾಧ್ಯವಾಗದವರು ನರನಾಡಿಗಳ ಒತ್ತಾಯಕ್ಕೊಳಪಟ್ಟು ನಡೆಮುಕೊಳ್ಳುವ ನರಮನುಷ್ಯರು—ಅಷ್ಟೆ."

"ಕಲೆಯಿಂದ ಆನಂದವಾಗುವುದೆಂದರೇನು?"

"ಶಾಸ್ತ್ರದ ಮತ್ತು ಲೋಕದ ವಿಷಯ, ಅದರ ವಿಚಾರ ಮತ್ತು ಸಂಬಂಧ ಗಳನ್ನು **ವೈಯುಕ್ತಿಕ** ಜೀವಿಗಳಿಗೆ ಅನ್ವಯಿಸಿ ಅದರ ಪರಿಣಾಮುಗಳನ್ನು ಸಂಪೂರ್ಣವಾಗಿ ಕಣ್ಣಿಗೆ ಕಟ್ಟಿದಂತೆ ಚಿತ್ರಿಸುವ ಕಲಾಕೃತಿಯ ಅವಲೋಕನದ ಆನಂದದಲ್ಲಿ ಸತ್ಯದ ಸಾಕ್ಷಾತ್ಕಾರವೂ ಅಡಗಿದೆ. ಅಂಥ ಸತ್ಯಜ್ಞಾನದ ಪರಿಣಾಮ ಆನಂದವಲ್ಲದೆ ಬರಿಯ ಸಂತೋಷವಲ್ಲ. ವ್ಯಕ್ತಿಯ ಮನದ ಮೇಲೆ ವಿಷಯ ಗಳು (Facts) ಉಂಟುಮಾಡುವ ಪರಿಣಾಮುಗಳು ಕಲಾದೃಷ್ಟಿಯಿಂದ ಮೌಲ್ಯವುಳ್ಳವುಗಳಲ್ಲದೆ ಕೇವಲ ವಿಷಯಗಳಿಗೆ ಕಲೆಯಲ್ಲಿ ಯಾವ ಬೆಲೆಯೂ ಇಲ್ಲ. ಮತಧರ್ಮ, ಸಮಾಜ, ರಾಜ್ಯ, ರಾಷ್ಟ್ರ, ವಾಣಿಜ್ಯ, ರಾಜಧರ್ಮ, ಯುದ್ಧ ಮುಂತಾದ ಸಾಮಾನ್ಯವಾಚಕಗಳು ವ್ಯಕ್ತಿಜೀವನವನ್ನು ನಮ್ಮಿಂದ ಮರೆಯಿಸಿ ಬಿಡುತ್ತವೆ. ಈ ಅಮೂರ್ತ ಕಲ್ಪನೆಗಳ ದಬ್ಬಾಳಿಕೆಯಿಂದ ಎಷ್ಟೋ ಸಲ ಪುಸ್ತಕದ ಹಾಳೆಗಳ ನಡುವೆ ಸಿಕ್ಕಿದ ಹೂವಿನಂತೆ ವ್ಯಕ್ತಿಜೀವನ ಚಟ್ನಿಯಾಗಿ ಹೋಗುತ್ತದೆ. ಈ ಸಂದರ್ಭಗಳಲ್ಲಿ ಪುರುಷೋತ್ತಮನಿಗೆ

(Supreme Person) ಹಿಂಸೆಯಾಗುತ್ತದೆ. ಆದುದರಿಂದ ಜೀವನವಾದರೂ ಕಲೆಯಂತೆಯೇ ವ್ಯಕ್ತಿಗಳ ಸುಖ–ದುಃಖಗಳ ವೈಯಕ್ತಿಕ (Personal) ಮುಖದತ್ತ ಲಕ್ಷ್ಯಹಾಕುವುದು ನ್ಯಾಯ. ವ್ಯಕ್ತಿಯ ವ್ಯಕ್ತಿತ್ವ ಮತ್ತು ಪರಮಾತ್ಮನ ವ್ಯಕ್ತಿತ್ವಗಳೆರಡೂ ಸಾರತಃ ಒಂದೇ. ಶರೀರ ಪರಿಮಿತ, ವ್ಯಕ್ತಿತ್ವ ಅಪರಿಮಿತ; ಜಗತ್ತು ಪರಿಮಿತ, ಪರಮಾತ್ಮ ಅಪ್ರಮೇಯ!"

"ಕಲಾವಿಮರ್ಶೆಯಲ್ಲೂ ವೇದಾಂತ ಕೇಸರಿಭಾತು!"

"ಅಲ್ಲವೇ—ನಮ್ಮ ಕವಿಗೆ ವೇದಾಂತವೇ ಜೀವನದ ಮತ್ತು ಕಲೆಯ ಅನ್ನ. ಆದರಿಂದ ಅವನ ಪ್ರಕಾರ 'ಕಲೆಯಲ್ಲಿ ಜೀವಾತ್ಮನು ಪರಮಾತ್ಮನಿಗೆ ಉತ್ತರಗಳನ್ನು ಕಳಿಸುತ್ತಾನೆ; ಪುರುಷೋತ್ತಮನಾದ ಪರಮಾತ್ಮನು ಈ ಚಿಕ್ಕ ಪುರುಷನಿಗೆ ವಿಷಯಗಳ, ಬೆಳಕಿಲ್ಲದ ಪ್ರಪಂಚದ ಮೇಲೆ ಅನಂತ ಸೌಂದರ್ಯ ಪ್ರಪಂಚದಲ್ಲಿ ತನ್ನನ್ನು ತೋರಿಸುತ್ತಾನೆ!'"

"ರವೀಂದ್ರನ ವಿಚಾರವೆಲ್ಲ ಆತ್ಮನಿಷ್ಠ, ಪರಮಾತ್ಮನಿಷ್ಠ ಎಂಬುದೀಗ ಸ್ಪಷ್ಟ. ಜೀವನವಷ್ಟೇ ಅಲ್ಲ, ಕಲೆಯಲ್ಲೂ ಬಹುಶಃ ವಿಜ್ಞಾನದಲ್ಲೂ ಅವನ ವಿಮರ್ಶೆ ಹೀಗೇ ಹರಿದಿದೆ ಎಂದು ತೋರುತ್ತದೆ."

"ಸರಿಯಾದ ಮಾತು. ನಮ್ಮ ದೈನಂದಿನ ಜೀವನವನ್ನು ಕುರಿತು ರವೀಂದ್ರನು 'Woman–ಸ್ತ್ರೀ' ಎಂಬ ಪ್ರಬಂಧದಲ್ಲಿ, 'ಅದೊಂದು ಕೊಳಲು; ಅದರ ನಿಜವಾದ ಬೆಲೆ ಅದರಲ್ಲಿಲ್ಲ. ಆದರೆ ಶಕ್ತರೂ ಏಕಾಗ್ರತೆಯುಳ್ಳವರೂ ಅದರ ಶೂನ್ಯಾಂತರಾಳದಲ್ಲೇ ಅಪ್ರಮೇಯನು ಊದಿ ನುಡಿಸುವ ಸಂಗೀತವನ್ನು ಕೇಳಬಲ್ಲರು' ಎಂದಿದ್ದಾನೆ. ರವೀಂದ್ರನ ದೃಷ್ಟಿಯ ಧೋರಣೆ–ದಿಶೆಗಳು ಹೀಗೆ ಅಪೂರ್ಣದಿಂದ ಪೂರ್ಣತೆಯ ಹೆಸರಾದ ಪರಮಾತ್ಮನನ್ನು ಸೇರುವ ವಿಚಾರವನ್ನೇ ಆಧರಿಸಿವೆ. ಇತ್ತೀಚೆಗೆ ವಿಜ್ಞಾನದ ಸಹಾಯದಿಂದ ನಾಗರಿಕತೆಯು ಹೆಚ್ಚುಹೆಚ್ಚಾಗಿ ಗಂಡಸುತನದ್ದಾಗುತ್ತ ಬಂದುದರಿಂದ ವ್ಯಕ್ತಿಜೀವನದ ಬೆಲೆ ಕಡೆಗಣಿಸಲ್ಪಟ್ಟದೆಯೆಂದೂ ಗಂಡಸಿನ ಪ್ರಪಂಚದ ಅಧಿಕಾರ ಶಕ್ತಿಯಲ್ಲಿ ಮತ್ತು ಅಮೂರ್ತ ಸಂಘಟನೆಗಳಲ್ಲಿ ತನಗೆ ಸ್ಥಾನ ಬೇಕೆಂದು ಹೆಂಗಸು ಕಿರುಚುವಂತೆ ಮಾಡಲಾಗಿದೆಯೆಂದೂ ರವೀಂದ್ರನು ಸಾರಿಕೊಂಡಿದ್ದಾನೆ. ಯಾವ ಕೃತಕ ಸಂಘಟನೆಯೂ ವ್ಯಕ್ತಿಜೀವನದಷ್ಟು ಮೂರ್ತಸ್ವರೂಪವಲ್ಲ ಎಂದು ಅವನ ಮತವಾಗಿದೆ. ವೈಯಕ್ತಿಕ ಪ್ರೇಮಸಂಬಂಧಗಳಲ್ಲಿ ಆಸಕ್ತಿ,

ಅಭಿರುಚಿ ಮತ್ತು ಅವುಗಳ ರಕ್ಷಣಾಶಕ್ತಿ ಹೆಂಗಸಿನ ಪ್ರಪಂಚದ ನೈಸರ್ಗಿಕಾಂಶಗಳೆಂದಿದ್ದಾನವ. ಅವನ ಪ್ರಕಾರ ಆಧುನಿಕ ನಾಗರಿಕತೆಯಲ್ಲಿ ಗೃಹಜೀವನ ನಷ್ಟವಾಗುತ್ತ ನಡೆದಿದೆ; ಮನೆಗಳೆಲ್ಲ ಆಫೀಸುಗಳಾಗುತ್ತಿವೆ: ಅಂದರೆ ಹೆಂಗಸಿಗೆ ಒಪ್ಪದ ಸ್ಥಳಗಳಾಗಿ ಮಾರ್ಪಡುತ್ತಿವೆ. ಇದು ಹೆಂಗಸನ್ನು ನೋಯಿಸಿದಂತೆ, ಅವಮಾನ ಮಾಡಿದಂತೆ!"

"ಅದು ಹೇಗೆ?"

"ಕಾಯಿದೆ, ಸಂತೆಪೇಟೆಗಳಲ್ಲಿ ಬೆಲೆ ಕಟ್ಟುವ ಲೆಕ್ಕಾಚಾರದ ಕ್ರಮ, ಯುದ್ಧ, ಅಧಿಕಾರದಾಹ, ಅಧಿಕಾರ-ಸಂಪತ್ತುಗಳಿಗಾಗಿ ಮಾಡುವ ರಾಜಕೀಯ ಸೈನಿಕ ಸಂಘಟನೆ ಮುಂತಾದವು ಗಂಡಸಿನ ಪ್ರಪಂಚಕ್ಕೆ ಗಣ್ಯವಾಗಿ ಸೇರತಕ್ಕವೆಂದೂ ಅವುಗಳಿಂದ ಲಾಭಗಳಿಗಿಂತ ಹಾನಿಗಳು ಹೆಚ್ಚಾದಾಗ ಹೆಂಗಸಿನ ಪ್ರಪಂಚದ ಪ್ರೇಮ, ವ್ಯಕ್ತಿತ್ವದ ಬೆಲೆ, ಶಾಂತಿ, ಸಹನೆ, ಔದಾರ್ಯ ಮುಂತಾದವು ಮಿತಿಮೀರಿದ ನಾಗರಿಕತೆಯನ್ನು ಹಿಂದಕ್ಕೆ ತರಬೇಕಾದುದು ಕರ್ತವ್ಯ ಎಂದೂ ರವೀಂದ್ರನ ಅಭಿಪ್ರಾಯ."

"ಈ ಗಂಡಸುತನ, ಹೆಂಗಸುತನಗಳು ಎಲ್ಲಿವೆ?"

"ಇವು ವಿಚಾರಪ್ರಪಂಚದಲ್ಲಿ ಆದರ್ಶ ಮಾನದಂಡವುಳ್ಳವು. ಪೂರ್ಣವಲ್ಲದ ಕಲ್ಪನೆಗಳನ್ನಿಟ್ಟುಕೊಂಡು ವಿಚಾರ ಮಾಡಲು ಯಾರಿಗೂ ಸಾಧ್ಯವಾಗದು. ವಾಸ್ತವಿಕ ಜೀವನದಲ್ಲಿ ಯಾವುದೂ ಪೂರ್ಣ ಒಂದೇ ತೆರನಾದುದಲ್ಲ; ಎಲ್ಲವೂ ಸಂಮಿಶ್ರ, ಸಾಪೇಕ್ಷ ಎಂಬ ಎಚ್ಚರವನ್ನಿಟ್ಟುಕೊಂಡೂ ಮತ್ತು ಇಟ್ಟುಕೊಂಡೇ ವಿಚಾರ ಮಾಡಬೇಕು — ಹಾಗೆ ಮಾಡುವಾಗ ಹೆಂಗಸೆಂದರೆ ಮೂಲಭೂತ ಪ್ರಕೃತಿಯ ಆದರ್ಶ (An ideal type), ಗಂಡಸೆಂದರೂ ಗಂಡಸುತನದ ಮೂಲಭೂತ ನಿಸರ್ಗದ ಅತ್ಯುನ್ನತ ಮಾದರಿ! ಭಗವದ್ಗೀತೆಯಲ್ಲಿ ಕೂಡ ಸ್ತ್ರೀಯ ಗುಣಗಳನ್ನು ದಿವ್ಯಮಟ್ಟದಲ್ಲಿ 'ಕೀರ್ತಿ, ಶ್ರೀ, ವಾಕ್, ಸ್ಮೃತಿ, ಮೇಧೆ, ಧೃತಿ, ಕ್ಷಮೆ' ಎಂದು ಹೇಳಲಾಗಿದೆ. ಈ ಗುಣಗಳನ್ನು ಬೆಳೆಸಿಕೊಂಡರೆ ಗಂಡಸಿಗಿಂತ ಹೆಚ್ಚು ಸುಲಭವಾಗಿ ವ್ಯಕ್ತಿತ್ವದ ಪೂರ್ಣತೆಯನ್ನು ಹೆಣ್ಣು ಮುಟ್ಟಬಲ್ಲಳು. ಇವುಗಳನ್ನು ಗಂಡು ಬೆಳೆಸಿಕೊಳ್ಳುವುದು ಅಗತ್ಯವಾದರೂ ಆ ಬಗ್ಗೆ ಹೆಣ್ಣಿಗಿಂತ ಹೆಚ್ಚು ಶ್ರಮವಹಿಸಬೇಕಾದೀತು— ಎಂದಿಷ್ಟೇ ಇಲ್ಲಿಯ ತಾತ್ಪರ್ಯ. ಸ್ತ್ರೀಪುರುಷರಿಬ್ಬರ ಆದರ್ಶಪೂರ್ಣತೆಯನ್ನು

ಸಾತ್ವಿಕ ಅಥವಾ ದೈವಿಕ ಸಂಪತ್ತನ್ನು ವರ್ಣಿಸುವ ಗೀತೆ ಆಗಲೇ ಹೇಳಿಬಿಟ್ಟಿದೆ. ಆ ಸಂಪತ್ತು ಉಭಯ ಸಾಧಾರಣವಾದ ಸಂಸ್ಕಾರ. ಆದರೆ ನಿಸರ್ಗದಲ್ಲಿ ಇದ್ದಕ್ಕಿದ್ದಂತೆ ನೋಡುವ ನೋಟಕ್ಕೆ ಸ್ತ್ರೀ – ಪುರುಷರ ಗುಣಗ್ರಾಮಗಳಲ್ಲಿ ವ್ಯತ್ಯಾಸ ಕಾಣುತ್ತದೆ."

"ಬಹಳ ಆಳವಾದ ವಿಚಾರಗಳನ್ನು ಮಾಡಿದ ರವೀಂದ್ರನು ಕೇವಲ ಕವಿಯೆಂಬುದು ಸುಳ್ಳು !"

"ಅವನೊಮ್ಮೆ ಕೇವಲ ಕವಿಯೂ ಹೌದು, ಒಮ್ಮೆ ಮಹಾಕವಿಯೂ ಹೌದು, ಮಗುದೊಮ್ಮೆ ಋಷಿಯೂ ಹೌದು !"

"ಒಮ್ಮೆ ಇನ್ನೊಮ್ಮೆ ಅಂತ ನೀವು ಹೇಗೆ ಪಾಲುಮಾಡುತ್ತೀರಿ ?"

"ಮನುಷ್ಯನ ಜೀವ ಬೆಳೆಯುವ ಸ್ವಭಾವವುಳ್ಳದ್ದು. ಅಲ್ಲದೆ, ಅದು ಅನೇಕ ಮುಖವಾದ ವಿಕಾಸವುಳ್ಳದ್ದು. ಆದುದರಿಂದ ಶರೀರಿಗಳೆಲ್ಲರೂ ಸಾಮಾನ್ಯವಾಗಿ ವಿವಿಧ ಕಾಲದಲ್ಲಿ ವಿವಿಧ ಮಟ್ಟದ ಆತ್ಮಶಕ್ತಿಯನ್ನು ವಿವಿಧ ಮುಖಗಳಿಂದ ಪ್ರಕಟಪಡಿಸುತ್ತಾರೆ. ವ್ಯಕ್ತಿತ್ವದ ವಿವಿಧ ಮುಖಗಳೆಂದು ಆ ವಿವಿಧ ಆವಿರ್ಭಾವಗಳನ್ನು ಕರೆಯುವುದು ಇಂದಿನ ರೂಢಿ. ಈ ದೃಷ್ಟಿಯಿಂದ ರವೀಂದ್ರನು ಬಹುಮುಖ ವ್ಯಕ್ತಿತ್ವವುಳ್ಳವನು, ಬಹುಮುಖದ ಪ್ರತಿಭೆಯುಳ್ಳವನು ಎಂದು ಹೇಳಬಹುದು. ಆತನ ಪ್ರತಿಭೆಯ ಕಣ್ಣಿಗೆ ಇಂದಿನ ಜಗತ್ತಿನ ನಾಗರಿಕತೆಯಲ್ಲಿ ಎದ್ದು ಕಾಣಿಸಿದ್ದು Organised power of greed—ಸಂಘಟಿತವಾದ ಲೋಭಶಕ್ತಿ. ಈ ಲೋಭಮಯ ಜೀವನ ಅಸಹ್ಯ. ಇದರ ಬದಲು Spiritual Civilisation—ಆಧ್ಯಾತ್ಮಿಕ ನಾಗರಿಕತೆ ಬೆಳೆದು ನಿಲ್ಲಬೇಕು. ರವೀಂದ್ರನ ಆಧ್ಯಾತ್ಮಿಕತೆಯ ಗಣ್ಯಾಂಶವನ್ನು ಇಂದಿನ ಮಾತಿನಲ್ಲಿ ಒಂದು ಬಗೆಯ Humanism—ಮಾನವತಾವಾದವೆಂದು ಕರೆಯಬಹುದು. ಈ ಮಾನವತಾವಾದವನ್ನೇ ಗಾಂಧಿಯವರು **ಸರ್ವೋದಯ**ವೆಂದು ಕರೆದರು."

"ಏನು ಸರ್ವೋದಯವೆಂದರೆ ?"

"ಮಾರ್ಕ್ಸ್ ವಾದದ ವ್ಯಾವಹಾರಿಕ ಅನ್ವಯ ನೀತಿಯನ್ನು ಬಿಟ್ಟರೆ ಉಳಿಯುವ ಮೂಲಭೂತ ತತ್ವವಾದ ಸರ್ವಪ್ರಜೆಗಳೂ ಸಮಾನ ಅವಕಾಶ ಪಡೆದು ತಮ್ಮ ಶಕ್ತಿಗೆ ತಕ್ಕಂತೆ ಸಮಾಜಕ್ಕಾಗಿ, ಹತ್ತು ಸಮಸ್ತರಿಗಾಗಿ ದುಡಿದು, ತಮ್ಮ ಆವಶ್ಯಕತೆಗಳಿಗೆ ತಕ್ಕಷ್ಟನ್ನು ಪಡೆಯುವ ಜೀವನವ್ಯವಸ್ಥೆ

ಯನ್ನು ಪ್ರೇಮಮಾರ್ಗದಿಂದ ಸಾಧಿಸುವುದೆಂದು ಸ್ಥೂಲವಾಗಿ ಹೇಳಬಹುದು. ಮಾರ್ಕ್ಸ್ ವಾದದಲ್ಲಿ ಬಹುಸಂಖ್ಯರ ಹೆಚ್ಚಿನ ಸುಖವು ಧ್ಯೇಯವಾದರೆ, ಸರ್ವೋದಯದಲ್ಲಿ ನೂರಕ್ಕೆ ನೂರು ಜನರಿಗೆ ಸಮಾನ ಸುಖ-ಸಂಪನ್ನತೆಗಳು ದೊರಕುವುದು ಗುರಿ. ಅದರಲ್ಲಿ ಕೇವಲ ಭೌತಿಕ ಸಂಪತ್ತನ್ನು ಸುಖಸಾಧನ ಎಂದು ತಿಳಿದಿದ್ದರೆ, ಇದರಲ್ಲಿ ನೈತಿಕ-ಆಧ್ಯಾತ್ಮಿಕ ವರ್ತನೆಗಳೂ ಗಣ್ಯ ಎಂಬ ಭಾವವಿದೆ. ಆದರೆ 'ದಯಾ ಸರ್ವಭೂತೇಷು' ಎಂಬುದು ಈ ಎರಡು ತತ್ವಪ್ರಸ್ಥಾನಗಳ ಮೂಲದರ್ಶನಗಳಲ್ಲಿ ಬೀಜಸ್ಥಾನವನ್ನು ಆಕ್ರಮಿಸಿದೆ. ಸರ್ವೋದಯದ ನೀತಿ ಈ ಬೀಜತತ್ವವನ್ನು ಹೆಚ್ಚು ಗಣ್ಯವಾಗಿ ಎತ್ತಿಕೊಂಡು ಮಂದಗತಿಯ ಪ್ರಗತಿಯನ್ನು ಸ್ಥಿರವಾಗಿ ಸಾಧಿಸಲು ಯತ್ನಿಸಿದರೆ, ಮಾರ್ಕ್ಸ್ ವಾದದ ಇಂದಿನ ವಿವಿಧರೂಪಗಳು ಕಾಯದೆ, ಸೈನ್ಯಬಲ ಮುಂತಾದವುಗಳಿಂದ ಶೀಘ್ರ ಪ್ರಗತಿಯನ್ನು ಸಾಧಿಸಲು ಯತ್ನಿಸುತ್ತಿವೆ ಎಂದು ಸ್ಥೂಲವಾಗಿ ಹೇಳಬಹುದು."

"ರವೀಂದ್ರನನ್ನು ಹಾಗಾದರೆ ಗಾಂಧಿಯವರನ್ನು ಕೆಲವರು ಕರೆದಂತೆ ಅವ್ಯಾವಹಾರಿಕ ಕನಸುಗಾರನೆನ್ನಲು ಅವಕಾಶವಿದೆ."

"ಅದು ಹೇಗೆ?"

"ಅಲ್ಲರೀ, ಪ್ರೇಮಮಾರ್ಗ ಹಿಡಿದ ಸಾಧುಸಂತರು ಸಾವಿರಾರು ಜನ ಭಾರತದಲ್ಲಿ ಆಗಿಹೋದರೂ ಸರ್ವೋದಯವಾಗಲಿಲ್ಲ. ಪಿತಿರಿಂ ಸೊರೋಕಿನ್ ಇತ್ತೀಚೆಗೆ ಭಾರತೀಯ ವಿದ್ಯಾಭವನದ ಮೂಲಕ ಪ್ರಕಟಿಸಿದ 'ಮಾನವಕುಲದ ಪುನಾರಚನೆ' ಎಂಬ ಪುಸ್ತಕದಲ್ಲಿ ಬರೆದಿರುವಂತೆ ಎಲ್ಲರೂ ಒಳ್ಳೆಯವರಾಗಿ ಎಲ್ಲರ ಒಳಿತಿಗಾಗಿ ದುಡಿದರೆ ಎಲ್ಲರಿಗೂ ಒಳಿತಾಗುವುದು' ಎಂಬಂತಹ ತಾತ್ಪರ್ಯ ಇಂಥ ಸದ್ಬೋಧಾಮೃತದಿಂದಾಗುವುದಲ್ಲದೆ 'ಬೆಕ್ಕಿನ ಕೊರಳಿಗೆ ಗಂಟೆ ಕಟ್ಟು ವವರಾರು?' ಎಂಬ ಪ್ರಶ್ನೆ ಎಲ್ಲ ಓದಿದಮೇಲೆ ಉಳಿದೇ ಉಳಿಯುತ್ತದೆ!"

"ಅಲ್ಲವೆ—ಬೆಕ್ಕಿನ ಕೊರಳಿಗೆ ಗಂಟೆ ಕಟ್ಟುವುದೊಂದೇ ಉಪಾಯವೆಂದು ಇಲಿಗಳ ಅತ್ಯುನ್ನತ ವಿಚಾರಕ್ಕೆನ್ನಿಸಿದರೆ, ಮತ್ತಾವ ಉಪಾಯವೂ ತೋರದೆ ಇದ್ದಾಗ ಆ ಕೆಲಸಕ್ಕೆ ಯಾವುದಾದರೊಂದು ಇಲಿ ಸೊಂಟ ಕಟ್ಟಲೇಬೇಕಲ್ಲವೆ? ಸರ್ವೋದಯದ ಮನಃಪ್ರಣಾಳಿಯನ್ನು ಬೆಳೆಸಲು ಗಾಂಧಿಯವರು ತೋರಿಸಿದ ಶಿಕ್ಷಣಪದ್ಧತಿಯನ್ನು ರಾಷ್ಟ್ರದಾದ್ಯಂತ ಕ್ರಮಬದ್ಧವಾಗಿ ದೂರದೃಷ್ಟಿಯುಳ್ಳ

ಪ್ರಯೋಜನನಿಷ್ಠೆಯ ನಿಜವಾದ ವೈಜ್ಞಾನಿಕ ಬುದ್ಧಿಯಿಂದ ಪ್ರೇರಿತರಾಗಿ ಪ್ರಾಮಾಣಿಕತೆಯಿಂದ ನಾವು ಅನುಸರಿಸಿದ್ದರೆ ಅದು ವ್ಯಾವಹಾರಿಕವಾಗಿಯೇ ಆಗುತ್ತಿತ್ತು. ಹಾಗೆಯೇ ವಿಶ್ವಭಾರತಿಯ ಮೂಲಭೂತ ಧ್ಯೇಯ ಮತ್ತು ಶಾಂತಿನಿಕೇತನದ ಶಿಕ್ಷಣಕ್ರಮಗಳನ್ನು ರವೀಂದ್ರ ನಡೆಸಿಕೊಂಡು ಹೋಗುತ್ತಿದ್ದ ರೀತಿಯಲ್ಲಿ ನಾವಿಂದು ನಮ್ಮ ವಿಶ್ವವಿದ್ಯಾನಿಲಯದ ಕಾಲೇಜುಗಳಲ್ಲಿ ನಡೆಸಿಕೊಂಡು ಹೋಗುತ್ತಿರುವೆವೇ? ನಡೆಸಿಕೊಂಡು ಹೋಗಿದ್ದರೆ ತಕ್ಕ ಕಾಲದಲ್ಲಿ ರವೀಂದ್ರನು ಕನಸು ಕಂಡ ಪ್ರೇಮಮಯ, ಪ್ರಗತಿಶೀಲ, ಶಾಂತಸಮಾಜವನ್ನು ಭಾರತ ಕಟ್ಟಲು ಶಕ್ತವಾಗುತ್ತಿತ್ತು."

"ಯಾಕೆ ನಾವು ಗುರುದೇವನ ಮಾರ್ಗವನ್ನು ಅನುಸರಿಸುತ್ತಿಲ್ಲ ?"

"ಗಾಂಧಿಯವರ ಮಾರ್ಗವನ್ನು ಏಕೆ ಬಿಟ್ಟುಕೊಟ್ಟೆವೋ ಅದಕ್ಕೆ. ಅಂದರೆ ಈ ಮಹನೀಯರ ಧ್ಯೇಯಗಳಿಗೂ ವ್ಯವಹಾರಕ್ರಮಗಳಿಗೂ ನಾವು ತುಟಿಸೇವೆಯನ್ನಷ್ಟೇ ಸಲ್ಲಿಸುತ್ತಿದ್ದೇವೆ. ನಮ್ಮಲ್ಲಿ ಸ್ಥಿರಬುದ್ಧಿಯಿಲ್ಲ. ಆ ಈ ನಾಯಕರ ಪ್ರತ್ಯಾಲೋಚನೆ, ಪ್ರತಿಕ್ರಮಗಳನ್ನು ಸಹಿಸಿಕೊಂಡು ಪ್ರವಾಹ ಪತಿತರಾಗಿ ಸಾಗುವ ನಿರ್ಲಜ್ಜತೆಗಿಳಿದಿದ್ದೇವೆ. ಅದನ್ನು ಆಧುನಿಕತೆ, ವೈಜ್ಞಾನಿಕತೆ, ಪ್ರಗತಿಪರತೆ ಎಂದು ಮುಂತಾಗಿ ಕರೆದುಕೊಳ್ಳುತ್ತೇವೆ. ರಾಷ್ಟ್ರಪಿತ-ರಾಷ್ಟ್ರಗುರುಗಳು ಹೇಳಿದ ಎಷ್ಟೋ ಕಾರ್ಯನೀತಿಗಳನ್ನು ಹೊಸತನದ ಹುಚ್ಚಿಗೆ ಬಲಿಯಾಗಿ ನಾವು ಬಿಟ್ಟುಕೊಟ್ಟದ್ದೇವೆ. ಅಲ್ಲಿ ಇಲ್ಲಿ ಅಶ್ರದ್ಧೆ —ಅರ್ಧ ಶ್ರದ್ಧೆಗಳಿಂದ ಅಂಶತಃ ಅವರ ಆದರ್ಶಗಳನ್ನು ಜಾರಿಗೆ ತರಲು ಯತ್ನಿಸಿದ್ದರಿಂದ ಆ ಕಾರ್ಯದಲ್ಲಿ ಸಾಕಷ್ಟು ಅಯಶಸ್ವಿಗಳಾಗಿದ್ದೇವೆ. ವಿಜ್ಞಾನವನ್ನು ಹೊಗಳುತ್ತಿದ್ದೇವಲ್ಲದೆ ಅದರ ಪ್ರಯೋಗಪರೀಕ್ಷೆಯ ದೃಷ್ಟಿಕೋನ ತಳೆದು ನಾವಿಂದು ಅನುಭವದಿಂದ ಪಾಠ ಕಲಿತು ತಿದ್ದಿಕೊಳ್ಳುತ್ತ ಹೋಗುವ ಪ್ರವೃತ್ತಿಯನ್ನು ಸಾಕಷ್ಟು ಚೆನ್ನಾಗಿ ಬೆಳೆಸಿಕೊಳ್ಳಲಿಲ್ಲ. ಕುರುಡರಂತೆ, ಅಲಸರಂತೆ ಹೇಗೆಹೇಗೋ ನಾಯಕತ್ವಕ್ಕೇರಿದವರ ಬೆಂಬತ್ತಿ ಸಾಗುತ್ತಿದ್ದೇವೆ. ಇದು ವಾಸ್ತವಿಕವಾಗಿ ದಾಸ್ಯ. ಇದರ ದುಷ್ಪರಿಣಾಮಗಳನ್ನು ಕಂಡರೂ ನಾವು ಕಾರ್ಯಕರವಾಗಿ ಎಚ್ಚತ್ತಿಲ್ಲ."

"ಹಾಗಾದರೆ ನಾಯಕತ್ವದ ಗುಣಗಳಾವುವು ?"

“ಅದನ್ನು ರವೀಂದ್ರನೇ ವಿಮರ್ಶಿಸಿ, ನಿರ್ಧರಿಸಿ, ಉದಾಹರಣ ಪೂರ್ವಕವಾಗಿ ಹೇಳಿದ್ದಾನೆ. ಅವನ ವಿದ್ಯಾಲಯದಲ್ಲಿ ಸತೀಶಚಂದ್ರರಾಯರೆಂಬ ಮಹನೀಯರಿದ್ದರಂತೆ. ಅವರು ಉದಾತ್ತಧ್ಯೇಯಗಳನ್ನು ಧ್ಯಾನಿಸುವ ಅಭ್ಯಾಸ ಉಳ್ಳವರು; ನಿಸರ್ಗದಲ್ಲೂ ಮಾನವಪ್ರಪಂಚದಲ್ಲೂ ಸುಂದರವೂ ಉನ್ನತವೂ ಆದ ಅಂಶಗಳಿದ್ದರೆ ಅವನ್ನಷ್ಟೇ ಗ್ರಹಿಸುವ ವಿವೇಕವುಳ್ಳವರು. ಉತ್ಸಾಹ ಪೂರ್ಣವಾಗಿ ಆನಂದಾವೇಶದಿಂದ, ಅನಿರ್ಬಂಧವೃತ್ತಿಯಿಂದ ಅವರು ವಿದ್ಯಾರ್ಥಿ ಗಳಿಗೆ ಪದ್ಯ ಓದಿ ಹೇಳುತ್ತಿದ್ದರು. ವಿದ್ಯಾರ್ಥಿಗಳಿಗೆ ತಾವು ಹೇಳಿದ್ದು ಅರ್ಥವಾಗುವುದಿಲ್ಲ ಎಂಬ ಅಪನಂಬಿಕೆ ಅವರಿಗಿರಲಿಲ್ಲ. ತಮಗೆ ಆಸಕ್ತಿಯಿದ್ದ ವಿಷಯಗಳೆಲ್ಲವನ್ನೂ ಅಡೆತಡೆಯಿಲ್ಲದೆ ವಿದ್ಯಾರ್ಥಿಗಳಿಗೆ ವಿವರಿಸುವ ಅದ್ಭುತ ವಾಕ್ಸಂಪತ್ತು ಅವರಿಗಿತ್ತು. ಬುದ್ಧಿಪ್ರಚೋದನವೇ ಮುಖ್ಯವಲ್ಲದೆ, ಪಾಠದ ಅಕ್ಷರಾರ್ಥ ಹೇಳುವುದು ಮುಖ್ಯವಲ್ಲವೆಂಬುದು ಸತೀಶಚಂದ್ರರಿಗೆ ಗೊತ್ತಿತ್ತು. ಪಠ್ಯದ ವಾಹಕನಾದ ಶಿಕ್ಷಕನಿಗೂ ಪಕ್ಷದ ಧ್ಯೇಯ–ಧೋರಣಗಳನ್ನು ಸದಾ ಗಿಳಿಯಿಸುವ ನಾಯಕನಿಗೂ ಏನೂ ಭೇದವಿಲ್ಲ. ಸತೀಶಚಂದ್ರರು ನಿಜವಾದ ಜನನಾಯಕನಂತೆ ತಮ್ಮ ವೈಯಕ್ತಿಕ ಅನುಭವಗಳಲ್ಲಿ ಸಾತ್ಮ್ಯಹೊಂದಿದ ಪಠ್ಯಾಂಶಗಳನ್ನು ತಮ್ಮದಾಗಿಯೇ ಹೇಳುತ್ತಿದ್ದರು. ಹಾಗೆ ಸಾತ್ಮ್ಯಹೊಂದಿದ ಅಂಶಗಳು ಬೋಧನೀಯವಲ್ಲ. ಮಾನ–ಪ್ರಾಣ–ಧನಗಳೆಲ್ಲ ಹೋಗುವಂಥ ಸಂದರ್ಭದಲ್ಲೂ ತಾನು ಸಾರಿದ ಧ್ಯೇಯಕ್ಕಾಗಿ ದುಡಿಯುವಷ್ಟು ಧ್ಯೇಯ ಸಾತ್ಮ್ಯವನ್ನು ಸಾಧಿಸಿಕೊಂಡ ನಾಯಕನೇ ನಿಜವಾದ ನಾಯಕನೆಂಬುದು ಇದರಿಂದ ತಿಳಿದುಬರುತ್ತದೆ. ತನ್ನ ಸುತ್ತುಮುತ್ತಲಿನ ಪ್ರಪಂಚದಲ್ಲಿ ಪ್ರಾಮಾಣಿಕವಾದ ಆಸಕ್ತಿ – ಕುತೂಹಲ – ಹಿತಚಿಂತಕ ಬುದ್ಧಿಗಳನ್ನುಳ್ಳವನೇ ಒಳ್ಳೆಯ ಶಿಕ್ಷಕ, ಒಳ್ಳೆಯ ಜನನಾಯಕ.”

“ಹಾಗಾದರೆ ಮೇಷ್ಟ್ರುಗಳೆಲ್ಲಾ ಒಳ್ಳೆಯ ಜನನಾಯಕರೆಂದರ್ಥವೆ?”

“ಎಲ್ಲ ಮೇಷ್ಟ್ರುಗಳಲ್ಲ; ಒಳ್ಳೆಯ ಮೇಷ್ಟ್ರುಗಳು, ಸತೀಶಚಂದ್ರ ರಾಯ ರಂಥ ಮತ್ತು ರವೀಂದ್ರನಂಥ ಇಲ್ಲವೆ ಗಾಂಧೀಜಿಯಂಥ ಮಹನೀಯರು ನಿಜವಾದ ಶಿಕ್ಷಕರು, ನಿಜವಾದ ಜನನಾಯಕರು. ಒಳ್ಳೆಯ ಶಿಕ್ಷಕತ್ವ ಒಳ್ಳೆಯ ನಾಯಕತ್ವಗಳಲ್ಲಿ ಮೇಲೆ ಹೇಳಿದ ಗುಣಗಳು ಸಾಧಾರಣ. ಶಿಕ್ಷಕನಿಗೆ ವಿದ್ಯಾರ್ಥಿ ಗಳು ಹೇಗೋ ಜನನಾಯಕನಿಗೆ ಜನರು ಹಾಗೇ. ರಾಷ್ಟ್ರಪತಿಗಳಾದ

ರಾಧಾಕೃಷ್ಣನ್ನರು ಶಿಕ್ಷಕರೂ ಆಗಿದ್ದರು, ಈಗ ಜನನಾಯಕರೂ ಆಗಿದ್ದಾರೆ. ಜನತೆಯ ಸಾಮಾಜಿಕ, ಆರ್ಥಿಕ, ರಾಜಕೀಯ ನೀತಿಗಳನ್ನು ರೂಪಿಸುವ ಪ್ರತಿಭಾವಂತಿಕೆಯು ಅದ್ವಿತೀಯ ಶಿಕ್ಷಕತ್ವದ ಗುರುತಲ್ಲವೇ? ಅಧಿಕಾರ ಬಲದಿಂದ ಆ ಈ ನೀತಿಗಳನ್ನು ಜನತೆಯ ಮೇಲೆ ಹೇರುವುದು ನಾಯಕತ್ವವಲ್ಲ; ಅವರಲ್ಲಿ ಉತ್ತಮ ನೀತಿಗಳತ್ತ ಹೃದಯಪರಿವರ್ತನವಾಗುವಂತೆ ಪ್ರೇರಿಸುವ ಮಾತು ಮತ್ತು ವರ್ತನೆಗಳಿರುವುದು ನಾಯಕತ್ವದ ಲಕ್ಷಣ. ಅಧಿಕಾರ ಬಲದಿಂದ ವಿದ್ಯಾರ್ಥಿಗಳ ಮೇಲೆ ತಮ್ಮ ಅಭಿಪ್ರಾಯವನ್ನು ಹೇರುವ ಜೆತ್ತದ ಮೇಷ್ಟ್ರುಗಳನ್ನು ಕಂಡು ಜುಗುಪ್ಸೆಗೊಂಡೇ ಚಿಕಿತ್ಸಕ ಬುದ್ಧಿಯುಳ್ಳ ರವೀಂದ್ರನು ಶಾಲೆಗೆ ಶರಣುಹೊಡೆದು ತಾನೇ ಆದರ್ಶ ಶಾಲೆಯನ್ನು ಕಟ್ಟಿದ್ದನ್ನು ಮರೆಯಲು ಸಾಧ್ಯವೇ?"

೧೫. ರವೀಂದ್ರ ಮತ್ತು ಅಮೇರಿಕ

“ರವೀಂದ್ರನ ವಿದೇಶಪ್ರವಾಸಗಳಲ್ಲಿ ಗಣ್ಯವಾಗಿ ಅವನಿಗೆ ತನ್ನ ವಿಶ್ವಭಾರತಿಯ ಸ್ಥಾಪನೆಗೆ ನೆರವಾದ ಪ್ರವಾಸಗಳು ಎಲ್ಲಿ ಹೆಚ್ಚು?”

“ಯುರೋಪಿನ ದೇಶಗಳೂ ಅಮೇರಿಕದ ಸಂಯುಕ್ತ ಸಂಸ್ಥಾನವೂ ಅವನ ಪ್ರವಾಸಗಳಲ್ಲಿ ಅವನಿಗೆ ಬಹಳ ನೆರವನ್ನಿತ್ತಿವೆ. ಒಂದೇ ದೇಶವನ್ನಾರಿಸಿ ಕೊಳ್ಳುವುದಾದರೆ ಧನಸಹಾಯದಲ್ಲಿ ಅಮೇರಿಕ ಎದ್ದು ಕಾಣುತ್ತದೆ. ಅವನನ್ನು ವಿದೇಶಗಳಲ್ಲಿ ಪ್ರಸಿದ್ಧನನ್ನಾಗಿ ಮಾಡುವುದರಲ್ಲೂ ಅಮೇರಿಕ ದೇಶ ಬಹಳ ನೆರವಾಗಿದೆ. ರವೀಂದ್ರನ ೨೦೦ಕ್ಕೂ ಹೆಚ್ಚು ಕೃತಿಗಳನ್ನು ವಾಷಿಂಗ್ಟನ್ನಿನ ಒಂದು ಪ್ರಸಿದ್ಧ ಪುಸ್ತಕಭಂಡಾರದಲ್ಲಿ ಅನುವಾದರೂಪಗಳಲ್ಲಿ ಈಗಲೂ ಕಾಣ ಬಹುದಂತೆ.”

“ಅಂದರೆ ಭಾರತದ ಯಾವ ಕವಿಗೂ ವಿದೇಶಗಳಲ್ಲಿ ಅವನ ಜೀವಿತ ಕಾಲದಲ್ಲೇ ಇಷ್ಟು ಪ್ರಸಿದ್ಧಿ ದೊರಕಿದ್ದು ಸರ್ವಥಾ ಇಲ್ಲವೆನ್ನಬಹುದಲ್ಲವೇ?”

“ಖಂಡಿತವಾಗಿಯೂ. ರವೀಂದ್ರನು ಈ ವಿಷಯದಲ್ಲಿ ಅದ್ವಿತೀಯ ನಾಗಿದ್ದಾನೆ. ಕ್ರಿ.ಶ. ೧೯೧೨ರಲ್ಲಿ ರವೀಂದ್ರನು ಮೊದಲ ಸಲ ಅಮೇರಿಕದ ಸಂಯುಕ್ತ ಸಂಸ್ಥಾನವನ್ನು ಸಂದರ್ಶಿಸಿದನು. ಅದೇ ಬೇಸಿಗೆಯಲ್ಲಿ ಇಂಗ್ಲೆಂಡಿಗೆ ಹೋಗಿದ್ದ. ಅವನ ವಯಸ್ಸು ೫೧ನೆಯ ವರ್ಷವನ್ನು ಮುಟ್ಟಿತ್ತು. ಇಂಗ್ಲೆಂಡಿನಲ್ಲಿ ಆಗ ವಿಲಿಯಂ ಬಟ್ಲರ್, ಯೀಟ್ಸ್ ಮುಂತಾದ ಕವಿಗಳ ಗುಂಪು ಅವನ ಪದ್ಯಗಳ ಇಂಗ್ಲೀಷು ಭಾಷಾಂತರಗಳ ವಾಚನವನ್ನು ಕೇಳಿದರು. ಆತನ ಪ್ರಸಿದ್ಧಿಯು ವಿದೇಶಗಳಲ್ಲಿ ಗಣ್ಯವಾಗಿ ಪಸರಿಸತೊಡಗಿದ್ದು ಅಂದಿನಿಂದ ಎನ್ನಬಹುದು. ಅದೇ ವರ್ಷದ ಶರತ್ಕಾಲದಲ್ಲಿ ತನ್ನ ಮಗ ರಥೀಂದ್ರ ಮತ್ತು ಸೊಸೆ ಪ್ರತಿಮೆಯರೊಡನೆ ಅವನು ಅಮೇರಿಕಕ್ಕೆ ಹೋದನು. ಮಗನಿಗಾಗ ೨೪ ವರ್ಷ ವಯಸ್ಸಾಗಿತ್ತು. ಕೃಷಿಶಾಸ್ತ್ರದಲ್ಲಿ ಪದವಿಯನ್ನು ಪಡೆಯಬೇಕು ಎಂಬುದು ಅವನ ಗುರಿಯಾಗಿತ್ತು. ಆ ಸಂದರ್ಭದಲ್ಲಿ ಚಿಕಾಗೊ, ಹಾರ್ವರ್ಡ್ ಮುಂತಾದ ಹಲವು ವಿಶ್ವವಿದ್ಯಾಲಯಗಳ ವಿದ್ವಾಂಸರು ರವೀಂದ್ರನನ್ನು ಭಾಷಣ ಕೊಡಲು ಆಮಂತ್ರಿಸಿದರು. ನ್ಯೂಯಾರ್ಕಿನ ರೊಚೆಸ್ಟರೆಂಬ ಸ್ಥಳದ ಮತ

ಧರ್ಮೀಯ ಉದಾರವಾದಿಗಳ ಮಹಾಸಂಘವೇರ್ಪಡಿಸಿದ ಸಭೆಯಲ್ಲಿ ಕುಲಸಂಘರ್ಷಣೆಯ ವಿಷಯವಾಗಿ ಅಮೋಘವಾದ ಉಪನ್ಯಾಸವಿತ್ತನು. ಆ ಅವಧಿಯಲ್ಲಿ ರವೀಂದ್ರನಿತ್ತ ಉಪನ್ಯಾಸಗಳೆಲ್ಲವೂ 'ಸಾಧನೆ' ಎಂಬ ಪುಸ್ತಕದ ರೂಪದಲ್ಲಿ ಪ್ರಕಟವಾಗಿವೆ. ರವೀಂದ್ರನ ಭಾಷಣಜೈತ್ರಯಾತ್ರೆ ಅಲ್ಲಿ ಮುಗಿದುದು ೧೯೧೩ರ ಏಪ್ರಿಲಿನಲ್ಲಿ. ಆಮೇಲೆ ಅವನ ಸವಾರಿ ಯೂರೋಪಿಗೆ ಹೋಗಿ ಸೆಪ್ಟಂಬರಿನ ಬಳಿಕ ಭಾರತಕ್ಕೆ ಹಿಂದಿರುಗಿತು."

"ಅಮೇರಿಕದಲ್ಲಿ ಭಾಷಣ ಮಾಡಿದರೆ ದುಡ್ಡು ಸಿಕ್ಕುತ್ತದೆಯೆ?"

"ನಮ್ಮ ದೇಶದಲ್ಲೂ ಸಿಕ್ಕುತ್ತದೆ, ದಕ್ಷಿಣೆಯ ಪ್ರಮಾಣದಷ್ಟು; ಆದರೆ ಅಲ್ಲಿ ಮಹಾದಾನದ ಪ್ರಮಾಣ! ಅದು ಸಿರಿವಂತರ ನಾಡೆಂಬುದಷ್ಟೇ ಕಾರಣವಲ್ಲ, ಪ್ರಬುದ್ಧರಾದ ಸಿರಿವಂತರ ನಾಡು ಎನ್ನಿಸಿರುವುದು ಕಾರಣ. ಅಲ್ಲಿಯ ಜನರು ಸ್ವಾಭಿಮಾನಿಗಳು, ದುಡ್ಡು ಕೊಡದೆ ಯಾರಿಂದಲೂ ಯಾವ ತರದ ಪ್ರಯೋಜನವನ್ನೂ (ಮನೋರಂಜನೆ, ಉಪದೇಶ, ವಿಮರ್ಶೆ ಎಲ್ಲಾ ಇದರಲ್ಲಿ ಬಂತು) ಪಡೆಯಲೊಲ್ಲೆವೆಂಬವರು ಅಲ್ಲಿಯ ಸಾಮಾನ್ಯರಲ್ಲೂ ಅತಿಸಂಖ್ಯರಾಗಿದ್ದಾರೆ."

"ನಮ್ಮ ನಾಡಿನಲ್ಲಿ?"

"ನಮ್ಮದು ಬಯಲು ಸೀಮೆಯಲ್ಲಿ ಹೇಳುವಂತೆ 'ಫುಕ್ಕಟ್ ಫೌಜುದಾರಿ'ಯ ನಾಡು. ಬಿಟ್ಟಿಯಾಗಿ ಪಡೆದದ್ದು ಎಂಥದಾದರೂ ಲೇಸು—ಎಂಬುದು ಸಿರಿವಂತರಿಗೂ ಬಡವರಿಗೂ ಇಲ್ಲಿ ಸಾಧಾರಣವಾದ ನೀತಿಸೂತ್ರ."

"ನಮ್ಮದು ಹಾಗಾದರೆ ಅಮೇರಿಕದಷ್ಟು ಸ್ವಾಭಿಮಾನದ, ಪ್ರಬುದ್ಧತೆಯ ಸಮಾಜವಿರುವ ನಾಡಲ್ಲ!"

"ಅಂಗೈಯ ಹುಣ್ಣಿಗೆ ಕನ್ನಡಿ ಬೇಕೆ?"

"ಅಮೇರಿಕಕ್ಕಿಂದು ನಮ್ಮಲ್ಲಿಂದ ಅನೇಕರು ಹೋಗಿ ತಿರುಗಿಕೊಂಡು, ತರಬೇತು ತೆಗೆದುಕೊಂಡು, ಕಲಿತು, ಕಾಯಕ ನಡೆಸಿ ಬರುತ್ತಾರಲ್ಲ—ಅವರು ಈ ನಾಡಿಗರ ಕಣ್ಣು ತೆರೆಯಿಸದಾಗಿರುವರೇಕೆ?"

"ಅವರ ಕಣ್ಣು ತೆರೆದಿದ್ದರೆ ಇನ್ನೊಬ್ಬರ ಕಣ್ಣನ್ನವರು ತೆರೆಯಿಸಿಯಾರು ಹಳೆಯ ಸುಭಾಷಿತ ಆಗಲೇ ಹೇಳಿಬಿಟ್ಟಿದೆ:

'ಯಸ್ಯ ನಾಸ್ತಿ ಸ್ವಯಂ ಪ್ರಜ್ಞಾ ಶಾಸ್ತ್ರಂ ತಸ್ಯ ಕರೋತಿ ಕಿಂ?
ಲೋಚನಾಭ್ಯಾಂ ವಿಹೀನಸ್ಯ ದರ್ಪಣಃ ಕಿಂ ಕರಿಷ್ಯತಿ?'

ಉರುಳುವ ಗುಂಡಿಗೆ ಏನು ಹತ್ತಿಕೊಂಡೀತು? ಶಿಬಿ–ಕರ್ಣ–ದಧೀಚಿಗಳಿಂದ ಪ್ರಖ್ಯಾತವಾಗಿದ್ದ ದಾನಧರ್ಮದ ಈ ನಾಡಿನಲ್ಲಿ ಕಾಳಸಂತೆಯ ಸಾವಕಾರರು ಈಗ ಪ್ರಸಿದ್ಧರಾಗುತ್ತಿದ್ದಾರೆ! ಇದು 'ಬಂದ ಕಾಲಗುಣವೋ ನಿಂದ ನೆಲದ ಗುಣವೋ' ಎಂದು ಕೇಳಬೇಕಾಗಿದೆ ಈಗ!"

"ಅಮೇರಿಕದಲ್ಲಿ ರವೀಂದ್ರನಿಗೆ ಮೊದಲು ಹಿಡಿಸಿದ್ದು ಯಾವುದು?"

"'ಅರ್ಬನಾ' ಎಂಬ ಕಾಲೇಜು ಪಟ್ಟಣದ ಪ್ರಕೃತಿಸೌಂದರ್ಯದ ಪ್ರಶಾಂತ ಆವರಣವನ್ನು ರವೀಂದ್ರ ತುಂಬ ಮೆಚ್ಚಿಕೊಂಡ."

"ಕವಿಗಳಿಗೂ ಪ್ರಕೃತಿಯ ಹಸಿರ ಹಾಸಿಗೂ ಯಾವಾಗಲೂ ತಳಕು!"

"ನಿಜ; ಪ್ರಕೃತಿಯ ಸಾತ್ವಿಕ ಸೌಂದರ್ಯ ಅದರಲ್ಲೇ ಅಲ್ಲವೇ ಕಾಣು ವುದು? ರವೀಂದ್ರನ ದೃಷ್ಟಿಗೆ ಅಲ್ಲಿ ತದ್ವಿರುದ್ಧವಾದ ದೃಶ್ಯವೂ ಬಿದ್ದಿತು."

"ಅದಾವುದು?"

"ಅಲ್ಲಿಯ ಜನರ ಅಸಂಸ್ಕೃತ ಜೀವನ! ಅದನ್ನು ಕಂಡ ಅವನು 'ಇವರ ಕೃಷಿ ಸ್ವಲ್ಪ ಕೆಟ್ಟರೂ ಚಿಂತೆಯಿಲ್ಲ; ತಮ್ಮ ಹೃದಯದ ಕೃಷಿಗೆ ಇವರು ಲಕ್ಷ್ಯ ಹಾಕುವುದು ಹೆಚ್ಚು ಅಗತ್ಯವೆಂದು ನನಗೆ ತೋರುತ್ತದೆ' ಎಂದು ಹೇಳಿ ಬಿಟ್ಟನಂತೆ!"

"ಹೀಗೆ ನಿಷ್ಠುರವಾಗಿ ಆ ಹೊಸ ಜನರ ಮುಂದೆ ಅಪ್ರಿಯ ಸತ್ಯವನ್ನು ಹೇಳುವುದು ಸರಿಯೇ?"

"ಹಾಗೆ ಹೇಳಿ ಗೆದ್ದುಕೊಂಡವನೇ ವ್ಯಕ್ತಿತ್ವಸಂಪನ್ನ, ಆತ್ಮವಂತ. ಅವನು ಹಾಗೆ ಹೇಳಿ ತಾತ್ಕಾಲಿಕವಾಗಿ ಅಲ್ಲಿಯ ಕೆಲವರಿಗೆ ಬೇಸರಪಡಿಸಿರ ಬಹುದಾದರೂ ಅಲ್ಲಿಯ ಬಹುಸಂಖ್ಯರಿಗೆ ಅವನ ಧೀರೋದಾತ್ತ ನಿಲುಮೆ ಚಿರಸ್ಮರಣೀಯವಾಗುವಂತಾದದ್ದು ಸುಸ್ಪಷ್ಟ. ಕುಮಾರಿ ಮನ್ರೋ ಅಂಥವರಿಗೆ ರವೀಂದ್ರನ ಪದ್ಯಗಳ ಆಂಗ್ಲಾನುವಾದಗಳನ್ನು ಕೇಳುತ್ತಿದ್ದಾಗ ಪೌರಸ್ತ್ಯ ಜಗತ್ತಿನ ಯಾವನೋ ಒಬ್ಬ ಮಹಾಸಾಧುವಿನ ಚರಣಕಮಲಗಳ ಬಳಿಯಲ್ಲಿ ಕುಳಿತಿರುವ ಹಾಗೆ ಕಂಡಿತಂತೆ! ರವೀಂದ್ರ ಅವರೆಲ್ಲರಿಗೆ ಒಬ್ಬ ಯೋಗೀಂದ್ರ ನಂತೆ ತೋರಿದನೆಂಬುದನ್ನು ನೆನೆದರೆ ಅವನ ಆಧ್ಯಾತ್ಮಿಕತೆಯ ಹೊಳಪು ಅವನ ಕೃತಿಗಳಲ್ಲಿ ಮೂಡಿದ್ದಕ್ಕೆ ನಿಷ್ಪಕ್ಷಪಾತದ ಪ್ರಮಾಣ ದೊರೆತಂತಾಗುತ್ತದೆ.

೧೯೧೩ರಲ್ಲಿ ರವೀಂದ್ರ ನೊಬೆಲ್ ಪಾರಿತೋಷಕ ಪಡೆದ ೩ ವರ್ಷಗಳ ಬಳಿಕ—ಅಂದರೆ ೧೯೧೬–೧೭ರ ಚಳಿಗಾಲದಲ್ಲಿ ಪುನಃ ಅಮೇರಿಕಕ್ಕೆ ತೆರಳಿದ. ಅವನಿಗೆ ನೊಬೆಲ್ ಬಹುಮಾನ ದೊರಕಿದ್ದು ಪ್ರಕಟವಾಗುವ ಮೊದಲು ಅಮೇರಿಕದ ಪ್ರಸಿದ್ಧ ಪತ್ರಿಕೆಯೊಂದು ಅವನ ಉಚ್ಚಕುಲೀನತೆ, ಆಕರ್ಷಕ ರೂಪ, ಸ್ವರಮಾಧುರ್ಯ, ಬಹುಮುಖಪ್ರತಿಭೆ, ತೇಜಸ್ವಿ ವ್ಯಕ್ತಿತ್ವ ಮತ್ತು ಅಸಾಧಾರಣ ಕವಿತ್ವಶಕ್ತಿಗಳ ಬಗ್ಗೆ ಲೇಖನವನ್ನು ಪ್ರಕಟಿಸಿ ಅಮೇರಿಕನ್ನರಿಗೆ ಅವನು ಸರ್ವಾದರಣೀಯನೆಂದು ಪರಿಚಯ ಮಾಡಿಕೊಟ್ಟಿತ್ತಂತೆ. ೧೯೧೫ರಲ್ಲಿ ಇಂಗ್ಲೆಂಡಿನ ೫ನೆಯ ಜಾರ್ಜ್ ದೊರೆಯು ಸರದಾರ ಪದವಿಯನ್ನಿತ್ತದ್ದು ರವೀಂದ್ರನ ಕೀರ್ತಿಯನ್ನು ಅಮೇರಿಕದಲ್ಲಿ ಇನ್ನಷ್ಟು ಉಜ್ವಲಗೊಳಿಸಿತು. ಈ ಅನುಕೂಲ ಆವರಣದಲ್ಲಿ ೨ನೆಯ ಸಲ ಅಮೇರಿಕವನ್ನು ಹೊಕ್ಕ ರವೀಂದ್ರನು ಅಲ್ಲಿಯ ಪೋರ್ಟ್‌ಲ್ಯಾಂಡ್, ಸಾನ್‌ಫ್ರಾನ್ಸಿಸ್‌ಕೊ, ಸಾಂತಾಬರ್ಬರಾ, ಸಾಲ್ಟ್‌ಲೇಕ್ ಸಿಟಿ, ಡೆನ್ವರ್, ಚಿಕಾಗೋ, ಕ್ಲೀವ್‌ಲ್ಯಾಂಡ್, ಫಿಲಡೆಲ್ಫಿಯ, ಬೋಸ್ಟನ್, ನ್ಯೂಯಾರ್ಕ್ ಮುಂತಾದ ನಗರಗಳಲ್ಲಲ್ಲದೆ ಎಷ್ಟೋ ಕಾಲೇಜ್–ಯೂನಿವರ್ಸಿಟಿಗಳಿಗೆ ಹೆಸರಾದ ಸ್ಥಳಗಳಲ್ಲಿ ಪದ್ಯ, ನಾಟಕ, ಸಣ್ಣ ಕತೆಗಳನ್ನೋದಿ, ಅವುಗಳ ಮೇಲೆ ವಿಮರ್ಶೆಮಾಡಿ ಉಪನ್ಯಾಸವಿತ್ತು ಅಲ್ಲಲ್ಲಿಯ ಜನರ ಮನಸ್ಸನ್ನು ಸೂರೆಗೊಂಡನು."

"ರವೀಂದ್ರ ಹಾಗಾದರೆ ಪ್ರಚಂಡ ಪ್ರಚಾರಪಟುವೆಂದಹಾಗಾಯ್ತು!"

"ಕರೆದು ಮೃಷ್ಟಾನ್ನ ಬಡಿಸುವವರ ಹಾಗೆ ಆಮಂತ್ರಣಗಳು ಬಂದಾಗ ತನ್ನ ಬರಹಗಳನ್ನು ಓದಿಹೇಳಿ, ರಸವಿಮರ್ಶೆ ಮಾಡುವುದರಲ್ಲಿ ತಪ್ಪೇನಿದೆ? ಜನರಿಗವನ ರಸಾನ್ನ ಬೇಕೆಂದಾಗ ಅವನು ಬಡಿಸಿದರೆ ಅದರಲ್ಲಾವ ಪ್ರಚಾರದ ಧೂರ್ತತೆಯಿದೆ?"

"ಧೂರ್ತತೆ ಇದೆಯೆಂದು ನಾನು ಹೇಳಲಿಲ್ಲ. ಬರಹಗಾರಿಕೆಯ ಜೊತೆಗೇ ಗಮಕಕಲಾವಿದನೂ ಆಗಿದ್ದ ರವೀಂದ್ರನ ಸವ್ಯಸಾಚಿತ್ವವು ನನ್ನನ್ನು ಮೂಗಿನ ಮೇಲೆ ಬೊಟ್ಟಿಡುವಂತೆ ಮಾಡಿತು—ಅಷ್ಟೆ."

"ಅವನು ಕವಿ, ಗಮಕಿ, ವಾದಿ, ವಾಗ್ಮಿ ಮತ್ತು ಪಂಡಿತರಲ್ಲಿ ಯಾವನಲ್ಲ? ಜಾಯ್ಸ್ ಕಿಲ್ಮರ್ ಎಂಬ ಅಮೇರಿಕನ್ ಕವಿ ರವೀಂದ್ರನನ್ನು ಕುರಿತು ಅವನು ವ್ಯವಹಾರಚತುರನೂ ಬಹುಕೃತಿರಚನಾಕೋವಿದನೂ

ಪಶ್ಚಿಮದ ಜಗತ್ತಿನ ವಿಚಾರಧಾರೆಯ ಸೂಕ್ಷ್ಮ ರಸಜ್ಞನೂ ಆಗಿ ತೋರುವ ನೆಂದು ಉದ್ಗರಿಸಿದ್ದುಂಟು."

"ರವೀಂದ್ರನ ವಿಚಾರದಲ್ಲೂ ಕಾವ್ಯಶೈಲಿಯಲ್ಲೂ ಪಾಶ್ಚಾತ್ಯ ಪ್ರಭಾವ ಕಂಡುಬರುತ್ತದೆ — ಎಂದು ಕೆಲವರೆಂದುದರಲ್ಲಿ ಸತ್ಯವಿರಬೇಕಾಯಿತು. ಅದರಿಂದಲೇ ಬಹುಶಃ ಅವನ ಕೃತಿಗಳನ್ನು ಪಾಶ್ಚಾತ್ಯ ಲೋಕವು ಸುಲಭವಾಗಿ ಮೆಚ್ಚಿಕೊಳ್ಳಲು ಶಕ್ತವಾಯ್ತು. ನಿಜವೋ ಸುಳ್ಳೋ?"

"ಹಾಗೆ ಹೇಳುವುದರಲ್ಲಿ ಕೆಲವಂಶ ಸತ್ಯವಿದೆಯೆಂದು ಒಪ್ಪಿಕೊಳ್ಳಲೇ ಬೇಕು; ಆದರೆ ರವೀಂದ್ರನ ಕೃತಿಗಳಲ್ಲಿ ತೋರುವ ಮಹಾಮುದ್ರೆಯು ಭಾರತೀಯವೇ ಎಂಬುದನ್ನು ಯಾರಿಗೂ ಅಲ್ಲಗಳೆಯಲು ಸಾಧ್ಯವಿಲ್ಲ."

"ಅದು ನಿಜ ಅನ್ನಿ — ಅವನು ಎಲ್ಲಿ ಹೋದರೂ ಭಾರತೀಯನೇ ಅಲ್ಲವೇ? ನಾನದನ್ನಲ್ಲ ಹೇಳಿದ್ದು; ಇಂದಿನ ಕನ್ನಡ ಬರಹಗಾರರಲ್ಲೂ ಕವಿಗಳಲ್ಲೂ ವಿಮರ್ಶಕರಲ್ಲೂ ಕೆಲವರು ಹೇಗೆ ಅತಿಪಾಶ್ಚಾತ್ಯ ವಿಚಾರಧಾರೆ ಯವರಾಗಿರುವರೋ ಹಾಗೇ ರವೀಂದ್ರನೂ ಎದ್ದು ಕಾಣುವಷ್ಟು ಪಾಶ್ಚಾತ್ಯ ಅಲಂಕಾರ ಶೈಲಿಯಲ್ಲಿ ಕಾವ್ಯರಚನೆ ಮಾಡಿದವನು—ಎಂದು. ವಿಚಾರ ಅಭಾರತೀಯವಾದ ಹಾಗೆ ಭಾಷೆ ಭಾರತೀಯವಾದರೂ ಅದರ ಅಲಂಕಾರ ಪಾಶ್ಚಾತ್ಯವೇ ಆಗುತ್ತದೆ; ಅಥವಾ ಸಂಮಿಶ್ರವಾಗಿ ಬಹಳ ಸಲ, 'ಶುದ್ಧವಾಗಿ ಅದೂ ಅಲ್ಲ, ಇದೂ ಅಲ್ಲ' ಎಂಬಂತೆಯೂ ಆಗಬಹುದು!

(1) In the prelude of a *manyhired* and *scented* day.

(2) I have suffered eclipsed by poverty, in *vulgar* days and nights.

—ಎಂಬಂತಹ ಆಂಗ್ಲಾಲಂಕಾರಶೈಲಿ ರವೀಂದ್ರನ ಪದ್ಯಗಳಲ್ಲಿ ಅನೇಕ ಕಡೆ ಕಂಡುಬರುತ್ತವೆ. ಆದರೆ ಈಲಿಯಟ್ಟನಿಗಿಂತ ಮೊದಲಿನ ಆಂಗ್ಲ ಕವಿಗಳ ಪದ್ಯಗಳನ್ನು ಓದಿದವರಿಗಾದರೂ ಅವು ಚೆನ್ನಾಗಿ ಆತ್ಮೀಯವೆನ್ನಿಸುವುವು."

"ಪೂರ್ವ-ಪಶ್ಚಿಮಗಳ ಸಾಂಸ್ಕೃತಿಕ ಅಂಶಗಳಲ್ಲಿ ಉತ್ತಮವಾದ ಅಂಶಗಳನ್ನು ಆಯ್ದು ಬೆಸೆಯುವುದೇ ರವೀಂದ್ರನ ದೊಡ್ಡ ಗುರಿಯಾಗಿತ್ತು ಎಂಬುದನ್ನು ನಾವು ಹೇಗೆ ಮರೆಯೋಣ?"

" ರವೀಂದ್ರನಂಥವರಿಗೆ 'ಬೆಸುಗೆ', 'ಎರಕ'ಗಳು ಸಾಧ್ಯವಾದವು. ಅವನನ್ನು ಅನುಕರಿಸಿದ ಅರವಿಗಳೆಷ್ಟೋ ಜನ 'ಬೆರಕೆ' ಮಾತುಗಳನ್ನು ಬರೆದು ಜಂಭ ಕೊಚ್ಚಿಕೊಳ್ಳುವುದು ಪ್ರಗತಿಶೀಲತೆಯೆನ್ನಿಸೀತೇ ?"

" ಊರೋಡುತ್ತದೆ ಎಂದು ಕುರುಡನೂ ಓಡಿದಂತಾಗುತ್ತದೆ. ಪಾಶ್ಚಾತ್ಯ ನಾಗರಿಕತೆಯ ಒಳ್ಳೆಯ ಅಂಶಗಳಷ್ಟನ್ನು ರವೀಂದ್ರ ಮೆಚ್ಚಿಕೊಂಡಿದ್ದನಲ್ಲದೆ, ಅದರಲ್ಲಿಯ ಬೂಟಾಟಿಕೆಯ ಅಂಶಗಳನ್ನಲ್ಲ. ಅದರಿಂದ ಕಂಡದ್ದನ್ನು ಕಂಡಂತೆ ಆಡುವ ಸ್ವಭಾವದವನೆನ್ನಿಸಿದ್ದ ಅವನು ತನ್ನೊಂದು ಉಪನ್ಯಾಸದಲ್ಲಿ— 'ಪಾಶ್ಚಾತ್ಯ ನಾಗರಿಕತೆಯು ಲೋಭಿ, ಸ್ವಾರ್ಥಿ ಮತ್ತು ಶಕ್ತಿಯಿಂದ ಮದೋನ್ಮತ್ತವಾಗಿದೆ; ಅಮೇರಿಕವು ಭೌತಿಕ ಸಂಪತ್ತಿಗೆ ಬಾಯಿನೀರು ಬಿಡುವ ದೇಶ, ದುಂದುಗಾರರ ತವರೂರು, ಬಡಾಯಿಬುಳ್ಳರ ರಾಜ್ಯ, ದುಡ್ಡಿನ ಹುಳುಗಳಲ್ಲಿ ಅಧಿಕ; ಅಲ್ಲಿಯ ಹೆಂಗಸರು ಬಿಟ್ಟಿಯಾಗಿ ಕಾಲಕಳೆಯುವ ದುರುಗಮುರುಗಿಯರು' ಎಂದು ಮುಂತಾಗಿ ಸಾರಿ ಹೇಳಿದ್ದುಂಟು."

" ದುಂದುಗಾರರೂ ಲೋಭಿಗಳೂ ಪರಸ್ಪರ ವಿರುದ್ಧವಾದ ಸ್ವಭಾವ ದವರಲ್ಲವೇ ?"

" ಅಲ್ಲ, ಭಿನ್ನಸ್ವಭಾವದವರು. ಉದಾರಿಗಳೂ ಲೋಭಿಗಳೂ ವಿರುದ್ಧ ಸ್ವಭಾವದವರು. ಹೀಗೆ ಅಪ್ರಿಯ ಸತ್ಯವನ್ನಾಡಿ ಅಲ್ಲಿ ಕೆಲವರ ಮನಸ್ಸು ತಾತ್ಕಾಲಿಕವಾಗಿ ನೋಯುವಂತೆ ಮಾಡಿದ ರವೀಂದ್ರನು ಅವರಿಗೆ ಪ್ರಿಯವಾದ ಸಂದೇಶವನ್ನೂ ಕೊಟ್ಟಿದ್ದಾನೆ: 'ಅಮೇರಿಕ ಇಂದು ಯೌವನಾವಸ್ಥೆಯಲ್ಲಿದೆ; ಪಾಶ್ಚಾತ್ಯ ನಾಗರಿಕತೆಯ ಅತ್ಯುತ್ತಮಾಂಶಗಳೆಲ್ಲವೂ ಕ್ರಮೇಣ ಇಲ್ಲಿ ಬಂದು ಮನೆಮಾಡಿಕೊಳ್ಳುವುವು.' ಅಮೇರಿಕದಲ್ಲಿ ಕಂಡ ಔದಾರ್ಯ, ಅತಿಥಿಸತ್ಕಾರ ಶೀಲ, ಸಂಘಟನಾಶಕ್ತಿ, ಸಮಾಜಸೇವಾಬುದ್ಧಿ ಮುಂತಾದವುಗಳನ್ನು ಅವನು ಕಂಡಲ್ಲೆಲ್ಲಾ ಪ್ರಶಂಸಿಸಿದ್ದಾನೆ. ಅನಂತರ ಅವನು ಜಪಾನಿನ ಪ್ರವಾಸ ಮಾಡಿದ. ಅಲ್ಲೂ ಅವನ ಮತ್ತು ಜಪಾನೀಯರ ಸಂಬಂಧವು ಹಾಗೇ ಒಟ್ಟಿನ ಮೇಲೆ ಒಳ್ಳೆಯದೇ ಆಗಿ ಪರಿಣಮಿಸಿತು.

೧೯೨೦ರಲ್ಲಿ ಮತ್ತೆ ರವೀಂದ್ರ ವಿಶ್ವಭಾರತಿಗಾಗಿ ಅಮೇರಿಕಕ್ಕೆ ಹೊರಟ. ಶ್ರೀಮತಿ ವಿಲ್ಲರ್ಡ್ ಸ್ಟ್ರೇಟೆಂಬ ನ್ಯೂಯಾರ್ಕಿನ ಮಹಿಳೆಯು ಪ್ರತಿವರ್ಷ ೫೦,೦೦೦ ರೂಪಾಯಿಗಳಷ್ಟು ದಾನಮಾಡಲು ಮುಂದೆ ಬಂದಳು. ಆ ದಾನದ

ಬಲದಿಂದ ಅವನು ೧೯೨೨ರಲ್ಲಿ ಶ್ರೀನಿಕೇತನವನ್ನು ನೆಲೆನಿಲ್ಲಿಸಿದನು. ಆದರೆ ಆ ಅವಧಿಯ ೫ ತಿಂಗಳ ಪ್ರವಾಸವು ಅಷ್ಟೇನೂ ಸುಖಕರವಾಗಲಿಲ್ಲ. ಅಂದಿನ ಯುದ್ಧೋತ್ತರ ಕಾಲದ ಅಮೇರಿಕನ್ನರ ಮನಃಪ್ರಣಾಳಿ ರವೀಂದ್ರನಿಗಷ್ಟು ಸೇರಲಿಲ್ಲ — ಗೊಂದಲಪುರವಾಗಿದ್ದ ನ್ಯೂಯಾರ್ಕಿನ ವಾಸ ಅವನಿಗೆ ಹಿಡಿಸಲಿಲ್ಲ."

"ಗೊಂದಲಕ್ಕಂಜುವವರು ಸಮರ್ಥರೆನ್ನಲು ಸಾಧ್ಯವೇ?"

"ವಿವೇಕಿಗಳೆನ್ನಲು ಸಾಧ್ಯ. ದತ್ತ ಸಂದರ್ಭವೊಂದರಲ್ಲಿ ಗೊಂದಲವನ್ನು ನಿಯಂತ್ರಿಸಲು ತಕ್ಕ ಅನುಕೂಲಗಳಿಲ್ಲದಲ್ಲಿ ವಿವೇಕಿ ಅಲ್ಲಿಂದ ದೂರ ಸರಿಯುತ್ತಾನೆ. ಹಾಗೆ ಮಾಡಿದ್ದರಿಂದ ಅವನು ಅಸಮರ್ಥನೆನ್ನಿಸುವುದಿಲ್ಲ, ಹೇಡಿಯೆನ್ನಿಸುವುದಿಲ್ಲ. ವಿವೇಕಯುಕ್ತವಾದ ಗುಣಗಳಷ್ಟೇ ಸದ್ಗುಣಗಳು. ವಿವೇಕವು ದೇಶ-ಕಾಲ-ಕಾರ್ಯ-ಸಂದರ್ಭ-ವ್ಯಕ್ತಿಗಳ ನೀತ್ಯನೀತಿ-ಬಲಾಬಲಗಳನ್ನು ಅಳೆಯುವ ದೂರ ಪರಿಣಾಮಚಿಂತನದ ದೃಷ್ಟಿಕೋನ. ಇದಕ್ಕೆ ಉದಾಹರಣೆಯಾಗುವಂತೆ ಅಂದಿನ ಸ್ವದೇಶದ ಪರಿಸ್ಥಿತಿಯನ್ನು ಅವಲೋಕಿಸಿದ ರವೀಂದ್ರನು ತನ್ನ ಗೆಳೆಯ ಸಿ. ಎಫ್. ಆ್ಯಂಡ್ರೂಸರಿಗೆ 'ದೇಶಕ್ಕಿಂತ ತನಗೆ ದೇವರೇ ಹೆಚ್ಚಿನವನು' ಎಂದು ಪತ್ರ ಬರೆದ."

"ಆಶ್ಚರ್ಯ!"

"ಆಶ್ಚರ್ಯವೇನು ಬಂತಲ್ಲಿ? ದೇವರು ವಿಶ್ವವಿಶಾಲತೆಯ ಸಂಕೇತ; ಉದಾತ್ತತೆಯ ಉನ್ನತ ಪ್ರತೀಕ. ದೈವದ ಸರಿಯಾದ ಕಲ್ಪನೆಯಿದ್ದವನಿಗೆ ತನಗಿಂತ ದೇವರು ಹೆಚ್ಚಿನವನೆಂಬ ಶ್ರದ್ಧೆಯಿರುತ್ತದೆ. ಅಂದಮೇಲೆ ದೇವರು ತನ್ನ ದೇಶಕ್ಕಿಂತ ಹೆಚ್ಚೆಂದು ತಿಳಿದರೆ ಆಶ್ಚರ್ಯವೇನು?"

"ದೇವರ ಕಲ್ಪನೆ ಯಾರಿಗೆ ಸರಿಯಾಗಿದೆ ಎಂದು ಹೇಗೆ ತಿಳಿದುಕೊಳ್ಳೋದು?"

"ದೇವರ ಹೆಸರನ್ನು ಹೇಳಿದವರ ಯೋಗ್ಯತೆಯನ್ನು ಅರಿತುಕೊಂಡರೆ ಅವರು ದೇವರ ಹೆಚ್ಚುಗಾರಿಕೆಯನ್ನು ಹೇಳಿದುದರ ಔಚಿತ್ಯ ಸ್ಪಷ್ಟವಾಗುತ್ತದೆ. ರವೀಂದ್ರನು ಉಕ್ತ ಉದ್ಗಾರವನ್ನು ಪತ್ರದಲ್ಲಿ ಮಾಡಿದಾಗ ದೇಶದ ಪರಿಸ್ಥಿತಿ— ಎಂದರೆ ಭಾರತದಲ್ಲಿ ನಡೆಯುತ್ತಿದ್ದ ಚಳವಳಗಳ ನೇತೃಗಳ ಧೋರಣೆ-ಕಾರ್ಯ-ಪರಿಣಾಮಗಳು—ದೇವರಿಗೆ ಅರ್ಥಾತ್ ರವೀಂದ್ರ ನಂಬಿದ್ದ ಉತ್ತಮ ತತ್ವಗಳಿಗೆ

ಅನುಗುಣವಾಗಿದ್ದಿಲ್ಲವೆಂದು ತಿಳಿಯಬೇಕು! ಆಮೇಲೆ ಕೇಳು: ರವೀಂದ್ರನು ತನ್ನ ಐದು ತಿಂಗಳುಗಳ ಅಮೇರಿಕ-ಪ್ರವಾಸವನ್ನು ಮುಗಿಸಿ, ಕೂಡಲೇ ಯೂರೋಪಿಗೆ ಹೋದಾಗ, ಅಲ್ಲಿಯ ೩ ತಿಂಗಳುಗಳ ಪ್ರವಾಸವು ಅವನನ್ನು ಉಲ್ಲಸಿತನನ್ನಾಗಿ ಮಾಡಿತು. ಅಲ್ಲಿ ಎಲ್ಲ ಕಡೆಗಳಲ್ಲೂ ರಾಜಾತಿಥ್ಯ ಪಡೆದು ೧೯೨೧ರ ಬೇಸಿಗೆಯಲ್ಲಿ ಅವನು ಭಾರತಕ್ಕೆ ಹಿಂದಿರುಗಿದ."

"ಅಮೇರಿಕ-ಯೂರೋಪುಗಳಲ್ಲಿ ಹೆಚ್ಚಾಗಿ ಕ್ರೈಸ್ತಮತೀಯರಿದ್ದಾರೆ. ಹಾಗಿರುವಾಗ ಈ ಹಿಂದು ತತ್ವಜ್ಞಾನಿ ಅವರನ್ನು ತನ್ನ ತತ್ವೋಪದೇಶಗಳಿಂದ ಸಂತೋಷಗೊಳಿಸಿದ್ದು ಅಸಂಭವ—ಅಲ್ಲವೇ?"

"ಛೇ ಛೇ—ಹಾಗಲ್ಲವೇ ಅಲ್ಲ; ರವೀಂದ್ರನು ತನ್ನ ಭಾಷಣಗಳಲ್ಲಿ ಧ್ವನಿಸುತ್ತಿದ್ದ ಆಧ್ಯಾತ್ಮಿಕ ಕಲ್ಪನೆಗಳು ಆ ಕ್ರೈಸ್ತರ ಮೇಲೆ ಒಳ್ಳೆಯ ಪರಿಣಾಮವನ್ನು ಉಂಟುಮಾಡಿದವು. "ಠಾಕೂರನು ಕ್ರೈಸ್ತನಲ್ಲ; ಆದರೆ ಕ್ರೈಸ್ತಧರ್ಮವು ಒಂದು ಕಾಲದಲ್ಲಿ ಏಶಿಯದ್ದಾಗಿತ್ತು ಎಂಬುದನ್ನು ಅವನ ಮನಃಪ್ರಣಾಳಿಯು ನೆನಪಿಗೆ ತಂದುಕೊಡುತ್ತದೆ. ಅಲ್ಲದೆ, ಅದು ಮೂಲ ದೇವವಾಣಿ ಮೆರೆಯುತ್ತಿದ್ದ ಕಾಲ! ಅದರಿಂದಲೇ ರವೀಂದ್ರನು ಕ್ರೈಸ್ತರಿಗಿಂತ ಹೆಚ್ಚು ಕ್ರೈಸ್ತತನವುಳ್ಳವನಾಗಿ ತೋರುತ್ತಾನೆ" ಎಂಬ ಒಂದು ಪತ್ರಿಕಾಭಿಪ್ರಾಯವು ನಿನ್ನ ಪ್ರಶ್ನೆಗೆ ಸರಿಯಾದ ಉತ್ತರವನ್ನು ಕೊಡುತ್ತದೆ."

"ಹಾಗಾದರೆ ರವೀಂದ್ರನು ಆಯಾ ಜನರಿಗೆ ತಕ್ಕಂತೆ ಮಾತಾಡುತ್ತಿದ್ದ ಎನ್ನಬೇಕೇ ಅಥವಾ ತನಗೆ ಆತ್ಮಸಾಕ್ಷಿಯಾಗಿ ಅನ್ನಿಸಿದ್ದನ್ನು ಬೋಧಿಸುತ್ತಿದ್ದ ಎನ್ನಬೇಕೇ?"

"ಬಹಳ ಚೆನ್ನಾಗಿ ಹೇಳುತ್ತೀಯಾ. ಕ್ರೈಸ್ತರ ಬೈಬಲ್ಲನ್ನೊಮ್ಮೆ ಓದು. ಅದರಲ್ಲಿರುವ ನೀತಿತತ್ವಗಳು ನಮ್ಮ ಉಪನಿಷತ್ತುಗಳು ಬೋಧಿಸುವಂಥ ತ್ಯಾಗಧರ್ಮವನ್ನೇ ವಿಶಿಷ್ಟಶೈಲಿಯಲ್ಲಿ ಧ್ವನಿಸುತ್ತವೆ ಎಂಬುದು ನಿನಗೂ ಸ್ಪಷ್ಟ ಆಗುತ್ತದೆ. ಹೀಗಿರುವಾಗ ತತ್ವಸಾಮ್ಯದ ದೆಸೆಯಿಂದ ಕ್ರೈಸ್ತರು ರವೀಂದ್ರನನ್ನು ತಮ್ಮ ದೇವವಾಣಿಯ ಸಾರವತ್ತಾದ ಅಂಶದ ವಕ್ತಾರನೆಂದು ತಿಳಿದುಕೊಳ್ಳುವಂತಾದರೆ ಏನಾಶ್ಚರ್ಯ? ಮೊದಮೊದಲು 'ಪೌರಸ್ತ್ಯ ಯೋಗಿ' ಎಂದು ಎನ್ನಿಸಿಕೊಂಡು ರವೀಂದ್ರನು ಪಾಶ್ಚಾತ್ಯರ ಹೃದಯಕ್ಕೆ ಅಷ್ಟು ಹತ್ತಿರದವನು ಎನ್ನಿಸದಿದ್ದರೂ ಕಾಲ ಹೋದಹಾಗೆ ಅವನಲ್ಲಿ ಅವರು ಕ್ರೈಸ್ತಮೂಲದ

ಮಾನವೀಯ ತತ್ವಾಂಶಗಳನ್ನು ಕಂಡುಕೊಳ್ಳಲು ಶಕ್ತರಾದರು. ಅಂದಿನಿಂದ ಅವರೆಲ್ಲರಿಗೂ ಅವನು ಆತ್ಮೀಯನೆನ್ನಿಸತೊಡಗಿದನು. ಪೂರ್ವ-ಪಶ್ಚಿಮ ದೇಶಗಳಲ್ಲಿರುವ ಸಂಸ್ಕೃತಿಗಳಲ್ಲಿ ಹೊಂದಿಕೆಯಾಗುವ ಬಗೆಯನ್ನು ರವೀಂದ್ರನ ಬಾಯಿಂದಲೇ ಕೇಳಬೇಕು: 'ಪೂರ್ವ-ಪಶ್ಚಿಮಗಳು ಒಂದನ್ನೊಂದು ಭೇಟಿ ಮಾಡಬೇಕು. ಅದರಿಂದ ಪಶ್ಚಿಮದ ವಿಜ್ಞಾನ, ತಾಂತ್ರಿಕ ಜ್ಞಾನ, ಸಂಘಟನಾ ಪ್ರತಿಭೆಗಳ ಲಾಭವು ಪೂರ್ವಕ್ಕೆ ಲಭಿಸುತ್ತದೆ ಮತ್ತು ಪೂರ್ವದ ಅಧ್ಯಾತ್ಮ ತತ್ವಜ್ಞಾನದ ಅವಗಾಹನೆಯಿಂದ ಪಶ್ಚಿಮಕ್ಕೆ ತನ್ನ ಆತ್ಮವನ್ನು ಹುಡುಕಿ ಕೊಳ್ಳುವುದು ಸುಲಭವಾಗುತ್ತದೆ'—ಎಂದಿದ್ದಾನವ, ಎಷ್ಟೋ ಸಲ. ಜಡ ಪದಾರ್ಥಗಳ ಅಸ್ತಿತ್ವದ ನಿಯಮಗಳ ಮೇಲಿನ ಪ್ರಭುತ್ವವನ್ನು ಪಡೆದ ವಿಜ್ಞಾನವು ಜಡದ ಅಂಧಕಾರಮಯವಾದ ಕಾರಾಗೃಹದಿಂದ ಮಾನವರ ಆತ್ಮಗಳನ್ನು ಮುಕ್ತಗೊಳಿಸಬೇಕು—ಎಂಬುದು ರವೀಂದ್ರನು ವಿಜ್ಞಾನದಿಂದ ನಿರೀಕ್ಷಿಸಿದ ಕಾರ್ಯಸಾಧನೆ. ಅವನ ನಿರೀಕ್ಷೆಯನ್ನು ಆಧುನಿಕ ವಿಜ್ಞಾನವು ಈ ವರೆಗೂ ಸಫಲಗೊಳಿಸಲು ಶಕ್ತವಾಗದಿದ್ದರೂ ಅದರ ಮುನ್ನಡೆಯ ಹಂತ ಗಳಲ್ಲಿ ಮುಂದೊಮ್ಮೆ ಈ ಸಿದ್ಧಿಯತ್ತ ಹೊರಳೀತೆಂಬುದರಲ್ಲಿ ಸಂದೇಹವಿಲ್ಲ."

"'ಕಾಲೋಹ್ಯಯಂ ನಿರವಧಿರ್ವಿಪುಲಾ ಚ ಪೃಥ್ವೀ' ಎಂಬಷ್ಟೇ ಆಶಾವಾದವನ್ನಿಟ್ಟುಕೊಳ್ಳಬಹುದೆಂದು ತೋರುತ್ತದೆ!"

"ಈ ಅಂಶವೂ ರವೀಂದ್ರನಿಗೆ ಹೊಳೆಯದಿರಲಿಲ್ಲ. ಅದರಿಂದಲೇ ಅವನು ಪಾಶ್ಚಾತ್ಯ ನಾಗರಿಕತೆಗೆ ಎಚ್ಚರಿಕೆ ಕೊಟ್ಟಿದ್ದಾನೆ—'ಪಶ್ಚಿಮವು ಪೂರ್ವವನ್ನು ಸಂದರ್ಶಿಸಿದ್ದು ಇಂದಿನ ಅತ್ಯಂತ ಮಹತ್ವದ ಘಟನೆ. ಹಿಂದೆಂದೂ ಆಗದಿರುವ ಇಂಥ ಮಾನವಕುಲ ಸಂಮಿಳನವು ಸಫಲವಾಗಬೇಕಾದರೆ ಯಾವುದಾದರೂ ಒಂದು ರಚನಾತ್ಮಕವೂ ಉದಾರವೂ ಆದ ಮಹಾಧ್ಯೇಯವು ಹೃದಯದಲ್ಲಿ ನೆಲೆಸಿರಬೇಕು. ಈ ಯುಗದ ಸೇವೆಗೆಂದು ದೇವರಿಂದ ಸರದಾರಿಕೆಯನ್ನು ಪಶ್ಚಿಮವು ಪಡೆದುಕೊಂಡಿದೆಯೆಂಬುದರಲ್ಲಿ ಸಂಶಯವಿಲ್ಲ. ಆಯುಧಗಳೂ ಕವಚಗಳೂ ಪಾಶ್ಚಾತ್ಯರಿಗೆ ದೊರೆತಿವೆ. ಆದರೆ ಸೈತಾನನು ಕೊಡಮಾಡಿದ ಲಂಚಕ್ಕೆ ಕೈಯೊಡ್ಡುವ ಚಂಚಲಬುದ್ಧಿಯನ್ನು ತಡೆಗಟ್ಟಬಲ್ಲ ಧ್ಯೇಯನಿಷ್ಠೆ ಯನ್ನವರು ತಮ್ಮ ಹೃದಯದಲ್ಲಿ ಸಾಧಿಸಿಕೊಂಡಿರುವರೇ? ಜಗತ್ತಿಂದು ಪಶ್ಚಿಮದ ಕೈಯಲ್ಲಿದೆ. ಮಾನವ ಮಾಡತಕ್ಕ ಮಹಾಸೃಷ್ಟಿಗಾಗಿ ಅದನ್ನು

ಬಳಸದೆ ಹೋದರೆ ಪಶ್ಚಿಮವು ಅದನ್ನು ನಾಶಮಾಡಿಬಿಡಬಹುದು! ಅಂಥ ಸೃಷ್ಟಿಕಾರ್ಯದ ಸಾಧನಗಳೆಲ್ಲವೂ ವಿಜ್ಞಾನದ ಕೈಯಲ್ಲಿವೆ; ಆದರೆ ರಚನಾತ್ಮಕ ಪ್ರತಿಭೆ ಮಾತ್ರ ಮಾನವನ ಆಧ್ಯಾತ್ಮಿಕ ಧ್ಯೇಯದಲ್ಲಿದೆ!' "

"ಇದು ಹಲ್ಲೊಬ್ಬರ ಹತ್ತಿರ ಕಡಲೆ ಇನ್ನೊಬ್ಬರ ಹತ್ತಿರ ಇದ್ದಹಾಗೆ ಆಯ್ತಲ್ಲ? ಪಶ್ಚಿಮವು ಅಪೂರ್ವ, ಪೂರ್ವವು ಅಪಶ್ಚಿಮ! ಅವುಗಳ ಸಂಮಿಳನ ವಾದುದು ಕೇವಲ ಹೊರವ್ಯವಹಾರದ್ದು. ಆ ಈ ಜನಗಳು ಒಂದು ಸಮಾಜ ಆದಾರೆಂಬುದು ಕಲ್ಪನಾತೀತ. ಹಾಗಾಗದೆ ಅವರಿವರಲ್ಲಿ ಧ್ಯೇಯ–ನೀತಿ–ತತ್ವ–ಶ್ರದ್ಧೆಗಳ ವಿನಿಮಯ ಎಲ್ಲಾದರೂ ಆಗಲು ಸಾಧ್ಯವೇ? ಭಾರತವೊಂದರಲ್ಲೇ ವಿವಿಧ ಮತಧರ್ಮ–ಜಾತಿಗಳ ಏಕೀಕರಣ, ಸೋದರಭಾವಸಿದ್ಧಿ ಇನ್ನೂ ಅಗತ್ಯ ವಿರುವಷ್ಟುಮಟ್ಟಿಗೆ ಸಾಧಿಸಲ್ಪಡದಿರುವಾಗ ಪೂರ್ವ–ಪಶ್ಚಿಮಗಳ ಮಾತು ದೂರವೇ ಉಳಿಯಿತು. ಕಲ್ಪನೆಯೇನೋ ಕಾವ್ಯಮಯ, ಬಯಸತಕ್ಕದ್ದೇ— ಆದರೆ ಆ ಈ ಜನಗಳ ಪ್ರಾರಬ್ಧಗಳು ಕೆಲವೆಡೆ ಭಿನ್ನ, ಕೆಲವೆಡೆ ವಿರುದ್ಧ ಎನ್ನಿಸಿರುವಾಗ ಈ ವಿಚಾರ 'ಭೃಂಗದ ಬೆನ್ನೇರಿಬಂದ ಕಲ್ಪನಾವಿಲಾಸ'ವೇ ಸರಿ ಎನ್ನಿಸುತ್ತದೆ."

"ಅಂಥ ಸತ್ಕಲ್ಪನೆಯನ್ನು ಮಾನವ ಜಗತ್ತು ಶತಮಾನವಾದರೂ ಧ್ಯಾನಿಸುತ್ತ ಹೋದರೆ, ಅದನ್ನು ವಾಸ್ತವರೂಪಕ್ಕೆ ತರುವ ಸಂಕಲ್ಪಶಕ್ತಿ ರೂಪಿತವಾಗಬಹುದು. ಇಚ್ಛೆಯು ವಿಚಾರದ ತಂದೆ; ವಿಚಾರವು ಕಾರ್ಯದ ತಾಯಿ!"

"ಇಂಥ ವಿಚಾರವನ್ನು ಸಂಜೆ ಹೊತ್ತು ಪಾಶ್ಚಾತ್ಯರು ಕೇಳಿರಬಹುದು; ಮುಂಜಾವದಲ್ಲಿ ಮರೆತಿರಬಹುದು!"

"ಈಗ ಇಂಥ ವಿಚಾರದ ಪ್ರಚಾರವನ್ನು ನಮ್ಮ ಮುಖ್ಯಾಮಾತ್ಯರಾದ ಪಂಡಿತ ಜವಾಹರಲಾಲರೇ ಮಾಡುತ್ತಿಲ್ಲವೆ? ಹೀಗೇ ಹೇಳಿ ಮರೆತು ಹೇಳಿ ಮರೆತು, ಒಂದೊಮ್ಮೆ ಹೇಳಿದ ಬಳಿಕ ಮರೆಯದ ದಿನ ಬರಬಹುದು. ರವೀಂದ್ರನು ಯಾವುದನ್ನೂ ಮುಚ್ಚುಮರೆಯಿಲ್ಲದೆ ಹೇಳಿಬಿಡುವ ಸ್ವಭಾವ ದವನು. ೧೯೩೦ರಲ್ಲಿ ಅಮೇರಿಕಕ್ಕೆ ಹೋದಾಗ ನ್ಯೂಯಾರ್ಕಿನ ಶಿಕ್ಷಣ ಕಾರ್ಯಕರ್ತರಿತ್ತ ಸತ್ಕಾರವೊಂದರಲ್ಲಿ ಬಹುಶಃ ನಮ್ಮ ದೇಶದ ಪರಿಸ್ಥಿತಿಯನ್ನು ನೆನೆದೋ ಏನೋ ಅವನುದ್ಗರಿಸಿದ :

'ಹೆಂಗಸರಿಗೆ ಉಚಿತ (ಯೋಗ್ಯವಾದ) ಶಿಕ್ಷಣವು ದೊರೆತದ್ದೇ ಆದರೆ ನಮ್ಮ ದೇಶಕ್ಕೊಂದು ದೊಡ್ಡ ಭವಿಷ್ಯವುಂಟು. ಹೆಂಗಸರಲ್ಲಿ ಅದ್ಭುತವಾದ ಧೈರ್ಯವೂ ಸ್ವಾರ್ಥತ್ಯಾಗದ ಶಕ್ತಿಯೂ ವಿಶಿಷ್ಟವಾದ ನಿಷ್ಠೆಯೂ ಇವೆ. ಅವರ ಕಳೆದ ಹಕ್ಕುಗಳು ಪುನಃ ಅವರಿಗೆ ದೊರಕಿದರೆ ಬಹಳ ದೊಡ್ಡ ಭವಿಷ್ಯವನ್ನು ನಮ್ಮ ದೇಶವು ಕಂಡೀತು. ಹೆಂಗಸರಿಗೆ ನಾನು ಕೊಟ್ಟುಹೋಗಬೇಕೆಂದಿರುವ ಕೊನೆಯ ದಾನವೆಂದರೆ ಶಿಕ್ಷಣ.' "

"ರವೀಂದ್ರನಿಗೆ ಮಹಿಳೆಯರ ಬಗ್ಗೆ ಇಷ್ಟು ಕಳಕಳಿಯಿತ್ತೇ?"

"ಕೇಳು—'ಮಹಿಳೆ' ಎಂಬ ಪ್ರಬಂಧದಲ್ಲವನು ಹೆಂಗಸು ಗಂಡಸರ ಆಧುನಿಕತೆಯನ್ನಲ್ಲ—ವೈಯಕ್ತಿಕ ಪ್ರೇಮಸಂಬಂಧ ಮತ್ತು ಸದ್ಭಾವನೆಗಳನ್ನು ಬೆಳೆಸಿಕೊಳ್ಳಲು ತಕ್ಕ ಶಿಕ್ಷಣವನ್ನು ಪಡೆಯಬೇಕು—ಎಂದಿದ್ದಾನೆ. ಇಂದಿನ ಪೌರುಷದ ಆಧುನಿಕತೆಯಲ್ಲಿ ಕಂಡುಬರುವ ಪ್ರಭುತ್ವದ ಹೆಮ್ಮೆ 'ಮಾನವೀಯ ಸಂಬಂಧಗಳ ನಿಂದೆ, ಮತ್ತು ಸಂಘ-ಸಂಸ್ಥೆಗಳ ಯಾಂತ್ರಿಕ ಮನಃಪ್ರಣಾಳಿ' ಮುಂತಾದವುಗಳಿಂದಾಗುವ ಹಾನಿಗಳಿಗದೊಂದೇ ಮದ್ದು ಎಂಬುದವನ ಮತ. ಕಾಯಿದೆಯ ಕಸರತ್ತು ಕಡಿಮೆಯಾಗಿ ಸ್ವಾಭಾವಿಕ ಹೃದಯಸೌಂದರ್ಯ ಬೆಳೆಯಬೇಕೆಂಬುದೇ ಸಾರ."

"ಬಹುಸಂಖ್ಯ ಗಂಡು ಮುಖಂಡರು ರಾಷ್ಟ್ರೀಯ ಸಂಘಟನೆ, ತದನುಗುಣವಾದ ಅರ್ಥನೀತಿ, ರಾಜಕಾರಣ ಹಾಗೂ ಸೈನಿಕ ಸಿದ್ಧತೆಗಳನ್ನು ಜಗತ್ತಿನ ಎಲ್ಲ ರಾಷ್ಟ್ರಗಳಲ್ಲೂ ನಡೆಸುತ್ತಿರುವಾಗ ಹೆಂಗಸರೇನು ಮಾಡಿಯಾರು?"

"ಅವರಿಗೆ ಪ್ರೇಮಶಕ್ತಿ ಬಲಿಷ್ಠವಾಗಿ ಎದೆಯಲ್ಲಿ ಬೇರೂರಿ ಬೆಳೆದಿದ್ದರೆ ಅವರವರ ಮುಖಂಡಗಂಡರ ಕಿವಿಹಿಂಡಿ ಬುದ್ಧಿಕಲಿಸಿಯಾರು. ಹೆಂಗಸರು ದುರ್ಬಲರೆನ್ನಿಸುವುದು ಅವರು ತಮ್ಮ ದೈವದತ್ತವಾದ ಪ್ರೇಮಶಕ್ತಿಯನ್ನು **ಸುಶಿಕ್ಷಿತ ರೂಪದಲ್ಲಿ** ಪ್ರಕಟಿಸಲು ಅರಿಯದೆ ಹೋದಾಗಲೇ. ಪ್ರೇಮದ ಅಶಿಕ್ಷಿತ ರೂಪದ ಪ್ರಕಟನೆಯಿಂದ ಹಿಂದೆ ಸಾಮ್ರಾಜ್ಯಗಳ ನಾಯಕರು ಹೋರಾಡಿ ಸತ್ತರು, ತಮ್ಮ ಪ್ರಜಾಕೋಟಿಗೆ ಅಪಾರ ಸಂಕಟಗಳನ್ನು ತಂದು ಒಡ್ಡಿದರು!"

"ಇದೊಳ್ಳೆಯ ತಮಾಷೆಯಾಯಿತಲ್ಲಾ! ನೀವು ಎಲ್ಲಾ ಹೊಣೆಯನ್ನು ಹೆಂಗಸರ ಮೇಲೆಯೇ ಹೊರಿಸಲಾರಂಭಿಸಿದಿರಿ!"

" ಆದರೆ ಹೆಂಗಸರಿಗೆ **ಸರಿಯೊಾದ** ಶಿಕ್ಷಣ ಕೊಡುವ ವ್ಯವಸ್ಥೆಯನ್ನು ಮಾಡದಿರುವ ಹೊಣೆಯನ್ನು ಗಂಡಸರ ತಲೆಯಮೇಲೇ ಹೊರಿಸಿರುವೆನಲ್ಲಾ !"

" ಇದು ಬಹಳ ನಾಜೂಕಾದ ತರ್ಕ. ಕಳ್ಳನೆಂದಾದರೂ ಪೋಲೀಸನಿಗೆ ಬೇಕಾದ ಶಿಕ್ಷಣವನ್ನು ಯಾರಿಗಾದರೂ ಕೊಟ್ಟಾನೇನು ?"

" ಆದರೆ ಕಳ್ಳರಲ್ಲೇ ಉತ್ತರಕನ್ನಡ ಜಿಲ್ಲೆಯ ಕೂಡಲಕೃಷ್ಣನಂಥ ಬಡವರ ಬಂಧುಗಳು ಹುಟ್ಟಿರುವರಲ್ಲದೆ, ಪೋಲೀಸರಲ್ಲಲ್ಲ! ಆದುದರಿಂದ ಗಂಡಸರಲ್ಲೇ ರವೀಂದ್ರನಂಥ ಸದ್ಗುರು ಹುಟ್ಟಿದ. ಇನ್ನಾದರೂ ಹಾಗೇ ಹುಟ್ಟಿ ಸ್ತ್ರೀ ಪುರುಷರಿಬ್ಬರ ಹಾಗೂ ಜಗತ್ತಿನ ಕಲ್ಯಾಣಕ್ಕಾಗಿ ತಕ್ಕ ಶಿಕ್ಷಣವನ್ನು ಇಬ್ಬಣಿ ಗರಿಗೂ ಕೊಡುವ ದಾರಿಯನ್ನು ರಾಷ್ಟ್ರಶಿಕ್ಷಕರು ತೋರಿಸಬೇಕು! ಹಿಂದಿನ ಭಾರತೀಯರು ಅನಕ್ಷರರಾಗಿದ್ದರೂ ಅಶಿಕ್ಷಿತರಾಗಿದ್ದಿಲ್ಲ ಎಂದು ದಿವಂಗತ ರಾಜೇಂದ್ರ ಪ್ರಸಾದರು ಉದ್ಗರಿಸಿದ್ದರು. ಸ್ತ್ರೀ–ಶೂದ್ರರಿಗೆ ವೇದಾಭ್ಯಾಸವು ವರ್ಜ್ಯವಾದ ಕಾಲದಲ್ಲೂ ಕೇಳಿ, ಕಂಡು ಕಲಿವ ಇತರ ವಿದ್ಯೆಗಳು ವರ್ಜ್ಯ ವಾಗಿದ್ದಿಲ್ಲ. ಬ್ರಿಟಿಷ್ ರಾಜ್ಯಭಾರದ ಶತಮಾನಗಳಲ್ಲಿ ದೇಶೀಯ ಶಿಕ್ಷಣ ಕ್ರಮಗಳೆಲ್ಲಾ ಮೂಲೆಗುಂಪಾಗಿ ನೌಕರರೆಂಬ ಗುಮಾಸ್ತರನ್ನು ತಯಾರಿಸುವ ಆಂಗ್ಲವಿದ್ಯೆಯು ನಗರಸ್ಥರಿಗೆ ಓದುಬರಹಗಳ ಮೂಲಕ ದೊರಕುವಂತಾಯಿತು. ಅಂದಿನಿಂದ ವಿದ್ಯಾವ್ಯಾಪ್ತಿ ಹೆಚ್ಚಾಗುತ್ತಬಂದರೂ ಅದರ ಹುರುಳೂ ನೀತಿ ಸಂವರ್ಧಕವಾಗಲಿಲ್ಲ—ಅದರ ಸೌಕರ್ಯವೂ ಹಳ್ಳಿಗರಿಗೆ ಮತ್ತು ಹೆಂಗಸರಿಗೆ ಸಾಕಷ್ಟು ಸಿಗಲಿಲ್ಲ. ಈಗ ಸಿಗುವ ಸ್ಥಿತಿ ತಲೆದೋರಲಾರಂಭಿಸಿದರೂ ಇಂದಿನ ವಿದ್ಯೆ ಯಾರಲ್ಲೂ ಭಾರತೀಯ **ಶಿಷ್ಟತನವನ್ನು** ಬೆಳೆಸುವ ಮುಖ್ಯಗುರಿಯನ್ನು ಇಟ್ಟುಕೊಂಡಿಲ್ಲ. ಎಲ್ಲವೂ ಬಾಯಬಣ್ಣಚಾರವಾಗಿದೆ. ಕನ್ನಡ ಕವಿವರ್ಯ ಕುವೆಂಪುಗಳು ನಿರಂಕುಶಮತಿಗಳಾಗಬೇಕೆಂದು ಯುವಜನಾಂಗಕ್ಕಿತ್ತ ಸಂದೇಶ ದಲ್ಲಿ ವಿದ್ಯೆಯ ಗುರಿ ಚೆನ್ನಾಗಿ ಸ್ಪಷ್ಟವಾಗಿದೆ. ಆದರೆ 'ಯೋಜಕಸ್ತತ್ರ ದುರ್ಲಭಃ' ಎಂಬುದು ಮುಗಿಯದ ಹಾಡು!

'ರಾಷ್ಟ್ರೀಯತೆ' ಎಂಬ ಲೇಖನದಲ್ಲಿ ರವೀಂದ್ರನು, ಆಧುನಿಕತೆಯು ಮನಃಸ್ವಾತಂತ್ರ್ಯದಲ್ಲಲ್ಲದೆ, ಅಭಿರುಚಿದಾಸ್ಯದಲ್ಲಲ್ಲ' ಎಂಬುದನ್ನು ವಿಸ್ತಾರ ವಾಗಿ ಪ್ರತಿಪಾದಿಸಿದ್ದಾನಲ್ಲದೆ, ವಿಜ್ಞಾನದ ದುರುಪಯೋಗವನ್ನೂ ಅದು ಸರ್ವರೋಗಸಂಜೀವಿನಿ ಎಂದು ಭಾವಿಸುವ ಅಂಥ ವಿಶ್ವಾಸವನ್ನೂ ಬಲವಾಗಿ

ಖಂಡಿಸಿದ್ದಾನೆ. ಅತ್ತ ಸ್ವಲ್ಪ ಲಕ್ಷ್ಯಹಾಕಬೇಕು ನಮ್ಮ ಕವಿಯ ಹೊಗಳು ಭಟ್ಟರಾದ ಮುಖಂಡರು!

ಮುಂದೆ ಕೇಳು—೧೯೩೦ರಲ್ಲಿ ರವೀಂದ್ರನು ಆಕ್ಸ್‌ಫರ್ಡ್ ವಿಶ್ವವಿದ್ಯಾ ನಿಲಯದ ಆಮಂತ್ರಣದ ಮೇರೆಗೆ ಹಿಬ್ಬರ್ಟ್ ಭಾಷಣಗಳನ್ನು ಕೊಡಲು ಇಂಗ್ಲೆಂಡಿಗೆ ಹೋದನು. ಹೋಗುವಾಗ ಅವನು ಚಿತ್ರಿಸಿದ ಚಿತ್ರಗಳನ್ನೂ ತನ್ನ ಗೆಳೆಯರ ಒತ್ತಾಯಕ್ಕೆ ಬಾಗಿ ಜೊತೆಗೆ ಒಯ್ದನು. ಅವನು ವರ್ಣಚಿತ್ರ ಬಿಡಿಸಲಾರಂಭಿಸಿದ್ದು ಸುಮಾರು ೬೮ರ ಇಳಿವಯಸ್ಸಿನಲ್ಲಿ."

"ರವೀಂದ್ರನು ಅಷ್ಟು ಗಣ್ಯ ವರ್ಣಚಿತ್ರಕಾರನೂ ಆಗಿದ್ದನೇ? ಆಶ್ಚರ್ಯ!"

"ನಿನಗೆ ಎಲ್ಲವೂ ಆಶ್ಚರ್ಯವೇ!"

"ನಿಮಗೆ ಯಾವುದೂ ಆಶ್ಚರ್ಯಕರವಲ್ಲ!"

"ಇಂಥ ಜನರೇ ಪೂರ್ಣಪ್ರಜ್ಞರು!"

"ಶಹಭಾಸ್! ಇಬ್ಬರಿಗೂ ಶಾಲುಜೋಡಿ—ಸುಲಭವಾಗಿ ಹೊದೆದು ಕೊಂಡು ಕುಳಿತುಕೊಳ್ಳೋಣ."

"ಯಾಕೆ ಹೊದಕೋಬಾರದು ಯಾರಾದರೂ ಕೊಟ್ಟರೆ?"

"ಪೂರ್ಣಪ್ರಜ್ಞರಿಗೆ ಆ ಹೆಸರನ್ನು ಅಪೂರ್ಣಪ್ರಜ್ಞರು ಕೊಡಲು ಅನರ್ಹರು. ಆದ್ದರಿಂದ ಅವರಿಗೆ ಅವರೇ ಕೊಟ್ಟುಕೊಳ್ಳಬೇಕು!"

"ಆಯಿತು. ನಾನು ರವೀಂದ್ರನ ಚಿತ್ರಗಾರಿಕೆಯ ಪ್ರಸಿದ್ಧಿಯನ್ನು ಈಗ ನಿಮ್ಮಬಾಯಿಂದ ಕೇಳಿದೆನಲ್ಲ–ಅವುಗಳ ಚಂದದಷ್ಟೇ ಆದೀತು ನಿಮ್ಮಾ ಜಂಭ!"

"ಅಲ್ಲವೇ — ಅವನು ಬರೆದ ಚಿತ್ರಗಳನ್ನು ಲಂಡನ್, ಪ್ಯಾರಿಸ್, ಬರ್ಲಿನ್ ಪಟ್ಟಣಗಳಲ್ಲೂ ಅಮೇರಿಕದಲ್ಲೂ ಪ್ರದರ್ಶಿಸಿದ್ದರು; ನೋಡಲು ಜನರು ಕಿಕ್ಕಿರಿದಿದ್ದರು!"

"ಸರಿ—ಜನ ಮರುಳೋ ಜಾತ್ರೆಮರುಳೋ ಎಂದಹಾಗಾಗಿರಬೇಕು!"

"ಏನು ನಿನಗೆ ನಂಬಿಕೆಯೇ ಇಲ್ಲವೇ? ನೀನೊಬ್ಬಳು ಮಹಾ ಬುದ್ಧಿವಂತೆ!

" ಅಲ್ಲರೀ, ರವೀಂದ್ರ ಅಡಿಗೆಯನ್ನೂ ಬಹಳ ಚೆನ್ನಾಗಿ ಮಾಡಬಲ್ಲವನು, ಕವಿತೆಯನ್ನೂ ಚೆನ್ನಾಗಿ ಬರೆಯಬಲ್ಲವನು, ಚಿತ್ರವನ್ನೂ ಕೊರೆಯಬಲ್ಲವನು —ಹೀಗೆಲ್ಲಾ ಹೇಳುತ್ತಹೋದರೆ ನಿಜವೇ ಆಗಿದ್ದರೂ ನಂಬುವುದು ಬಹಳ ಕಷ್ಟವಾದೀತು."

" ಅವನು ಚಿತ್ರವನ್ನು ಬರೆದು ಜಗದ್ವಿಖ್ಯಾತನಾದನೆಂದೇನೂ ನಾನು ಹೇಳಲಿಲ್ಲ. ರವೀಂದ್ರನ ವಿವಿಧ ಅಭಿರುಚಿ–ಆಸಕ್ತಿಗಳಲ್ಲಿ ಚಿತ್ರಗಾರಿಕೆಯೂ ಒಂದೆಂಬುದನ್ನು ಬಿಂಬಿಸಲು ನಡೆದ ಸಂಗತಿಯನ್ನು ಹೇಳಿದೆನು — ಅಷ್ಟೆ. ಅವನು ಮುಖ್ಯವಾಗಿ ವಾಕ್ಕಲಾವಿಶಾರದನೆಂಬುದು ಜಗತ್ಪ್ರಸಿದ್ಧ."

" ಸಂಶಯವೇ ಇಲ್ಲ ಅನ್ನಿ."

" ಈ ಸಂದರ್ಭದಲ್ಲಿ ಅಮೇರಿಕಕ್ಕೆ ಹೋದ ರವೀಂದ್ರನು ಸ್ವರಾಜ್ಯ, ಭಾರತದಲ್ಲಿಯ ಬ್ರಿಟಿಷ್ ರಾಜ್ಯಭಾರದ ಲಕ್ಷಣ, ಹಿಂದು – ಮುಸಲಮಾನ ಐಕ್ಯ, ಗ್ರಾಮಜೀವನಕ್ಕಾದ ಹಾನಿ, ಭಾರತದ ಬಿಡುಗಡೆಗೆ ಅಮೇರಿಕವು ಕೊಡಬೇಕಾದ ಕೊಡುಗೆ—ಎಂಬೀ ಅನೇಕ ವಿಷಯಗಳ ಮೇಲೆ ಉದ್ಬೋಧಕ ವಾದ ಉಪನ್ಯಾಸಗಳನ್ನಿತ್ತನು. ಅಮೇರಿಕನ್ನರು ರವೀಂದ್ರನ ವಿಚಾರಧಾರೆ, ವಾಗ್ಧಾರೆಗಳ ಅರ್ಧನಾರೀಶ್ವರ ಯೋಗಕ್ಕೆ ಬೆರಗಾದರು, ಮೆಚ್ಚಿದರು, ಹೊಗಳಿದರು. ಆದರೆ ಅಮೇರಿಕಕ್ಕೆ ಆಗ ಹೋಗುವ ಮೊದಲು ರಶಿಯವನ್ನು ಹೊಕ್ಕುಬಂದದ್ದರಿಂದ ರವೀಂದ್ರನು ರಶಿಯದ ಪ್ರಗತಿಪರ ಶಿಕ್ಷಣಪದ್ಧತಿಯನ್ನು ಪ್ರಶಂಸಿಸಿದನು ; ಅದು ಮಾತ್ರ ಅಮೇರಿಕನ್ನರಿಗೆ ಅಷ್ಟು ರುಚಿಸಲಿಲ್ಲ."

" ಹಾಗಾದರೆ ರವೀಂದ್ರನ ವಾಕ್ಕಲೆಯ ಸಾಮರ್ಥ್ಯವೂ ಪ್ರಶ್ನಾರ್ಥಕ ಚಿಹ್ನೆಯನ್ನು ಎದುರಿಸಬೇಕಾಯಿತೆನ್ನಿ."

" ಹಾಗಲ್ಲವೇ—ಅಮೇರಿಕನ್ನರಿಗೆ ಸಾಮೂಹಿಕ ಬಂಧನ, ದಬ್ಬಾಳಿಕೆ, ರಾಜಕೀಯ ಹಕ್ಕುಬಾಧ್ಯತೆಗಳ ದಮನ ಮುಂತಾದವು ರಶಿಯದಲ್ಲಿದ್ದವೆಂದು ಕೇಳಿ ಗೊತ್ತಿತ್ತು ! "

" ಅಂದರೆ ರವೀಂದ್ರ ಆಗತಾನೇ ಕಂಡುಬಂದು ಹೇಳಿದರೂ ಕೇಳಲಿಲ್ಲ ಅನ್ನಿ."

" ಊರು ಬಿಟ್ಟರೂ ಪ್ರಾರಬ್ಧ ಬಿಡದು ಅಂದಹಾಗೆ ಅವರ ಪೂರ್ವಗ್ರಹ ಹೇಗೆ ಹೋದೀತು ? ಹೇಳು. ರಶಿಯದಲ್ಲಿ ರವೀಂದ್ರನು ಅಮೇರಿಕದ ಏನಾದರೂ

ಒಂದನ್ನು ಎತ್ತಿ ಹೊಗಳಿದ್ದರೂ ಹಾಗೇ ಆಗುತ್ತಿತ್ತೋ ಏನೋ. ಶ್ರದ್ಧಾಶುದ್ಧಿ ಇಲ್ಲದವರೆದುರು ಯಾರು ಏನು ಹೇಳಿದರೂ ವ್ಯರ್ಥ. ಹೇಳುವವ ಎಂಥವನೇ ಆಗಿದ್ದರೂ ಅವನೇ ಪೂರ್ವಗ್ರಹಗ್ರಸ್ತನೆಂದು ಅವರು ತಿಳಿದುಕೊಳ್ಳುತ್ತಾರೆ!"

"ಹಾಗಾದರೆ ಸತ್ಯಕ್ಕೆ ಎಲ್ಲ ಸಂದರ್ಭಗಳಲ್ಲೂ ಸಾವಿಲ್ಲ ಎಂಬುದು ಸುಳ್ಳು."

"ಎಲ್ಲವುಗಳ ಎಲ್ಲ ಹುಟ್ಟು ಸಾವುಗಳೂ ಸಾಂದರ್ಭಿಕ. ಹುಟ್ಟದೇ ಇದ್ದದ್ದು ಮಾತ್ರ ಸಾಯದೇ ಇರಬಲ್ಲದು."

"ತಿಳಿವಳಿಕೆಗೆ ಹುಟ್ಟು - ಸಾವುಗಳಿದ್ದರೆ (ನೆನಪು - ಮರೆವುಗಳಿದ್ದರೆ) ಅದರ ಹಣೆಯಬರಹವೂ ಅಷ್ಟೇ. ಸರಿಯಾದ ತಿಳಿವಳಿಕೆ-ತಪ್ಪುತಿಳಿವಳಿಕೆ ಇವುಗಳೆರಡಕ್ಕೂ ಆದಿ-ಅಂತಗಳುಂಟು."

"ಮನುಷ್ಯನೇ ಹುಟ್ಟಿದವನಾಗಿರುವಾಗ ಅವನಿಗೆ ಸಂಬಂಧಿಸಿದ ಎಲ್ಲವಕ್ಕೂ ಹುಟ್ಟುಸಾವುಗಳಿರಬೇಡವೇ?"

"ಹಾಗಾದರೆ ಮುಕ್ತಿಯ ಅನುಭವಕ್ಕೂ ಮುಕ್ತಿಯಿದೆ, ಕೊನೆಯಿದೆ!"

"ಅದು ಮಾತ್ರ ಅಪವಾದಾತ್ಮಕ. ಆ ಅನುಭವವು ಹುಟ್ಟದೆ ಇದ್ದ ಪದಾರ್ಥವಾದುದರಿಂದ ಅದಕ್ಕೆ ಸಾವಿಲ್ಲ! ಆ ಅನುಭವ ಇದ್ದರೂ ಅರಿಯದೆ ಇರುವುದು ಬಂಧ. ಹಾಗೆ ಮರೆಯುವುದು ಮಾಯೆಯ ಕಾಲಕ್ಕೆ ಸೇರಿದ ಮಧ್ಯ ಯುಗದಲ್ಲಿ. ಈ ಮಧ್ಯ ಯುಗದ ಎಲ್ಲ ಸತ್ಯ-ಸತ್ಯಾಭಾಸಗಳಿಗೂ ಸಾವಿದೆ."

"ಅಂತೂ ರವೀಂದ್ರ ಸೋತ ಅನ್ನಿ, ಒಂದು ವಿಷಯದಲ್ಲಿ."

"ಅವನ ಆತ್ಮಕ್ಕೆ ಇಷ್ಟವಾದ ಮಹಾರಾಷ್ಟ್ರಗಳ ಸ್ನೇಹಸಂವರ್ಧನೆಯನ್ನು ಈಗ ನಮ್ಮ ರಾಷ್ಟ್ರಪತಿಗಳೂ ಮುಖ್ಯಮಂತ್ರಿಗಳೂ ಸಾಧಿಸುವುದರಲ್ಲಿ ಅಂಶತಃ ಯಶಸ್ವಿಗಳಾಗುತ್ತ ಹೋಗಿಲ್ಲವೇ?"

"ಅಂದರೆ ಈ ಆತ್ಮಗಳೆಲ್ಲ ಒಂದೇ ಸರಪಳಿಗೆ ಸೇರಿದ ಗಾಡಿಗಳೆನ್ನಿ."

"ಸತ್ಯವಾಗಿಯೂ, ಇವರೆಲ್ಲರ ಮಹಾಧ್ಯೇಯ ಒಂದೇ! ಇನ್ನೊಂದು ವಿಚಾರ: ರಶಿಯದಲ್ಲಿ ಇದ್ದದ್ದೆಲ್ಲಾ ಯೋಗ್ಯ ಎಂದು ರವೀಂದ್ರ ಹೇಳಿಲ್ಲ. ಅಲ್ಲಿ ಹೋದಾಗ ರಶಿಯನ್ನರೆದುರಿಗೇ ಬಲಾತ್ಕಾರ, ಅಸಹನೆ, ವರ್ಗದ್ವೇಷ ಮುಂತಾದ ಆಡಳಿತದೋಷಗಳನ್ನು ಅವನು ಖಂಡಿಸಿದ್ದನು."

" ಆದರೆ ನೋಡಿ, ನನಗೊಂದು ಸಂಶಯ ಉಂಟಾಗಿದೆ : ಒಳ್ಳೆಯ ಧ್ಯೇಯವೆಂದು ಸತ್ಯವಂತರು ಹೇಳಿದ್ದನ್ನು ಜಾರಿಗೆ ತರಲು ಅಡ್ಡಬಂದವರನ್ನು ಪ್ರಭುಶಕ್ತಿಯಿಂದ ಹತ್ತಿಕ್ಕದೆ ಹೋದರೆ ಒಳ್ಳೆಯದಾಗುವುದನ್ನು ನಾವು ಕಾಣುವುದೆಂತು ?"

" ಇದಕ್ಕೆ ಸ್ವಾತಂತ್ರ್ಯಮೀಮಾಂಸಕನಾದ ಜಾನ್ ಸ್ಟೂಅರ್ಟ್ ಮಿಲ್ಲನು ಉತ್ತರಕೊಟ್ಟಿದ್ದಾನೆ : ಉಪದೇಶಸ್ವಾತಂತ್ರ್ಯವನ್ನು ಎಲ್ಲರಿಗೂ ಕೊಡಬೇಕು ; ಆದರೆ ಕಾರ್ಯಸ್ವಾತಂತ್ರ್ಯವನ್ನು ದೇಶಹಿತವಿರೋಧಿಗಳಿಗೆ ಕೊಡಬಾರದು— ಎಂದು. ದುರುಪದೇಶಕ್ಕೂ ಸ್ವಾತಂತ್ರ್ಯವಿರಬೇಕು ; ಸ್ವಾತಂತ್ರ್ಯವು ಸದುಪದೇಶಕ್ಕೂ ಇರುವಾಗ, ಇವಕ್ಕೆ ಸತ್ವಪರೀಕ್ಷೆಯಾಗಿ—ಸತ್ವವಿದ್ದದ್ದೇ ಆದರೆ—ಅದರ ಪ್ರಭಾವವನ್ನು ತಡೆಗಟ್ಟಬಿಡುವುದು ! ಪ್ರಜಾಪ್ರಭುತ್ವ ನಂಬಿದ್ದು ಈ ತತ್ವವನ್ನು. ಪ್ರಭುಶಕ್ತಿಗೆ ಯಾವಾಗಲೂ ವಿವೇಕವಿರುತ್ತದೆ ಎಂಬುದು ಅನುಭವವಿರುದ್ಧವಾಗಿರುವುದರಿಂದ ಅಭಿಪ್ರಾಯಪ್ರಚಾರವನ್ನು ಹತ್ತಿಕ್ಕುವ ಹಕ್ಕನ್ನು ಅದಕ್ಕೆ ಪ್ರಜಾತಂತ್ರವು ಕೊಡುವುದಿಲ್ಲ. ರವೀಂದ್ರನಾದರೂ ಈ ಮತದವನೇ. ಅದರಿಂದಲೇ ಸುಶಿಕ್ಷಣಕ್ಕೆ ಅವನು ಅತಿ ಮಹತ್ವವನ್ನು ಕೊಟ್ಟದ್ದು."

" ಸುಶಿಕ್ಷಣ – ಕುಶಿಕ್ಷಣಗಳನ್ನು ನಿರ್ಧರಿಸಿ ಹೇರುವ ಅಧಿಕಾರವನ್ನು ಸರಕಾರ (ಪ್ರಭುಶಕ್ತಿ) ಇಟ್ಟುಕೊಂಡರೆ ಅದು ಪ್ರಜಾಸತ್ತೆಗೆ ಹೊಂದುವುದೇ ?"

" ಖಂಡಿತವಾಗಿಯೂ ಹೊಂದುವುದಿಲ್ಲ. ಸಾರ್ವಜನಿಕ ಪೂಜ್ಯತೆಯನ್ನು ಪಡೆದ ಮಹಾಶಿಕ್ಷಕರ ಸಲಹೆಯನ್ನು ಕಾಲಕಾಲಕ್ಕೆ ತೆಗೆದುಕೊಂಡು ಅದರಂತೆ ಚಾಚೂ ತಪ್ಪದೆ ನಡೆದುಕೊಂಡರೆ ಪರವಾಯಿಲ್ಲ—ಅಷ್ಟೆ. ರವೀಂದ್ರನೊಬ್ಬ ಮಹಾಶಿಕ್ಷಕ. ಅವನ ಮಹಾಕವಿತ್ವದ ಪ್ರಭೆಯು ಪ್ರವಾದಿತ್ವದಿಂದಲೂ ಕೂಡಿತ್ತು. ದುಂಡು ಮೇಜಿನ ಪರಿಷತ್ತು ಲಂಡನ್ನಿನಲ್ಲಿ ನಡೆಯುತ್ತಿದ್ದಾಗ ನಮ್ಮ ಸ್ವಾತಂತ್ರ್ಯಸಂಗ್ರಾಮವನ್ನು ಕುರಿತು 'ಈ ಕ್ರಾಂತಿಯು ಮುಪ್ಪಾಗಿ ಸತ್ತುಹೋದೀತು ಎನ್ನಲು ಸಾಧ್ಯವಿಲ್ಲ' ಎಂದಿದ್ದ. ಅದು ಹಾಗೇ ಆಯಿತು. ಹಾಗೇ ೧೯೩೦ನೆಯ ನವೆಂಬರ್ ೨೫ರಲ್ಲಿ ನ್ಯೂಯಾರ್ಕಿನಲ್ಲಿ ನಡೆದ ಅಮೇರಿಕನ್ ಭೋಜನಸಮಾರಂಭವೊಂದರಲ್ಲಿ ಭಾರತದ ಸ್ವಾತಂತ್ರ್ಯಸಾಧನೆಯ ಪ್ರಯತ್ನವನ್ನು ಅಮೇರಿಕನ್ನರು ಬೆಂಬಲಿಸಬೇಕೆಂದು ಕೇಳಿಕೊಂಡಿದ್ದ. ಅದು ಕೂಡ ಸತ್ಯವಾಯಿತು. ಸ್ವಾತಂತ್ರ್ಯಲಾಭಕ್ಕೆ ಅವರ ಸಹಾನುಭೂತಿ ಇದ್ದಂತೆಯೇ

ಸ್ವಾತಂತ್ರ್ಯೋತ್ತರ ಭಾರತದ ಅಭಿವೃದ್ಧಿಯಲ್ಲೂ ಅವರು ಆಸಕ್ತಿ ತಳೆದುದು ರವೀಂದ್ರನಂಥವರಿರುವ ದೇಶವಿದೆಂದು ಅಮೇರಿಕನ್ನರಿಗೆನ್ನಿಸಿದ್ದು ಬಲವಾದ ಒಂದು ಕಾರಣವೆನ್ನಬಹುದು. ೧೯೩೦ನೆಯ ಡಿಸೆಂಬರಿನಲ್ಲಿ ಅಮೇರಿಕದಿಂದ ಹಿಂದಿರುಗುವಾಗ ತನಗಾಗಿ ನಡೆದ ನೃತ್ಯೋತ್ಸವದಲ್ಲಿ ದೊರೆತ ಧನವೆಲ್ಲವನ್ನೂ ನ್ಯೂಯಾರ್ಕಿನಲ್ಲಿದ್ದ ನಿರುದ್ಯೋಗಿಗಳ ಕಷ್ಟಪರಿಹಾರ ನಿಧಿಗೆ ದಾನಮಾಡಿ ಬಂದದ್ದು ರವೀಂದ್ರನ ಕೀರ್ತಿಯನ್ನಲ್ಲಿ ಅಜರಾಮರಗೊಳಿಸಲು ಕೊನೆಯ ಕಾರಣವಾಯಿತು. ದೀನರ, ದುಃಖಿಗಳ ಬಗ್ಗೆ ಹೆಚ್ಚಿನ ದಯೆ ಇರುವುದೂ ಮಹಾಕವಿಯ ಆದರ್ಶ ಚಾರಿತ್ರದ ಒಂದು ಅಂಗವೆಂಬುದು ರವೀಂದ್ರನ ಸಿದ್ಧಾಂತಕ್ಕೆ ಅನುಗುಣವಾದುದು."

"ನಮ್ಮ ರವೀಂದ್ರನನ್ನು 'ಶಿಕ್ಷಕ–ಕವಿ' ಎನ್ನಬೇಕೋ 'ಕವಿ–ಶಿಕ್ಷಕ' ಎನ್ನಬೇಕೋ?"

"ಈ ಗುಣದ್ವಯವೂ ಋಷಿತ್ವದಲ್ಲಿದೆ. ಅವನು ಋಷಿ (Sage). ತನ್ನ ಸಾಹಿತ್ಯ ಕೃತಿಗಳಿಗಿಂತಲೂ ವಿಶ್ವಭಾರತಿಯನ್ನು ಹೆಚ್ಚು ಮಮತೆಯಿಂದ ನೋಡುತ್ತಿದ್ದನೆಂಬ ಅಂಶವನ್ನು ಗಮನಿಸಿದರೆ ಗುರುದೇವನೆಂದು ಅವನನ್ನು ಕರೆದುದು ಯುಕ್ತವೆನ್ನಿಸುತ್ತದೆ. ಅದರ ಅರ್ಥವೇನೆಂದರೆ ಆದರ್ಶ ಕವಿದೇವನು ಗುರುದೇವತ್ವಕ್ಕರ್ಹ ಎಂದು. ಬ್ರಹ್ಮನು ಉಪನಿಷತ್ತಿನ ಪ್ರಕಾರ ಕವಿ; ಪುರಾಣಗಳ ಪ್ರಕಾರ ವಾಗೀಶ, ಸರ್ವಶಾಸ್ತ್ರಜ್ಞ. ಅವನಿಲ್ಲಿ ತಕ್ಕ ಉಪಮಾನ. ೧೯೩೦ರಲ್ಲಿ ವಿಶ್ವಭಾರತಿಯ ಪಾಲನೆ–ಪೋಷಣೆಗಳಿಗಾಗಿ ರವೀಂದ್ರನು ಕೊನೆಯ ಸಲ ಅಮೇರಿಕಕ್ಕೆ ಧನಾರ್ಥಿಯಾಗಿ ಹೋದನು. 'ಅಮೇರಿಕನ್ ಠಾಕೂರ ಸಮಿತಿ' ಆಗ ಅಲ್ಲಿ ರಚಿತವಾಯಿತು. ಅದರ ಮೂಲಕ ಧನಸಂಗ್ರಹ ನಡೆಯಿತು. ಅಮೇರಿಕದಿಂದ ಡಾಕ್ಟರ್ ಹ್ಯಾರಿ ಟಿಂಬರ್ಸರು ಕುಟುಂಬ ಸಮೇತರಾಗಿ ಭಾರತಕ್ಕೆ ಬಂದು ರವೀಂದ್ರನ ಗ್ರಾಮಾಭಿವೃದ್ಧಿಯೋಜನೆಗಳ ಸಾಧನೆಯಲ್ಲಿ ಅನೇಕ ಸಲ ಸಹಾಯಕರಾಗಿ ನಿಂತದ್ದು ಅವನ ಧ್ಯೇಯನಿಷ್ಠೆಗೆ ವಿದೇಶವೊಂದು ಇತ್ತ ಮನ್ನಣೆಯೆನ್ನಬಹುದು!"

"ಋಷಿಬುದ್ಧಿಯು ಶಾಂತಿಪ್ರಿಯ; ಆದುದರಿಂದ ಶಾಂತಿನಿಕೇತನವೇ ರವೀಂದ್ರನ ವ್ಯಕ್ತಿತ್ವಕ್ಕೆ ಅನ್ವರ್ಥಕವಾದ ಸಂಸ್ಥೆ ಎನ್ನಬಹುದಲ್ಲವೆ?"

" ನಿಜ; ೧೯೩೯ರಲ್ಲಿ ೨ನೆಯ ಜಾಗತಿಕ ಯುದ್ಧ ಶುರುವಾಯಿತು. ಆಗ ರವೀಂದ್ರನು ಅಮೇರಿಕದ ಅಧ್ಯಕ್ಷರಾಗಿದ್ದ ಫ್ರಾಂಕ್ಲಿನ್ ಡಿ. ರೂಸ್ವೆಲ್ಟರಿಗೆ ಕಳಿಸಿದ ಮಹಾ ಸಂದೇಶದಲ್ಲಿ 'ಜಾಗತಿಕ ವಿನಾಶವನ್ನು ತಡೆಗಟ್ಟುವಲ್ಲಿ ಅಮೇರಿಕವು ಹಿಂದೇಟು ಹಾಕಲಾರದು ಎಂದು ನನ್ನ ಪ್ರತ್ಯಾಶೆ' ಎಂಬುದಾಗಿ ಒಕ್ಕಣಿಸಿದ್ದಿಲ್ಲಿ ಸ್ಮರಣೀಯ. ಈ ಸಂದೇಶ ತಲುಪಿದ ಬಳಿಕ ೧ಳ ತಿಂಗಳುಗಳು ಕಳೆದಮೇಲೆ ರವೀಂದ್ರ ದಿವಂಗತನಾದದ್ದು. ಅವನ ಸಂದೇಶವನ್ನು ಮಿತ್ರ ರಾಷ್ಟ್ರಗಳೆಲ್ಲ ಪಾಲಿಸಿದವು. ಅದರಿಂದ ಜಗತ್ತು ಜರ್ಮನ್ ಸಾಮ್ರಾಜ್ಯಶಾಹಿಗೆ ಬಲಿಯಾಗುವ ದುರ್ಯೋಗವು ತಪ್ಪಿತು."

"'ಜಗದ್ಧಿತಾಯ ಕೃಷ್ಣಾಯ' ಎಂದು ಶ್ರೀಕೃಷ್ಣನನ್ನು ಸ್ತುತಿಸುವುದನ್ನು ಕೇಳಿದ್ದೆ."

" ಹೌದು. ಜಗದ್ಧಿತವನ್ನು ಚಿಂತಿಸುವವರಿಗೇ ಶ್ರೀಕೃಷ್ಣನ ಪೂಜ್ಯತೆ—ಅಂತಾರಾಷ್ಟ್ರೀಯ ಮನ್ನಣೆ. ಮಿಕ್ಕವರಿಗೆಲ್ಲಿ ಬಂತು ಅಂಥ ಸ್ಥಾನ? ಅಂಥವರನ್ನೇ ಪ್ರಬುದ್ಧಭಾರತ ಜಗದ್ಗುರುವೆನ್ನುತ್ತದೆ; ಕೇವಲ ಬಿರುದಭಾಜ ಗುರುಗಳನ್ನಲ್ಲ."

" ಪೂಜ್ಯಕ್ಕೆ ಸೊನ್ನೆಯೆಂಬ ಅರ್ಥ ಬಂದದ್ದೇಕೆ? ಎಂಬುದು ನನ್ನ ಬಾಲಿಶ ಪ್ರಶ್ನೆ—ಬೇಸರವಾಗದಿದ್ದರೆ ಹೇಳಿ ಅಂತೀನಿ."

" ಹಾಲು–ಮೊಸರುಗಳಿಗೆ ಗತಿಯಿಲ್ಲದ ಕ್ಷೀರಸಾಗರ ಭಟ್ಟರು ಕಂಡು ಬಂದುದರಿಂದ; ಬೆಣ್ಣೆ–ತುಪ್ಪಗಳಿಗೆ ಬೇಡಲು ಹೋಗುವ ಸ್ಥಿತಿಯಲ್ಲಿರುವ ನವನೀತಂ ಎಂಬ ನಾಮಧೇಯವುಳ್ಳವರು ಹೆಚ್ಚಾಗುತ್ತಬಂದುದರಿಂದ ಬಣ್ಣ–ಪರಿಮಳಗಳ ಬದಲು ಅವುಗಳ ವಿರುದ್ಧ ಗುಣಗಳನ್ನುಳ್ಳ ಗುಲಾಬಿಯವರು ಕಣ್ಣಿಗೆ ಬೀಳುತ್ತ ಬಂದುದರಿಂದ — ಸವತೆಯ ಬೀಜದಷ್ಟು ಕಣ್ಣಿರುವ ವಿಶಾಲಾಕ್ಷಿಯರು ಮೆರೆಯಲಾರಂಭಿಸಿದ್ದರಿಂದ!"

" ಅಂದರೆ....?"

" ಅಂದರೆ ಟೊಳ್ಳುಗಟ್ಟಿಗಳು ತಮ್ಮ ಸಂಖ್ಯೆಯನ್ನು ಬೆಳೆಸಲಾರಂಭಿಸಿದುದರಿಂದ—ಎಂದು.

ಯಸ್ಯಾಸ್ತಿ ವಿತ್ತಂ ಸ ನರಃ ಕುಲೀನಃ
ಸ ಪಂಡಿತಃ ಸ ಶ್ರುತಿವಾನ್ ಗುಣಜ್ಞಃ।
ಸ ಏವ ವಕ್ತಾ ಸ ಚ ದರ್ಶನೀಯಃ
ಸರ್ವೇ ಗುಣಾಃ ಕಾಂಚನಮಾಶ್ರಯಂತೇ॥

ಎಂಬ ಸಮಾಜಬುದ್ಧಿ ತಲೆದೋರಿದಾಗ 'ಪೂಜ್ಯವು' ಸೊನ್ನೆಯಾಯಿತು. ಈಗ 'ಮಾನ್ಯ', 'ಸನ್ಮಾನ್ಯ', 'ಶ್ರೀಯುತ' ಮುಂತಾದವುಗಳಿಗೂ ಅದೇ ಅರ್ಥ!"

"ಹಹ್ಹಹ್ಹ! ಬಹಳ ಚೆನ್ನಾಗಿ ಅರ್ಥ ಹೇಳ್ತಿದ್ದೀರಾ—ಒಳ್ಳೇ ಮೇಷ್ಟ್ರು ಕಣ್ರೀ ನೀವು!"

"ನಮ್ಮ ಮೇಷ್ಟ್ರೊಮ್ಮೆ ಹೇಳುತ್ತಿದ್ದರು: ನರನಂತೆ ತೋರುವವನು ವಾನರ—ಎಂದು; ನರನೋ ಏನೋ ಎಂಬ ಸಂಶಯ ಉಂಟಾಗುವುದಂತೆ ವಾನರನನ್ನು ಕಂಡಾಗ. 'ವಾನರನೋ ಏನೋ ಎಂಬ ಸಂಶಯವು ಒಬ್ಬ ನರನನ್ನು ಕಂಡಾಗ ಉಂಟಾದರೆ?' ಎಂದು ನಾನು ಕೇಳಿದೆ. ಆಗ ಅವರು 'ಮುದ್ರಾರಾಕ್ಷಸನ ಕೈಯಲ್ಲಿ ಕಪೀಂದ್ರನು ಕವೀಂದ್ರನಾದಂತಾಗುತ್ತದೆ' ಎಂದು ಉತ್ತರವಿತ್ತರು. ಹಾಗೇ ರವೀಂದ್ರನೆಂದು ಹೆಸರಿಟ್ಟುಕೊಂಡವನೀಗ ಒಮ್ಮೆ ರಮ್ಮೀಂದ್ರ ('ರಮ್ಮಿ' ಆಟದಲ್ಲಿ ಎತ್ತಿದ ಕೈ) ಎನ್ನಿಸಿಕೊಂಡರೆ ಆಶ್ಚರ್ಯ ಏನಿಲ್ಲ!

ಜರ್ಮನಿಯ ತತ್ವಜ್ಞಾನಿ ಆಲ್ಬರ್ಟ್ ಶ್ವಿಟ್ಜರ್ ರವೀಂದ್ರನನ್ನು 'ಭಾರತದ ಗಯಟೆ' ಎಂದು ಕರೆದ. ಏಕೆ? ಉದಾತ್ತ ಕಾವ್ಯಪ್ರಪಂಚದಲ್ಲಿ ರವೀಂದ್ರನು ರವೀಂದ್ರನೇ ಆಗಿದ್ದನು. 'ಸರಿಯೇ ಸೂರ್ಯಗೆ ಕೋಟಿ ಮಿಂಚುಹುಳುಗಳ್' ಎಂದು ಒಬ್ಬ ಕವಿ ಹೇಳಿದ. ಹಾಗೆ ೨೦ನೆಯ ಶತಮಾನದ ಜಾಗತಿಕ ಕವಿಗಳ ನಡುವೆ ರವೀಂದ್ರನು ಅತಿಪ್ರಕಾಶಮಯನೆನ್ನಿಸಿದ್ದು ಭಾರತೀಯರಿಗೇ ಏಕೆ—ಜಗತ್ತಿನ ಸಕಲ ಸಾಹಿತ್ಯಪ್ರಿಯರಿಗೂ ಹೆಮ್ಮೆಯನ್ನುಂಟುಮಾಡಿದೆ."

"ಅದು ಹೇಗೆ? ಕೆಲ ವಿದೇಶೀಯರಿಗಾದರೂ 'ರವೀಂದ್ರನು ಬಿಳಿಯನಲ್ಲ, ಯೂರೋಪಿಯನ್ನನಲ್ಲ, ಪಾಶ್ಚಾತ್ಯನಲ್ಲ; ಆದುದರಿಂದ ಅವನ ಯೋಗ್ಯತೆ ಅಷ್ಟೇನೂ ಹೆಚ್ಚಿನದಾಗಿರಲಾರದು; ಒಮ್ಮೆ ಆಗಿದ್ದರೂ ಅದನ್ನು ಒಪ್ಪಬಾರದು' ಎನ್ನಿಸಿರುವುದು ಖಂಡಿತ—ನೀವು ಬೇಕಾದ್ದು ಹೇಳಿ."

"ಅಂಥ ಜನಗಳೇ ಇಲ್ಲ ಎಂದು ನಾನೇನೂ ಗ್ಯಾರಂಟಿ ಕೊಡಲಾರೆ. ಕೆಲ ಗಣ್ಯ ವಿಮರ್ಶಕರು ಸಹ ರವೀಂದ್ರನ ಕೃತಿಗಳಿಗೆ ದೊರೆತಷ್ಟು ಪ್ರಸಿದ್ಧಿಗೆ ತಕ್ಕ ಯೋಗ್ಯತೆ ಅವುಗಳಲ್ಲಿಲ್ಲ ಎಂದು ಸಾರಿದ್ದುಂಟು. ಆದರೆ ಅದರಿಂದ ಅವರದೇ ವೇದವಾಕ್ಯವೆಂದು ಹೇಗೆ ಹೇಳಲು ಸಾಧ್ಯ? 'ಲೋಕೋ ಭಿನ್ನ ರುಚಿಃ' ಎಂಬ ಹಳೆಯ ಗಾದೆಯಂತೆ ಎಂಥೆಂಥವರೂ ಒಮ್ಮೆ ಏನಾದರೂ ಹೇಳಿಬಿಡುವುದುಂಟು!"

"ಅದು ಹೇಗೆ?"

"ಒಮ್ಮೆ ಒಬ್ಬ ಸುಪ್ರಸಿದ್ಧ ಪಾಶ್ಚಾತ್ಯನು 'ತಾಜಮಹಲ್ಲು ಅತ್ಯಂತ ಸಾಮಾನ್ಯ ಕಟ್ಟಡ' ಎಂದು ಸಾರಿದ್ದುಂಟು. ಅದಕ್ಕೇನು ಮಾಡಬೇಕು? ಅವನಿಗೆ ನಿಜವಾಗಿಯೂ ಹಾಗೆ ತೋರಿರಬಹುದು. ಅದಕ್ಕೆ ಅವನ ವೈಯಕ್ತಿಕ ಸಂಸ್ಕಾರವು ಕಾರಣ. ಅದನ್ನೆಂತು ಇತರರು ಒಪ್ಪಿಯಾರು? ರಸಿಕರಲ್ಲಿಯೂ ವಿದಗ್ಧರ ಬಹುಮತಕ್ಕೇ ಬೆಲೆ ಬರುವುದಲ್ಲವೇ? ವಿದೇಶಗಳ ಬಾಂಧವ್ಯವನ್ನು ಬೆಳೆಸಿದ ಭಾರತೀಯರಲ್ಲಿ ರವೀಂದ್ರನಿಗೆ ಅಗ್ರಪಟ್ಟವನ್ನು ಕೊಡಬೇಕು. ಅಮೇರಿಕ–ಜರ್ಮನಿ–ಇಂಗ್ಲೆಂಡುಗಳು ಅವನನ್ನು ಎತ್ತಿ ಹಿಡಿದವು. ಇನ್ನು ಅವರಿವರ ಸಾಕ್ಷಿಯಾದರೂ ಏಕೆ ಬೇಕು? ನಾವೇ ಓದಿದರೆ ಅವನ ವಿವಿಧ ಸ್ವರೂಪದ ಅನೇಕಾನೇಕ ಕೃತಿಗಳು ನಮಗೇ ಅವನ ಪ್ರತಿಭೆಯ ಆಳ–ಅಗಲ ಗಳನ್ನು ಸ್ಪಷ್ಟಮಾಡಿಕೊಡುತ್ತವೆ."

"ಆಯಿತು—ನೀವು ಇಷ್ಟೆಲ್ಲ ಹೊಗಳಿ ಹೇಳಿದ ಬಳಿಕ ನಾನು ರವೀಂದ್ರನ ಎಲ್ಲ ಕೃತಿಗಳನ್ನೂ ಓದಿದರೆ ಅನುಕೂಲಾಭಿಪ್ರಾಯವನ್ನು ತಾಳಬಹುದು. ಆದರೆ ಅದೆಲ್ಲ ಪೂರ್ವಗ್ರಹದೂಷಿತವೆಂದು ಯಾರಾದರೂ ಹೇಳಬಹುದಲ್ಲವೇ?"

"ನೀನು ಅಮೇರಿಕದ ರಸಿಕೆಯರಿಗಿಂತ ಒಂದು ಮೊಳ ಎತ್ತರದ ರಸಜ್ಞೆಯಾಗಿ ತೋರುವೆ! ವಹವಾ! ಗ್ರಹದ ಪ್ರಭಾವವಿಲ್ಲದೆ ಯಾವ ಮಗುವೂ ಜಗತ್ತಿನಲ್ಲಿ ಹೇಗೆ ಹುಟ್ಟಲಾರದೋ ಹಾಗೆ ಉತ್ತಮ ಕಾವ್ಯಗಳನ್ನೋದಿದ ಸಂಸ್ಕಾರವಿಲ್ಲದ ಯಾರೂ ಎಂಥ ಉದಾತ್ತ ಕಾವ್ಯವನ್ನೂ ಮೆಚ್ಚಲಾರರು. ಕಾವ್ಯದ ಉತ್ತಮತೆಯ ಮಾದರಿಯ ಕಲ್ಪನೆಯು ಹೊಸ ಕಾವ್ಯದ ಬೆಲೆಯನ್ನು ಕಟ್ಟಲು ಅಗತ್ಯವಾದ ಪೂರ್ವಗ್ರಹ. ಅಂಥ ಗ್ರಹ–ಚಾರ ಸರಿಯಾಗಿಲ್ಲದ ಕವಿ–

ವಿಮರ್ಶಕರು ಭಾರತದಲ್ಲುದಯಿಸಲು ಅವರಿಗೆ ಭಾರತೀಯ ಕಾವ್ಯಪರಂಪರೆಯ ಅಜ್ಞಾನ–ಅಪಜ್ಞಾನಗಳಿರುವುದೇ ಕಾರಣ."

"ಅಲ್ಲರೀ, ನೀವಾದರೂ ಈಗ ನಿಮ್ಮ ಸ್ವಾನುಭವದ ಜೊತೆಗೆ ಎಷ್ಟೋ ಪರಾನುಭವಗಳನ್ನು ಸೇರಿಸಿಕೊಂಡೇ ನನಗೆ ರವೀಂದ್ರನ ಬಗ್ಗೂ ಅವನ ಕೃತಿಗಳ ಬಗ್ಗೂ ಹೇಳಿದ್ದೀರಿ. ಅಂದಮೇಲೆ....?"

"ಎಲಾ ಚದುರೆ! ಒಂದು ಮಾತು: 'ಸ್ವ' ಅನ್ನುವುದೇ ನಮಗೆ ವಿಚಾರ ಶಕ್ತಿ ಚೆನ್ನಾಗಿ ಬೆಳೆಯುವ ಮೊದಲು ಮನಸ್ಸಿನಲ್ಲಿ ತುಂಬಿಕೊಂಡಿರುತ್ತದೆ. ಹೀಗಿರುವಾಗ ಜಗತ್ತಿನಲ್ಲಿ ಯಾರೂ ಶುದ್ಧಬುದ್ಧ ಸಚ್ಚಿದಾನಂದನಂತೆ ಎಳ್ಳಷ್ಟೂ ಯಾರಿಗೂ ಋಣಿಯಾಗದೆ ಅನನ್ಯಾಭಿಪ್ರಾಯವೊಂದನ್ನು ರೂಪಿಸಿಕೊಳ್ಳಲಾರರು. ಆದುದರಿಂದ ಅಮೇರಿಕ ಮುಂತಾದ ದೇಶದವರಿಗೆ ರವೀಂದ್ರ ಹೇಗೆ ಕಾಣಿಸಿದನೆಂಬುದನ್ನು ನಾನು ಲೆಕ್ಕಕ್ಕೆ ತೆಗೆದುಕೊಂಡಿದ್ದೇನೆ."

"ಒಪ್ಪಿದೆ—ಚದುರೆಯ ರಮಿಸಿದ ಚದುರರ ಮಾತಿಗೆ!"

೧೬. ರವೀಂದ್ರನ ಕಾವ್ಯಮಯ ಸ್ವರೂಪ

"ಹಿರೆನ್ ಮುಕರ್ಜಿಯವರು 'ರವೀಂದ್ರನು ಸ್ವಯಂ ಒಂದು ಕವಿತೆ' ಎಂದಿದ್ದಾರೆ—ಗೊತ್ತೇ?"

"ಅದೆಂಥ ಮಾತೋ ನನಗರಿಯದು. ಮಾನವನ ಗುಣಗಳನ್ನು ಕಾವ್ಯಗುಣಗಳೊಡನೆ ಹೋಲಿಸಿ, ಹೊಂದಿಸಿ ಅದ್ವೈತವನ್ನು ಮಾಡುವುದು ಅಸಾಧ್ಯ ಕಾರ್ಯವೇ ಸರಿ."

"ಮುಕರ್ಜಿಯವರು ಅಂಥ ಅಸಾಧ್ಯವನ್ನು ಸಾಧಿಸಿಬಿಟ್ಟಿದ್ದಾರೆ!"

"ಅದು ಹೇಗೆ ಹೇಳಿ ನೋಡೋಣ."

"ವಿಚಾರದ ಉದಾತ್ತತೆ ಜೀವನಕ್ಕೂ ಕಾವ್ಯಕ್ಕೂ ಸಾಧಾರಣ. ದೇವಲೋಕದಲ್ಲಿ ತಲೆಯಿದ್ದರೂ ಕಣ್ಣುಗಳಿಂದೂ ಭೂಲೋಕದ ದಯಾರ್ಹಜೀವಿಗಳನ್ನು ಕಡೆಗಣಿಸದಿರುವುದು ಮಹಾತ್ಮರ ಲಕ್ಷಣ. ಅದರಿಂದಲೇ ಅವರು ಸರಳ ಜೀವನ ನಡೆಸುವುದರಲ್ಲಿ ಆಸಕ್ತರಾಗಿರುತ್ತಾರೆ. ಹಾಗೆಯೇ ಸರಳ ಭಾಷೆಯನ್ನೇ ಬಳಸಿ ಅದರ ಮೂಲಕ ರವೀಂದ್ರನು ತನ್ನ ಸರಳ ಜೀವನಕ್ಕೆ ಸರಿಸಮವಾಗಿ ಉದಾತ್ತ, ಉನ್ನತ ಕಲ್ಪನೆಗಳನ್ನು ತನ್ನ ಸಾಹಿತ್ಯಕೃತಿಗಳಲ್ಲಿ ವ್ಯಕ್ತಮಾಡಿದ್ದಾನೆ. ಈ ಸರಳತೆಯನ್ನು ಪ್ರಸಾದವೆಂದು ಕರೆಯುತ್ತಾರೆ. ಪ್ರಸನ್ನತೆಯಿಲ್ಲದ ಕಾವ್ಯವು ಕಾವ್ಯವೇ ಅಲ್ಲ—ಅದು ಸರ್ವರಸಸಾಧಾರಣವಾದುದರಿಂದ. ಹಾಗೇ ಜೀವನದಲ್ಲಿಯ ಪ್ರಸನ್ನಮನಸ್ಕತೆಯಾದರೂ ಆದರ್ಶ ಶಿಷ್ಟಲಕ್ಷಣ. ರವೀಂದ್ರನೂ ಪ್ರಸನ್ನ, ಅವನ ಕೃತಿಗಳೂ ಪ್ರಸನ್ನ!"

"ಇದು ಚಮತ್ಕಾರ!"

"ಚಮತ್ಕಾರವಾದರೂ ಸತ್ಯ!"

"ಆದರೆ ನೋಡಿ, ಕೆಲ ಪದ್ಯಗಳ ಭಾವವು ನನಗೆ ಜಟಿಲವಾಗಿ ತೋರಿದ್ದುಂಟು—ರವೀಂದ್ರನ ಕೆಲ ಕವನಸಂಗ್ರಹಗಳಲ್ಲಿ."

"ಜಟಿಲ, ಕಠಿನ, ಕಷ್ಟ ಎನ್ನಿಸುವುದಕ್ಕೆ ವಿವಿಧ ಕಾರಣಗಳುಂಟು. ಅದರಲ್ಲಿ ಒಂದು ಕವನದ ಹಿನ್ನೆಲೆ ಸರಿಯಾಗಿ ಹೊಳೆಯದಿರುವುದು ಮುಖ್ಯ.

ಬೇಂದ್ರೆಯವರ ಕೆಲ ಕವನಗಳೂ ಹಿನ್ನುಡಿಯಲ್ಲಿ ಕೊಟ್ಟ ಮುನ್ನುಡಿಯಿಲ್ಲದೆ ಸರಿಯಾಗಿ ಅರ್ಥವಾಗುವುದಿಲ್ಲ. ರವೀಂದ್ರನ ಕವನಗಳಲ್ಲೂ ಕೆಲವಕ್ಕೆ ಉಪೋದ್ಘಾತ ಅಗತ್ಯ. ಈ ರೀತಿ ಆಧುನಿಕ ಕಲ್ಪನೆಗಳ ಹಾಸುಹೊಕ್ಕು ಅತಿ ಜಟಿಲವಾಗಿರುವುದು ನಿಜವಾದ ಕಾಠಿನ್ಯವಲ್ಲದೆ, ಅಲ್ಲೊಂದು ಇಲ್ಲೊಂದು ಅಪರಿಚಿತ ಶಬ್ದ ಬರುವುದು ಕಾಠಿನ್ಯದೋಷಕ್ಕೆ ಪದ್ಯದಲ್ಲಂತೂ ಎಂದೂ ಕಾರಣ ಎನ್ನಿಸದು. ತನ್ನ ಶೈಲಿಪಾಕದಲ್ಲಿ ಕವಿಯು ನಿರಂಕುಶ—ಅವನ ಔಚಿತ್ಯ ಅವನದೇ—ಪದಮೈತ್ರಿಯ ತಂತ್ರವಿದ್ದರೆ ಸರಿ; ಭಾವವ್ಯಂಜಕತೆ ಅವಿಚ್ಛಿನ್ನ ವಾಗುವಂತಿದ್ದರೆ ಸರಿ. ಗದ್ಯದಲ್ಲೂ ಸಾಹಿತ್ಯಿಕ ಮಾನದಂಡವು ಶೈಲಿಗೆ ಹೆಚ್ಚು ಕಡಿಮೆ ಇದೇ. ಏಕೆಂದರೆ ರಸಾಪಕರ್ಷಕ ಅಂಶಗಳಷ್ಟೇ ದೋಷಗಳೆಂದು ಎಂದೋ ಸಿದ್ಧವಾಗಿಹೋಗಿದೆ.

ರವೀಂದ್ರನು ಮೃದುಮಧುರ ಹೃದಯದವನು; ಅದರಿಂದಲೇ ಅವನು ಪವಿತ್ರತಮ ಪ್ರೇಮವೆನ್ನಿಸಿದ ಭಕ್ತಿರಸವನ್ನು ಸೂಸುವ ಗೀತೆಗಳನ್ನು ಹೆಚ್ಚಾಗಿ ಬರೆದು ಪ್ರಸಿದ್ಧನಾದನು. ಅವನ ಶೈಲಿತಂತ್ರಿಯು ಲಲಿತಗತಿಯಿಂದ ಹಾಡಲು ಅವನ ಅಂತಃಕರಣವು ಲಲಿತವಾಗಿರುವುದೇ ಕಾರಣ. ಸೌಂದರ್ಯಕ್ಕಿಂತ ಉದಾತ್ತತೆಯೇ ಹೆಚ್ಚು ಎದ್ದು ಕಾಣುವ ಅವನ ಪದ್ಯಗಳು ಅವನ ಹೃದ್ಗತವಾದ ವಿಶ್ವಬಂಧುತ್ವದ ವಿಶಾಲಭಾವನೆಯನ್ನು ಬಿಂಬಿಸುತ್ತವೆ. ಗಾಂಭೀರ್ಯವನ್ನಿಟ್ಟು ಕೊಂಡೇ ಎಲ್ಲರೊಡನೆ ಸಲಿಗೆಯಿಂದ ವ್ಯವಹರಿಸುತ್ತಿದ್ದ ರವೀಂದ್ರನ ಕೃತಿಗಳು ಹಾಗೇ ಆಳವಾದ ಅರ್ಥಗಳನ್ನೊಳಗೊಂಡೂ ಸುಸ್ಪಷ್ಟ ಸಹಜತೆಯನ್ನು ತಮ್ಮ ವಸ್ತು-ಪಾತ್ರ-ರಸಚಿತ್ರಣಗಳಲ್ಲಿ ಅಳವಡಿಸಿಕೊಂಡಿವೆ. ಮಾನವಸಹಜವಾದ ಕೆಲ ಶಾರೀರಕ-ಮಾನಸಿಕ ದೌರ್ಬಲ್ಯಗಳಿದ್ದ ಕಾರಣದಿಂದ ಅವನ ಕೆಲ ಕೃತಿಗಳೂ ಕೃತಿಭಾಗಗಳೂ ಸಪ್ಪೆಯಾದವು. ಜಗತ್ತಿನ ಅನ್ಯಾಯ-ಹಿಂಸೆ ಮುಂತಾದವು ಗಳೆಂದರೆ ಅವನಿಗೆ ಅತಿಯಾಗಿ ಆಗದವುಗಳಾದ್ದರಿಂದ ಅವನು ಗಣ್ಯನಾದುದು ಭಾವಗೀತಕಾರ, ಸಣ್ಣ ಕತೆಗಾರ ಎಂದೇ ಅಲ್ಲದೆ—ನಾಟಕಕಾರ, ಕಾದಂಬರಿ ಕಾರ ಎಂದಲ್ಲ. ಆದುದರಿಂದ ರವೀಂದ್ರನಲ್ಲಿ ಕಾವ್ಯಧರ್ಮ-ಜೀವನಧರ್ಮ ಗಳಲ್ಲಿ ಯಾವ ಅಂತರವೂ ಇರಲಿಲ್ಲ."

"ಇದು ಮುಕರ್ಜಿಯವರ ಕೌಶಲವನ್ನು ನಿಮ್ಮ ಕೌಶಲದಿಂದ ಪರಿಷ್ಕರಿಸಿ ಹೇಳಿದ್ದೆಂದು ತೋರುತ್ತದೆ."

" ಯಾಕೆ ಹಾಗೆ ಮಾಡಬಾರದು? ರವೀಂದ್ರನ ಸರ್ವಾದರಣೀಯ, ಸರ್ವಾನಂದಕರ ವ್ಯಕ್ತಿತ್ವದ ಪರಿಚಯವನ್ನು ಆಮೂಲಾಗ್ರವಾಗಿ ಮಾಡಿಕೊಂಡರೆ, ಅದಕ್ಕೆ ಅಂತಃಕರಣವು ಸಾಕ್ಷಿಕೊಟ್ಟರೆ ನೀನೂ ಹೀಗೇ ಹೇಳುವೆ, ನನಗಿದರಲ್ಲಿ ಯಾವ ಶಂಕೆಯೂ ಇಲ್ಲ! "

" ನಿಜ; ಪಾದರಸದಂತಹ ಬುದ್ಧಿಮತ್ತೆಯೂ ಪಾರಿಜಾತದಂತಹ ಹೃದಯವಂತಿಕೆಯೂ ಕೂಡಿರುವ ಧೀರೋದಾತ್ತ ವ್ಯಕ್ತಿಗಳು ಅತ್ಯಂತ ವಿರಳ. ನೀವೇ ಕಾಳಿದಾಸನ ಬಗ್ಗೆ—

ಪುರಾ ಕವೀನಾಂ ಗಣನಾಪ್ರಸಂಗೇ
ಕನಿಷ್ಠಿಕಾಧಿಷ್ಠಿತ ಕಾಳಿದಾಸಃ।
ಅದ್ಯಾಪಿ ತತ್ತುಲ್ಯಕವೇರಭಾವಾತ್
ಅನಾಮಿಕಾ ಸಾರ್ಥತರಾ ಬಭೂವ॥

ಎಂದು ಆರ್ಯೋಕ್ತಿಯೊಂದನ್ನು ಹೇಳಿದಂತೆ ೨೦ನೆಯ ಶತಮಾನ ಜಗತ್ತಿನಲ್ಲಿ ಚಾರಿತ್ರಸದೃಶವಾದ ಕಾವ್ಯಕೃತಿಗಳನ್ನು ನಿರ್ಮಿಸಿದ ಕವಿ ರವೀಂದ್ರನೊಬ್ಬನೇ ಎಂದು ಒಪ್ಪಲೇ ಬೇಕು."

" ನಮ್ಮ ರಾಷ್ಟ್ರಗೀತವನ್ನು ರಚಿಸಿದ್ದೂ ರವೀಂದ್ರನೇ. ಅದರಲ್ಲಿ ಅವನ ವಿಶ್ವಭಾರತೀಯತೆಯ ಭಾವ ಎಷ್ಟು ಚೆನ್ನಾಗಿ ಪಡಿಮೂಡಿದೆ ನೋಡು! ಅದರಂತೆಯೇ ' ಭಾರತತೀರ್ಥ 'ವೆಂಬುದರಲ್ಲೂ ಅವನ ನಾಡ ಭಕ್ತಿ ಅಸೀಮವಾಗಿ ವ್ಯಕ್ತವಾಗುತ್ತದೆ. ದಿವಂಗತನಾಗುವವರೆಗೂ ಅವನಿಗಿದ್ದ ಉತ್ಸಾಹ-ಉಲ್ಲಾಸಗಳೂ ಪರಾನುರಂಜನಶೀಲವೂ ತನ್ನ ಸ್ವಂತದ ದುಃಖಗಳ ಬಗ್ಗೆ ತಾಳಿದ್ದ ಮೌನಭಾವವೂ ವಿಚಾರಸಮಾಧಿಸ್ಥನಾಗುವ ಅಭ್ಯಾಸವೂ ಚತುರ ಸಂವಾದಪಟುತ್ವವೂ ಅವನ ಸಹಜೀವಿಗಳಿಗೆ ಈಗಲೂ ಅವನ ನೆನಪನ್ನು ಪ್ರತಿಕ್ಷಣವೂ ಮಾಡಿಕೊಡದಿರವು. ಜೀವನವನ್ನೇ ಕಾವ್ಯರೂಪಕ್ಕೆ ತಿರುಗಿಸಿ ಹಾಡಿಪ ಅವನ ಬಗ್ಗೆ ' ಪಟ್ಟ ಪಾಡೆಲ್ಲವೂ ಹುಟ್ಟುಹಾಡಾಗುತ ಹೊಸವಾಗಿ ರಸವಾಗಿ ಹರಿಯುತಿವೆ ' ಎಂಬ ಮಾತನ್ನು ಯಾರಾದರೂ ಅನ್ವಯಿಸದಿರರು! "

" ಅವನ ರಾಷ್ಟ್ರಾಭಿಮಾನ ವಿಶ್ವಾಭಿಮಾನದ ಅಂತರ್ಗತ ಎಂಬರ್ಥವನ್ನು ನೀವು ಹೇಳಿದ್ದೀರಿ. ಯಾವ ಅಭಿಮಾನಕ್ಕಾದರೂ ಅಪ್ರತಿಮ ಸೌಂದರ್ಯ

ಬರುವುದು ಅದು ತನ್ನ ಚರಮಸೀಮೆಯನ್ನು, ಪರಾಕಾಷ್ಠೆಯನ್ನು ಮುಟ್ಟಿದಾಗಲೇ ಅಲ್ಲವೇ ?"

"ನಿಜ; ಅಭಿಮಾನವು ಪರಾಕಾಷ್ಠೆಯನ್ನು ಮುಟ್ಟುವುದಗತ್ಯ ಸುಂದರವಾಗಲು, ರಸವತ್ತಾಗಲು, ಮನಂಬುಗುವಂತಾಗಲು. ಮನುಷ್ಯನಿಗೆ ಒಂದೇ ಅಭಿಮಾನವಿರುವುದೇನು ? ಅನೇಕ ಸದಭಿಮಾನಗಳಿರುತ್ತವೆ. ಆಯಾ ಸಂದರ್ಭದಲ್ಲಿ ಆಯಾ ಅಭಿಮಾನ ತನ್ನ ಪೂರ್ಣ ಅಳತೆಗೇರುವುದು; ಮಿಕ್ಕ ಸಂದರ್ಭಗಳಲ್ಲಿ ಇತರ ಸದಭಿಮಾನಗಳೂ ಹಾಗೇ. ಸರ್ವಕಾಲ-ಸರ್ವದೇಶಗಳಲ್ಲಿ ಎಲ್ಲ ಅಭಿಮಾನಗಳೂ ತಮ್ಮ ಮುಗಿಲೆತ್ತರದ ತುದಿಯನ್ನು ಮುಟ್ಟುವುದಿಲ್ಲ. ಇನ್ನು ವಿಚಾರಕ್ಕೆ ಕುಳಿತಾಗ ಅಭಿಮಾನಗಳ ತಾರತಮ್ಯವನ್ನು ನಿರ್ಧರಿಸಹೋದರೆ ರಾಷ್ಟ್ರಾತ್ಮಕತೆಗಿಂತ ವಿಶ್ವಾತ್ಮಕತೆ ಹಿರಿಯದು ಎಂದು ಯಾರಾದರೂ ಒಪ್ಪಿಕೊಳ್ಳಲೇಬೇಕಾಗುತ್ತದೆ. ಈ ದೃಷ್ಟಿಯಿಂದ ರವೀಂದ್ರನ ರಾಷ್ಟ್ರಾಭಿಮಾನದ ಆವೇಶವು ಪೂರ್ಣವಾಗಿತ್ತೆನ್ನುವುದೂ ಸತ್ಯ; ಹಾಗೇ ಆದರ್ಶಗಳ ನಿಃಶ್ರೇಣಿಯಲ್ಲಿ ವಿಶ್ವಾತ್ಮಕತೆ ಕೊನೆಯ ಮೆಟ್ಟಲೆಂಬ ವಿಚಾರ ಅವನಿಗಿತ್ತೆಂಬುದೂ ಸತ್ಯ."

"ಭಾರತ-ಚೀನಗಳೀಗ ವಿರೋಧಿಗಳಾಗಿರುವಾಗ ಅಥವಾ ಅಂದಿನ ಪರಿಸ್ಥಿತಿಯನ್ನೇ ತೆಗೆದುಕೊಂಡರೆ ಭಾರತ-ಬ್ರಿಟನ್ನುಗಳು ಶೋಷ್ಯ-ಶೋಷಕ ರಾಷ್ಟ್ರಗಳಾಗಿದ್ದಾಗ ಭಾರತೀಯನೊಬ್ಬನು ಯಾವ ಅರ್ಥದಲ್ಲಿ ವಿಶ್ವಪ್ರಜೆಯೆಂಬ ಭಾವನೆಯನ್ನು ಅನುಭವಿಸಬಲ್ಲ ?"

"ಶಿಕ್ಷೆಯನ್ನು ಶಿಕ್ಷಣವೆಂಬ ಹೃತ್ಪೂರ್ವಕವಾದ ನಂಬಿಗೆಯಿಂದ ಅಗತ್ಯವಾದಾಗ ತಕ್ಕಷ್ಟು ಕೊಡುವ ತಂದೆ, ರಾಷ್ಟ್ರಾಧಿಕಾರಿಮುಖ್ಯ ಅಥವಾ ಜಾಗತಿಕ ಒಕ್ಕೂಟದ ಅಧಿನಾಯಕ ಹೇಗೆ ಕ್ರೂರಿ ಎಂದೆನ್ನಿಸಿಕೊಳ್ಳದೆ—ಹಿತಚಿಂತಕ, ಆತ್ಮೀಯ ಬಂಧು ಎಂದೆನ್ನಿಸಿಕೊಳ್ಳುವ ಸ್ಥಾನದಿಂದ ಚ್ಯುತನಾಗನೋ ಹಾಗೇ ಆ ಈ ರಾಷ್ಟ್ರೀಯರು ನಮ್ಮ ರಾಷ್ಟ್ರಕ್ಕೆ ಕೆಲಕಾಲ ತೊಂದರೆ ಕೊಡುತ್ತಿರುವಾಗ ಅವರಿಗೆ ತಕ್ಕ ಶಿಕ್ಷೆಯನ್ನು ಮಾಡುವ ನಮ್ಮ ರಾಷ್ಟ್ರದ ಋಷಿಪ್ರಜೆಯಾದರೂ ವಿಶ್ವದ ಆ ಭಾಗದ ಶತ್ರುವೆಂದು ಅಂತಾರಾಷ್ಟ್ರೀಯ ನ್ಯಾಯಾಲಯದ ದೃಷ್ಟಿಯಿಂದ ಗಣಿಸಲ್ಪಡದೆಯೇ—ಆ 'ಶತ್ರು' ರಾಷ್ಟ್ರದ ಹಿತಚಿಂತಕನಾಗಿಯೇ ಉಳಿಯುತ್ತಾನೆ."

" ಬಲಪ್ರಯೋಗವು ಹಿಂಸೆಯಲ್ಲವೇ ? ಅದು ಮಾನಸಿಕವಾಗಿರಲಿ, ವಾಚಿಕವಾಗಿರಲಿ, ಸೈನಿಕವಾಗಿರಲಿ—ಶಾಂತಿಪಂಥಕ್ಕೆ ವಿರುದ್ಧವಲ್ಲವೇ ?— ಹೀಗೀರುವಾಗ ರವೀಂದ್ರನು ಆಗಾಗ ಗಾಂಧೀಜಿಯ ಚಳವಳಗಳಿಗೆ ಆ ಈ ಸಂದರ್ಭಗಳಲ್ಲಿ ಪರೋಕ್ಷಾಪರೋಕ್ಷವಾಗಿ ಬೆಂಬಲವನ್ನು ಕೊಟ್ಟಿದ್ದರೆ ಅದು ಅವನನ್ನು ಅವನ ಕಾವ್ಯಮಯವಾದ ಶುದ್ಧ ಶಾಂತಿಪ್ರಿಯ ಆದರ್ಶ ಪದದಿಂದ ಕೆಳಕ್ಕಿಳಿಸುವುದಿಲ್ಲವೇ ? "

" ಅಂತೂ ತಲೆಯನ್ನು ಬಹಳ ಖರ್ಚುಮಾಡಿ ಪ್ರಶ್ನೆ ಹಾಕಿದ್ದೀಯಾ ಕಣೇ; ಭೇಷ್ ! ಪಂಡಿತ ಜವಾಹರಲಾಲರೂ ' ಗಾಂಧೀಜಿಯ ಆಂದೋಲನ ದಲ್ಲಿ ನೈತಿಕ ಬಲಾತ್ಕಾರವಾದರೂ ಇದೆಯಲ್ಲವೇ? ಅಂದಮೇಲೆ ಅದು ಶುದ್ಧ ಅಹಿಂಸೆಯೇ ? ' ಎಂಬೊಂದು ಸವಾಲನ್ನು ಹಾಕಿದ್ದುಂಟು. ನಿನ್ನ ಮಾತೂ ಹಾಗೇ ಆಯ್ತು. ಕೇಳು, ಕೇಳು ಹೆಜ್ಜಾಣೆ—ಬಲವೇ ಸರ್ವ ಚಲನಕ್ಕೂ ಕಾರಣ. ಬಲವಿಲ್ಲದೆ ಯಾವುದೂ ಚಲಿಸದು. ' ತೇನ ವಿನಾ ತೃಣಮಪಿ ನ ಚಲತಿ ' ಎಂದು ಉಪನಿಷತ್ತು ಅತಿಬಲದ ದೈವತ್ವವನ್ನೂ ದೈವದ ಅತಿ ಬಲವನ್ನೂ ಎತ್ತಿ ಹೇಳಿದೆ. ಅದನ್ನೇ ಭಗವದ್ಗೀತೆ ವಿಭೂತಿಯೆಂದೂ ಶ್ರೀ ಎಂದೂ ಊರ್ಜವೆಂದೂ ವರ್ಣಿಸಿದೆ. ಸರ್ವಶಕ್ತನಲ್ಲದವನೆಂದೂ ದೇವರಲ್ಲ. ಆದುದರಿಂದ ಬಲಪ್ರಯೋಗವು ಸದ್ಭಾವನೆ-ಸದುದ್ದೇಶಗಳಿಂದ ವಿವೇಕಯುಕ್ತ ವಾಗಿ ತಕ್ಕಷ್ಟು ನಡೆದರೆ, ಹಾಗೆ ನಡೆಸಿದವ ಹಿಂಸಕನಾಗಲಾರನು, ಹಗೆ ಯಂತೂ ಅಲ್ಲವೇ ಅಲ್ಲ; ತದ್ವಿರುದ್ಧವಾಗಿ ಅಪ್ರಿಯಸತ್ಯವಾದಿಯಾದ ನಿಜ ಮಿತ್ರನಂತೆ ಅತ್ಯಂತ ಧರ್ಮಿಷ್ಠನೆನ್ನಿಸುತ್ತಾನೆ. ರವೀಂದ್ರನು ಈ ವಿಧದ ಧರ್ಮಜ್ಞನಾಗಿರುವುದರಿಂದ ತಕ್ಕ ಸಂದರ್ಭದಲ್ಲಿ ರಾಷ್ಟ್ರೀಯತಾವಾದವನ್ನು ಖಂಡಿಸಿದರೂ ಕೂಡ ರಾಷ್ಟ್ರಾಭಿಮಾನಿಯಲ್ಲವೆನ್ನಿಸನು. ಅವನು ಕುರುಡು-ರಾಷ್ಟ್ರಾಭಿಮಾನಿಯಲ್ಲ—ಅಷ್ಟೆ ; ಕುರುಡು-ಅಹಿಂಸಾವಾದಿಯಂತೂ ಅಲ್ಲವೇ ಅಲ್ಲ ! "

" ಧರ್ಮವೆಂದರೆ ಬಹಳ ಸೂಕ್ಷ್ಮವಾದುದೆಂದು ಹಿರಿಯರು ಹೇಳಿದುದರ ಅರ್ಥ ಈಗ ಚೆನ್ನಾಗಿ ಹೊಳೆಯಿತು. ಮಹಾಕಾವ್ಯವನ್ನು ಅಭ್ಯಸಿಸಿದರೆ, ರಚಿಸಿದರೆ ಚತುರ್ವಿಧ ಪುರುಷಾರ್ಥಗಳ ಸಾಧನೆಗೆ ದಾರಿದೋರುವುದೆಂದು ಪ್ರಾಚೀನ ವಿಮರ್ಶಕರು ಹೇಳಿದ್ದನ್ನು ಸತ್ಯಮಾಡಲೆಂದೇ ಜನಿಸಿದ ರವೀಂದ್ರನ

ಕಾವ್ಯ ಮತ್ತು ಸಂಸ್ಥೆಗಳಂತೆಯೇ ಸ್ವತಃ ಅವನೂ ಪುಣ್ಯದರ್ಶನನೆಂಬುದು ನನಗೀಗ ಸ್ಪಷ್ಟವಾಯ್ತು. ರವೀಂದ್ರನ ಮಾನವಧರ್ಮವು ಅವನ ಕಾವ್ಯ ಧರ್ಮಕ್ಕಿಂತ ಯಾವ ರೀತಿಯಿಂದಲೂ ಕಡಿಮೆ ಸುಂದರ, ಕಡಿಮೆ ಉಚಿತ, ಕಡಿಮೆ ಉನ್ನತ ಎನ್ನಲು ಸಾಧ್ಯವಿಲ್ಲ. ಅವನಿಗೆ ಜೀವನದಷ್ಟೇ ಕಾವ್ಯವೂ ಮತ್ತು ಕಾವ್ಯದಷ್ಟೇ ಜೀವನವೂ ಸತ್ಯವಾಗಿತ್ತು."

"ಅಷ್ಟೇ ಅಲ್ಲ, ಇವೆರಡರಂತೆಯೇ ಅಧ್ಯಾತ್ಮಸ್ಥಿತಿಯೂ ರವೀಂದ್ರನಿಗೆ ಸಮತೂಕದ ಸತ್ಯವಾಗಿತ್ತು. ಲೋಕ–ಕಾವ್ಯ–ಅಧ್ಯಾತ್ಮಗಳ ಸತ್ಯಗಳು ಪೂರ್ಣ ಸ್ವರೂಪದಲ್ಲಿ ಒಂದೇ ಎಂಬುದನ್ನವ ಮನಗಂಡಿದ್ದ. ಸತ್ಯ, ಜ್ಞಾನ, ಅನಂತ ಗಳಲ್ಲಿ ಒಂದೊಂದೂ ಹೇಗೆ ಪ್ರತ್ಯೇಕವಲ್ಲವೋ ಮೂರೂ ಒಂದೇ ಬ್ರಹ್ಮ ಸ್ವರೂಪವೋ ಹಾಗೇ."

"ಸ್ವಾಮೀ......."

"ಏನು, ನನ್ನನ್ನಾಗಲೇ ಸ್ವಾಮಿಗಳನ್ನಾಗಿ ಮಾಡಿಬಿಟ್ಟೆಯಾ ?"

"ಅಯ್ಯೋ, ಬಾಯಿತಪ್ಪಿ ಹಾಗೆಂದೆ. ಆದರೂ ತಪ್ಪಲ್ಲ. ಉದಾತ್ತ ಭಾವಗಳ ವಕ್ತಾರರು ಪ್ರಿಯತಮರೇ ಆಗಿದ್ದರೂ ಸ್ವಾಮಿತ್ವದ ಪೂಜ್ಯತೆಗೆ ಪಾತ್ರರು."

"ಬೇಡವೇ ಮಹಾರಾಯತೀ—ಈಗಲೇ ನನ್ನನ್ನು ಸಂನ್ಯಾಸಕ್ಕೆ ತಳ್ಳ ಬೇಡವೇ !"

"ನನಗೇನೂ ನಗು ಬರೋಲ್ಲ—ನಾನು ಈವರೆಗೆ ನಿಮ್ಮನ್ನು ಸರಿಯಾಗಿ ಅರಿತುಕೊಂಡಿದ್ದಿಲ್ಲ ಅನ್ನಿಸ್ತಾ ಇದೆ."

"ಅಯ್ಯೋ, ಇಷ್ಟು ಬೇಗ ನನ್ನ ಬುರುಡೆಗೆ ಮರುಳಾಗಿಬಿಟ್ಟೆಯಾ ?"

"ನನಗೀಗ ಅನ್ನಿಸುತ್ತದೆ— ನಾವೆಂಥ ದುರ್ಭಾಗ್ಯರು ! — ಎಂದು. ಏಕೆಂದರೆ, ಅಂಥ ಮಹಾನುಭಾವನನ್ನು ನೋಡಿ ಸಲಿಗೆಯಿಂದಲೂ ಪ್ರೇಮ ಗೌರವಗಳಿಂದಲೂ ಮಾತನಾಡಿಸಿ ನಮ್ಮ ಅಂತಃಕರಣವನ್ನು ಪವಿತ್ರವಾದ ಆನಂದದಲ್ಲಿ ಮುಳುಗಿಸುವ ಅವಕಾಶ ಸಿಗದೇ ಹೋಯ್ತಲ್ಲಾ !"

" ನಿಜ, ನಿಜ; ರವೀಂದ್ರನಂಥವರು ಗಾಂಧೀಜಿಯಂತೆಯೇ ವಿರಳರು. ಒಬ್ಬ ಭಾವಗೀತಕಾರ, ಇನ್ನೊಬ್ಬ ಕರ್ಮಗೀತಕಾರ! ಒಬ್ಬ ರವೀಂದ್ರ, ಇನ್ನೊಬ್ಬ ಮೋಹನದಾಸ ಕರ್ಮಚಂದ್ರ!"

" ಎರಡೂ ಕೂಡ ಕಾವ್ಯಸ್ವರೂಪಗಳಾಗಿಯೇ ತೋರುತ್ತವೆ ನನಗೀಗ. ನಿಜವಾಗಿ ಈಯೆರಡು ಜನರೂ ಬದುಕಿದ್ದು ಹೋದವರಾದರೂ ಈಗ ಇಲ್ಲವಾದುದರಿಂದ 'ಕಾವ್ಯಗತವಾದ ಕನಸುಗಳೇನೋ! ಅಂಥವರೆಲ್ಲಿ ಇರಲು ಸಾಧ್ಯ!' ಎಂದು ಒಮ್ಮೊಮ್ಮೆ ಎನ್ನಿಸುತ್ತದೆ."

" ಭಾರತದಲ್ಲಿಂದು ಕಾಣುವ ಅವ್ಯವಸ್ಥಿತ ಜೀವನವನ್ನು ಕಂಡರೆ ಎಷ್ಟೋ ಸಲ ಹಾಗೆನ್ನಿಸಬಹುದು. ಇದು ಹಿರಿಯರೆಂದಂತೆ ಪುಣ್ಯಭೂಮಿಯಾಗಿರುವುದು ನಿಜವೇ? ಎಂಬ ಸಂಶಯ ತಲೆದೋರುವುದು ಸಹಜ. ಆದರೆ ನಮಗೆ ಸಜೀವ ಸಾಕ್ಷಿಗಳಿರುವುದರಿಂದ — ರವೀಂದ್ರ – ಗಾಂಧೀಜಿಗಳನ್ನು ನಮ್ಮಲ್ಲಿ ಎಷ್ಟೋ ಜನ ಕಂಡಿರುವುದರಿಂದ, ಅವರ ಕೃತಿಗಳನ್ನೂ ಅವರ ಚರಿತ್ರೆಯನ್ನೂ ಓದಿ ಕೇಳಿ ತಿಳಿಯಬಲ್ಲೆವಾದ್ದರಿಂದ ಅವರೀಗಲೂ ನಮ್ಮ ನಾಡಿನಲ್ಲಿ ಇದ್ದಂತೆ ಅನಿಸುತ್ತೆ."

" ವ್ಯಕ್ತಿತ್ವದ ವಿಕಾಸದ ಪರಿಪೂರ್ಣತೆಯನ್ನೇ ಮುಕ್ತಿಯೆಂದು ತಿಳಿದು ಬದುಕಿದ ರವೀಂದ್ರನನ್ನೆಂತು ಸಾಮಾನ್ಯ ಮರ್ತ್ಯನೆಂದುಕೊಳ್ಳಲು ಸಾಧ್ಯ? ವ್ಯಕ್ತಿಸಂಬಂಧಗಳಿಗೇ ಮಹತ್ವವನ್ನಿತ್ತ ಆತನ ವ್ಯಕ್ತಿತ್ವ ನಮ್ಮ ಕಣ್ಣೆದುರು ಸುಳಿದಾಡಿದಂತಾದರೆ ಏನೂ ಆಶ್ಚರ್ಯವಿಲ್ಲ."

" ಆದರೆ ಕಣ್ಣಿದ್ದೂ ಕುರುಡರು, ಕಾಲಿದ್ದೂ ಕುಂಟರು, ಕಿವಿಯಿದ್ದೂ ಕಿವುಡರು, ನಾಲಿಗೆಯಿದ್ದೂ ಮೂಕರು, ಚರ್ಮವಿದ್ದೂ ಮರವಾನಿಸರು ಎನ್ನಿಸಿದ ನಮ್ಮ ಸುತ್ತುಮುತ್ತಲಿನ ಆ ಈ ವಿಚಾರಮೂಢರ ಪಾಲಿಗೆ ಜೀವಿಸಿ ಎದುರಿಗೆ ನಿಂತು ಮಾತಾಡುತ್ತಿರುವವರೂ ಸತ್ತವರೇ!"

" ಕೆಲವರಲ್ಲಿ ತೀವ್ರವಾದ ಜಗಳವಾದರೆ ಅವರು ಕೊನೆಯದಾಗಿ 'ನನ್ನ ಪಾಲಿಗೆ ನೀ ಸತ್ತೆ, ನಿನ್ನ ಪಾಲಿಗೆ ನಾ ಸತ್ತೆ' ಎಂದು ಹೇಳಿ ಹೊರಟು

ಹೋಗುವರಂತೆ. ಹಾಗೇ ದೇಶದ ಕಣ್ಮಣಿಗಳಾಗಿ ಬಾಳಿದ ಮಹಾಪುರುಷರ ಜೀವನದಿಂದ ಪಾಠ ಕಲಿತು ಅದರಂತೆ ನಡೆದಕೊಳ್ಳದೆ ಉಳಿಯುವ ಸೋಮಾರಿಗಳಿಗೆ ಕನ್ನಡ ಹಿರಿಯ ಕವಿಯದೇ ಕಡೆಯ ಮಾತು :

'ಎತ್ತು ತೆಂಗಿನ ಕಾಯ ಬಲ್ಲುದೆ ?
ಕತ್ತೆಯರಿವುದೆ ಕಸ್ತುರಿಯ ಪರಿ ?
ಬುತ್ತಿಗಳ್ಳರಿಗೇಕೆ ಸತ್ಯವ್ರತ ಸದಾಚಾರ ?
ದತ್ತಪುತ್ರನಿಗೇತಕ್ಕೆ ಪಿತೃ-
ಭಕ್ತಿ ? ಮಾಲ್ಯಸುಗಂಧವನಿತಾ-
ಸಕ್ತರಿಗೆ ಪರತತ್ವಚಿಂತೆಯದೇಕೆ ಹೇಳೆಂದ.'

೧೭. ರವೀಂದ್ರ ಮುಕ್ತಾಫಲಗಳು

" ಸ್ವದೇಶ-ವಿದೇಶಗಳನ್ನು ಅನೇಕ ಬಾರಿ ಸಂಚರಿಸಿ ಜನಜೀವನದ ನಾನಾ ಚಿತ್ರಗಳನ್ನು ಕಂಡ ರವೀಂದ್ರನ ಅನುಭವಾಮೃತಗಳು ಮುಂದಿನ ಪೀಳಿಗೆಗೆ ಮಾರ್ಗದರ್ಶಕಗಳಾಗುವಂತಿಲ್ಲವೇ ? "

" ಸತ್ಯವಾದ ಮಾತು. ' ನಾಗರಿಕತೆಯ ಸಂಕಟ ', ' ಸ್ವಾತಂತ್ರ್ಯ ', ' ಸಾಧನಾ ', ' ವ್ಯಕ್ತಿತ್ವ ' ಮುಂತಾದ ಪುಸ್ತಕಗಳಲ್ಲಿ ರವೀಂದ್ರನು ತನ್ನ ಅನುಭವಗಳನ್ನೂ ಪರಿಪಕ್ವ ವಿಚಾರಗಳನ್ನೂ ಬರೆದಿದ್ದಾನೆ. ಇಷ್ಟೂ ಅಲ್ಲದೆ, ಆತನು ದಿವಂಗತನಾಗುವ ಪೂರ್ವದಲ್ಲಿ ಕಾಲಿಂಪಾಂಗಿನಲ್ಲಿದ್ದ ಡಾಕ್ಟರ್ ಎಸ್. ಎನ್. ದಾಸಗುಪ್ತರ ಮಗಳಾದ ಮೈತ್ರೇಯೀದೇವಿಯವರ ಮನೆಗೆ ಕೊಟ್ಟ ಮೂರು ಭೇಟಿಗಳಲ್ಲಿ ಜಗತ್ತಿನ ಹಾಗೂ ಜೀವನದ ಬಗ್ಗೆ ಅವನು ಇಟ್ಟುಕೊಂಡ ಕೊನೆಯ ಅಭಿಪ್ರಾಯಗಳನ್ನು ವಿನೋದಮಿಶ್ರ ಶೈಲಿಯಲ್ಲಿ ತಿಳಿಸಿದ್ದೀಗ ಪ್ರಕಟವಾಗಿದೆ.

೧. ಬರೆಹಗಾರಿಕೆಯೆಂಬುದು ಆರಾಮಕುರ್ಚಿಯಲ್ಲಿ ಕುಳಿತು ಅರೆ ನಿದ್ದೆಯಲ್ಲಿ ನಡೆಸುವ ಕೆಲಸವಲ್ಲ; ಅದೊಂದು ಶಾಸ್ತ್ರ, ನಿಯಮಪಾಲನೆ— ವಿರಾಮಕಾಲಹರಣವಲ್ಲ.

೨. ಪ್ರತಿಕ್ಷಣವೂ ಪ್ರತ್ಯಕ್ಷರ ಸತ್ಯವನ್ನು ಹೇಳಬೇಕೆಂದು ಕೇಳುವವರು ನಿರೀಕ್ಷಿಸಿದರೆ ಸಾಮಾನ್ಯವಾದ ಹಗಟೆಯ ಮಾತುಕತೆ ಆಡುವುದರಲ್ಲಿ ಬಹಳ ಸ್ವಾರಸ್ಯ ಉಳಿಯಲಾರದು.

೩. ಮನೆತನ ನಡೆಸಿ ಗೊತ್ತಿಲ್ಲದವರಿಗೆ ದುಡ್ಡಿನ ಬೆಲೆ ಗೊತ್ತಾಗದು.

೪. ನಿರುದ್ಯೋಗಿಯಾಗಿ ಕಾಲಕಳೆವವರಿಗೆ ಜಗಳವಾಡಲಿಕ್ಕಾದರೂ ಒಂದು ಜನ ಬೇಕಾಗುತ್ತದೆ.

೫. ನಿತ್ಯಪ್ರಶ್ನೆಗಳ ವೇದಿಕೆಯನ್ನೆದುರಿಸಿ ನಿಃಶಬ್ದ ನಿತ್ಯಮೌನ ನಿಂತಿದೆ

೬. ತನ್ನ ಕಳ್ಳಕೋಣೆಯಂತಿರುವ ಪರಲೋಕವನ್ನು ಇಹಲೋಕವು ಮರ್ತ್ಯತ್ವದ ಎದೆಯಾಳದಲ್ಲಿ ಅಮರ್ತ್ಯತ್ವದ ಪಾತ್ರೆಯೊಳಗೆ ಮುಚ್ಚಿಟ್ಟು ಅಕಸ್ಮಾತ್ತಾಗಿ ಮಿಂಚಿಸಿ ಮಾಯಮಾಡಿಬಿಡುತ್ತದೆ.

೭. ನಾನು ಕಂಡ ಈ ಬಾಳಿಗೆ ಇತಿಮಿತಿಗಳಿವೆ; ಆದರೂ ಅದು ಸೀಮಾತೀತ !

೮. ಇಂದ್ರಿಯಗ್ರಾಹ್ಯವಾದುದು ಒಂದು ಬಗೆಯ ಸತ್ಯ, ಇಂದ್ರಿಯಾತೀತವಾದುದು ಇನ್ನೊಂದು ಬಗೆಯ ಸತ್ಯ.

೯. ಹೆಂಗಸಿಗೆ ಎಂದೂ ತನ್ನ ವಯಸ್ಸಿನ ಚರ್ಚೆ ರುಚಿಸದು.

೧೦. ಚುರುಕುತನವೇ ಹೆಣ್ಣಿನ ಸೊಬಗು.

೧೧. ಇಂಗ್ಲೀಷರು ಮಿತಭಾಷಿಗಳು.

೧೨. (Prose-poems) ಗದ್ಯಗಂಧಿ ಪದ್ಯಗಳೆಂದೂ ನ್ಯಾಯವಾದ ಪದ್ಯಗಳಿಗೆ ಸರಿದೊರೆಯೆನ್ನಿಸಲಾರವು; ಅವು ಗದ್ಯ-ಪದ್ಯಗಳಷ್ಟೇ ಭಿನ್ನ.

೧೩. ಹೆಂಡತಿಯ ಒಡನಾಟವು ಜೀವಾವಧಿಯ ಅಭ್ಯಾಸವೆಂಬಷ್ಟು ಆದಾಗ ಇಳಿವಯಸ್ಸಿನಲ್ಲಂತೂ ಯಾವ ಗಂಡಸೂ ಹೆಂಡತಿಯನ್ನು ಬಿಟ್ಟಿರಲಾರ; ಆದುದರಿಂದ ಅವನೊಮ್ಮೆ ಬಹಳ ಹಿರಿಯನಾಗಿದ್ದಾಗಲೂ ತಾನು ಅತಿಶಯವಾಗಿ ಪ್ರೀತಿಸುತ್ತಿದ್ದ ಹೆಂಡತಿಯೊಬ್ಬಳು ಸತ್ತುಹೋದರೆ ಆ ಕೂಡಲೇ ಪತ್ನೀಪ್ರೀತಿಯ ಅಭ್ಯಾಸಬಲದಿಂದ ಹರೆಯದ ಇನ್ನೊಬ್ಬಳನ್ನು ಮದುವೆಯಾಗುವುದು ಕೇವಲ ಸ್ವಾಭಾವಿಕ. ಇಂಥ ವ್ಯಕ್ತಿಗತ ನಡತೆಗಳು ಅವಿಮರ್ಶನೀಯ.

೧೪. ಇಳಿವರೆಯದ ಗಂಡನನ್ನು ಆರಿಸಿಕೊಳ್ಳುವ ಹುಡುಗಿಯ ಅಭಿರುಚಿ ಅನುತ್ತಮ.

೧೫. ಸತ್ಯವನ್ನೇ ಹೇಳುವ ದುರಭ್ಯಾಸವು ನನ್ನಲ್ಲಿ ತಳವೂರಿಬಿಟ್ಟಿರುವುದರಿಂದ ಅದು ಹೇಳಬೇಕೆಂದು ಎಣಿಸದಿದ್ದಾಗಲೂ ಬಾಯಿಂದ ಹೊರಬಿದ್ದು ಬಿಡುತ್ತದೆ.

೧೬. ಹಂಪೆಯಾಗಿ ಉಳಿಯುವುದಕ್ಕಿಂತ ಪೂರ ಹಾಳಾಗಿಹೋಗುವುದು ಲೇಸು; ಸ್ವಾತಂತ್ರ್ಯವನ್ನು ಕಳೆದುಕೊಂಡ ರಾಜ್ಯಕ್ಕೆ ಸೌಂದರ್ಯವೆಲ್ಲಿಂದ ಬಂತು? ಅದು ಆಗ ಸೌಂದರ್ಯ ಉಳಿಸಿಕೊಂಡರೇ ಕುರೂಪ!

೧೭. ಚಿಕ್ಕ ಕೋಣೆಗಳು ಆತ್ಮೀಯತೆಯ ಭಾವನೆಯನ್ನು ತೋರುತ್ತವೆ.

೧೮. ಊಟಕ್ಕೆ ಕುಳಿತಾಗ ಮಾಡದಿರುವ ತಿನಿಸನ್ನೇ ಬೇಕೆನ್ನುವ ಧೂರ್ತಬುದ್ಧಿ ನನಗಿದೆಯಂತೆ!

೧೯. ವಿಶ್ವಪ್ರಕೃತಿಯ ಹೃದಯದಲ್ಲಿ ನಿತ್ಯಾಸಹಿಷ್ಣುವಾದ ಮತ್ತೊಬ್ಬ ಪ್ರಕೃತಿದೇವತೆ ಇರುವಂತೆ ತೋರುತ್ತದೆ; ಈ ಎರಡನೆಯ ಪ್ರಕೃತಿಯು ಚಂಚಲೆ, ನಿರ್ಭಯೆ, ಬಲಿಷ್ಠ ಭಾವನೆಗಳುಳ್ಳವಳು; ಪವಿತ್ರ ಗ್ರಂಥಗಳನ್ನು ಲೆಕ್ಕಿಸದವಳು—ತನ್ನೊಡೆಯನ ಆಜ್ಞೆಗಳಿಗೇ ಶಾಪಕೊಡುವ ದುರ್ದಮ್ಯ ಎದುರಾಳು—ದಂಗೆಕೋರಳು, ಕ್ರೂರಳು, ವಿನಾಶಕಾರಿಣಿ! ವಿಶ್ವಪ್ರಕೃತಿಯ ಒಂದು ಮುಖ ಈಕೆ. ಇವಳು ದಿಗಂಬರಳು, ಲಜ್ಜಾಹೀನಳು, ಭಿಕಾರಿಣಿ, ಹೊಟ್ಟೆಉರಿ-ಹೊಟ್ಟೆನೋವುಗಳನ್ನು ತುಂಬಿಕೊಂಡವಳು, ಹಸಿದ ಹೆಬ್ಬುಲಿ!

೨೦. ಬುದ್ಧಿಪೂರ್ವಕವಾಗಿ ಹಿಂದೆ ಸರಿದು ನಿಂತುಕೊಳ್ಳುವವರು ಎಷ್ಟೆಷ್ಟು ಹಿಂಜರಿಯುತ್ತಾರೋ ಅಷ್ಟಷ್ಟು ಮುಂದೆ ಬರುತ್ತಾರೆ; ಬುದ್ಧಿಪೂರ್ವಕವಾಗಿ ಸುಮ್ಮನಿರುವವರೂ ಹಾಗೇ—ಎಷ್ಟೆಷ್ಟು ಮೌನವಾಗಿದ್ದಾರೋ ಅಷ್ಟಷ್ಟೇ ಹೆಚ್ಚು ಮಾತಾಡಬಲ್ಲರು!

೨೧. ಬುದ್ಧಿಯಿಲ್ಲದವರಿಗೆ ಪದ್ಯ ಓದುವುದೇ ಮದ್ದು.

೨೨. ಚಿಲ್ಲರೆ ದೂರುಗಳಿಂದ ಕೊರಗುತ್ತ ಕುಳಿತುಕೊಳ್ಳುವುದು ಹೆಂಗಸರಲ್ಲಿ ಹೆಚ್ಚು; ನನಗೇನೋ ದೂರುಗಳನ್ನು ಹೆಚ್ಚುಹೆಚ್ಚಾಗಿ ಕೇಳಿದಷ್ಟೂ ಬಲ ಬರುತ್ತದೆ—ದೂರುಗಳೆಂದರೆ ನನಗೆ ಪುಷ್ಟಿವರ್ಧಕ ರಸಾಯನಗಳು!

೨೩. ರುಚಿಸಬೇಕಾದುದು ರುಚಿಸದೆನ್ನುವುದು ತಪ್ಪು.

೨೪. ನಾನು ಬಹಳ ಶ್ರೀಮಂತಿಕೆಯಲ್ಲಿ ಬೆಳೆದುಬಂದವನಲ್ಲ. ಕೆಲವರಿಗೆ ಶ್ರೀಮಂತಿಕೆ ಎಷ್ಟಿದ್ದರೂ ಕೊರತೆ ತಪ್ಪಿದ್ದೇ ಅಲ್ಲ.

೨೫. ಅತ್ಯುತ್ತಮವೆನ್ನಿಸಿದುದನ್ನು ನಾನು ನನ್ನ ದೇಶದ ಜನರಿಗೆ ಕೊಡಲು ಯತ್ನಿಸಿದೆ. ನಾನು ಮತ್ತೇನು ತಪ್ಪು ಮಾಡಿದೆ? ಆದರೆ ನೀವು ಅದನ್ನು ಸ್ವೀಕರಿಸಲಿಲ್ಲ. ನೀವು ಅದನ್ನು ಬೀಸಾಡಿದ್ದಷ್ಟೇ ಅಲ್ಲ, ಬೈದುಕೊಳ್ಳುತ್ತ ಬೀಸಾಡಿದ್ದೀರಿ. ಜುಜುತ್ಸುವನ್ನು ಕಲಿಸಲು ಜಪಾನಿನಿಂದ ಒಬ್ಬ ಶಿಕ್ಷಕನನ್ನು ಕರೆದುಕೊಂಡು ಬಂದೆ. ಅದಕ್ಕಾಗಿ ಎಷ್ಟು ಹಣ ಖರ್ಚುಮಾಡಬೇಕಾಯ್ತು ನಾನು ಗೊತ್ತೇ? ಅದನ್ನು ಕಲಿತಿದ್ದರೆ ಎಷ್ಟು ಒಳ್ಳೆಯದಾಗುತ್ತಿತ್ತು! ಆದರೆ ಎಷ್ಟು ಹುಡುಗರು ಅದನ್ನು ಕಲಿತರು? ನಮ್ಮ ಹುಡುಗರೂ ಹುಡುಗಿಯರೂ ನಿರಾಯುಧರು, ಆದ್ದರಿಂದ ಆ ವಿದ್ಯೆಯನ್ನವರು ಕಲಿಯಲು ನೆರವಾದರೆ ಒಳ್ಳೆಯದನ್ನು ಮಾಡಿದಹಾಗೆ ಎಂದು ನಾನು ಗ್ರಹಿಸಿದೆ. ಆದರೆ ಅದರಲ್ಲಿ ನಾನು ಸೋತೆ. ಈಗ ಇಡೀ ದೇಶವೇ ನನ್ನಲ್ಲಿ ತಪ್ಪು ಹುಡುಕಲು ಉತ್ಸುಕವಾಗಿದೆ, ದೂಷಿಸಲು ತವಕಪಡುತ್ತಿದೆ; ಆದರೆ ನನಗೆ ನೆರವೀಯಲೆಂದು ಯಾರೂ ಕೈಯೆತ್ತಲು ಸಿದ್ಧರಾಗಿಲ್ಲ.

೨೬. ಹೊಗಳಿಕೆ ರುಚಿಸುವುದು ಹೆಂಗಸರಿಗೆ ಮಾತ್ರವಲ್ಲ.

೨೭. ಮನುಷ್ಯ ತಿಳಿದಿರುವುದು ಅತ್ಯಲ್ಪ ; ಅವನಿಗರಿಯದವು ಅಸಂಖ್ಯ.

೨೮. ಅನುಕೂಲ — ಪ್ರತಿಕೂಲ ಪ್ರಮಾಣಗಳೆರಡೂ ಸಿಗದಂತಹ ವಿಷಯದಲ್ಲಿ ನಮ್ಮ ಮನಸ್ಸು ತೆರೆದಿರಬೇಕಲ್ಲದೆ, ಯಾವ ಕಡೆಗೂ ಒಲೆದಿರಬಾರದು; ಅದನ್ನು ಸತ್ಯವೆಂದೂ ತಿಳಿಯಬಾರದು, ಸುಳ್ಳೆಂದೂ ತಿಳಿಯಬಾರದು.

೨೯. ನಮಗೆ ಪ್ರಿಯರಾದವರು ಸಾಯುತ್ತಿರುವಾಗ ಅತ್ತು ಕರೆದು ನಮಗೆ ಅವರಲ್ಲಿರುವ ಸಹವಾಸಪ್ರಿಯತೆಯನ್ನು ವ್ಯಕ್ತಪಡಿಸಿ ಅವರಿಗೆ ಜೀವ ಬಿಡಲು ಅಡ್ಡಿಮಾಡಬಾರದು. ಬಿಡುವುದು ಎಲ್ಲಿ ಪರೋಪಕಾರವೋ ಅಲ್ಲಿ ಅಂಥ ಸಂಬಂಧವನ್ನು ಮನಸ್ಸಿನಲ್ಲಿ ಯಾವ ಬೇಸರವನ್ನೂ ಪಟ್ಟುಕೊಳ್ಳದೆ ಬಿಟ್ಟುಬಿಡಬೇಕು. ಜಗತ್ತಿನ ಕಾರ್ಯಗಳು ನಮ್ಮ ಕೈಯಲ್ಲಿಲ್ಲ; ನಾವಷ್ಟೇ ನಮ್ಮ ಕೈಯಲ್ಲಿದ್ದೇವೆ. ಅಪರಿಹಾರ್ಯವಾದ ಸಂಗತಿಯೊಂದು ಎದುರಾದಾಗ ಅದರ ವಿರುದ್ಧವಾಗಿ ನಾನು ತರ್ಕಮಾಡುವುದಿಲ್ಲ. ಅನಿವಾರ್ಯವಾದುದರೊಡನೆ ಹೋರಾಡಿ ಗಾಯಗೊಳ್ಳುವುದಕ್ಕೆ ಅರ್ಥವಿಲ್ಲ. ತಪ್ಪಿಸಲಾರದುದನ್ನು ಸಮಬುದ್ಧಿಯಿಂದ ಸ್ವೀಕರಿಸುವುದು ಧರ್ಮ.

೩೦. ನಾನೂ ನೀನೂ ಬರಿಯ ಸೊನ್ನೆಗಳು; ವಿಶ್ವದಲ್ಲಿರುವುವು (ಅಧಿಕಾರ ನಡೆಸುವಂಥವು) ಕೇವಲ ನಿಯಮ ಮತ್ತು ಸಂಖ್ಯೆ.

೩೧. ಮರದ ಎಲೆಯನ್ನು ಯಾರಾದರೂ ಚಿವುಟಿದರೆ ಚಿಕ್ಕ ಹುಡುಗನಾಗಿದ್ದ ನನಗೆ ಬಹಳ ನೋವಾಗುತ್ತಿತ್ತು. ಪ್ರಾಣಿಗಳನ್ನು ನಿಷ್ಕಾರಣವಾಗಿ ಕೆಣಕುವವರನ್ನು ಕಂಡರಂತೂ ನನಗೆ ಸಿಟ್ಟೇ ಬರುತ್ತಿತ್ತು. ಅಸಹಾಯ ಸ್ಥಿತಿಯಲ್ಲಿರುವ ಮೂಕಪ್ರಾಣಿಗಳ ನೋವು ಬಹಳ ಕರುಣಾಜನಕವಾದುದು. ಎಷ್ಟೋ ಮಕ್ಕಳು ಇಂಥ ಅನ್ಯಾಯಕ್ಕೆ ಬಹಳ ಸಲ ತುತ್ತಾಗುತ್ತಾರೆ.

೩೨. ಪದ್ಯ ಬರೆಯುವಾಗ ಏನಾದರೂ ಭಾವ ಇಟ್ಟುಕೊಂಡೇ ಬರೆಯುತ್ತೇನೆ. ಆದರೆ ಬರೆದಮೇಲೆ ಅದರ ಭಾವ ನನಗೇ ಮರೆತುಹೋಗಿ ಬಿಡುತ್ತದೆ!

೩೩. ಒಬ್ಬಳು ವಿಧವೆಯಾಗಿಬಿಟ್ಟಳೆಂದರೆ ಅವಳಿಗೆ ಸಾಯುವುದು ಬಹಳ ಕಷ್ಟವಾಗುತ್ತದೆ; ಅದಕ್ಕೆ ಬಹುಶಃ ಅವಳು ಅನುಸರಿಸಬೇಕಾದ ನಿಯಮಗಳು ಅಷ್ಟು ಉಗ್ರವಾದವುಗಳಾಗಿರಬೇಕು. ವಿಧುರರು ವಿಧವೆಯರಷ್ಟು ಬದುಕುವುದಿಲ್ಲವೆಂದು ಜನಗಣನೆಯಲ್ಲಿ ತಿಳಿದುಬಂದಿದೆ. ಅವರ ಹೆಂಡತಿಯರು ಅಲ್ಲಿಯವರೆಗೆ ಹೊರುತ್ತಿದ್ದ ಜವಾಬುದಾರಿಯನ್ನು ತಾವೇ ಹೊರಬೇಕಾಗಿ ಬಂದಾಗ 'ಅವರ ಭಾರ ಅವರವರಿಗೆ ಯಾವಾಗಲೂ ಹೆಚ್ಚು' ಎಂದಿರುವುದರಿಂದ ಬಹುಶಃ ಅವರು ಬೇಗ ಸತ್ತುಹೋಗುತ್ತಿರಬೇಕು! ಇದಕ್ಕೇ ಎಷ್ಟೋ ಸಲ ವಿವಾಹಜೀವನದ ದುರಭ್ಯಾಸಕ್ಕೆ ಬಲಿಯಾದ ವಿಧುರರು ಹೆಂಡತಿಯು ಸತ್ತ ಕೂಡಲೇ ಮತ್ತೊಬ್ಬಳನ್ನು ಮದುವೆಯಾಗಲು ಓಡುತ್ತಾರೆ. ಚಿಕ್ಕ ಮಕ್ಕಳು ಮರಿಗಳನ್ನು ಸಾಕುವುದು ಗಂಡಸಿನ ಕೆಲಸವೇ? ಅಂಥ ಕೆಲಸದಲ್ಲಿ ಹೆಚ್ಚಾಗಿ ಸಿಕ್ಕಿಬಿದ್ದ ಗಂಡಸು ಅತ್ಯಂತ ಹೆಚ್ಚು ಕಷ್ಟಕ್ಕೊಳಗಾಗುತ್ತಾನೆ.

೩೪. ಪ್ರತಿಯೊಂದನ್ನೂ ಆಲೋಚಿಸಿಯೇ, ವಿಚಾರಮಾಡಿಯೇ ಮಾಡುವುದು ಗಂಡಸಿನ ಕರ್ತವ್ಯ.

೩೫. ನಾನೂ ನನ್ನ ಹೆಂಡತಿಯೂ ಪರಸ್ಪರರನ್ನು ಅತ್ಯಂತ ಗೌರವದಿಂದ ನೋಡುತ್ತಿದ್ದೆವು. ಸಾಯುವ ಕಾಲಕ್ಕೆ ಸ್ವಲ್ಪ ಮುಂಚೆ ಶಾಂತಿನಿಕೇತನದ ನನ್ನ

ಕಾರ್ಯದಲ್ಲಿ ಅವಳು ಸಹಕರಿಸಲು ಪ್ರಯತ್ನ ಮಾಡಿದಳು. ಆದರೆ ಅಷ್ಟರಲ್ಲೇ ಅವಳು ಭಯಂಕರವಾದ ಕಾಹಿಲೆಗೆ ತುತ್ತಾದಳು.

೩೬. ಒಳಗಿಂದೊಳಗೇ ಅಲಿಪ್ತನಾಗಿರುವುದನ್ನು ನಾನು ಕಲಿತು ಕೊಂಡಿದ್ದೆ. ಆದುದರಿಂದ ಹೆಂಡತಿ ಸತ್ತಾಗ ನನಗೆ ಅತಿದುಃಖವಾಗಲಿಲ್ಲ.

೩೭. ಸರ್ವ ವಿಷಯಗಳನ್ನೂ ಸಂಗ್ರಹಿಸುವೆನೆಂದು ಹೋಗಿ ಯಾರೂ ತಮ್ಮ ಇಡೀ ಬಾಳನ್ನೇ ಒಂದು ವಸ್ತುಸಂಗ್ರಹಾಲಯವನ್ನಾಗಿ ಮಾಡಿ ಕೊಳ್ಳಬಾರದು.

೩೮. ಕಾಳಿದಾಸನು ಮಾಡಿದ ಹಿಮಾಲಯ ವರ್ಣನೆ ಬಹಳ ಕೃತಕ ವಾಗಿದೆ. ಶಾಕುಂತಲವೊಂದನ್ನುಳಿದು ಅನಂತರದ ಅನೇಕ ಸಂಸ್ಕೃತ ಸಾಹಿತ್ಯ ಕೃತಿಗಳು ಕೃತಕ, ಜಟಿಲ ಮತ್ತು ಕಷ್ಟಪಟ್ಟು ಹೊಸೆದ ಶೈಲಿಯುಳ್ಳಂಥವು.

೩೯. ಸಾಹಿತ್ಯಕೃತಿಯೊಂದನ್ನು ಇಡಿಯಾಗಿ ಅರ್ಥಯಿಸಿಕೊಳ್ಳಬಲ್ಲ ಶಕ್ತಿಯನ್ನೂ ಶುದ್ಧವಾದ ಪರನಿರ್ವೃತಿಯನ್ನು (ರಸಾವೇಶಸಹಜವಾದ ಅತಿ ಆನಂದವನ್ನು) ಅನುಭವಿಸಬಲ್ಲ ಶಕ್ತಿಯನ್ನೂ ಉಳ್ಳವನೇ ನಿಜವಾದ ರಸಿಕನು. ಕೃತಿಯೊಂದರಲ್ಲಿ ಕವಿಯ ಭಾವವೇನಿದ್ದರೂ ರಸಿಕನ ಬಗೆಯಲ್ಲಿ ತೀರ ಹೊಸ ರೂಪವನ್ನದು ತಾಳಬಲ್ಲದು! (ಮಾನಸಶಾಸ್ತ್ರೀಯ ತರ್ಕಸೂಕ್ಷ್ಮಕ್ಕೆ ಇಲ್ಲಿ ಅವಕಾಶವಿದೆಯಲ್ಲದೆ ಮತ್ತಾವುದಕ್ಕೂ ಅಲ್ಲ.)

೪೦. ನಿಜವಾದ ವಿಮರ್ಶೆಯೂ ಒಂದು ಸಾಹಿತ್ಯ (ಒಂದು ಹರಿ ಕೀರ್ತನದಂತಿದ್ದರೆ ಅಥವಾ ವ್ಯಾಖ್ಯಾನದಂತಿದ್ದರೆ).

೪೧. ಸಹಾನುಭೂತಿ ಮತ್ತು (ಸಹ) ಭಾವನಾಂಶಗಳನ್ನು ತಾಳಿಯೇ ಸಾಹಿತ್ಯಕೃತಿಯನ್ನು ಸವಿಯಹೋಗಬೇಕು.

೪೨. ನಮ್ಮದು ಗುರುಪ್ರಧಾನ ದೇಶ; ಗುರುಸ್ಥಾನಕ್ಕೇರಿ ನಿಂತವರು ತಾವು ಎಷ್ಟನ್ನು ಕಳೆದುಕೊಳ್ಳುತ್ತೇವೆ ಎಂಬುದನ್ನರಿಯರು. (ಗುರುವೆಂದರಿಲ್ಲಿ ಸರ್ವಾಧಿಕಾರ ಚಲಾಯಿಸುವ ವಿದ್ವಾಂಸ ಎಂದರ್ಥ.)

೪೩. ನನ್ನ ನೋವನ್ನು ನಾನು ಸವಿಗೊಳಿಸಿಕೊಂಡೆ; ಅವನ್ನು ಅತ್ಯಾನಂದ ರೂಪಕ್ಕೆ ಬದಲಾಯಿಸಿಕೊಂಡೆ.

೪೪. ನಮ್ಮ ವೈಯಕ್ತಿಕ ಜೀವನದ ದುಃಖಗಳನ್ನು ಪ್ರಪಂಚವೆಂಬ ವಿಸ್ತಾರವಾದ ರಟ್ಟಿನಮೇಲಿಟ್ಟು ನೋಡಿದಾಗ ಅವು ಬಹಳ ಚಿಕ್ಕ ನೆರಳುಗಳಾಗಿ ಕಣ್ಮರೆಯಾಗಿಬಿಡುವುವು.

೪೫. ನಮ್ಮನಮ್ಮನ್ನು ನಾವೇ ಸುಖಿಗಳನ್ನಾಗಿ ಮಾಡಿಕೊಳ್ಳಬಲ್ಲೆವು; ನಮಗಿದ್ದುದು ನಮಗೆ ಸಾಕೆನಿಸಬೇಕು.

೪೬. ನಾನು ಉಸಿರಾಗಿ ಬಿಡುವ ಪ್ರಭಾವದಲ್ಲಿ ಆಹಾರ–ಆರೋಗ್ಯ ಗಳಿವೆಯೆಂಬುದು ನನಗೆ ಖಾತ್ರಿಯಾದರೆ ಆಗ ನನ್ನ ಜೀವನ ಅತ್ಯಂತ ಸಾರ್ಥಕವಾಯಿತೆನ್ನಿಸುತ್ತದೆ.

೪೭. ನನಗೆ ಒಳ್ಳೆಯ ಸಂಗತಿಗಳ ಅಸ್ಪಷ್ಟ ದರ್ಶನವಾಗುತ್ತಿರುತ್ತದೆ; ಆದರದು ಬಹಳ ಕಾಲ ಇರುವುದಿಲ್ಲ.

೪೮. ಇನ್ನೊಬ್ಬರಿಗೆ ಕಾಹಿಲೆಯಾದಾಗ ಮನಸ್ಸಿಗೆ ಏನನ್ನೂ ಹಚ್ಚಿಕೊಳ್ಳದೆ ಇರುವವರನೇಕರನ್ನು ನಾನು ನೋಡಿದ್ದೇನೆ.

೪೯. ಯಾವುದರ ವರ್ಣನೆಯೂ ಅತಿವಾಸ್ತವಿಕವಾಗಬಾರದು.

೫೦. ಎಂದೂ ಯಾವುದರಲ್ಲೂ ನಿಯಮಬಂಧವಿರಬೇಕೆಂದು ನೀವಾರೂ ಯೋಚಿಸುವುದಿಲ್ಲ; ಅದು ದೊಡ್ಡ ತಪ್ಪು.

೫೧. ಕೀರ್ತಿಶಿಖರವನ್ನೇರಿದಬಳಿಕ ಯಾವನೂ ಬಹಳ ಕಾಲ ಉಳಿಯಬಾರದು; ಉಳಿದರೆ ಮಿಕ್ಕವರಿಗೆ ತೊಂದರೆ. ಆದುದರಿಂದ ಹಾಗೆ ಉಳಿಯುವುದು ಅನ್ಯಾಯವಾದ ಜೀವನ.

೫೨. ನಾನು ಯಾವಾಗಲೂ ಸತ್ಯವನ್ನೇ ಹೇಳುತ್ತ ಹೋದರೆ ನನ್ನನ್ನಾರು ಕವಿಯೆಂದು ಪರಿಗಣಿಸುತ್ತಾರೆ? (ಅಕ್ಷರಸತ್ಯದ ದೃಷ್ಟಿಯಿಂದ.)

೫೩. ಚಿತ್ರಗಳನ್ನು ನೋಡಿ ಕಲಾತ್ಮಕವಾಗಿ ಮೆಚ್ಚಲು ಹುಟ್ಟುಗುಣ ಇದ್ದರೆ ಮಾತ್ರ ಸಾಧ್ಯ.

೫೪. ಗಂಡಸಿಗೆ (ನ್ಯಾಯವಾದ ಕಾರ್ಯಮಾಡಲು) ಸ್ಫೂರ್ತಿಯನ್ನು ಕೊಡುವುದೇ ಹೆಂಗಸಿನ ಮುಖ್ಯ ಕರ್ತವ್ಯ.

೫೫. ಗಂಡಿಗೆ ಹೆಣ್ಣಿನ ಒಡನಾಟವಿಲ್ಲದಿದ್ದರೆ ಯಾವ ಕೊರತೆಯೂ ಉಂಟಾಗದು; ಇದ್ದರೆ ಅವಳ ಮಾಧುರ್ಯದಿಂದ (ಅದು ದೊರೆತರೆ) ಅವನ ವ್ಯಕ್ತಿತ್ವವು (ಐಹಿಕವಾಗಿ) ಪೂರ್ಣ ಸಫಲವಾಗುತ್ತದೆ—ಅಷ್ಟೆ.

೫೬. ಜೀವನದ ಸಾರ್ವಜನಿಕ ಕ್ಷೇತ್ರಗಳಲ್ಲಿ ಗಂಡಸಿಗೆ ಸಹಭಾಗಿನಿಯಾಗಿ ಕೆಲಸಮಾಡುವುದು ಹೆಂಗಸಿನ ಮಹತ್ವದ ಕರ್ತವ್ಯ. ಅವಳ ಸಂಪೂರ್ಣ ಆತ್ಮಾರ್ಪಣ ಅವನ ವ್ಯಕ್ತಿತ್ವದ (ಲೌಕಿಕವಾದ) ಪೂರ್ಣ ವಿಕಾಸಕ್ಕೆ ಅಗತ್ಯ (ಉದಾ: ವಿವೇಕಾನಂದ ಮತ್ತು ನಿವೇದಿತೆ). ಅವಳು ಹೇಗೆ ಅರ್ಪಿಸುತ್ತಾಳೆ ಎಂಬುದು ಮುಖ್ಯವಲ್ಲ— ಏನನ್ನು ಅರ್ಪಿಸುತ್ತಾಳೆ ಎಂಬುದು ಮುಖ್ಯ. ಹೆಂಗಸು ಗಂಡಸಿನೊಡನೆ ಕಲಹ ಮಾಡಿ ಯಾವ ಒಳಿತನ್ನೂ ದೊರಕಿಸಿಕೊಳ್ಳ ಲಾರಳು. ಏಕೆಂದರೆ ಗಂಡಸಿನೊಡನೆ ಕೂಡಿರುವುದೇ ಅವಳ ವಿಧಿ. ಇಬ್ಬರಲ್ಲೂ ಮಹತ್ತರವಾದ ಜೀವನವನ್ನು ನಡೆಸಬೇಕೆಂಬ ಆಸೆಯನ್ನು ಚಿಗುರಿಸುವಂಥ ಸ್ತ್ರೀಪುರುಷಸಮಾಗಮವೊಂದೇ ಹೆಚ್ಚಿನದು.

೫೭. ಯಾರಾದರೂ ನನ್ನೊಡನೆ ಮಾತಾಡುತ್ತ ಹೋದಾಗ, ಅವರ ಮಾತು ಕೇಳಲರ್ಹವಲ್ಲ ಎನ್ನಿಸಿದೊಡನೆಯೇ ನಾನು ನನ್ನ ಮನಸ್ಸಿನ ಗುಂಡಿಯನ್ನೊತ್ತಿ ಅದರ ಉನ್ಮುಖತೆಯನ್ನು ನಿಲ್ಲಿಸಿಬಿಡುತ್ತೇನೆ; ಆಗ ಮನಸ್ಸಿನಲ್ಲಿ ಮತ್ತೇನಾದರೂ ಕಾರ್ಯವು ನಡೆಯಲಾರಂಭಿಸುತ್ತದೆ.

೫೮. ಯಾವನಾದರೊಬ್ಬನು ಎಷ್ಟೇ ಅನಪೇಕ್ಷಣೀಯ, ಅಪ್ರಿಯ ಎನ್ನಿಸಿದರೂ ಅವನಿಗೆ ಸಮ್ಮೆದೆಯಲ್ಲಿ ಎಳ್ಳಷ್ಟಾದರೂ ಸ್ಥಳ ಕೊಡದಿರುವುದು ಕಲ್ಲೆದೆತನವಾಗುತ್ತದೆ. ಸಂಪೂರ್ಣ ಅಲಕ್ಷ್ಯ ಮಾಡುವುದು ಅಮಾನವೀಯ— ಅನರ್ಹರತ್ತ ಅಲ್ಪ ಲಕ್ಷ್ಯವನ್ನಾದರೂ ಹಾಕುವುದು ಕರ್ತವ್ಯ.

೫೯. ಸಾಮಾನ್ಯರು ಹೇಳುವ ಪ್ರೇಮವು (ವ್ಯಾಮೋಹ) ನನಗೆ ಯಾರ ಬಗೆಗೂ ಉಂಟಾಗಲಿಲ್ಲ. ಯಾರ ಸಹವಾಸವೂ ನನಗೆ ಅನಿವಾರ್ಯವೆನ್ನಿಸಲಿಲ್ಲ. ಯಾವ ಬಂಧನವೂ ಬೇಡಿಯಾಗಿ ನನ್ನನ್ನು ಬಂಧಿಸಲಿಲ್ಲ. ಮನಸ್ಸಿನ ಮೂಲ ನೆಲೆಯಲ್ಲಿ ನಾನು ಯಾವಾಗಲೂ ಪ್ರತ್ಯೇಕವಾಗಿಯೇ ಬಾಳುತ್ತಬಂದಿದ್ದೇನೆ. ನನಗೆ ಯಾವಾಗಲೂ ಕೈಯಿಂದ ಬಹಳ ದೂರ ಇರುವ ವಸ್ತುಗಳನ್ನು ಪಡೆಯ ಬೇಕೆಂಬ ಆಸೆ ಜಾಸ್ತಿ.

೬೦. ವಿಜ್ಞಾನದ ಹೆಸರಿನಲ್ಲಿ ಹೇಳಿದ್ದಷ್ಟೇ ಸತ್ಯವೆಂದು ನಂಬುವುದು ಬುದ್ಧಿದಾಸ್ಯ—ವಿದೇಶೀಯ ಸಾಹೇಬರೆಂಮದೆಲ್ಲಾ ಸತ್ಯವೆಂದು ನಂಬುವುದೂ ಹಾಗೇ.

೬೧. ಪ್ರೇಮದಲ್ಲಿ ಒಂದು ವಿಧದ ಖಾಸಗಿತನವಿದೆ; ಆದುದರಿಂದ ಅದನ್ನು ರಾಜಾರೋಷವಾಗಿ ಎಲ್ಲರೆದುರೂ ಹೇಳಬಾರದು.

೬೨. ಎಲ್ಲರನ್ನೂ ಕಾಹಿಲೆ ಬಿದ್ದಾಗ ಶುಶ್ರೂಷೆ ಮಾಡುವ ನಮ್ಮ ಹೆಂಗಸರನ್ನು, ಅವರು ಸ್ವತಃ ಕಾಹಿಲೆ ಬಿದ್ದಾಗ, ನಾವು ಶೂಶ್ರೂಷಿಸದಿರುವುದು ತಪ್ಪು.

೬೩. ನಮ್ಮ ದೇಶದ ಹೆಂಗಸರಿಗೆ ತಮ್ಮ ಕೆಲಸಗಳೆಲ್ಲವನ್ನೂ ಚೆನ್ನಾಗಿ ಮಾಡುವುದರಿಯದು. ಅವರಿಗೆ ವಿದ್ಯೆ–ವಿರಾಮಗಳಿದ್ದರೂ ಅವರ ಮನಸ್ಸು ಹೆಚ್ಚಾಗಿ ನಿಷ್ಕ್ರಿಯವಾಗಿರುತ್ತದೆ. ಸಾರ್ವಜನಿಕ ಕೆಲಸ ಮಾಡುವ ಅವಕಾಶ ಇದ್ದಾಗಲೂ ಅವರು ಮಾಡರು. ವಿಶಾಲತರ ಕ್ಷೇತ್ರದಲ್ಲಿ ದುಡಿದರೆ ಅವರ ಮರ್ಯಾದೆ ಹೆಚ್ಚುತ್ತದೆ.

೬೪. ಗಂಡಸರೆಂದೂ ಹೆಂಗಸರು ಅನವಶ್ಯಕವೆಂದೆನ್ನರು; ಆದರೆ ಹೆಂಗಸರು ಯಾವಾಗಲೂ ಗಂಡಸರು ತಮಗೆ ಅನವಶ್ಯಕವಾಗಿ ಕಾಟ ಕೊಡುವವರೆಂದು ತಿಳಿದಿರುವ ಸೋಗಿನಲ್ಲಿರುತ್ತಾರೆ. ಗಂಡಸರು ಹೆಂಗಸರನ್ನು ವರ್ಣಿಸುವಾಗ ಸಾಮಾನ್ಯವಾಗಿ (ಹೆಚ್ಚು ಸಂದರ್ಭಗಳಲ್ಲಿ) ಅವರ ದುರ್ಗುಣಗಳನ್ನು ಹೇಳದೆ, ಸದ್ಗುಣಗಳ ಪಟ್ಟಿಯನ್ನು ದೊಡ್ಡದನ್ನಾಗಿ ಮಾಡಿ ಹೇಳುತ್ತಾರೆ. ಆದರೆ ಹೆಂಗಸರು ವರ್ಣಿಸುವುದೋ? ಹೆಂಗಸರನ್ನೇ!

೬೫. ಪವಿತ್ರ ಆಚಾರದ ಅತಿಹುಚ್ಚು ಒಂದು ರೋಗ.

೬೬. ಸ್ವಾಭಾವಿಕವಾಗಿ ಬಂದುದಷ್ಟನ್ನೇ ನಾನು ಸ್ವೀಕರಿಸುತ್ತೇನೆ; ಅದಕ್ಕೂ ಹೆಚ್ಚನ್ನು ನಾನು ಸ್ವೀಕರಿಸೆನು; ಘರ್ಷಣವಿಲ್ಲದೆ ಸುಲಭವಾಗಿ ಬರುವುದೆಲ್ಲಾ ಬರಲಿ—ಬಲಾತ್ಕಾರ, ಚೌಕಶಿಗಳಿಂದ ನಾನು ಯಾವುದನ್ನೂ ಪಡೆಯುವುದಿಲ್ಲ.

೧೭. ಯಾವ ಹೆಂಗಸೂ ಆಭರಣಗಳನ್ನು ಕಳೆದುಕೊಳ್ಳಬಯಸಳು. ಗಂಡಸಿಗಿರಬಹುದಾದ ಎಲ್ಲ ದುರ್ಗುಣ–ದುರಾಶೆಗಳೂ ಅಷ್ಟೇ ಅಳತೆಯಲ್ಲಿ ಹೆಂಗಸಿನಲ್ಲೂ ಇರಬಹುದು—ಎಂಬುದನ್ನು ಬಹಳ ಜನ ಹೆಂಗಸರು ಅರಿಯರು, ಆದುದರಿಂದ ನಂಬಲಾರರು.

೧೮. ಆಸೆಗಳನ್ನು ಪೂರಯಿಸಿಕೊಳ್ಳುವುದು ಅವನ್ನು ತ್ಯಜಿಸುವುದಕ್ಕಾಗಿ; ಆರ್ಜಿಸುವುದು ದಾನಕ್ಕಾಗಿ — ಎಂಬುದೇ ಮಹಾಭಾರತದ ಸಂದೇಶ.

೧೯. ನಮ್ಮ ದೇಶದ ಜನರು ಸಂಪ್ರದಾಯದ ಯಜ್ಞಸ್ತಂಭಕ್ಕೆ ಕಟ್ಟಿದ ಪಶುಗಳಾಗಿದ್ದಾರೆ.

೨೦. ಒಬ್ಬ ವ್ಯಕ್ತಿಯ ಅನುಪಸ್ಥಿತಿಯಿಂದ ಇನ್ನೊಬ್ಬ ವ್ಯಕ್ತಿಯ ಬಾಳು ಸಂಪೂರ್ಣವಾಗಿ ಶೂನ್ಯವಾಗಿಬಿಡುತ್ತದೆ—ಎಂಬುದು ಅಸಮರ್ಥನೀಯ.

೨೧. ತಮ್ಮ ದುಃಖಗಳಿಗೆ ತಾವೇ ಅಸಹಾಯರಾಗಿ ಆತ್ಮಾರ್ಪಣ ಮಾಡಿಕೊಂಡು ಹೆಮ್ಮೆಪಡುವವರಷ್ಟೇ ಕಷ್ಟದಲ್ಲಿ ನಷ್ಟರಾಗುವವರು.

೨೨. ದಾಂಪತ್ಯದಲ್ಲಿ ಪ್ರಾಣ ಉಳಿಸಲು ಮಾಡುವ ಪ್ರಾಣತ್ಯಾಗ ಉದಾತ್ತವಾದುದು; ಸಾಮಾನ್ಯವಾದ ಉಳಿದ ಕಾರಣಗಳಿಗಾಗಿ ಪ್ರಿಯತಮ–ಪ್ರಿಯತಮೆಯರು ಮಾಡುವ ಪ್ರಾಣತ್ಯಾಗ ಉದಾತ್ತವಲ್ಲ.

೨೩. ಎಡರುತೊಡರುಗಳ ಬಂಧನಗಳೊಳಗೇ ಜೀವನಸಂಗೀತವನ್ನು ನುಡಿಸಬೇಕು. ಮುಳ್ಳುದಾರಿಯಲ್ಲಿ ನಡೆಯುತ್ತಿರುವಾಗಲೂ ಸುಖವಾಗಿ ಮುಗುಳ್ನಗೆಯಿಂದಿರಬೇಕು. ದುಃಖವನ್ನು ಅನುಭವಾಮೃತವನ್ನಾಗಿಯೂ ಹುಳಿಯನ್ನು ಸಿಹಿಯನ್ನಾಗಿಯೂ ಮಾರ್ಪಡಿಸಿಕೊಳ್ಳಬೇಕು.

೨೪. ಪ್ರಗತಿಶೀಲ ಆಧುನಿಕ ಸ್ತ್ರೀಯರಿಗೆ ವಿನಯವಿಲ್ಲ.

೨೫. ಒಬ್ಬ ಹೆಂಗಸು ಇನ್ನೊಬ್ಬಳಿಗೆ ಉಂಟುಮಾಡುವಷ್ಟು ಹಾನಿಯನ್ನು ಹತ್ತಾರು ಗಂಡಸರು ಯಾವ ಒಬ್ಬಳಿಗೂ ಉಂಟುಮಾಡಲಾರರು.

೨೬. ಅಸೂಯಾಪ್ರದರ್ಶನದ ಕ್ಷೇತ್ರವು ಸ್ತ್ರೀಯರಲ್ಲಿ ಸಣ್ಣದು; ಆದುದರಿಂದ ಅದು ಹೆಚ್ಚು ಹೊಲಸು. ಗಂಡಸರ ಪರಸ್ಪರ ಜಗಳಕ್ಕೆ ಹೆಚ್ಚಾಗಿ

ಒಬ್ಬ ಹೆಂಗಸು ಕಾರಣಳಾಗಿರುವುದು ಸಾಮಾನ್ಯ. ಸಹಜವಾದ ಪರಿಮಿತ ಕ್ಷೇತ್ರದಲ್ಲಿ ಬೆಳೆದು ಬಂದುದರಿಂದ ವಿದ್ಯೆ ಕಲಿತರೂ ಹೆಂಗಸರ ದೃಷ್ಟಿಯು ವಿಶಾಲವಾಗುವುದಿಲ್ಲ.

೭೭. ನಮ್ಮ ದೇಶದಲ್ಲಿ ಹೆಚ್ಚಾಗಿ ಗಂಡಸರಿಗೆ ಸ್ತ್ರೀಯರ ಅಥವಾ ಮಕ್ಕಳ ಹೃದಯವಿರುವುದೇ ಸಾಮಾನ್ಯ.

೭೮. ನಿರ್ಲಿಪ್ತನಾಗಿಯೂ ನಿರೀಹನಾಗಿಯೂ ಒಬ್ಬ ಗಂಡಸು ಮಹತ್ತರವಾದ ಕಾರ್ಯವೊಂದನ್ನು ಸಾಧಿಸಬೇಕಾಗಿರುವಾಗ ಹೆಂಗಸು ಹೊಕ್ಕರೆ ಎಲ್ಲವೂ ಹಾಳಾಗಿ ಹೋಗುತ್ತದೆ. ಉಳಿದ ಸಂದರ್ಭಗಳಲ್ಲಿ ಯುಕ್ತವಾಗಿ ಗಂಡಸುತನದಲ್ಲಿ ಒಬ್ಬನನ್ನು ಪ್ರಥಮತಃ ನಿಲ್ಲಿಸಲು ಹೆಂಗಸಿನ ನೆರವು ಅತ್ಯವಶ್ಯಕ.

೭೯. ಹೆಂಗಸರು ದಾಸ್ಯದಲ್ಲಿ ಸುಖಪಡಬಲ್ಲರು. ಏಕೆಂದರೆ ತಮಗೆ ಬೇಕಾದವರಲ್ಲಿ ದಾಸರಾಗಿ ವರ್ತಿಸುವುದು ನಿಜವಾದ ದಾಸ್ಯ ಅಲ್ಲವೇ ಅಲ್ಲ! ನಮ್ಮ ದೇಶದ ಅನೇಕ ಹೆಂಗಸರಿಗೆ ಬೇರೆ ದೇಶದ ಹೆಂಗಸರನೇಕರಿಗೆ ಸಿಗುವಷ್ಟು ವಿಶಾಲ ಕಾರ್ಯಕ್ಷೇತ್ರ ಸಿಗುವುದಿಲ್ಲವೆಂಬುದು ನಿಜವಾದರೂ ತಮ್ಮ ಪ್ರೇಮ ವಾತ್ಸಲ್ಯಗಳ ವೈಭವದ ಬಲದಿಂದ ಅವರು ತಮ್ಮ ವಿಧಿರೇಖೆಯ ಮೇರೆಯನ್ನು ಮೀರಿ ನಿಲ್ಲುತ್ತಾರೆ!

೮೦. ಸ್ವಯಂಸ್ಫೂರ್ತಿಯಿಂದ ಗಂಡಸೊಬ್ಬನ ಸೇವೆ ಮಾಡಿದ ಹೆಂಗಸು ಅವನು ತನ್ನಿಂದ ಸೇವೆ ಮಾಡಿಸಿಕೊಳ್ಳುತ್ತಾನೆ ಎಂದು ದೂರುವುದೊಂದು ಸ್ತ್ರೀತರ್ಕ. ಸೇವೆ ತೆಗೆದುಕೊಳ್ಳುವುದರಲ್ಲಿ ಹೇಗೋ ಹಾಗೇ ಸೇವೆಸಲ್ಲಿಸುವುದರಲ್ಲೂ ರಸವಿದೆ.

೮೧. ಕಲಾಯೋಗದಿಂದ ರಸಪ್ರಪಂಚಕ್ಕೆ ಆಕೃಷ್ಟವಾದ ಮನಸ್ಸು ಅನುಭವಿಸುವ ಸುಖವು ನೋವು ಬೆರೆದುದಾಗಿಯೇ ಇರುತ್ತದೆ. ಏಕೆಂದರೆ ರಸಪ್ರಪಂಚದಲ್ಲಿ ಎಷ್ಟೆತ್ತರ ಹಾರಿಸಲ್ಪಟ್ಟರೂ ಕೊನೆಗದು ತನ್ನ ಮಟ್ಟಕ್ಕೆ ಇಳಿದೇ ತೀರಬೇಕಾಗುವುದು.

೮೨. ಗಂಡಸಾಗಿ ಹುಟ್ಟುವುದು ಒಂದು ಸುದೈವ.

೮೩. ನನ್ನನ್ನು ನಾನು ಪ್ರತ್ಯಗಾತ್ಮನನ್ನಾಗಿ ಕಂಡದ್ದುಂಟು.

೮೪. ಸೃಷ್ಟಿಕರ್ತನು ಕೋಟಿಗಟ್ಟಲೆ ವರ್ಷಗಳ ಕಾಲ ಸತತವಾಗಿ ಕುಳಿತು ಪ್ರಯತ್ನ ಮಾಡಿಯೇ ವಿಶ್ವವನ್ನು ಇಷ್ಟು ಸೊಗಸಾಗಿ ಮಾಡಬಲ್ಲವನಾಗಿದ್ದಾನೆ ಎನ್ನಿಸುತ್ತದೆ. ಒಂದು ಹೂವಿನ ಗೊಂಚಲು ಅರಳುವಂತೆ ಮಾಡಲು ಅವನು ಯುಗಗಟ್ಟಲೆ ತಪಸ್ಸುಮಾಡಿರಬೇಕು.

೮೫. ಕವಿಯು ಪ್ರೇಮಾರ್ಥಿ; ಅವನದು ಮಹಾತ್ಮರ, ವೀರರ ಸ್ಥಾನ.

೮೬. ಆತ್ಮನನ್ನು ಪರಮಾತ್ಮನಲ್ಲಿ ದೃಢವಾಗಿ ನೆಲೆನಿಲ್ಲಿಸಲು ಯಾವನು ಸಮರ್ಥನಾಗುತ್ತಾನೋ ಅವನು ಸಂಪೂರ್ಣ ನಿರ್ಭೀತನಾಗಬಲ್ಲನು. ಪರಮಾತ್ಮ ಎಂದರೆ ನನ್ನೊಳಗೇ ಇರುವ ದೊಡ್ಡ ಆತ್ಮ. ನನ್ನ ಸಣ್ಣ ಆತ್ಮನ ಬಂಧದಿಂದ ಬಿಡುಗಡೆಹೊಂದುವುದೇ ನನಗೆ ಮೋಕ್ಷ.

೮೭. ಇತರ ಎಲ್ಲ ವಿಷಯಗಳಿಗೂ ವಿಶೇಷಜ್ಞರ ನಿರ್ಣಯಕ್ಕೇ ಬೆಲೆ; ಕಲೆಗಾದರೆ ಎಲ್ಲ ಯಜಮಾನರ ಮಾತಿಗೂ ಬೆಲೆಯೇ! ನಿಜವೇ? ಅಸಂಬದ್ಧ ಪಂಕ್ತಿಗಳನ್ನೂ ಪದ್ಯವೆನ್ನಬೇಕೇ?

೮೮. ದೇವರು (ಸೃಷ್ಟಿಕರ್ತನು) ಸರ್ವಶಕ್ತನಲ್ಲ. ಏಕೆಂದರೆ ಅನಾದಿ ಕಾಲದಿಂದ ಅಧಮ ಮಟ್ಟದಿಂದ ಉತ್ತಮ–ಉತ್ತಮತರ ಮಟ್ಟಗಳಿಗೆ ಜಗತ್ತನ್ನು ಒಯ್ಯುವ ಅವನ ಪ್ರಯತ್ನ ಸ್ಪಷ್ಟವಾಗಿದೆ.

೮೯. ಸಾತ್ವಿಕತೆಯ ಆದರ್ಶವು ಮಿಕ್ಕೆಲ್ಲ ಆದರ್ಶಗಳಿಗಿಂತಲೂ ವ್ಯಾಪಕತರವಾದುದು.

೯೦. ಸಾಹಿತ್ಯಕ್ಕೆ ಇತಿಹಾಸ ಬೇಕೆಂದಿಲ್ಲ; ಅದರ ಬೆಲೆ ಅದರಲ್ಲಿಯೇ ಇದೆ. ಅಳಿಯುವ ಕೃತಿಯನ್ನು ಯಾರೂ ಎಂದೆಂದೂ ಏನು ಮಾಡಿಯೂ ಕಾಯಲಾರರು!

೯೧. ಅಹಿಂಸೆಯು (ಆದರ್ಶ) ಹೆಣ್ಣಿನ ಹುಟ್ಟುಗುಣ; ಆ ಧರ್ಮವನ್ನು ಪಾಲಿಸಲು ಆಕೆ ಸುಳ್ಳು ಹೇಳಿದರೆ ಅದು ಸತ್ಯಕ್ಕೆ ಸಮ.

೯೨. ಪ್ರತಿಯೊಂದು ಪದಾರ್ಥವೂ ತನ್ನ ಹ್ರಸ್ವರೂಪದಲ್ಲಿ ಬೀಜ ಆಗಿರುತ್ತದೆ; ತನ್ನ ಸರ್ವಗುಣಗಳನ್ನೂ ಕಣಸ್ವರೂಪದಲ್ಲಿಟ್ಟುಕೊಂಡಿರುತ್ತದೆ.

೯೩. ನಿರ್ಲಿಪ್ತ ಮನಸ್ಕತೆಯಿಂದ ಎಲ್ಲವನ್ನೂ ಪರಾಮರ್ಶಿಸುವುದು ಗಂಡಸಿನ ಕರ್ತವ್ಯ.

೯೪. ಯಾವ ಯತ್ನದಲ್ಲೇ ಆಗಲಿ ಕೊನೆಯ ಘಟ್ಟವನ್ನು ತಲುಪಿದವನು ಖಿನ್ನನಾಗುವುದಿಲ್ಲ."

೯೫. ಇತರರಲ್ಲಿ ತನ್ನನ್ನು ಸಾಕ್ಷಾತ್ಕರಿಸಿಕೊಂಡಷ್ಟೂ ಮನುಷ್ಯನ ಬಾಳು ಹೆಚ್ಚು ಹೆಚ್ಚು ಮನುಷ್ಯತ್ವ ಉಳ್ಳದ್ದಾಗುತ್ತಹೋಗುವುದು.

* * *

"ಇಷ್ಟೆಲ್ಲ ಬುದ್ಧಿವಂತನೂ ಸತ್ಯವಂತನೂ ಪರಹಿತೈಕಪರಾಯಣನೂ ಆದ ರವೀಂದ್ರನ ಆಳ–ಅಗಲಗಳನ್ನು ಅಳೆಯುವುದು ಯಾರಿಗಾದರೂ ಕಷ್ಟವೇ ಆದೀತಲ್ಲವೆ?"

"ನಿಜ; ಆತನ ಕಿವಿಗೆ ಬಿದ್ದಂತಹ ದೂರುಗಳನ್ನು ಆತನೇ ಹೇಳಿದ್ದಾನೆ."

"ಹೀಗೂ ಉಂಟೇ?"

"ಅಯ್ಯೋ, ಅದೇನು ಹೇಳ್ತೀ–ಅಂದುಕೊಳ್ಳೋರಿಲ್ಲದ ಮನುಷ್ಯನನ್ನು ತಂದುಕೊಟ್ಟವರಿಲ್ಲ. ಜಿಂಕೆ, ಮೀನು, ಸಜ್ಜನರು ಅತ್ಯಂತ ಅಹಿಂಸಾತ್ಮಕ ಜೀವಿಗಳಾಗಿ ಎಳೆಹುಲ್ಲು, ತಿಳಿನೀರು, ಆತ್ಮಸಂತೋಷಗಳಷ್ಟರಿಂದ ಬದುಕುತ್ತ ಇದ್ದರೂ ಬೇಡ, ಬೆಸ್ತ, ಚಾಡಿಕೋರರು ನಿಷ್ಕಾರಣ ವೈರಿಗಳಾಗಿರುವರು, ಅಲ್ಲವೇ?"

"ರವೀಂದ್ರಗುರುವಿಗೂ ಅಂಥ ದೋಷಾರೋಪಣೆಯನ್ನು ಮಾಡಿದವರು ಇದ್ದಾರೆಯೇ?"

"ಕೇಳು ಅವನ ಬಗ್ಗೆ ಅವರಿವರು ಅಂದುಕೊಳ್ಳುತ್ತಿದ್ದುದನ್ನು:

೧. ಮರುಳುಗೊಳಿಸುವಂಥ ಸುಂದರಿಯರನ್ನಲ್ಲದೆ ಆತನು ಮತ್ತಾವ ಹೆಣ್ಣನ್ನೂ ಹತ್ತಿರ ಸುಳಿಯಗೊಡುತ್ತಿದ್ದಿಲ್ಲ.

೨. ಆತನಿಗೆ ಒಂದು ಗಾಜಿನ ಕೋಣೆಯಿದೆ. ಅದರಲ್ಲಿ ಕುಳಿತು ನಿತ್ಯವೂ ಅವನು ನಕ್ಷತ್ರಗಳನ್ನು ನೋಡುವುದು ಬಿಡಲಾರದ ಚಟವಾಗಿದೆ.

೩. ಬೆಳಗಿನ ಜಾವದಲ್ಲಿ ರವೀಂದ್ರನನ್ನೆಬ್ಬಿಸಲು ಚೆಲುವೆಯರಾದ ಹುಡುಗಿಯರು ಹಾಡಿಯೇ ತೀರಬೇಕು.

೪. ಪ್ರತಿದಿನ ಆತನು ಬಂಗಾರದ ಗಂಗಾಳದಲ್ಲಿ ಕುಳಿತು ಮಿಾಯುತ್ತಾನೆ. ಸ್ನಾನಾನಂತರ ಹಚ್ಚಿಕೊಳ್ಳಲು ಅವನು ಬಳಸುವ ಸುಗಂಧದ್ರವ್ಯದ ದರ ತೊಲೆಗೆ ೧೦೦ ರೂಪಾಯಿಗಳು !

೫. ಅವನ ಚರ್ಮ ಹೊಳೆಯಲು ಅವನು ನಿತ್ಯವೂ ದಾಳಿಂಬೆ ರಸವನ್ನು ಕುಡಿಯುವುದೇ ಕಾರಣ. ಪ್ರತಿ ಊಟದ ಅನಂತರವೂ ಸ್ಪೇನಿನ ದ್ರಾಕ್ಷಾರಸದ ಒಂದು ಲೋಟ ಅವನಿಗೆ ಬೇಕೇ ಬೇಕು.

೬. ಹಳ್ಳಿಯ ಜೀವನ–ನಿಸರ್ಗಗಳನ್ನು ಕಾಣದೆ ಅವನು ಬರೆಯುತ್ತಾನೆ!

ಇದೇ ಪ್ರಕಾರ ರವೀಂದ್ರನ ಬಗ್ಗೆ ಎಷ್ಟೋ ಕತೆಗಳಿವೆ. ಅವನೇನೋ ಸ್ವಲ್ಪ ಶ್ರೀಮಂತಿಕೆಯ ಈವಿಯುಳ್ಳವನೆಂಬುದು ನಿಜ. ಆದರೆ ಗುರುದೇವನು ಗುರುದೇವನೇ—Plain living and high thinking ಸರಳ ಜೀವನ, ಉದಾತ್ತ ವಿಚಾರದವನೇ—ಎಂಬುದು ಶಾಂತಿನಿಕೇತನಸ್ಥರೆಲ್ಲರಿಗೂ ಪ್ರತ್ಯಕ್ಷ ಗೊತ್ತು. ಅವನು ನಿಜನಾದ ವ್ಯಕ್ತಿತ್ವಸಂಪನ್ನ ಅಥವಾ ಆತ್ಮವಂತ; ಅದರಿಂದಲೇ ಆದರ್ಶ ಗುರುವಾಗಿದ್ದ. ಅದರಿಂದಲೇ—ಅಂಥ ಎತ್ತರದ ಆದರ್ಶ ಸ್ಫೂರ್ತಿ ಚಿಕ್ಕಂದಿನಿಂದಲೂ ಇದ್ದುದರಿಂದಲೇ—ನೌಕರಿ ಹಿಡಿದ ಬಡಮಾಸ್ತರರ ಶಿಕ್ಷಣಕ್ರಮ ಅವನಿಗೆ ಹಿಡಿಸಲಿಲ್ಲ—ಅವನು ಸ್ವತಃ ತಪಸ್ಯೆಮಾಡಿ ಮನೆಯಲ್ಲೇ ಓದಿದ, ಮಹಾಕವಿಯೂ ಆದ. ಮಹರ್ಷಿಯ ಮೊಮ್ಮಗನಾದ ಅವನಲ್ಲಿ ಮಹರ್ಷಿಯ ಲಕ್ಷಣಗಳೂ ಇದ್ದವು. ಅಂತೆಯೇ ಅವನೊಬ್ಬ ಕಾವ್ಯಯೋಗಿ, ವಿಶ್ವಕವಿ!"

"ಕಾಳಿದಾಸ ದೊಡ್ಡ ಕವಿಯೋ ರವೀಂದ್ರನಾಥನೋ?"

"ಆ ಪ್ರಶ್ನೆ ಅಸಮರ್ಪಕ : ಗಂಡು ಹೆಚ್ಚು ಸುಂದರನೋ ಹೆಣ್ಣು ಹೆಚ್ಚು ಸುಂದರಿಯೋ ಎಂದು ಕೇಳಿದ ಹಾಗೆ. ಕಾಳಿದಾಸ, ಷೇಕ್ಸ್‌ಪಿಯರ್, ಗಯಟೆ, ಡಾಂಟೆ, ರವೀಂದ್ರನಾಥರ ಮಾದರಿಗಳೇ ಬೇರೆ ಬೇರೆ. ಇವರು ಪಂಚಮಹಾ

ಕವಿಗಳು. ಇವರನ್ನು ವ್ಯಾಸ, ವಾಲ್ಮೀಕಿ, ಹೋಮರ್ ಮೊದಲಾದ ಪ್ರಪ್ರಾಚೀನ ಮಹಾಕವಿಗಳಿಂದ ಮಾತ್ರ ಬೇರೆಯೆಂದು ವರ್ಗೀಕರಿಸಿ ಗುರುತಿಸಬಹುದು."

"ಅಂತೂ ಈ ದಿನ ಚೆನ್ನಾಗಿ ಕಳೆಯಿತು. ಒಬ್ಬ ಮಹಾಕವಿಯ ಕತೆ ಕೇಳಿದಹಾಗಾಯ್ತು; ಪುರಾಣ-ಪುಣ್ಯಕಥೆಗಳಿಗಿಂತ ನನಗೆ ಇವೇ ಹೆಚ್ಚು ಇಷ್ಟ!"

"ಹೇಳಿದ್ದಕ್ಕೆ ನನಗೆ ಪ್ರತಿಫಲ?"

"ಮುದ್ದಣನ ಮನೋರಮೆ ಕೊಟ್ಟದ್ದು!"

ಸರಸವರ್ತನೆಯ ಮೆರೆದ ಕವಿಯ ಬಾಳ್ಗೆಯ್ಮೆಯೊಂದು ದೀಪ,
ಸ್ಮರಿಸಿದಾಗಳಿದೆಗೊಡವ ತುಂಬುವಾನಂದದಮೃತರೂಪ ;
ಅರಳಿ ವಿಶ್ವವಗಲಕ್ಕೆ ಹರಹಿನಿಂದಾತ್ಮಕಮಲವನ್ನು
ಮರಳಿ ವಿಶ್ವಪತಿಗರ್ಪಿಸಿರುವ ಕೃತಿ ಪರಿಮಳಿಸುವುದಿನ್ನೂ !

ತಿದ್ದುಪಡಿ

ಪುಟ	ಸಾಲು	ತಪ್ಪು	ಸರಿ
೧೦	೨	ಬರ್ತೆ ನೀನ್ನು	ಬರ್ತೇನಿನ್ನು
೨೦	೨೧	ಕವಿಯೊ	ಕವಿಯೋ
೨೨	೧೬	ಪುಷ್ಕರಣಿ	ಪುಷ್ಕರಿಣಿ
೨೩	೧೪	ಕಾವ್ಯವಾಹಕ	ಕಾರ್ಯವಾಹಕ
೩೪	೧೦	'ಚಿತ್ರಾಂಗದ'	'ಚಿತ್ರಾಂಗದೆ'
೩೬	೨೦	ನಂಬಲರ್ಹವಾದ	ನಂಬಲರ್ಹವಾಗದ
೪೬	೧೨	ಅವರ	ಅವನ
೯೧	೨೫	೧೯೪೨ರ ಆಗಸ್ಟ್ ೮ರಂದು	೧೯೪೧ರ ಆಗಸ್ಟ್ ೭ರಂದು
೧೧೨	೧೦	ಆನಂದಾದ್ವ್ಯೇವ	ಆನಂದಾದ್ಧ್ಯೇವ

ಶ್ರೀ ಬಿ. ಎಚ್. ಶ್ರೀಧರರ ಕೃತಿಗಳು

ಅಮೃತಬಿಂದು

ಶ್ರೀಧರರ ಶೈಲಿಯ ಹಾಗೂ ವಿಚಾರಸರಣಿಯ ವೈಶಿಷ್ಟ್ಯಗಳಾದ ಹಳಗನ್ನಡ-ಹೊಸಗನ್ನಡಗಳ ಹೊಂದಿಕೆ, ಪ್ರಾಚೀನ-ಅರ್ವಾಚೀನ ಅಭಿಪ್ರಾಯಗಳ ಸುಂದರ ಸಮನ್ವಯ—ಇವುಗಳನ್ನು ಈ 'ಅಮೃತಬಿಂದು'ವಿನಲ್ಲಿ ಕಾಣಬಹುದು.

—ವಿ. ಬಿ. ನಾಯಕ,
ಎಂ.ಎ., ಎಲ್‌ಎಲ್.ಬಿ.

ಸ್ವಾತಂತ್ರ್ಯಮೀಮಾಂಸೆ

ಈ ಹಕ್ಕಿನ ಸನದು ಅಸಂದಿಗ್ಧವಾಗಿ, ಅಸ್ಖಲಿತವಾಗಿ ಜೆ. ಎಸ್. ಮಿಲ್ಲ ಸಾರಿದನು. ಅದರ ಕನ್ನಡ ಪ್ರತಿಧ್ವನಿಯನ್ನು ಪ್ರಾ. ಎನ್. ಆರ್. ರಾವ್ ಮತ್ತು ಪ್ರಾ. ಬಿ. ಎಚ್. ಶ್ರೀಧರರು 'ಶಾಸ್ತ್ರೀಯ ವಿವೇಚನೆಯ ಹೊಸ ಧಾಟಿ'ಯಲ್ಲಿ ಒಡಮೂಡಿಸಿ ಕೃತಕೃತ್ಯರಾಗಿದ್ದಾರೆ. ಹಿಂದೆ ಮಹರ್ಷಿ ಅರವಿಂದರ ಎರಡು ಗಹನ ಗ್ರಂಥಗಳನ್ನು ಉಭಯತರೂ ಕನ್ನಡಿಸಿ ಹದಗೊಂಡ ಸಂಯುಕ್ತ ಸಾಧನೆಯ ಹೊಸ ಹೆಚ್ಚಿನ ಸಿದ್ಧಿ ಇದು. ಶ್ರೀ ಡಿ. ವಿ. ಜಿ. ಹಾರೈಸಿದ 'ಜಾತಕ ಬಲ'ಕ್ಕಿಂತ ಹೆಚ್ಚಿನ ಸತ್ವಬಲ ಇಲ್ಲಿ ಅನುಗೂಡಿದೆ.

—'ಜನಸೇವಕ'ದಲ್ಲಿ
ಗೌರೀಶ ಕಾಯ್ಕಿಣಿ

ಮಂಜುಗೀತ

ಪಾಂಡಿತ್ಯದ ಪದಪ್ರೌಢತೆಯೊಂದಿಗೆ ಅಜಸ್ರವಾದ ಶೈಲಿಸುಭಗತೆಯೂ ಅಕ್ಲಿಷ್ಟವಾದ ಭಾವಕಾಂತಿಯೂ ಇವರ ಕವಿತ್ವಗಳಲ್ಲಿಯ ತ್ರಿಗುಣತೆಯಾಗಿದೆ. ಕನ್ನಡದ ರಸಿಕರು, ವಿಮರ್ಶಕರು, ಕಾವ್ಯಪ್ರಸಾರಕ ಗಮಕಿಗಳು ಈ ಕಾವ್ಯೋದ್ಯಾನದಲ್ಲಿ ಕಣ್ತೆರೆದು, ಬಗೆದೆರೆದು ವಿಹರಿಸಿದಲ್ಲಿ ಇಂದಿನ ಹಿರಿಕವಿಗಳ ಹಂತದಲ್ಲಿ ಶ್ರೀಧರರ ಸ್ಥಾನವು ನಿಜವಾಗಿಯೂ ಗಣ್ಯವೆಂಬ ಸತ್ಯವು ಮನದಟ್ಟಾಗದೆ ಇರದು.

—ಜಿ. ಆರ್. ಪಾಂಡೇಶ್ವರ್

ಶ್ರೀ ಬಿ. ಎಚ್. ಶ್ರೀಧರರ ಇತರ ಕೃತಿಗಳು

೧. ಮೇಘನಾದ, ಅಮೃತಬಿಂದು,
ಮಂಜುಗೀತ —ಕವನಸಂಗ್ರಹಗಳು

೨. ಹೊಸಗನ್ನಡ ಸಾಹಿತ್ಯಶೈಲಿ,
ಬೇಂದ್ರೆ —ವಿಮರ್ಶೆಗಳು

೩. ಮಾನಸದರ್ಪಣ, ಭಾರತೀಯ
ನಾಗರಿಕತೆಗೆ ಮನುವಿನ ಕೊಡುಗೆ,
ವಿದೇಶದ ತಿಳಿವಳಿಕೆಗಳು —ಶಾಸ್ತ್ರೀಯ ಕೃತಿಗಳು

೪. ಭಾರತೀಯ ರಾಜ್ಯಧರ್ಮದ ಸತ್ವ
ಮತ್ತು ಸ್ವರೂಪ, ಟೀ. ಎಸ್.
ಈಲಿಯಟ್, ಭಾರತೀಯ ವಾಙ್ಮಯ,
ಸ್ವಾತಂತ್ರ್ಯಮೀಮಾಂಸೆ —ಕನ್ನಡ ಭಾಷಾಂತರಗಳು

೫. ಬೇತಾಳಗಳ ಕುಣಿತ, ಕಂಟಕಾರಿ
ಮಹಾಕಾವ್ಯ (ಅಚ್ಚಿನಲ್ಲಿ) —ವಿಡಂಬನ ಕೃತಿಗಳು

೬. ಪಂಚಮುಖಿ —ಪ್ರಬಂಧ

೭. ಕಿನ್ನರಗೀತ —ಕಥನಕವನ

೮. ರಮಣಮಹರ್ಷಿ —ಮಕ್ಕಳ ಕತೆ

೯. ಮುತ್ತು-ರತ್ನ —ಮಕ್ಕಳ ಪದಗಳು

ವಸುದೇವ್ ಭೂಪಾಲ್

ಸಾಹಿತ್ಯಕೃತಿಗಳು



ಕುಮ್ಮಟವಲ್ಲಭ

ಈ ನಾಟಕ ಉಜ್ವಲವಾದ, ಅಲಂಕೃತವಾದ ಸಂವಾದದಲ್ಲಿದೆ, ಶೈಲಿಯಲ್ಲಿದೆ. ಲೇಖಕರಲ್ಲಿ ನಾಟಕಕಾರನ ಸಂವಾದರಚನೆಯ ಶಕ್ತಿ ಅಸಾಧಾರಣವಾಗಿರುವುದು ಎಂಬುವನ್ನು ಈ ಕೃತಿ ಸಾರಿಹೇಳುತ್ತದೆ. ಗರ್ಭಶ್ರೀಮಂತಿಕೆಯ ತೊಟ್ಟಿಲಲ್ಲಿ ಬೆಳೆದ ಶ್ರೀ ಭೂಪಾಲಮ್ ಅವರಿಗೆ ಕಲ್ಪನೆಯ ಮತ್ತು ವಾಣಿಯ ಶ್ರೀಮಂತಿಕೆಯೂ ಒಲಿದುಬಂದಿದೆ.

—ರಂ. ಶ್ರೀ. ಮುಗಳಿ

ಗೊಂಚಲ್ ಮಿಂಚು

ಸರಳಸುಂದರ ಹೃದಯಸ್ಪರ್ಶಿಯಾದ ಶೈಲಿ, ವಿಷಯಕ್ಕೆ ತಕ್ಕ ವಿವರಣೆ, ಕುತೂಹಲ ಕೆರಳಿಸಿ ಆರಂಭಮಾಡುವ ತಂತ್ರ ಕೃತಿಯ ಗುರಿಯನ್ನು ಸಾರ್ಥಕಗೊಳಿಸಿವೆ. ಕನ್ನಡ ಸಾಹಿತ್ಯಕ್ಕೆ ಶ್ರೀ ಭೂಪಾಲಂರವರ 'ಗೊಂಚಲ್ ಮಿಂಚು'ವಿನಂತಹ ಕೃತಿಯ ಆವಶ್ಯಕತೆ ಸೌಂದರ್ಯ, ಸತ್ಯ ಈ ಎರಡು ದೃಷ್ಟಿಯಿಂದಲೂ ಇದೆ.

—'ಜನಪ್ರಗತಿ'

ಆಂದೋಲನ

ಉತ್ತಮ ವರ್ಗದ ಕಾದಂಬರಿ. ಓದುತ್ತಿದ್ದಂತೆ ಮೈ ರೋಮಾಂಚನಗೊಳ್ಳುವುದು.

—'ಕನ್ನಡ ನುಡಿ'

Well written.

—'**Hindu**'

ಎಲ್ಲಿ ಕೊಂಚ ಹಲ್ಲು ಕಿರಿ

....ಹಾಸ್ಯದ ಮೇಲ್ಮಟ್ಟಕ್ಕೆ ಮುಟ್ಟಿಸುವುವು....ನಯವಾದ ಅಣಕಿನಿಂದ, ಕಚಕುಳಿ ಇಡುವಂತಹ ಕೊನೆಯಿಂದ ಓದುಗನನ್ನು ರಂಜಿಸುವುವು.

—ಶ್ರೀರಂಗ, 'ಪ್ರಜಾವಾಣಿ'

ದೇವರು ಸತ್ತ

ಮೂಢ ವಿಚಾರಗಳನ್ನು, ಮೂಢ ನಂಬಿಕೆಗಳನ್ನು ಖಂಡಿಸುವುದಕ್ಕಾಗಿ ಇವರು ಉಪಯೋಗಿಸಿರುವ ಭಾಷೆ ಉಗ್ರವಾಗಿದೆ, ಆಕ್ರಮಣಶೀಲವಾಗಿದೆ. ವಿಚಾರ ವೈವಿಧ್ಯದ ದೃಷ್ಟಿಯಿಂದ, ಉಚಿತ ನಿರೂಪಣಸಾಮರ್ಥ್ಯದಿಂದ, ಸೊಗಸಾದ ಶೈಲಿಯಿಂದ ಕೂಡಿದ ಗ್ರಂಥ....

—'ಕರ್ಮವೀರ'

ಸಿಡಿಲು

....ಕವನಪಲ್ಲಿ ಮೈತಳೆದ ಕತೆಗಳು. ಉನ್ನತ ಶ್ರೇಣಿಯವು. ಕವಿಯ ಲೇಖನಿಗೆ ಕತೆಗಾರಿಕೆಯ ಬಿನ್ನಾಣವೂ ಬಂದಿದ್ದರೆ ಏನು ಕಾಣಬಹುದೋ ಅವನ್ನೆಲ್ಲ ಕಾಣಬಹುದಿಲ್ಲಿ.

—'ವಿಶ್ವಕರ್ಣಾಟಕ'